ಸಂಪುಟ ೧೮
ಸಂಚಿಕೆ ೨-೩

ಕರ್ನಾಟಕ ಭಾರತಿ

ರಾಜ್ಯೋತ್ಸವ-ಸಂಕ್ರಮಣ
ಸಂಯುಕ್ತ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ನವಂಬರ, ೧೯೮೫ ಮತ್ತು ಜನೆವರಿ, ೧೯೮೬

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು,

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು. "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩. ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨ ೫೦

(ಅಂಚೆವೆಚ್ಚ : ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ : ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೮ ಸಂಚಿಕೆ : ೨ ಮತ್ತು ೩

ಪ್ರಧಾನ ಸಂಪಾದಕರು :
ಡಾ. ಎಂ. ಬಿ. ಕೊಟ್ರಶೆಟ್ಟಿ

ಸಂಪಾದಕರು :
ಡಾ. ವಿಲ್ಯಂ ಮಾಡ್ತಾ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೮ ಸಂಚಿಕೆ : ೨ ಮತ್ತು ೩

ನವಂಬರ, ೧೯೮೫ ಮತ್ತು ಜನವರಿ, ೧೯೮೬

ರಾಜ್ಯೋತ್ಸವ ಹಾಗೂ ಸಂಕ್ರಮಣ
ಸಂಯುಕ್ತ ಸಂಚಿಕೆ

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ನವೀನ ಪ್ರಿಂಟರ್ಸ
ದುರ್ಗದಬೈಲ, ಹಳೇ-ಹುಬ್ಬಳ್ಳಿ-೫೮೦ ೦೨೪.

ಪ ರಿ ವಿ ಡಿ

ಕನ್ನಡ ಗಾದೆಗಳು

● ಎಚ್. ಎಸ್. ಅನಂತನಾರಾಯಣ

ಸಾಹಿತ್ಯ ಸಮಾಜದ ಕೈಗನ್ನಡಿ; ಭಾಷೆ ಅದರ ಸಾಧನ. ಯಾವುದೇ ಸಮಾಜದ ಆರ್ಥಿಕ, ಸಾಂಸ್ಕೃತಿಕ, ದಾರ್ಶನಿಕ ಮೊದಲಾದ ಜೀವನದ ವಿವಿಧ ರೂಪಗಳನ್ನು ಪ್ರತಿಬಿಂಬಿಸುವ ಕಾರ್ಯ ಸಾಹಿತ್ಯದಲ್ಲಿ ಭಾಷೆಯ ಮೂಲಕ ನಡೆಯುತ್ತದೆ. ಈ ಸಾಹಿತ್ಯ ಲಿಖಿತ ಹಾಗೂ ಅಲಿಖಿತ ರೂಪಗಳಲ್ಲಿ ಕಂಡುಬರುತ್ತದೆ. ಅಲಿಖಿತ ಸಾಹಿತ್ಯದ ಒಂದು ಮುಖವೇ ಗಾದೆಗಳು. ಜನಪದ ಸಾಹಿತ್ಯದ ಅನೇಕ ಪ್ರಕಾರ ಗಳಲ್ಲಿ ಇದು ಅತಿ ಮುಖ್ಯವಾದದ್ದು.

ಗಾದೆ ಇಲ್ಲದ ಭಾಷೆ ಇಲ್ಲ; ಭಾಷೆ ಇಲ್ಲದ ಸಮಾಜವಿಲ್ಲ. ಸುಲಭವಾಗಿ ಎಲ್ಲ ರಿಗೂ ಅರ್ಥವಾಗುವಂತಹ, ಬುದ್ಧಿವಂತಿಕೆಯ ಪುಟ್ಟವ್ಯಾಕ್ಯಗಳನ್ನು 'ಗಾದೆ' ಎನ್ನುತ್ತಾರೆ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಶ್ರುತರೂಪದಲ್ಲಿ ಬೆಳೆದುಬಂದ ಸಿದ್ಧರೂಪದ ಪೂರ್ಣ ವಾಕ್ಯಗಳು. ಜೀವನ ದರ್ಶನ, ಸೌಂದ ರ್ಯಾಭಿರುಚಿ, ವ್ಯವಹಾರನೀತಿ ಎಲ್ಲಾ ಇದರ ವಸ್ತುಗಳು.

ಸಾಮಾನ್ಯಜನರ ಹಾಗೂ ಗ್ರಾಮ ಜೀವಿಗಳ ಮಾತಿನಲ್ಲಿ ಗಾದೆಗಳ ಉಪ ಯೋಗ ಹೆಚ್ಚಾಗಿ ಕಂಡುಬರುತ್ತದೆ. ತಮ್ಮ ಮಾತಿಗೆ ಒಂದು ರೀತಿಯಲ್ಲಿ ಪುಷ್ಟಿಕೊಡುವಂತೆ ಇವರು ಗಾದೆಗಳನ್ನು ಮಧ್ಯೆ ಮಧ್ಯೆ ಉಪಯೋಗಿಸುತ್ತಾರೆ. 'ಏನೋ ಹೇಳಿದಂತೆ' ಎಂದು ಗಾದೆಯೊಂದನ್ನು ಉದಹರಿಸುತ್ತಾರೆ. 'ಮಜ್ಜಿಗೆ ಊಟಕ್ಕೆ ಮಾವಿನಕಾಯಿ ಉಪ್ಪಿನಕಾಯಿ ಇದ್ದಂತೆ' ಗಾದೆಯಿಂದ ಇವರ ಮಾತು ಸ್ವಾರಸ್ಯವೆನಿಸುತ್ತದೆ. ವಿದ್ಯಾವಂತರಾದ ಹಾಗೂ ಪಟ್ಟಣದವರ ಮಾತಿನಲ್ಲಿ ಗಾದೆಗಳು ಹೆಚ್ಚಾಗಿ ಕಂಡುಬರುವದಿಲ್ಲ. ಅವರ ಮಾತು ಒಂದು ರೀತಿಯಲ್ಲಿ ಸಪ್ಪೆ ಯೆನಿಸೀತು.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ' ಗಾದೆಗಳು ಪುಟ್ಟ ವಾಕ್ಯಗಳಾದರೂ ಅವುಗಳಲ್ಲಿ ಜೀವನದ ಸಾರಸರ್ವಸ್ವ ಹಾಗೂ ಅನುಭವ ತುಂಬಿರುತ್ತದೆ. ಉದ್ಧೃತ ವಾಕ್ಯಗಳಂತಿದ್ದರೂ ಈ ಗಾದೆಗಳ ಕರ್ತೃಗಳ ಬಗ್ಗೆ ನಮಗೇನೂ ತಿಳಿಯದು. ಇವು ಸಮಾಜದ ಒಟ್ಟು ಆಸ್ತಿ. ಸಂಪತ್ತು. ಗಾದೆಯನ್ನು 'ನಾಣ್ನುಡಿ' ಎಂದೂ ಕರೆಯುತ್ತಾರೆ. ಸಂಸ್ಕೃತದ ಲೋಕೋಕ್ತಿ,

ಸುಭಾಷಿತ, ತೆಲುಗು ಸಾಮೆತಿ, ಹಿಂದೀ ಕಹಾವತ್, ಇತ್ಯಾದಿ ಪದಗಳು ಗಾದೆಯ ಸಂವಾದಿ ಪದಗಳು. ಇದು ಸಂಸ್ಕೃತದ ಗಾಥಾ ಶಬ್ದದ ತದ್ಭವ ರೂಪವೆನಿಸುತ್ತದೆ. ಮೊದಲಿಗೆ ಇದೊಂದು ಮಾತ್ರಾ ವೃತ್ತದ ಭೇದ. ಈ ವೃತ್ತದಲ್ಲಿ ಹೆಚ್ಚು ಕಡಿಮೆ ಒಂದೇ ಅಳತೆಯ ಎರಡು ಸಾಲುಗಳಿರುತ್ತವೆ. ಗಾದೆಗಳೂ ಕೂಡ ಒಂದೇ ಅಳತೆಯ ಎರಡು ಸಾಲುಗಳಿಂದ ಕೂಡಿರುತ್ತವೆ. ಕೆಲವೊಮ್ಮೆ ಒಂದೇ ಸಾಲಿನ ವಾಕ್ಯಗಳ ರೂಪದಲ್ಲಿ ಸಹ ಇರುತ್ತವೆ.

'ಗಾದೆಗಳು ಜೀವನದ ಪ್ರಾಯೋಗಿಕ ಸಂದರ್ಭಗಳಲ್ಲಿ ನಮ್ಮ ಸೂಕ್ಷ್ಮ ಗ್ರಹಣ ಶಕ್ತಿಯ ತೀರ್ಮಾನಗಳನ್ನು ಬಲಪಡಿಸುವ, ಸುಲಭವಾಗಿ ಅರಗಿ ಕರಗುವ, ನಿರ್ದಿಷ್ಟ ಪರಿಮಾಣವುಳ್ಳ ಜ್ಞಾನದ ಗುಳಿಗೆಗಳು' ಎಂದು ಪಾಶ್ಚಾತ್ಯ ವಿದ್ವಾಂಸನೊಬ್ಬನು ಅಭಿಪ್ರಾಯಪಟ್ಟಿದ್ದಾನೆ. ಇವು ಜನಾಂಗದ ಸಮಷ್ಟಿ ಅನುಭವದ ಆಧಾರದ ಮೇಲೆ ರೂಪುಗೊಂಡ ತೀರ್ಮಾನಗಳು, ಗಾದೆಗಳಿಂದ ಆ ಜನಾಂಗದ ಮನಸ್ಸು ಎಂತಹುದೆಂದೂಹಿಸಲು ಸಾಧ್ಯವೆಂದು, ಪ್ರಸಿದ್ಧ ಸಾಹಿತಿ ಮಾಸ್ತಿಯವರೆನ್ನುತ್ತಾರೆ. 'ಹಲವರ ಜ್ಞಾನ ಹಾಗೂ ಒಬ್ಬನ ವಿವೇಕವೇ ಗಾದೆ' ಎನ್ನುತ್ತಾರೆ ಲಾರ್ಡ್ ರಸೆಲ್‌ರವರು. ಗಾದೆಗಳ ಪ್ರಾಮಾಣ್ಯವೇನೆಂಬುದನ್ನು ಒಂದು ಮಾತಿನಲ್ಲಿ ಹೇಳಬಯಸಿದರೆ, 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಯನ್ನು ನೆನೆಸಿಕೊಂಡರೆ ಸಾಕು.

Brevity is the soul of wit ಎಂದು ಷೇಕ್ಸ್‌ಪಿಯರ್ ಹೇಳಿದಂತೆ ಸಂಕ್ಷಿಪ್ತತೆ ಗಾದೆಯ ಅನಿವಾರ್ಯ ಲಕ್ಷಣ. ಗಾದೆ ವಾಕ್ ಸಂಪ್ರದಾಯಕ್ಕೆ ಸೇರಿದ್ದಾದ್ದರಿಂದ, ಅನವಶ್ಯಕವಾದ ಹೆಚ್ಚಿನ ಪದಗಳಿಗೆ ಅವಕಾಶವಿರದೆ ಅಡಕವಾಗಿರಬೇಕು, ಎಲ್ಲರೂ ತಿಳಿಯಕೊಂಡು, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಯೋಗ್ಯವೆನಿಸಬೇಕು. 'ಅತಿ ಆಸೆ ಗತಿಗೇಡು', 'ಗಂಟೂ ಹೋಯಿತು ನಂಟೂ ಹೋಯಿತು' ಇತ್ಯಾದಿ ಮಾತುಗಳು ಈ ರೀತಿಯ ಸೂಕ್ತಿಗಳು. ಗಾದೆಗಳು ವಿವೇಕಪೂರ್ಣವಾಗಿ, ನಡತೆ ವ್ಯವಹಾರಗಳನ್ನು ತಿದ್ದುವಂತಹ ವಾಕ್ಯಗಳಾಗಿರಬೇಕು, ದೇವತೆಗಳು ಕೂಡ ಪರೋಕ್ಷಪ್ರಿಯರೆಂಬಂತೆ, ನೇರವಾಗಿ ಹೇಳದಿದ್ದರೂ ಅಪೇಕ್ಷಿಸಿದ ಪ್ರಭಾವ ಬೀರುವಂತಹ ಮಾತಾಗಿರಬೇಕು. 'ಅಂಗೈಹುಣ್ಣಿಗೆ ಕನ್ನಡಿ ಬೇಕೆ' 'ಉಪ್ಪು ತಿಂದವನು ನೀರು ಕುಡಿವನು' ಇತ್ಯಾದಿ ಮಾತುಗಳಲ್ಲಿ ಎಷ್ಟು ಅನುಭವ ತುಂಬಿದೆ. ಅತಿ ಕಹಿಯೆನಿಸಿದರೂ ಗಾದೆಯಮಾತು ಚುರುಕು ಮುಟ್ಟಬೇಕು. ಕೆಟ್ಟಮಾರ್ಗದಿಂದ ಸರಿಯಾದ ದಾರಿಗೆ ತರುವಂತಹ ಮಾತುಗಳವು. 'ಮಾಡೋದು ಅನಾಚಾರ ಮನೆಯ ಮುಂದೆ ಬೃಂದಾವನ', 'ತಾನು ಕಳ್ಳ ಪರರ ನಂಬ', ಇತ್ಯಾದಿ

ಗಾದೆಗಳು ಎಷ್ಟು ಪ್ರಭಾವ ಬೀರುವ ಮಾತುಗಳು. ಲೋಕಪ್ರಿಯತೆ ಇನ್ನೊಂದು ಮುಖ್ಯ ಲಕ್ಷಣ. ಯಾವ ಮಾತಿಗೆ ಜನ ಸಮಷ್ಟಿಯ ಅಂಗೀಕಾರ ವಿರುತ್ತದೋ ಅವು ಚಲಾವಣೆಯಲ್ಲುಳಿದು ಬರುತ್ತವೆ. ಉಳಿದವು ಸವಕಲು ನಾಣ್ಯಗಳಂತೆ ನಷ್ಟವಾಗಿ ಹೋಗುತ್ತವೆ.

ಗಾದೆಗಳು ಕೆಲವೊಮ್ಮೆ ಪ್ರಾಸಬದ್ಧವಾಗಿ ಸೂಕ್ತರೂಪದಲ್ಲಿರುತ್ತವೆ. ಈ ರೀತಿಯ ರಚನೆಯಿಂದಾಗಿ ಗಾದೆಗಳು ನೆನಪಿನಲ್ಲುಳಿದು ಬರಲು ಸಾಧ್ಯವಾಯಿತು. ಇದೇ ಕಾರಣದಿಂದ ಓದಿದ ಪ್ರಾಸ, ಲಯ ಸಮನ್ವಿತ ಪದ್ಯಗಳು ಹೆಚ್ಚುಕಾಲ ನೆನಪಿನಲ್ಲುಳಿಯುತ್ತವೆ. ಅವುಗಳಿಂದ ಕೂಡಿರದ ಗದ್ಯರೂಪ ನೆನಪಿನಲ್ಲುಳಿಯುವುದಿಲ್ಲ. 'ಎಳೆಯಲಾರದ ಎತ್ತು ಮೆಳೆಯಮೇಲೆ ಬಿತ್ತು', 'ಕಂಡ ತಾವ ಹೆಣ್ಣು ತರಬಾರದು ಉಂಡ ತಾವ ಮಲಗಬಾರದು', 'ಕಾಣದ ನೆಂಟ ಬಂದ್ರೆ ಕೋಣ ಹಾಲು ಕರೆದೀತೆ' ಇತ್ಯಾದಿ ಗಾದೆಗಳಲ್ಲಿ ಕನ್ನಡ ಷಟ್ಪದಿ ಕಾವ್ಯಗಳಲ್ಲಿ ತೋರಿಬರುವ ಎರಡನೆಯ ಅಕ್ಷರ ಪ್ರಾಸವಿದೆ. ಹಾಗೆಯೇ, 'ಕಂಡ್ರೆ ಸುಂಕ ಕಾಣದಿದ್ರೆ ಬಿಂಕ', 'ಕಾಲು ನೋಡಿದರೆ ಕಾಂತಿ ಮುಖ ನೋಡಿದರೆ ವಾಂತಿ', ಇತ್ಯಾದಿಗಳಲ್ಲಿ ಅಂತ್ಯ ಪ್ರಾಸವಿದೆ. 'ಕೇಡು ಕಲಿತೋನ ಕೈಗೆ ಕೊನೆಗುಳಿಯೋದು ಓಡು', 'ಮುದ್ದಾದ ಮುಂಡೆಗಂಡ ಮೂರನೆಯವಳಿಗೆ', ಇತ್ಯಾದಿ ಗಾದೆಗಳಲ್ಲಿ ಕಂಡುಬರುವ ಕ-ಕಾರ ಹಾಗೂ ಮ-ಕಾರ ಅನುಪ್ರಾಸ ಕೇಳುವವರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ವನ್ನುಂಟು ಮಾಡುವದರಿಂದ ಭದ್ರವಾಗಿ ನೆನಪಿನಲ್ಲುಳಿಯುತ್ತದೆ. ಪ್ರಾಸದ ಉಪಯೋಗವಲ್ಲದೆ ಗಾದೆಗಳಲ್ಲಿ ಉಪಮಾ, ರೂಪಕ, ಉತ್ಪ್ರೇಕ್ಷೆ, ವಿರೋಧಾಭಾಸ ಮೊದಲಾದ ಅಲಂಕಾರಗಳ ಉತ್ತಮ ಪ್ರಯೋಗ ಕಾಣಸಿಗುತ್ತದೆ. 'ಹರಕಲು ಮರದಲ್ಲೇ ಜೇನಿಕ್ಕೋದು', 'ಹುವ್ವಿಗೆ ಹೋದ ಹೊನ್ನೆಗೌಡ ಮದುವೆಯಾದ ಆರುತಿಂಗಳಿಗೆ ಬಂದ' ಎಂಬ ಗಾದೆಗಳಲ್ಲಿ ಕ್ರಮವಾಗಿ ರೂಪಕಾಲಂಕಾರ ಹಾಗೂ ಉತ್ಪ್ರೇಕ್ಷೆಯ ಪ್ರಯೋಗವಿದೆ, ಯಾವ ರೀತಿಯ ಅಲಂಕಾರವೂ ಇಲ್ಲದ ಉತ್ತಮ ಸಹಜೋಕ್ತಿಗಳೂ ಇವೆ. 'ಆಳು ನೋಡಿ ಅನ್ನ ಇಕ್ಕು ಪಾತ್ರೆ ನೋಡಿ ಬಿಕ್ಷ ಹಾಕು', 'ತವರು ಮನೆಯ ತುಪ್ಪನ್ನಕ್ಕಿಂತ ಗಂಡನಮನೆಯ ಗಂಜಿಲೇಸು', 'ಗಾಳಿಬಂದಾಗ ತೂರಿಕೊ', ಇತ್ಯಾದಿ ಮಾತುಗಳು ಈ ರೀತಿಯ ಸಹಜೋಕ್ತಿ ಗಾದೆಗಳು.

ಗಾದೆಯ ಒಂದು ಲಕ್ಷಣವೆಂದರೆ ಅದರ ರಚನೆಯಲ್ಲಿ ಕಂಡುಬರುವ ಸಮತೂಕ. ಇಲ್ಲಿ ಒಂದೇ ಅಳತೆಯ ಎರಡು ಭಾಗಗಳು ಅಥವಾ ಸಾಲುಗಳಿರುತ್ತವೆ. 'ಗದ್ದೆಗೆ ತೆವರಿ ಇರಬೇಕು ಹೆಣ್ಣಿಗೆ ತವರು ಇರಬೇಕು', 'ತುಟುಕೋ ಮಳೆಬೇಡ ಲೊಟಕೋ ಹೆಂಡ್ರು ಬೇಡ', 'ದೇಶ ತಿರುಗಬೇಕು ಕೋಶ ಓದಬೇಕು', 'ಒಂದು

ಕಣ್ಣು ಕಣ್ಣಲ್ಲ ಒಬ್ಬ ಮಗ ಮಗನಲ್ಲ', 'ಹೇಳೋದು ವೇದ ಹಾಕೋದು ಗಾಳ', ಇವೇ ಮೊದಲಾದ ಗಾದೆಗಳಲ್ಲಿ ಸಮತೂಕದ ಎರಡು ಭಾಗಗಳಿವೆಯಾಗಿ ಒಂದು ಭಾಗ ಇನ್ನೊಂದಕ್ಕೆ ಪೂರಕ ಅಥವಾ ಸಮರ್ಥಕವೆನ್ನಬಹುದು.

ಗಾದೆಗಳ ಕರ್ತೃ ಯಾರೆಂದು ಹೇಳಲಾಗದಿದ್ದರೂ, ಕೆಲವು ಗಾದೆಗಳನ್ನು ನೋಡಿದರೆ ಪ್ರಾರಂಭದಲ್ಲಿ ಅವು ಕೆಲವೇ ಕೋಮಿನವರ ಮಧ್ಯೆ ಚಲಾವಣೆಯಾಗುತ್ತಿದ್ದಿರಬೇಕೆನಿಸುತ್ತದೆ. ಉದಾಹರಣೆಗೆ, 'ಶಿವಪೂಜೇಲಿ ಕರಡಿಗೆ ಬಿಟ್ಟಂತೆ' ಎಂಬ ಗಾದೆ ಶಿವಶರಣರಿಗೆ ಮಾತ್ರ ಅರ್ಥವಾಗುವ ಗಾದೆ, ಅವರಿಗೆ ಮಾತ್ರ ಶಿವಪೂಜೆಯಲ್ಲಿ ಕರಡಿಗೆಯ (ಅಂದರೆ, ಲಿಂಗದ) ಮಹತ್ವ ತಿಳಿದಿದೆ. ಹಾಗೆಯೆ, 'ಸಸಿಲಾತಿ ಕೋರವನ ತಲೆಗೆ ಬಂತು' ಎಂಬ ಗಾದೆ ಮೊದಲಿಗೆ ಮೀನುಗಾರಿಕೆ ತಿಳಿದವರಲ್ಲಿ ಉಪಯೋಗವಾಗುತ್ತಿರಬೇಕು.

ಗಾದೆಗಳು ನಮ್ಮ ಸಮಾಜದ ಆಚಾರ ವಿಚಾರ, ಸಂಪ್ರದಾಯ ಪದ್ಧತಿಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ. 'ಅಮ್ಮನವರು ಪಟ್ಟಕ್ಕೆ ಬರುವ ವೇಳೆಗೆ ಅಯ್ಯನವರು ಚಟ್ಟಕ್ಕೆ ಏರಿದರು', 'ಆಡೋ ಹುಡುಗಿಗೊಂದು ಕಾಡೋ ಕೂಸು', ಎಂಬ ಗಾದೆಗಳು ಸಮಾಜದಲ್ಲಿ ಬಳಕೆಯಲ್ಲಿದ್ದ ಬಾಲ್ಯವಿವಾಹದ ಸೂಚಕವಾಗಿವೆ. 'ತಿರ್ಕೊಂಡು ಬಂದ್ರೂ ಕರ್ಕೊಂಡು ಉಣ್ಣು' ಎಂಬಲ್ಲಿ ಜನಸಾಮಾನ್ಯನ ತ್ಯಾಗ ಗುಣವನ್ನು ಕಾಣಬಹುದು. 'ಚೌರ ಮಾಡಿಸಿಕೊಂಡು ನಕ್ಷತ್ರ ಕೇಳಿದ ಹಾಗೆ' ಎಂಬಲ್ಲಿ ನಮ್ಮವರು ಚೌರಕ್ಕೆ ಹೋಗುವ ಮುಂಚೆ ದಿನಶುದ್ಧಿ ನೋಡುತ್ತಿದ್ದರೆಂಬ ಸೂಚನೆಯಿದೆ. 'ಕಂಡು ಕಂಡವರ ಕಾಲಿಗೆ ಬಿದ್ರೂ ಗಂಡನಮನೆಗೆ ಹೋಗೋದು ತಪ್ಪೋಲ್ಲ' ಎಂಬ ಗಾದೆಯಲ್ಲಿ ಮದುವೆಯಾದ ಹೆಣ್ಣು ತೌರುಮನೆಯಿಂದ ಗಂಡನ ಮನೆಗೆ ಮೊದಲಬಾರಿಗೆ ಹೊರಡುವಾಗ ತಂದೆ, ತಾಯಿ, ಹಿರಿಯರ ಕಾಲಿಗೆ ನಮಸ್ಕಾರಮಾಡಿ ಹೊರಡುವ ಸಂಪ್ರದಾಯದ ಸೂಚನೆಯಿದೆ. 'ಒಂದೊಂದೆ ಕೂದಲು ಕಿತ್ತು ತಲೆಬೋಳಾಯ್ತು' ಎಂಬ ಗಾದೆ ಜೈನ ಸನ್ಯಾಸಿಗಳ ಆಚಾರ ಪದ್ಧತಿಯನ್ನು ಪ್ರತಿಬಿಂಬಿಸುತ್ತದೆ. 'ತಾಯಿ ಸತ್ತರೂ ಸೋದರ ಉಳಿಯಬೇಕು' ಎಂಬ ಗಾದೆಯಿಂದ ನಮ್ಮ ಸಮಾಜದಲ್ಲಿ ಸೋದರಮಾವನಿಗೆ ಯಾವ ಸ್ಥಾನಮಾನವಿದೆಯೆಂಬುದು ತಿಳಿಯುತ್ತದೆ.

ಇನ್ನು ಕೆಲವು ಗಾದೆಗಳಲ್ಲಿ ಹಿರಿಯರ ಅನುಭವಸಾರ ಮೂಡಿ ಬಂದಿರುವುದನ್ನು ಕಾಣಬಹುದು. ಇವುಗಳು ಒಂದು ರೀತಿಯಲ್ಲಿ ನಡವಳಿಕೆಯ ಬಗ್ಗೆ ತಿಳಿವು ಕೊಡುವ ಮಾತುಗಳು, 'ನೆಂಟರು ದೂರವಿರಬೇಕು ನೀರು ಹತ್ತಿರವಿರಬೇಕು' 'ನಿತ್ಯ ಬರುವ ಅಳಿಯ ನುಚ್ಚಿಗಿಂತ ಕೀಳು' 'ತನ್ನ ಬೆನ್ನು ತನಗೆ ಕಾಣೋಲ್ಲ', 'ನೆಲ್ಲಿಕಾಯಿ ತಿಂದು ನೀರು ಕುಡಿದರೆ ಮೆಲ್ಲಗೆ ಬಂತು ಚಳಿಜ್ವರ', 'ಹೆಂಡ್ತಿ ಕಟ್ಕೊಂಡು

ಜಾತ್ರೆಗೆ ಹೋಗಬಾರದು ಮಕ್ಕಳ ಕರಕೊಂಡು ಮದುವೆಗೆ ಹೋಗಬಾರದು', 'ಆಕಾಶ ನೋಡೋಕೆ ನೂಕಾಟ ಏತಕ್ಕೆ', 'ಊಟಬಲ್ಲವನಿಗೆ ರೋಗವಿಲ್ಲ ಮಾತುಬಲ್ಲವನಿಗೆ ಜಗಳವಿಲ್ಲ' ಇವೇ ಮೊದಲಾದ ಹಲವಾರು ಗಾದೆಗಳನ್ನು ಉದಹರಿಸಬಹುದು,

ಕೆಲವು ಗಾದೆಗಳು ನಮ್ಮ ಪುರಾಣೇತಿಹಾಸಗಳಿಗೆ ಸಂಬಂಧಿಸಿವೆ. 'ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ' 'ಹೆಣ್ಣಿನಿಂದ ರಾವಣ ಕೆಟ್ಟ ಮಣ್ಣಿನಿಂದ ಕೌರವ ಕೆಟ್ಟ', ಪಗಡೆ ಆಡಿ ಪಾಂಡವರು ಕೆಟ್ರು ಕವಡೆ ಆಡಿ ಹೆಣ್ಮಕ್ಕಳು ಕೆಟ್ರು', ಇವೇ ಮೊದಲಾದ ಮಾತುಗಳು ಈ ರೀತಿಯ ಗಾದೆಗಳು. 'ಕಳ್ಳನ್ನ ನಂಬಿದರೂ ಕುಳ್ಳನ್ನ ನಂಬಬೇಡ' ಎಂಬ ಗಾದೆಯಲ್ಲಿ ಕುಳ್ಳನೆಂಬ ಪದ ವಾಮನಾವತಾರಕ್ಕೆ ಸಂಬಂಧಿಸಿರಬಹುದೇನೋ?

ಕೆಲವು ಗಾದೆಗಳಲ್ಲಿ ಪಾಠ ಭೇದವಿರುವನು ಕಂಡುಬರುತ್ತದೆ. 'ಶಿವಪೂಜೇಲಿ ಕರಡಿಗೆ ಬಿಟ್ಟಂತೆ' ಎಂಬ ಗಾದೆ ವೀರಶೈವರಲ್ಲದವರಿಗೆ ಅರ್ಥ ತೋರಿಬರದೆ ಕರಡಿಗೆಯ ಬದಲು ಕರಡಿ ಇರಬಹುದೆಂದು ಭಾವಿಸಿ 'ಶಿವಪೂಜೇಲಿ ಕರಡಿ ಬಿಟ್ಟಂತೆ' ಎಂದು ಪ್ರಯೋಗಮಾಡಿದ್ದಾರೆ. ಹಾಗೆಯೇ, 'ಉಂಡು ಮಾವಿನ ಹಣ್ಣು ತಿನ್ನು ಹಸಿದು ಹಲಸಿನ ಹಣ್ಣು ತಿನ್ನು' ಎಂಬ ಮಾತು ಕೆಲವರ ಬಾಯಲ್ಲಿ 'ಉಂಡೆ ಮಾವಿನ ಹಣ್ಣು ತಿನ್ನು ಹಸಿದು ಹಲಸಿನಹಣ್ಣು ತಿನ್ನು' ಎಂದಾಗಿದೆ. 'ದೂರದ ಗುಡ್ಡ ನುಣ್ಣಗೆ' (= ಸಂಸ್ಕೃತ ದೂರತಃ ಪರ್ವತೋ ರಮ್ಯವಾನ್') ಎನ್ನುವ ಗಾದೆ ಕೆಲವರ ಬಾಯಲ್ಲಿ 'ದೂರದ ಗಡ್ಡ ನುಣ್ಣಗೆ' ಎಂದಾಗಿದೆ. 'ಪಗಡೆ ಆಡಿ ಪಾಂಡವರು ಕೆಟ್ಟರು' ಎಂಬ ದಾಟಿಯಲ್ಲಿ ಈಗಿನವರು 'ಇಸ್ಪೀಟಾಡಿ ಇದ್ದಜಿದ್ದೋರು ಕೆಟ್ಟರು' ಎಂಬ ಗಾದೆಯನ್ನು ಬಳಕೆಗೆ ತಂದಿದ್ದಾರೆ.

ಕೆಲವು ಗಾದೆಗಳು ಮೊದಲಿಗಿದ್ದ ಒಳ್ಳೆಯ ಅರ್ಥವನ್ನು ಕಳೆದುಕೊಂಡು ನಿಕೃಷ್ಟವಾದ ಅರ್ಥವನ್ನು ಗಳಿಸಿಕೊಂಡಿವೆ. 'ಮಂಗನ ಕೈಯಲಿ ಮಾಣಿಕ್ಯ ಕೊಟ್ಟ ಹಾಗೆ' ಎಂಬ ಗಾದೆ ರಾಮಾಯಣದಲ್ಲಿ ಹನುಮಂತನ ಕೈಲಿ ರಾಮನು ಮುದ್ರೆಯುಂಗರ ಕಳುಹಿಸಿಕೊಟ್ಟ ಪ್ರಸಂಗಕ್ಕೆ ಸಂಬಂಧಿಸಿವೆ. ಅಲ್ಲಿ ಹನುಮಂತ ಅದನ್ನು ಎಷ್ಟು ಜೋಪಾನವಾಗಿ ತೆಗೆದುಕೊಂಡು ಹೋಗಿ ಸೀತಾದೇವಿಗೆ ಕೊಡುತ್ತಾನೆಂಬುದು ಎಲ್ಲರಿಗೂ ತಿಳಿದದ್ದೇ. ಆದರೆ ಇಂದು ಅದರ ಅರ್ಥ ತದ್ವಿಪರೀತ, ಹಾಗೆಯೇ. 'ಪುನರಾಯಾಸ್ಮಹಾಕಪಿಃ' ಎಂಬ ಮಾತನ್ನು ಗಾದೆಯಂತೆ ಉಪಯೋಗಿಸುತ್ತಾರೆ. ಇದನ್ನು ಯಾವನೊಬ್ಬನ ಬರುವಿಕೆಗೆ ಇಷ್ಟವಾಗದ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ರಾಮಾಯಣದಲ್ಲಾದರೋ ಹಾಗಲ್ಲ. ಸೀತಾದರ್ಶನಮಾಡಿ ರಾಮಚಂದ್ರನಿಗೆ ಸಂದೇಶ ತೆಗೆದುಕೊಂಡು ಬಂದ ಹನುಮಂತನನ್ನು ಕುರಿತು ಆಡಿದ ಮಾತಿದು. ಅಲ್ಲಿ ಅವನ ಬರುವಿಕೆ ರಾಮಚಂದ್ರನಿಗೆ ಎಷ್ಟು ಪ್ರಿಯವಾದದ್ದು.

ಗಾದೆಗಳು ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಹರದುತ್ತವೇನೋ ಎಂಬಂತೆ, ಒಂದು ಭಾಷೆಯ ಗಾದೆಗಳ ಅನುವಾದ ರೂಪವೆನಿಸಿಕೊಳ್ಳುವ ಗಾದೆಗಳು ಇನ್ನೊಂದು ಭಾಷೆಯಲ್ಲಿ ಕಾಣಸಿಗುತ್ತವೆ. ಗಾದೆ ಜನಾಂಗದ ಅನುಭವ ಪಾಕವಾದ್ದರಿಂದ ಒಂದೇ ಬಗೆಯ ಅನುಭವದಿಂದ ಒಂದೇ ಅರ್ಥದ ಗಾದೆಗಳು ಪ್ರತಿ ಜನಾಂಗದಲ್ಲೂ ಹುಟ್ಟಿಕೊಂಡಿರಲು ಸಾಧ್ಯ. ಬೇರೆ ಭಾಷೆಗಳಿಂದ ಸ್ವೀಕರಣವೇ ಸಮಾನತೆಗೆ ಕಾರಣವಾಗಬೇಕಿಲ್ಲ. ಅದೂ ಒಂದು ಕಾರಣವಿರಬಹುದು. ಪ್ರಕೃತ-ತೆಲಗು ಭಾಷೆಯ ಪರಿಚಯವಿರುವ ಕನ್ನಡ ಜನಕ್ಕೆ ತಮ್ಮ ಗಾದೆಗಳಿಗೆ ಸಾಮ್ಯವಿರುವ ಎಷ್ಟೋ ಗಾದೆಗಳು ತೆಲುಗಿನಲ್ಲಿ ಕಾಣಸಿಗುತ್ತವೆಂಬುದನ್ನು ಸೂಚಿಸಲು ಇಲ್ಲಿ ಕೆಲವು ಗಾದೆಗಳನ್ನು ಉದಾಹರಣೆಯ ರೂಪದಲ್ಲಿ ಕೊಡಬಹುದು. ಈ ಎರಡೂ ಭಾಷೆಗಳು ದ್ರಾವಿಡ ಪರಿವಾರಕ್ಕೆ ಸೇರಿದವುಗಳಾದ್ದರಿಂದ ಈ ಭಾಷೆಗಳ ಗಾದೆಗಳಲ್ಲಿ ಸಾಮ್ಯ ತೋರಿಬರುವುದು ಆಶ್ಚರ್ಯವೆನಿಸುವುದಿಲ್ಲ. ಕೆಲವೊಮ್ಮೆ ಭಾಷಾ ವಿಶಿಷ್ಟವಾದ ವ್ಯತ್ಯಾಸಗಳಿದ್ದರೂ ಅವುಗಳ ಅಭಿವ್ಯಕ್ತತೆಯಲ್ಲಿ ಕೂಡ ಸಾದೃಶ್ಯವಿರುವದು ಗಮನಾರ್ಹ ವಿಚಾರ.

ಕನ್ನಡ : ತುಂಬಿದ ಕೊಡ ತುಳುಕುವುದಿಲ್ಲ.
ತೆಲುಗು : ನಿಂಡು ಕುಂಡ ತೊಣಕದು.

ಕನ್ನಡ : ಅಂಬಲಿ ಕುಡಿಯುವವನಿಗೆ ಮೀಸೆ ತಿರುವವನೊಬ್ಬ,
ತೆಲುಗು : ಅಂಬಲಿ ತ್ರಾಗೇವಾಡಿಕಿ ಮೀಸಾಲು ಎತ್ತಿಪೆಟ್ಟೇವಾಡೊಕಡು.

ಕನ್ನಡ : ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು.
ತೆಲುಗು : ಇಲ್ಲು ಕಟ್ಟಿ ಚೂಡು ಪೆಳ್ಳಿ ಚೇಸಿಚೂಡು,

ಕನ್ನಡ : ಆನೆ ಇದ್ದರೂ ಸಾವಿರ ಸತ್ತರೂ ಸಾವಿರ.
ತೆಲುಗು : ಏನುಗು ಚಚ್ಚಿನ ಬ್ರತಿಕನ ವೇಯಿ.

ಕನ್ನಡ : ಎಳ್ಳಿಗೆ ತಕ್ಕ ಎಣ್ಣೆ.
ತೆಲುಗು : ನುವ್ವುಲಕು ತಗಿನ ನೂನೆ.

ಗಾದೆಗಳು ಒಂದು ರೀತಿಯಲ್ಲಿ ವಿಶಿಷ್ಟಪ್ರಕಾರದ ವಾಕ್ಯಗಳು. ಭಾಷೆಯ ಇತರ ವಾಕ್ಯಗಳಂತೆ ಇವುಗಳನ್ನು ವಿಸ್ತರಿಸಲು ಸಾಧ್ಯವಿಲ್ಲ. ಇವುಗಳ ಮಧ್ಯೆ ಇನ್ನಾವುದೇ ಪದಗಳನ್ನು ಸೇರಿಸಿ ಹೇಳಬರುವದಿಲ್ಲ. ಆದ್ದರಿಂದ, ಇತರ ವಾಕ್ಯಗಳನ್ನು ವಿಶ್ಲೇಷಿಸಿದಂತೆ ಗಾದೆಗಳನ್ನು ವಿಶ್ಲೇಷಿಸಲು ಬರುವದಿಲ್ಲ. ಕೆಲವು ವ್ಯಾಕರಣ ನಿಯಮಗಳು ಇವಕ್ಕೆ ಅನ್ವಯಿಸುವುದಿಲ್ಲ. ಒಗಟು ಒಳ್ನುಡಿಯಂತೆ ಇವು ಕೋಶದ

ವಸ್ತುಗಳು. ಅಣಿ ಮುತ್ತುಗಳಂತಿರುವ ಗಾದೆಗಳಲ್ಲಿ ಭಾಷೆಯ ಪ್ರಾಚೀನ ಪದಗಳು ಉಳಿದು ಬಂದಿರುವವನ್ನು ಗಮನಿಸಬಹುದು.

ಕಡೆಯದಾಗಿ ವಾಕ್ಯರಚನಾ ದೃಷ್ಟಿಯಿಂದ ಗಾದೆಗಳಲ್ಲಿ ಅನೇಕ ಪ್ರಕಾರಗಳನ್ನು ಗುರುತಿಸಬಹುದು. ಒಂದು ಬಗೆಯ ಗಾದೆಗಳಲ್ಲಿ ಕ್ರಿಯಾಪದಗಳೇ ಇರದೆ ಎರಡು ಪದಗಳೂ ನಾಮಪದಗಳೇ ಆಗಿದ್ದು ಮೊದಲ ಭಾಗದಲ್ಲಿ ಸೂಚಿಸಿದ್ದಕ್ಕೆ ಎರಡನೆಯ ಭಾಗ ಉತ್ತರ ರೂಪದಲ್ಲಿರುತ್ತೆ. ಉದಾ. 'ದುಡಿದ್ದವನೇ ದೊಡ್ಡಪ್ಪ', ಇನ್ನೊಂದು ಬಗೆಯಲ್ಲಿ ಮೊದಲ ಭಾಗ ವಿಷಯದ ಪ್ರಸ್ತಾಪ ಮಾಡಿದಂತಿದ್ದು ಎರಡನೆಯ ಭಾಗ ಅದರ ವ್ಯಾಖ್ಯೆಯಂತಿರುತ್ತದೆ. ಉದಾ. 'ಬೊಗಳುವ ನಾಯಿ ಕಚ್ಚುವದಿಲ್ಲ' 'ಕಾವಿ ಉಟ್ಟವರೆಲ್ಲಾ ಸನ್ಯಾಸಿಗಳಲ್ಲ' ಇನ್ನು ಕೆಲವು ಗಾದೆಗಳಲ್ಲಿ ಮೊದಲ ಭಾಗ ಕಾರಣ ಮತ್ತು ಎರಡನೆಯ ಭಾಗ ಅದರ ಪರಿಣಾಮದಂತಿರುತ್ತದೆ. ಉದಾ. 'ಅತಿ ಆಸೆ ಗತಿಗೇಡು', ಇನ್ನೊಂದು ಬಗೆಯಲ್ಲಿ ಎರಡೂ ಭಾಗಗಳಲ್ಲಿ ಹೇಳುವ ವಿಚಾರ ಪರಸ್ಪರ ವಿರೋಧವನ್ನು ಸೂಚಿಸುತ್ತದೆ. ಉದಾ. ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ'. ಇನ್ನೊಂದು ಬಗೆಯಲ್ಲಿ ಅನುಕ್ರಮ ಕಂಡುಬರುತ್ತದೆ. ಅಂದರೆ, ಮೊದಲ ಭಾಗದಲ್ಲಿ ಸೂಚಿಸಿದ ವಿಚಾರ ನಡೆದ ಮೇಲೆ ಎರಡನೆಯ ಭಾಗವಲ್ಲಿ ಸೂಚಿಸುವ ವಿಚಾರ ನಡೆಯುತ್ತದೆ. ಉದಾ. 'ಊರು ಸೂರೆಯಾದ ಮೇಲೆ ಕೋಟೆ ಬಾಗಿಲು ಹಾಕಿದರು', 'ಹಬ್ಬ ಕಳೆದಮೇಲೆ ಒಬ್ಬಿಟ್ಟು ತಟ್ಟಿದರು'. ಮತ್ತೊಂದು ಬಗೆಯಲ್ಲಿ, ಎರಡೂ ಭಾಗಗಳಲ್ಲಿ ಸೂಚಿತ ಪ್ರಸಂಗಗಳು ಏಕಕಾಲಿಕವಾಗಿರುತ್ತವೆ. ಉದಾ. 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು'.

●

ಉಪಯುಕ್ತ ಗ್ರಂಥಸೂಚಿ

೧. ಪ್ರಹ್ಲಾದ ಕುಲಕರ್ಣಿ, ನಾಣ್ನುಡಿ, ೧೯೨೬

೨. ಮರಿಯಪ್ಪ ಭಟ್, ಎಂ. ಮತ್ತು ಇತರರು,
ನಾಲ್ ನುಡಿ-ನಾಣ್ನುಡಿ ; ಕನ್ನಡ, ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿನ ಸಮಾನ ಗಾದೆಗಳು. ಮೈಸೂರು, ೧೯೬೨

೩. ರಾಮಾನುಜನ್ ಎ. ಕೆ. **ಗಾದೆಗಳು**, ೧೯೬೦

೪. ವೆಂಕಟರಮಣಯ್ಯ ಟಿ. ವಿ. **ಕನ್ನಡ ಗಾದೆಗಳ ಕೋಶ**, ೧೯೬೩

ನಯಸೇನನ ಕಥನಕಲೆ

● ಬಿ. ಆರ್. ಹಿರೇಮಠ

ಹತ್ತನೆಯ ಶತಮಾನದಲ್ಲಿ 'ಸುಷಮಕಾಲ'ವನ್ನಾಚರಿಸಿದ ಕರ್ನಾಟಕದ ಜೈನ ಧರ್ಮ, ಹನ್ನೊಂದು ಹಾಗೂ ಹನ್ನೆರಡನೆಯ ಶತಮಾನಗಳಲ್ಲಿ 'ದುಷ್ಷಮಕಾಲ'ದತ್ತ ಜಾರತೊಡಗಿತು. ನಯಸೇನ ಜೀವಿಸಿದ್ದು, ಜೈನಧರ್ಮ ಇಳಿಮುಖವಾಗಲು ಆರಂಭಗೊಂಡ ಇಂಥ 'ದುಷ್ಷಮಕಾಲ'ದಲ್ಲಿ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಜೈನ ಧರ್ಮವನ್ನು ಉಳಿಸಿ, ಬೆಳೆಸಲು ಶ್ರದ್ಧಾವಂತ ಜೈನಕವಿಗಳು ಪ್ರಯತ್ನಿಸುವುದು ಅನಿವಾರ್ಯವಾಗಿ ಪರಿಣಮಿಸಿತು.

ಜೈನಧರ್ಮ ದಿನದಿಂದ ದಿನಕ್ಕೆ ಸೊರಗುತ್ತ ಇಲ್ಲವೆ ಕರಗುತ್ತ ನಡೆದ ಈ ಕಾಲ(ನಯಸೇನ ಬದುಕಿದ ಸಮಯ)ದಲ್ಲಿ ಜಿನಧರ್ಮ ಪ್ರಚಾರದ ಚಟುವಟಿಕೆಗಳನ್ನು ಜೈನಕವಿಗಳು ಚುರುಕುಗೊಳಿಸಿದರು. ಅಂದರೆ ಈ ಶತಮಾನದ ಜೈನ ಕವಿಗಳು ಧರ್ಮಪ್ರಚಾರದ ಕಡೆಗೇ ಹೆಚ್ಚಿನ ಗಮನ ಹರಿಸಿದರು. ಇದರಿಂದ ಹತ್ತನೆಯ ಶತಮಾನದ ಲೌಕಿಕ ಆಗಮಿಕವೆಂಬ ಜೈನ ಕಾವ್ಯಪರಂಪರೆ ಹಿಂದೆ ಬಿದ್ದು, ಕೇವಲ ಆಗಮಿಕ(=ಧಾರ್ಮಿಕ)ಕಾವ್ಯ ಸೃಷ್ಟಿಯ ಕಾರ್ಯ ಮುಂದುವರೆಯಿತು. ಇಂಥ ಆಗಮಿಕ ಕಾವ್ಯರಚನಾ ಯುಗ ಪರಿಸರದಲ್ಲಿ ಬೆಳೆದ ನಯಸೇನನೂ ಕೇವಲ ಆಗಮಿಕಕಾವ್ಯ ರಚಿಸುವಂತಾಯಿತು.

ಶಿಥಿಲಗೊಳ್ಳುತ್ತಿದ್ದ ತನ್ನ ಜೈನಧರ್ಮ ಸಮಾಜದ ತಳಹದಿಯಂತಿರುವ ಸಾಮಾನ್ಯ ಜನರಿಂದಲೇ ಗಟ್ಟಿಯಾಗಿ ನಿಲ್ಲುವುದೆಂಬ ಆತ್ಮವಿಶ್ವಾಸ ತಾಳಿದ ಈತನು, ಅವರಿಗೆ ಅತ್ಯಂತ ನಿಕಟವಾದ-ಪರಿಚಿತವಾದ ಕಥಾಮಾಧ್ಯಮವನ್ನು 'ಧರ್ಮಾಮೃತ'ವೆಂಬ ಈ ತನ್ನ ಆಗಮಿಕಕಾವ್ಯ ರಚನೆಗಾಗಿ ಆರಿಸಿಕೊಂಡು, ಇದರಲ್ಲಿ ಜಾನಪದೀಯ ಅಂಶಗಳನ್ನು ತುಂಬಿ, ಜನಪದ ಭಾಷೆಯ ಮೂಲಕ ಜೈನಧರ್ಮದ ತಿರುಳನ್ನೂ ಬೆಜ್ಜಳವನ್ನೂ ಚಿತ್ರಿಸುವುದಕ್ಕೆ ತಕ್ಕುದಾದ ಕಥನಕಲೆಯನ್ನು ಈ ಕಥೆಗಳಲ್ಲಿ ಸಜ್ಜುಗೊಳಿಸಿದನು. ಸಂಯೋಜಿಸಿದನು.

ಆಯಾ ಯುಗದ ಯುಗಧರ್ಮ, ಕವಿ ಇಲ್ಲವೆ ಕಥೆಗಾರನ ಮನೋಧರ್ಮ-ಕಾವ್ಯೋದ್ದೇಶ ಮತ್ತು ಆಯಾ ಕಾಲದ ಪ್ರಜೆಗಳ ಅಥವಾ ಸಹೃದಯರ ಅಭಿರುಚಿ

ಗಳ ಹಿನ್ನೆಲೆಯಲ್ಲಿ ಕಥನಕಲೆಯನ್ನು ಪರಿಭಾವಿಸಬೇಕಾಗುತ್ತದೆ. ಆದುದರಿಂದ ನಯಸೇನನ ಕಥನಕಲೆಯನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಯುಗದ ಪರಿಸ್ಥಿತಿ. ಕವಿಯ ಮನಃಸ್ಥಿತಿ ಮತ್ತು ಜನತೆಯ ಅಭಿರುಚಿಗಳಿಗೆ ತಕ್ಕಂತೆ ಆಕಾರ ಪಡೆದ ನಯಸೇನನ ಧರ್ಮಾಮೃತದಲ್ಲಿ ಸಮ್ಯಗ್ದರ್ಶನ. ಇದರ (ಎಂಟು)ಅಂಗಗಳಾದ ನಿಶ್ಶಂಕೆ. ನಿಷ್ಕಾಂಕ್ಷೆ. ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ. ಉಪಗೂಹನ. ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನೆಗಳನ್ನೂ ಅಹಿಂಸೆ. ಸತ್ಯ. ಅಸ್ತೇಯ.ಬ್ರಹ್ಮಚರ್ಯ. ಅಪರಿಗ್ರಹವೆಂಬ ಪಂಚಾಣುವ್ರತಗಳನ್ನೂ ಆಚರಿಸಿ ಪ್ರಸಿದ್ಧಿ ಪಡೆದ ಧರ್ಮಿಷ್ಠರ ಹದಿನಾಲ್ಕು ಕಥೆಗಳಿರುತ್ತವೆ.

ಶ್ರೇಣಿಕ ಮಹಾರಾಜನ ವಿನಂತಿಯ ಮೇರೆಗೆ ಗೌತಮಗಣಧರರು ಉಪದೇಶ ಹೇಳಲು ಪ್ರಾರಂಭಿಸಿ ಅಂಗ ಅಥವಾ ವ್ರತದ ಮಹಿಮೆಯನ್ನು ಸ್ವಲ್ಪದರಲ್ಲಿಯೇ ವಿವರಿಸಿ. ಆಮೇಲೆ "ಇನ್ನದಱ ಮಹಿಮೆಯೆಂತೆಂದೊಡೆ" ಎಂದು ಕಥೆಯನ್ನು ಆರಂಭಿಸುತ್ತಾರೆ. ಜಂಬೂದ್ವೀಪ-ಭರತಕ್ಷೇತ್ರ-ನಾಡು–ಪುರ. ಆ ಪುರದಲ್ಲಿರುವ ರಾಜ-ರಾಣಿ-ರಾಜಶ್ರೇಷ್ಠಿ-ಅವರ ಮಕ್ಕಳು ಮುಂತಾದವರ ವಿವರಗಳನ್ನು ಸಂಕ್ಷೇಪ ವಾಗಿ ಹೇಳಿ. ನಂತರ ಕಥೆಯ ವಿವರಣೆಗೆ ಶ್ರೀಕಾರ ಹಾಕುತ್ತಾರೆ. ಕಥಾನಾಯಕ ಅಥವಾ ಕಥಾನಾಯಕಿಯ ಸನ್ಯಸನವಿಧಿಯಿಂದಲೋ, ಸಮಾಧಿವಿಧಿಯಿಂದಲೋ ಕಥೆ ಅಂತ್ಯಗೊಳ್ಳುತ್ತದೆ. ಇದು ನಯಸೇನನ ಸಾಂಪ್ರದಾಯಿಕವಾದ. ಸಾಮಾನ್ಯ ವಾದ ಕಥಾಕಟ್ಟಡ. ಈ ಕಥಾಕಟ್ಟಡಕ್ಕೆ ಒಪ್ಪುವ. ಓರಣಗೊಳ್ಳುವ ಕಥಾಸಂವಿ ಧಾನದ ಚೌಕಟ್ಟನ್ನು ನಯಸೇನ ಧರ್ಮಾಮೃತದಲ್ಲಿ ರೂಪಿಸಿಕೊಂಡಿದ್ದಾನೆ.

ಜೈನತತ್ವ ವಿವೇಚನೆ-ಜಿನಧರ್ಮದ ಶ್ರೇಷ್ಠತೆ-ಸಂಸಾರದ ಅನಿತ್ಯತೆ-ನರಕ ಯಾತನೆ-ಜಿನಪೂಜೆ-ಜಿನಧ್ಯಾನ-ಮುನಿಗಳ ಮತ್ತು ಶ್ರಾವಕರ ಆಚಾರ-ವಿಚಾರಗಳ ವಿವರಣೆ ಈ ಕಥಾಸಂವಿಧಾನದಲ್ಲಿ ಎಡೆಪಡೆದಿರುತ್ತವೆ. ಇವಲ್ಲದೆ ನಗರದೇವತಿ- ಯಕ್ಷಿಯರಿಗೆ ಆಸನಕಂಪನವಾಗುವುದು, ವಿದ್ಯಾಧರನ ವಿಮಾನ ನಿಲ್ಲುವುದು. ಕೆನ್ನೆಯ ನರೆ. ಮೋಡಗಳ ಕರಗುವಿಕೆ ಮುಂತಾದವುಗಳಿಂದ ವೈರಾಗ್ಯ ತಾಳುವುದು. ಜೈನಮುನಿಗಳ ಆಗಮನವನ್ನು ಋಷಿನಿವೇದಕರಿಂದ ಕೇಳಿಕೊಂಡು ಅರಸರು ಜಿನ ಮುನಿಗಳ ದರ್ಶನಕ್ಕೆ ಹೋಗುವುದು ಇತ್ಯಾದಿ ಅಂಶಗಳೂ ನಯಸೇನನ ಧರ್ಮಾಮೃತದಲ್ಲಿ ಕೆಲವು ಕಥೆಗಳ ಕಥಾ ಸಂವಿಧಾನದಲ್ಲಿ ಸೇರ್ಪಡೆಯಾಗುತ್ತವೆ. ಇಲ್ಲಿಯ ಕಥಾ ಸಂವಿಧಾನ ಬಾಹ್ಯರೂಪದಲ್ಲಿ ಸಾಂಪ್ರದಾಯಿಕವಾಗಿ ಕಂಡುಬಂದರೂ ಆಂತರಿಕವಾಗಿ ಹೊಸತನದಿಂದ ಕೂಡಿಕೊಂಡಿರುತ್ತವೆ.

ಕಥೆಯನ್ನು ಹೇಳುವ ಸಹಜಕಲೆ ನಯಸೇನನ ಹುಟ್ಟುಗುಣ. ಹೀಗಾಗಿ ಈತನು ನೀರುಕುಡಿದಂತೆ ನಿರಾಯಾಸವಾಗಿ, ನಿರರ್ಗಳವಾಗಿ ಕಥೆ ಹೇಳುತ್ತ ಸಾಗುತ್ತಾನೆ. ಇಲ್ಲಿಯ ಕಥೆಗಳು ಹೆಚ್ಚಾಗಿ ಜಾನಪದ ಕಥೆಯ ಜಾಡಿನಲ್ಲಿರುವಂಥವು! ಕಥೆಯನ್ನು ಎಳೆಎಳೆಯಾಗಿ ಬಿಡಿಸಿ, ಹಸನುಗೊಳಿಸಿ, ಕುತೂಹಲ-ಆಸಕ್ತಿಗಳನ್ನು ಕುದುರಿಸಿ, ಆಕರ್ಷಣೆಯ ಮೋಡಿಯನ್ನು ಬೀಸಿ, ಹಲವು ಹದ-ಹಲವು ವಿಧಗಳಿಂದ ನಗೆಯನ್ನೂ ವಿಡಂಬನೆಯನ್ನೂ ತುಂಬಿ ಲೀಲಾಜಾಲವಾಗಿ ಹೇಳುವ ಜಾಣ್ಮೆ ಜಾನಪದ ಕಥೆಗಾರನಾದ ನಯಸೇನನಿಗೆ ವರವಾಗಿ ಪರಿಣಮಿಸಿದೆ.

ಜಾನಪದ ಅಂತಃಸತ್ವದಿಂದ ತುಂಬಿ ತುಳುಕುತ್ತಿರುವ ಧರ್ಮಾಮೃತದಲ್ಲಿಯ ಎಲ್ಲ (ಹದಿನಾಲ್ಕೂ) ಕಥೆಗಳು ಸುಂದರ ಹಾಗೂ ಕಲಾತ್ಮಕವಾಗಿರದಿದ್ದರೂ ದಯಾಮಿತ್ರಶೆಟ್ಟಿ- ವಸುಭೂತಿಯ ಕಥೆ, ಜಿನಭಕ್ತಸೆಟ್ಟಿಯ ಕಥೆಗಳಲ್ಲಿ ತನ್ನ ಎತ್ತರವನ್ನೂ ಸತ್ವವನ್ನೂ ತಲುಪಿ, ಅವನೊಬ್ಬ ಹುಟ್ಟು ಕಥೆಗಾರನೆಂಬುದನ್ನು ಸಾಬೀತುಪಡಿಸುತ್ತದೆ. ಉದಾಹರಣೆಗಾಗಿ 'ದಯಾಮಿತ್ರಸೆಟ್ಟಿ-ವಸುಭೂತಿಯ ಕಥೆ' 'ಜಿನಭಕ್ತಸೆಟ್ಟಿಯ ಕಥೆ'ಗಳನ್ನು ಇಲ್ಲಿ ಪರಿಶೀಲಿಸಬಹುದು.

ಅ. ದಯಾಮಿತ್ರಸೆಟ್ಟಿ-ವಸುಭೂತಿಯ ಕಥೆ: ಈ ಕಥೆಯಲ್ಲಿ ದಯಾಮಿತ್ರಸೆಟ್ಟಿಯ ಜೈನಧರ್ಮನಿಷ್ಠೆ, ಈ ಧರ್ಮನಿಷ್ಠೆಯನ್ನು ಕಂಡು ಬ್ರಾಹ್ಮಣನಾದ ವಸುಭೂತಿ ಕನಿಕರಪಡುವುದು. ಹಣದ ಆಸೆಗಾಗಿ ಕೆಲವು ದಿವಸಗಳ ತನಕ ಜೈನ ಸನ್ಯಾಸಿಯಾಗಲು ಸಮ್ಮತಿಸಿದ ವಸುಭೂತಿ ಅನುಭವಿಸಿದ ತೊಂದರೆಗಳು. ಅನಂತರ ಜೈನಧರ್ಮದ ಹಿರಿಮೆಯನ್ನು ಮನಗಂಡ ಆತನು ಜೈನನಾಗುವುದು ಮುಂತಾದ ಸಂಗತಿಗಳು ಬಂದಿರುತ್ತವೆ. ಈ ಕಥೆಯ ನಿರೂಪಣೆಯಲ್ಲಿ ನಯಸೇನ ಹುಟ್ಟು ಕಥೆಗಾರನಾಗಿ ಶೋಭಿಸುತ್ತಾನೆ.

ಆ. ಜಿನಭಕ್ತಸೆಟ್ಟಿಯ ಕಥೆ : ಕಥನ ಕಲೆಯ ದೃಷ್ಟಿಯಿಂದ ಹೆಸರಿಸಬೇಕಾದ ಇನ್ನೊಂದು ಉತ್ತಮ ಕಥೆಯಿದು. ಮಾಯಾವೇಷದಲ್ಲಿ ಜೈನಸನ್ಯಾಸಿಯಾಗಿ ಬಂದು, ತನ್ನ (ಜಿನಭಕ್ತಸೆಟ್ಟಿಯ) ದೇಹಾರದಲ್ಲಿದ್ದುಕೊಂಡು ದೇವರ ಮುಕ್ಕೊಡೆಯಲ್ಲಿದ್ದ ರತ್ನವನ್ನು ಕದ್ದು, ಕಾವಲುಗಾರರ ಕೈಯಲ್ಲಿ ಸಿಕ್ಕಿಬಿದ್ದ ಸೂರ್ಪನೆಂಬ ಕಳ್ಳನನ್ನು ಕ್ಷಮಿಸಿ, ಅವನು ಕಳ್ಳನಲ್ಲವೆಂದೂ ತನಗೆ ಪೂಜ್ಯನಾದ ಗುರುವೆಂದೂ ಜಿನಭಕ್ತಸೆಟ್ಟಿ ಸುಳ್ಳು ಹೇಳಿ ಸೂರ್ಪನನ್ನು ಕಾವಲುಗಾರರಿಂದ ಬಿಡುಗಡೆ ಮಾಡಿಸಿ ಆತನ ಮನಃ ಪರಿವರ್ತನೆ ಮಾಡುತ್ತಾನೆ. ಇಲ್ಲಿ (ಕವಿ) ನಯಸೇನ ಜಿನಭಕ್ತಸೆಟ್ಟಿಯ ಪಾತ್ರವನ್ನು ಉದಾತ್ತಗೊಳಿಸಿದ್ದಾನೆ: ಅಲ್ಲದೆ ಕಲಾತ್ಮಕವಾಗಿ ಕಂಡರಿಸಿದ್ದಾನೆ. ಪ್ರಜ್ಞಾಪೂರ್ವಕವಾಗಿ ಕಥೆಯನ್ನು ಕಟ್ಟುವ ಹಾಗೂ ಬೆಳೆಸುವ ನಯಸೇನನ ಸಹಜಕಲೆ ಮೇಲಿನ ಎರಡೂ ಕಥೆಗಳಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿ

ರುತ್ತದೆ. ಈ ಕಥೆಗಳು ಓದುಗರಿಗೆ ಬೇಸರವನ್ನುಂಟುಮಾಡದೆ, ಇನ್ನೂ ಕೇಳಬೇಕೆಂಬ ಕುತೂಹಲ-ಆಸಕ್ತಿ-ಲವಲವಿಕೆಗಳನ್ನು ಕುದುರಿಸುತ್ತವೆ.

ಎಲ್ಲರಿಗೂ ತಿಳಿಯುವಂತೆ ಕಥೆಯಮೂಲಕ ಜಿನಧರ್ಮ ಬೋಧಿಸುವುದು ನಯಸೇನನ ಮುಖ್ಯವಾದ, ಮೂಲಭೂತವಾದ ಉದ್ದೇಶ ಮತ್ತು ಅಪೇಕ್ಷೆ. ಈ ಉದ್ದೇಶದ ಸಾರ್ಥಕತೆಗಾಗಿ ಈತನು ಕಥೆಗಳಲ್ಲಿ ಸಹಜತೆ ಮತ್ತು ಸರಳತೆಗಳನ್ನು ವ್ರತದೋಪಾದಿಯಲ್ಲಿ ಪ್ರಾಮಾಣಿಕವಾಗಿ ಪರಿಪಾಲಿಸಿಕೊಂಡು ಬಂದಿದ್ದಾನೆ. ಹೀಗಾಗಿ ಸರಳತೆ ಮತ್ತು ಸಹಜತೆಗಳು ನಯಸೇನನ ಕಥನಕಲೆಯ ಪ್ರಮುಖ ಲಕ್ಷಣಗಳೆಂದು ಧಾರಾಳವಾಗಿ ಹೇಳಬಹುದು. ಕಥೆಗಳಲ್ಲಿ ಇವುಗಳಿಗೆ ಚ್ಯುತಿಯೊದಗದಂತೆ, ಅಪಚಾರವಾಗದಂತೆ ನಯಸೇನ ತುಂಬ ಕಾಳಜಿವಹಿಸಿ ನಡೆದುಕೊಂಡಿದ್ದಾನೆ. ಮೈತುಂಬ-ಮನತುಂಬ ಎಚ್ಚರವಹಿಸಿ (ಅನೇಕ ಕಥೆಗಳಲ್ಲಿ) ನೋಡಿಕೊಂಡಿದ್ದಾನೆ.

ಕಥಾಶರೀರದಲ್ಲಿ ಸಂದರ್ಭೋಚಿತವಾಗಿ ಅರಳುವ ಗಾದೆಗಳು ಈತನ ಕಥನ ಕಲೆಗೆ ವಿಶೇಷ ಕಳೆಯನ್ನೂ ಕಂಪನ್ನೂ ತಂದುಕೊಟ್ಟಿರುತ್ತವೆ. "ಎಷ್ಟು ನೀತಿಯನ್ನು ಬೋಧಿಸಿದರೂ ಲಲಿತಾಂಗನು ಹಾದಿಗೆಬರದೆ ತನ್ನ ದುಷ್ಟತನವನ್ನೇ ಮುಂದುವರೆಸಿದಾಗ ಅವನ ತಾಯಿ" ನಿರಾಶಳಾಗಿ 'ನಚ್ಚಿದೆಮ್ಮ ಕೋಣನನೀದಂತೆಂಬಂತೆ ಮಾಡಿದೈ' (೨-೧೦೩) ಎಂದು ನುಡಿಯುತ್ತಾಳೆ. ವಾರಿಷೇಣ ಕುಮಾರನಿಗೆ ತನ್ನ ಗೆಳೆಯನು ಹೆಂಡತಿಯಲ್ಲಿಯೇ ಅನುರಕ್ತನಾಗಿರುವದನ್ನು ತಿಳಿದು 'ಕುರುಡರ್ ಕುಳಿಯೊಳ್ ಕೆಡೆದೊಡೆ ಕರುಣಿಸಿ ತೆಗೆವವನೆ ನಂಟಂ' (೭-೧೨೫) ಎಂಬ ಮಾತು ನೆನಪಿಗೆ ಬಂದಿತಂತೆ. ಸಂಘಶ್ರೀಗೆ ಎಷ್ಟು ಧರ್ಮಶ್ರವಣ ಮಾಡಿದರೂ ಮೂಗರಂತೆ ಮೌನವಾಗಿರುವದನ್ನು ಕಂಡ ಧನದಮಹಾರಾಜ 'ಎನಿತು ಕಡುಗೂರ್ತೊರ್ಡಂ ಬೇವಿನ ಮರನಂ ಮಳಯಜೋರ್ವಿಜಂ ಮಾಡುವನೆಂಬನೆ ಗಾಂಪಂ' ಎಂದು ನುಡಿಯುತ್ತಾನೆ (೧೧-೧೬೮). ಬ್ರಹ್ಮಚಾರಿಯ ವೇಷಧರಿಸಿ ಪಡಬಾರದ ಕಷ್ಟಗಳನ್ನು ಅನುಭವಿಸಿ, ಕೊನೆಗೆ ಜಿನದೇವನ ಮುಕ್ಕೊಡೆಯಲ್ಲಿಯ ರತ್ನ ದೊರೆತಾಗ ಸೂಪನೆಂಬ ಕಳ್ಳನಿಗೆ 'ತಡೆದು ತಿಳಿನೀರನುಂಡುದೆಂಬ' ನಾಣ್ಣುಡಿ ನೆನಪಾಯಿತಂತೆ (೬-೮೨). ಜಿನಪಾಲಿತಮುನಿ, ತಾನು ಪೊನ್ನ ಕದ್ದಿರುವನೆಂಬ ಸಂಶಯಕ್ಕೊಳಗಾದ ಜಿನದತ್ತ ಸೆಟ್ಟಿಯ ನಡವಳಿಕೆಯನ್ನು ಕಂಡು 'ಲೋಭಿಯ ಮನಮುಂ ಬಂದ ತೊಱೆಯುಂ ಶುದ್ಧಮಾಗಲಱಿಯವು' ಎಂಬ ನಾಣ್ಣುಡಿಯನ್ನು ಅವನು ನಷ್ಟಮಾಡಿದನೆಂದು ನುಡಿಯುತ್ತಾನೆ. ಈ ಮತ್ತು ಇಂಥ ಗಾದೆಗಳನ್ನು ನಯಸೇನ ಹೆಚ್ಚಾಗಿ ಸಂದರ್ಭಾನುಸಾರವಾಗಿಯೇ ಕಥೆಗಳಲ್ಲಿ ತಂದಿದ್ದಾನೆ. ಕೆಲವುಸಲ ಇವು ಕಥೆಯಲ್ಲಿ ಅಧಿಕವಾಗಿ ತೋರಿಬಂದರೂ ಅಪ್ರಾಸಂಗಿಕವಾದವುಗಳಲ್ಲ, ಅವಾಸ್ತವವಾದವುಗಳಲ್ಲ.

ಬಳಕೆಯ ಮಾತು ಹಾಗೂ ನುಡಿಗಟ್ಟುಗಳನ್ನು ಕಥೆಗಳಲ್ಲಿ ಸಂದರ್ಭಕ್ಕನುಗುಣವಾಗಿ ಬಳಸುವುದು ನಯಸೇನನ ಕಥನಕಲೆಯ ಮತ್ತೊಂದು ರೀತಿ. ಇವು ಕಾವ್ಯ-ಕಥೆಗಳಿಗೆ ದೇಸೀಯತೆಯ ಸೊಗಸನ್ನೂ ಸೊಗಡನ್ನೂ ಕಲ್ಪಿಸಿಕೊಟ್ಟಿರುತ್ತವೆ. "ಬೇಚರಿಯಲ್ಲಿ ಗೀಜರಿಯೆಂ (೪-೪೯), ಅಜ್ಜಂ ಪಜ್ಜಂ (೬-೫೭), ಸಿರಿಯುಂ ಗಿರಿಯುಂ, ಸುಖಮುಂ ಗಿಖಮುಂ (೩-೧೦೮), ಜವಗಿವ, ಜಿದಿಗಿದಿ (೭-೧೫) ...ತಿಗುರಿಯುಂ ಬುಗುರಿಯುಂ ಆಗೆ(೬-೧೦೪), ಕುಱಿಸಾವಂತೆ ಸಾವೆಂ (೬-೨೬) ಬ್ರಹ್ಮೇತಿಯಾಗಿ ಪೊಟಿಲೊಳಗೆ ಪುಯ್ಯಲಿಟ್ಟ, ಬಂದು ಸಾವೆಂ (೮-೯೪). .. ನುಡಿಯಿಸಲಾಱದೆ ಮೊಸೆಯುಂ ಕಡಿದು (೧೨-೨೨೮), ಮೂಗಂ ಮೇಲೆತ್ತಿ ನುಡಿವ (೧೧-೪೨),...... ಚಾಟುಕಾರಿಸು (೧೦-೪೨), ಮುಯ್ಯುನೋಡು (೮-೨೧೫). ಬೆಣಚಕಂಗೆಡ (೬-೨೩೦), ಗಲ್ಲಂಗುರಿಗೊಳ್ (೩-೧೯೦), ಪುಡುಕು ನೀರಡ್ಡ (೪-೨೪೫), ಮುಟ್ಟುಗೆಡು (೪-೨೬೭), ಬಿಂಕಮುಂ ಸುಂಕಗೊಳ್ (೪-೨೫೨). ಮೂವೆಡ್ಡಮಾಗು(೫-೧೩), ಕಿಱುಬೆಸಗೊಳ್ (೫-೧೫೫), ಗಿಡಿಗಿಡಿ ಜಂತ್ರಮಾಗು (೬-೩೭), ಪೆಟ್ಟುವೆರ್ಚು (೬-೫೪), ಬಕವೇಸಿತನ (೬-೬೦), ಪುರಿಯೋಡಾಗು (೬-೨೭), ಎಕ್ಕಸಕ್ಕಮುಂ ಏಣಗೋಣಂಗಳಂ(೬-೨೧೭), ಪೊಂಕಂಬೆರಸು(೮-೧೯೬), ಪೊಟ್ಟೇಳಿಸು (೯-೧೬೭), ಪೆಟ್ಟುಮಳಿಸು (೧೦-೫೭). ಸೊಪ್ಪುಸೋವಡಾಗು (೧೨-೨೨೦), ಬೆರಲಂ ಮಿಡಿ(೧೩-೬೩)" ೩ –ಹೀಗೆ ಧರ್ಮಾಮೃತದಲ್ಲಿ ಆಡುಮಾತಿನ ಸಿರಿಗಳಾದ ಬಳಕೆ, ಸಂದರ್ಭಾನುಸಾರವಾದ ನುಡಿಗಟ್ಟುಗಳ ಹೆಣಿಕೆಗಳನ್ನು ನಯಸೇನ ಮಾಡಿದ್ದಾನೆ. ಇವುಗಳನ್ನು ಕಥೆಗಳಲ್ಲಿ ಯಥೇಚ್ಛವಾಗಿ. ಸರಾಗವಾಗಿ ಸಮಯಾನುಸಾರವಾಗಿ ತರುವುದರ ಮೂಲಕ ದೇಶೀಯ ಚೆಲುವನ್ನೂ ಅದರ ಮೂಲಕ ಕಥನಕಲೆಯನ್ನೂ ಈತನು ಮೆರೆದಿದ್ದಾನೆ.

ನಯಸೇನ ತರ್ಕಬದ್ಧವಾದ, ಅರ್ಥಪೂರ್ಣವಾದ ಸಂಭಾಷಣೆಗಳನ್ನು ಕೆಲವು ಕಥೆಗಳಲ್ಲಿ ಸಜೀವವಾಗಿರಿಸಿದ್ದಾನೆ. ಸಂಕ್ಷಿಪ್ತತೆ, ನಾಟಕೀಯತೆಗಳಿಂದ ಕೂಡಿದ ಇಂಥ ಸಂಭಾಷಣೆಗಳು ಕಥೆಯಲ್ಲಿ ಬಂದರೆ, ಕಥೆಗೆ ಒಂದು ರೀತಿಯ ಬೆಡಗು ಉಂಟಾಗುತ್ತದೆ. ಉದಾಹರಣೆ–ಯಶೋಧರ ಮುನಿ-ಚೆನ್ನಮೃಗಸೇನರ ಸಂಭಾಷಣೆ (ಧನಕೀರ್ತಿಯ ಕಥೆ) : ೪

ಯಶೋಧರ – ಕಳ್ಳಂ ಮಾಣ್

ಮೃಗಸೇನ – ಕಳ್ಳಿಲ್ಲದೊಡೆ ಇಂದೆ ಸಾವೆಂ

ಯಶೋಧರ – ಪೊಲ್ಲದು ಕೊಲೆಯುಂ ಮಾಣ್

---

೩ ಡಾ. ಜಿ. ಎಸ್. ಮುಲ್ಲಾಪುರ : ನಯಸೇನ ಮತ್ತು ಅವನ ಕೃತಿಗಳು, ಪುಟ.೪೦೪-೪೦೫.
೪ ಅದೇ. ಪುಟ– ೩೮೭

ಮೃಗಸೇನ – ಕೊಲ್ಲದೊಡೆ ಆನೆಂತು ಪೊರ್‍ೞಿವೆನೆನ್ನಂಗನೆಯುಂ ?
ಯಶೋಧರ – ಪುಸಿಯುಂ ಮಾಣ್
ಮೃಗಸೇನ – ನಿಮ್ಮಡಿ ಪುಸಿಯುಂ ಮಾಣ್ದಂದು ಬಾೞಬಾರದು ಧರೆಯೊಳ್. ಪುಸಿ ಮುಖ್ಯಂ
ಯಶೋಧರ – ಕಳವನುೞಿವುದು
ಮೃಗಸೇನ – ಕಳವೆಂಬುದು ಮೃತ್ಯುಲಕೆ ಬಿಡಬಾರದು.ಅದನೆ ಬಿಟ್ಟೊಡೆ ಬಾೞ್ವೊಂದಳವಾವುದೊ? ಪೇೞಿಂ ಮೀಂಗುಲಿಗನಪ್ಪ ವಂಗದು ಮುಖ್ಯಂ
ಯಶೋಧರ – ಮತ್ತೆ ನೀಂ ಬಲೆಯುಂ ಬೀಸಿದಲ್ಲಿ ಮೊದಲ್ ಸಿಕ್ಕಿದೊಂದು ಮೀನಂ ಬಿಡುವುದು
ಮೃಗಸೇನ – ಅಂತೆ ಗೆಯ್ವೆಂ

ಇದು ಅತ್ಯಂತ ಅಚ್ಚುಕಟ್ಟಾದ ಹಾಗೂ ಚೊಕ್ಕಟವಾದ ಸಂಭಾಷಣೆಯಾಗಿದೆ. ಇನ್ನೂ ಕೆಲವು ಕಡೆಗಳಲ್ಲಿ ದೀರ್ಘವಾದ, ಬೇಸರ ಹುಟ್ಟಿಸುವ ಸಂಭಾಷಣೆ (ಬಲಿ–ಅಕಂಪನಾಚಾರ್ಯ, ಸಾಳಂಕಾರ, ಪ್ರಭಾವತಿಯರ ಸಂವಾದ) ಗಳೂ ಇರುತ್ತವೆ. ಜೈನತತ್ವ ವಿವೇಚನೆಯೇ ಈ ಸಂಭಾಷಣೆಗಳಲ್ಲಿ ಪ್ರಧಾನವಾಗಿಬಿಟ್ಟಿದೆ. ಕಥನ ಕಲೆಯನ್ನು ಬೆಳಗಿಸಬಲ್ಲ ಸಂಭಾಷಣೆಗಳು ಧರ್ಮಾಮೃತದಲ್ಲಿ ಕಡಿಮೆಯೆಂದೇ ಹೇಳಬೇಕು. ನಯಸೇನ ಹೆಚ್ಚಾಗಿ ಹರಿಕೀರ್ತನಕಾರನಂತೆ ತಾನೇ ಕಥೆ ಹೇಳುತ್ತ ಹೋಗುತ್ತಾನೆ.

ಸನ್ನಿವೇಶ ನಿರ್ಮಾಣ, ವರ್ಣನಾಪ್ರಸಂಗ, ನೀತಿಬೋಧೆ, ತತ್ವನಿರೂಪಣಾ ಸಂದರ್ಭಗಳಲ್ಲಿ ಕವಿ ಅಥವಾ ಕಥೆಗಾರನಿಗೆ 'ಪ್ರಮಾಣ ಪರಿಜ್ಞಾನ' ಇರಬೇಕಾದುದು ತೀರ ಅವಶ್ಯ. ಕವಿಗೆ ಈ 'ಪ್ರಮಾಣ ಪರಿಜ್ಞಾನ' ಪ್ರಜ್ಞೆಯಿಲ್ಲದಿದ್ದರೆ ಕಥನ ಕಲೆಗೆ ಧಕ್ಕೆಯುಂಟಾಗುತ್ತದೆ. ನೋಂಪಿಯನ್ನು ಆಚರಿಸುವಾಗ ವಸುಭೂತಿ ಅನುಭವಿಸಿದ ಕ್ಲೇಶ, ಸೂರ್ಪನೆಂಬ ಕಳ್ಳನು ದೇವರ ಮುಕ್ಕೊಡೆಯಲ್ಲಿದ್ದ ರತ್ನವನ್ನು ಕದಿಯಲು ಹೂಡಿದ ನಾಟಕ ಮೊದಲಾದ ಸನ್ನಿವೇಶಗಳಲ್ಲಿ ಕ್ರಿಯಾಶೀಲತೆ, ಸಹಜತೆಗಳನ್ನು ಗುರುತಿಸಬಹುದು. ಇಂಥವುಗಳಿಂದ ಕಥನಕಲೆಯ ಶ್ರೀಮಂತಿಕೆ ಇನ್ನೂ ವರ್ಧಿಸುತ್ತದೆ. ಹಿತಮಿತವಾದ, ಅರ್ಥಪೂರ್ಣವಾದ ಮತ್ತು ಅಕೃತಕವಾದ ವರ್ಣನೆ–ಸನ್ನಿವೇಶಗಳಿಂದ ಕಥೆಗಳು ಸರ್ವಾಂಗಸುಂದರವಾಗಿ ಕಾಣುವಂತೆ ನಯಸೇನ ಬಹಳಷ್ಟು ಪ್ರಯತ್ನಿಸಿದ್ದರೂ ಲಲಿತಾಂಗನ ದುಷ್ಟಚೇಷ್ಟೆ (ಲಲಿತಾಂಗನ ಕಥೆ), ಗುಣಪಾಲಶೆಟ್ಟಿ, ಧನಶ್ರೀ ಮತ್ತು ಸುಬಂಧಶ್ರೀಯರ ಪೀಠಿಕಾ ವೃತ್ತಾಂತ (ಧನಕೀರ್ತಿಯ ಕಥೆ), ಉಪರಿಚರ ಮಹಾರಾಜನಿಗೆ ಹಾವಿನ ಜನ್ಮ

ಸಂಪ್ರಾಪ್ತವಾದಾಗ, ಅನಂತವೀರ್ಯ – ಸಾರಸ್ವತಾಚಾರ್ಯ– ದೇವಜನ್ಮ ಪಡೆದು ಕೊಂಡ ರಾಣಿಯರು ಆ ಹಾವಿಗೆ ಮಾಡುವ ಉಪದೇಶ (ಉಪರಿಚರ ಮಹಾರಾಜ-ಗುರುದತ್ತರ ಕಥೆ) ಮುಂತಾದ ಸನ್ನಿವೇಶಗಳು ದೀರ್ಘವೆನಿಸುತ್ತವೆ.

ನರಕಯಾತನೆಯ ವರ್ಣನೆ (೩–೬೪ ರಿಂದ ೮೭), ಒದ್ದಾಯನನ ಆಸ್ಥಾನದ ಸ್ತ್ರೀಯರ ವರ್ಣನೆ (೪–೧೩೩ ರಿಂದ ೧೫೧), ಅನಂತಮತಿಯ ಸೌಂದರ್ಯದ ವರ್ಣನೆ (೩–೧೩೭ ರಿಂದ ೧೭೩), ವಾರಿಷೇಣಕುಮಾರನ ರಾಣಿಯರ ವರ್ಣನೆ (೭-೧೭೫ ರಿಂದ ೨೧೯) ಇತ್ಯಾದಿ ವರ್ಣನೆಗಳು ಅತ್ಯಂತ ವಿಸ್ತೃತವಾಗಿರುತ್ತವೆ. ಮೇಲೆ ಉಲ್ಲೇಖಿಸಿದ ಈ ಸನ್ನಿವೇಶ ನಿರ್ಮಾಣ ಹಾಗೂ ವರ್ಣನಾ ಪ್ರಸಂಗಗಳಲ್ಲಿ ನಯಸೇನ 'ಪ್ರಮಾಣ ಪರಿಜ್ಞಾನ'ವನ್ನು ಮೀರಿ ವರ್ತಿಸಿದ್ದಾನೆ ಎನಿಸುತ್ತದೆ. ಆದರೆ ಇವು ಕವಿಗೆ ಮತ್ತು ಅಂದಿನ ಕಾಲದ ಜನರಿಗೆ ಅವಶ್ಯಕವೂ ಸಹಜವೂ ಎನಿಸಿದ್ದರೆ ತಪ್ಪೇನಿಲ್ಲ. ಹೀಗಾಗಿ ಇವುಗಳ ದೀರ್ಘತೆಯಿಂದ ಕಥನಕಲೆಗೆ ಭಂಗಬಂದಿದೆಯೆಂದು ಹೇಳುವುದು ಇಂದಿನವರ ಮಾತಾಗುತ್ತದೆಯೇ ಹೊರತು ಅಂದಿನವರ ಮಾತಾಗಲಾರದು.

ಕಥೆಯ ಮೂಲಕ ಸಾಮಾನ್ಯಜನರಿಗೆ ಜೈನಧರ್ಮ ಬೋಧಿಸುವುದು ನಯಸೇನನ ಉದ್ದೇಶ-ಸಂಕಲ್ಪ. ಹೀಗಾಗಿ ಈತನ ಲಕ್ಷ್ಯವೆಲ್ಲ ಕಥೆ ಮತ್ತು ಜಿನಧರ್ಮ ನಿರೂಪಣೆಯ ಕಡೆಗೇ ಕೇಂದ್ರೀಕೃತವಾಗಿದೆ. ''ಜಿನಮತದೊಳೆನಿತು ಸಾರಮದ ನಿತುಂ ಲೇಸಾಗಿ ತೋರ್ಪುದೀ ಕೃತಿಯೊಳ್'' ಎಂದು ತನ್ನ ಕಾವ್ಯೋದ್ದೇಶವನ್ನು ಸಾರಿ ಹೇಳಿದ ಕವಿ, ಪ್ರಸಂಗ ದೊರೆತಾಗ ಇಲ್ಲವೆ ಪ್ರಸಂಗಗಳನ್ನು ಸೃಷ್ಟಿಸಿಕೊಂಡು ಜೈನಧರ್ಮ-ತತ್ತ್ವವಿವೇಚನೆ ಮಾಡಿದ್ದಾನೆ. ಹದಿನಾಲ್ಕು ಕಥೆಗಳಲ್ಲಿಯೂ ಸಾಮಾನ್ಯವಾಗಿ ಜೈನ ಧರ್ಮ-ತತ್ತ್ವ, ನೀತಿ ಬೋಧೆಗಳು ಪ್ರತಿಪಾದಿತವಾಗಿರುತ್ತವೆ. ಆದರೆ ''ಸೌಧರ್ಮೇಂದ್ರ ದೇವತೆಗಳಿಗೆ ಮಾಡಿದ ಜಿನಾಗಮ ಬೋಧೆ(೪–೨೦ ರಿಂದ ೬೮), ಮುನಿಗುಪ್ತ ಭಟ್ಟಾರಕರು ಕೊಡುವ ತಪಸ್ಸಿನ ವಿವರಣೆ (೫-೨೧ ರಿಂದ ೧೧೯), ಉಂಡುರುಳಿ ಭಟ್ಟಾರಕ ಮತ್ತು ಬ್ರಹ್ಮಚಾರಿ ಇಬ್ಬರ ಮಧ್ಯೆ ನಡೆದ ಸಂಭಾಷಣೆ (೫-೧೭೫ ರಿಂದ ೧೯೯), ಜಿನಧಸೆಟ್ಟಿ ಸೂರ್ಪನಿಗೆ ಮಾಡಿದ ಉಪದೇಶ (೬-೧೨೭ ರಿಂದ ೧೯೩ ಮತ್ತು ೨೦೬ ರಿಂದ ೨೩೭), ವಾರಿಷೇಣನಿಗೆ ಮುಂಡಿಯ ಪುತ್ರಾಚಾರ್ಯರು ಮಾಡಿದ ಧರ್ಮಬೋಧೆ (೭–೩೨ ರಿಂದ ೮೨), ವಾರಿಷೇಣ, ಪುಷ್ಪದಾಡನಿಗೆ ಕೊಟ್ಟ ಉಪದೇಶ (೭-೧೩೨ ರಿಂದ ೧೬೪), ಅಕಂಪನಾಚಾರ್ಯರು ಜಯವರ್ಮ ದೊರೆ ಮತ್ತು ಬಲಿಯ ಸಂಶಯಗಳಿಗೆ ನೀಡಿದ ಉತ್ತರ (೮-೪೯ ರಿಂದ ೧೨೪), ಧನದ ಮಹಾರಾಜ ಸಂಘಶ್ರೀಗೆ ತಿಳಿಸಿಕೊಟ್ಟ ಜಿನಾಗಮ (೧೧-೨೯ ರಿಂದ ೫೩) ಸಂದರ್ಭಗಳಲ್ಲಿ ಜಿನಧರ್ಮ ಬೋಧನೆ, ಜಿನಧರ್ಮದ ವಿವಿಧ ಪ್ರಕ್ರಿಯೆ,

ಮುನಿ ಮತ್ತು ಶ್ರಾವಕರಆ ಚಾರ–ವಿಚಾರ, ಸಂಸಾರದ ಅನಿತ್ಯತೆ-ಅಸಾರತೆಗಳ ಪ್ರಸ್ತಾಪ ವಿಸ್ತಾರವಾಗಿಯೇ ಬಂದಿರುತ್ತದೆ. ಕೇವಲ ಕಥೆಯನ್ನು ಸವಿಯಬಯಸು ವವರಿಗೆ ಇವು ಬೇಸರವನ್ನುಂಟುಮಾಡಬಹುದು. ಆದರೆ ಈ ರೀತಿಯ ಧಾರ್ಮಿಕ ವಿವೇಚನೆ ಮಾಡುವುದು ಅಂದಿನ ಯುಗದ ಹಿನ್ನೆಲೆಯಲ್ಲಿ ಅವಶ್ಯಕ ಕಾರ್ಯವಾಗಿದ್ದಿತು. ಹೀಗಾಗಿ ಅಂದಿನ ಯುಗವ ಹಿನ್ನೆಲೆಯಲ್ಲಿ ಇವು ಕಥೆಗಳಲ್ಲಿ (ಉದ್ದುದ್ದವಾಗಿ) ಬಂದಿರುವುದು ಅನಿವಾರ್ಯವೆನಿಸುತ್ತದೆ. ನಯಸೇನನ ಕಾವ್ಯೋದ್ದೇಶದಂತೆ ಇವುಗಳಿಂದ ಕಥನಕಲೆಗೆ ಯಾವ ರೀತಿಯ ತೊಂದರೆಯೂ ಉಂಟಾಗಿಲ್ಲವೆಂದು ಹೇಳಬಹು ದಾಗಿದೆ. ಶುಷ್ಕವಾದ ಈ ತತ್ವ ವಿವೇಚನೆಯನ್ನು ನೀರಸವಾಗಿಸದೆ ಕಾವ್ಯಾಂಶ ಗಳಿಂದ ಪರಿಪುಷ್ಟಿಗೊಳಿಸಿದುದು ನಯಸೇನನ ಕಾವ್ಯಕಲೆಯನ್ನು ಎತ್ತಿ ತೋರಿಸುತ್ತದೆ.

ನಯಸೇನ ಕಥೆಯನ್ನು ಹೇಳುತ್ತಲೇ ಉಪಮೆಗಳ ಸರಮಾಲೆಯನ್ನು ಕಟ್ಟುತ್ತಾನೆ, ಈ ಉಪಮೆಗಳು ಹ್ರಸ್ವವಾಗಿಯೂ ದೀರ್ಘವಾಗಿಯೂ ಇರುತ್ತವೆ. ಇವು ಕಾವ್ಯಶರೀರಕ್ಕೆ ಹೊಂದಿಕೊಂಡೂ ಸನ್ನಿವೇಶ-ಸಂದರ್ಭಾನುಸಾರವಾಗಿಯೂ ಬಂದಿರುವವರಿಂದ ಕಥೆಗಳಿಗೆ ವಿಶೇಷವಾದ ಹಾಗೂ ವಿನೂತನವಾದ ಕಲಾತ್ಮಕತೆ ಸಂದಾಯವಾಗಿದೆ. ಹೀಗೆ ಮಾಲೋಪಮೆಗಳನ್ನು ಕಥೆಗಳಲ್ಲಿ ಸಂದರ್ಭಕ್ಕನುಗುಣ ವಾಗಿ ಬಳಸುವುದು ನಯಸೇನನ ಕಥನಕಲೆಯ ವಿಶಿಷ್ಟರೀತಿಯಾಗಿದೆ. ಮಾದರಿ ಗಾಗಿ ಇಲ್ಲಿ ಒಂದನ್ನು ನೋಡಬಹುದು. ಹಣದ ಆಸೆಗಾಗಿ ಅಲ್ಪ ದಿನಗಳ ವರೆಗೆ ಮಾತ್ರ ಜೈನಸನ್ಯಾಸಿಯಾಗಲು ಒಪ್ಪಿಕೊಂಡ ವಸುಭೂತಿಗೆ ಬಾಯಾರಿಕೆಯಾದಾಗಿನ ಸಂದರ್ಭವನ್ನು (ಮಾಲೋಪಮೆಯ ಮೂಲಕ) ಕವಿ ಮನಮುಟ್ಟುವಂತೆ ಹೀಗೆ ಚಿತ್ರಿಸಿದ್ದಾನೆ : ''ಅಂತಿರುಳ್ ನಾಲ್ಕು ಜಾವಮುಂ ಮೌಹೂರ್ತಿಕನಂತೆ ಪೊತ್ತಿ ನಳಿಯಿಯುಂ ನೋಡುತ್ತುಂ ಪೆರ್ಬಾವಿನಂತೆ ಮಂಡಲಂಗೊಳ್ಳುತ್ತುಂ ಜಾವದ ಕಾಪಿನವರಂತೇಚುತ್ತುಂ ಜಂಘಾಬಲವಿಲ್ಲದವನಂತೆ ಕುಳ್ಳಿರುತ್ತುಂ ಮರುಳನಂತೆ ತನ್ನೊಳ್ತಾನೆ ನುಡಿಯುತ್ತುಂ ಮುಗಿಲುಂ ಪಾರ್ವಕ್ಕಲಿಗನಂತೆ ಗಗನ ಮಂಡಲಮಂ ನೋಡುತ್ತುಂ ನೂತನ ಶ್ರೀಮಂತನಂತೆ ಮಯ್ಯುಜಿಯದೆ ಬಳ್ಕುತ್ತುಂ ಚಾದಗೆಯಂತಾಕಾಸವನಿಗೆ ಬಾಯಂ ಬಿಡುತ್ತುಂ ದಾಹಜ್ವರಂ ಪೆತ್ತಂತೆ ಗಾಳಿಗಾಸೆಗೆಯ್ಯುತ್ತುಂ ಕಪ್ಪೆಯಂತೆ ತಣ್ಪಪ್ಪೆಡೆಯೊಳ್ ಪತ್ತುತ್ತುಂ ಚೊಜ್ಜಲ್ ಪೆಜಿವಳಂತೆ ತೊಡಲುತ್ತುಂ ಪಲ್ಲಿಯಂತೆ ಕೇರಂ ಪತ್ತುತ್ತುಂ ಎಲೆವಳ್ಳಿಯಂತೆ ಕಂಬ ಮಂ ಸುತ್ತುತ್ತುಂ ಪಾದರಿಗೆಯಂತೆ ಪೆಜಿರ್ಗಂಜುತ್ತುಂ ಸೂಲೆವೆತ್ತರಂತೆ ಪೊರಳುತ್ತುಂ ಕಳ್ಗುಡಿದರಂತೆ ಮತಿಗಿಡುತ್ತುಂ ವೃದ್ಧನಂತೆ ತಡವರಿಸುತ್ತುಂ ಲತೆಯಂತ

೫ ಡಾ. ಬಿ. ವ್ಹಿ. ಮಲ್ಲಾಪುರ : ನಯಸೇನ ಮತ್ತು ಆವನ ಕೃತಿಗಳು, ಪುಟ-೬೮

ಲ್ಲಾಡುತ್ತುಂ''.೬ ಸಹಜತೆ, ಸಂದರ್ಭೋಚಿತತೆಗಳಿಂದ ಕೂಡಿದ ಈ ಮಾಲೋಪಮೆಯಲ್ಲಿ ವಸುಭೂತಿಯ ನೈಜಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ, ಮನಕ್ಕೆ ಮುಟ್ಟುವಂತೆ ಅತ್ಯಂತ ಮಾರ್ಮಿಕವಾಗಿ ನಯಸೇನ ಚಿತ್ರಿಸಿದ್ದಾನೆ.

ಜನಜೀವನದಿಂದ ಎತ್ತಿಕೊಂಡ ಈ ಉಪಮೆಗಳನ್ನು ಬಳಸುವುದೆಂದರೆ ಈತನಿಗೆ ಎಲ್ಲಿಲ್ಲದ ಉತ್ಸಾಹ. ಇವುಗಳನ್ನು ದೀರ್ಘವಾಗಿಯಾಗಲೀ, ಹ್ರಸ್ವವಾಗಿಯಾಗಲೀ ಹೇಳದಿದ್ದರೆ ಮಾತುಗಾರನಾದ ನಯಸೇನನಿಗೆ ಸಮಾಧಾನವಿಲ್ಲ. ಕಾವ್ಯದಲ್ಲಿ ಇವುಗಳನ್ನು ಸಾರ್ಥಕವಾಗಿಯೂ ದಣಿವಿಲ್ಲದೆಯೂ ದುಡಿಸಿಕೊಂಡಿದ್ದಾನೆ. ಜನತೆಯ ನಾಡಿಯ ಬಡಿತ, ಉಸುರಿನ ಮಿಡಿತ ಹಾಗೂ ಮನದ ಇಂಗಿತಗಳನ್ನು ಅರ್ಥೈಸಿಕೊಂಡ ನಯಸೇನ ಇಂಥ ಉಪಮೆಗಳ ಮೂಲಕವೇ ತನ್ನ ಕಾವ್ಯ ಜನಸಾಮಾನ್ಯರಿಗೆ ಅರ್ಥವಾಗುವುದೆಂಬ, ಅದರ ಮುಖಾಂತರ ತನ್ನ (ಜೈನ) ಧರ್ಮ ಶ್ರೀಸಾಮಾನ್ಯನಿಗೆ ತಿಳಿಯುವುದೆಂಬ ಭಾವನೆಯಿಂದ ಒಂದು ಕಟ್ಟುವ ಕಡೆ ಹತ್ತು ಕಟ್ಟಿದ್ದಾನೆ. ಇದು ನಯಸೇನನ ಸಹಜ ಸ್ವಭಾವ- ಮನೋಪ್ರವೃತ್ತಿ. ಆದುದರಿಂದ ಈತನು ತನ್ನ ಕಥೆಗಳಲ್ಲಿ ಉಪಮೆಗಳನ್ನು ರಾಶಿರಾಶಿಯಾಗಿ ಕೂಡಿಹಾಕಿದ್ದಾನೆ. ಹೀಗೆ ಉಪಮೆಗಳ ಬಳಕೆಯಿಂದ ನಯಸೇನನ ಕಥನಕಲೆ ವಿಶೇಷ ಪುಷ್ಟಿಯನ್ನೂ ಹೊಸವೃಷ್ಟಿಯನ್ನೂ ಪಡೆಯಲು ಸಾಧ್ಯವಾಗಿದೆ.

ಮಾನವೀಯ ಅಂಶಗಳಿಂದ ಕೂಡಿದ ಲೌಕಿಕ ಪಾತ್ರಗಳ ನಿರೂಪಣೆಯಲ್ಲಂತೂ ನಯಸೇನ ವ್ಯಕ್ತಪಡಿಸಿದ ಜಾಣ್ಮೆ ನೆನೆಯುವಂಥದಾಗಿದೆ. ಪ್ರತಿಯೊಂದು ಪಾತ್ರದ ಅಂತರಂಗ-ಬಹಿರಂಗಗಳನ್ನು ತಲಸ್ಪರ್ಶಿಯಾಗಿ ದರ್ಶಿಸಿ, ಸಜೀವವಾಗಿ-ಸಚಿತ್ರವಾಗಿ–ಸಹಜವಾಗಿ–ಕ್ರಿಯಾತ್ಮಕವಾಗಿ ಅವುಗಳನ್ನು ಓದುಗರಿಗೆ ಪರಿಚಯಿಸಿಕೊಡುವ ಕಲೆ ನಯಸೇನನಿಗೆ ಸುಲಭವಾಗಿ ಸಿದ್ಧಿಸಿದೆ. ವಸುಭೂತಿ, ಸೂರ್ಪನೆಂಬ ಕಳ್ಳ, ಲಲಿತಾಂಗ ಮುಂತಾದ ಪಾತ್ರಗಳ ಹಾಗೂ ಚಾರಿತ್ರಶುದ್ಧಿ–ಜೈನನಿಷ್ಠೆ-ಜೈನಧರ್ಮಾಭಿಮಾನ–ಉದಾತ್ತ ಉದ್ದೇಶಗಳನ್ನಿಟ್ಟುಕೊಂಡ ದಯಾಮಿತ್ರಶೆಟ್ಟಿ, ಜಿನಭಕ್ತಸೆಟ್ಟಿ, ಗುಣಪಾಲ, ಧನದ ಮಹಾರಾಜ ಮೊದಲಾದ ಪಾತ್ರಗಳ ಪ್ರತಿಯೊಂದು ಕ್ರಿಯೆಯಲ್ಲಿಯೂ ಅಭಿವ್ಯಕ್ತವಾಗಿರುವ ವಾಸ್ತವಿಕತೆ, ಜೀವಂತಿಕೆ ಮತ್ತು ಕ್ರಿಯಾಶೀಲತೆಗಳು ಓದುಗರ ಹೃದಯವನ್ನು ಕುಲುಕುತ್ತವೆ; ಆತ್ಮೀಯವಾಗಿ ಆಕರ್ಷಿಸುತ್ತವೆ. ಮನವನ್ನು ಸೂರೆಗೊಳ್ಳುತ್ತವೆ. ಆಯಾ ಪಾತ್ರಗಳ ಗುಣಸ್ವಭಾವಗಳನ್ನು ಉದ್ದೀಪನಗೊಳಿಸುವ, ಊರ್ಜಿತವಾಗಿಸುವ ಹೊಸ ಹೊಸ ಸನ್ನಿವೇಶಗಳನ್ನು ನಯಸೇನ ಕಲ್ಪಿಸಿದ್ದಾನೆ. ಹೀಗೆ ಪಾತ್ರರಚನಾ ಚಾತುರ್ಯದ ಮೂಲಕವೂ ಈತನು ತನ್ನ ಕಥನಕಲೆಯನ್ನು ಹಚ್ಚಹಸಿರುಗೊಳಿಸಿದ್ದಾನೆ.

---

೬ ಕೆ. ವೆಂಕಟರಾಮಪ್ಪ (ಸಂ.) : ಧರ್ಮಾಮೃತಂ. ಪುಟ ೮೯-೯೦.

ಧರ್ಮಾಮೃತವಲ್ಲಿ ಉಪಕಥೆಗಳ ಉಪಟಳ ಅತ್ಯಂತ ಕಡಿಮೆಯೆಂದೇ ಹೇಳಬೇಕು. ಅಲ್ಲಲ್ಲಿ ಮಿಂಚಿದ ಇವು ಪೌರಾಣಿಕ ಆವರಣವಿಲ್ಲದ ಜಾನಪದ ಕಥೆಗಳಾಗಿರುತ್ತವೆ. ಸೊಗಸು, ಸವಿಗಳಿಂದ ತುಂಬಿದ ಇವುಗಳನ್ನು ಓದುವಾಗ ಬೇಸರವಾಗಲಿ, ನೀರಸತೆಯಾಗಲಿ ಉಂಟಾಗುವುದಿಲ್ಲ. ತನ್ನ ಕಾವ್ಯೋದ್ದೇಶಕ್ಕೆ ಬಹು ಮೊತ್ತದ ಉಪಕಥೆಗಳು ಅಡ್ಡಿಯನ್ನುಂಟು ಮಾಡಬಹುದೆಂಬ ಹಂಚಿಕೆಯಿಂದ ಅವುಗಳ ಮೊತ್ತವನ್ನು ಧರ್ಮಾಮೃತದಲ್ಲಿ ಮೊಟಕುಗೊಳಿಸಿದ್ದನೆನಿಸುತ್ತದೆ. ಉತ್ಕೃಷ್ಟವಾದ, ಉಜ್ವಲವಾದ ಕಥನಕಲೆಯ ದೃಷ್ಟಿಯಿಂದ ನಯಸೇನ ಈ ಉಪಕ್ರಮವನ್ನು ತನ್ನ ಕೃತಿಯಲ್ಲಿ ಅನುಷ್ಠಾನಗೊಳಿಸಿರುವುದು ನಿಜಕ್ಕೂ ಶ್ಲಾಘನೀಯ. ಇದಲ್ಲದೆ ಸಾಮಾನ್ಯವಾಗಿ ಜೈನ ಕಥೆಗಳಲ್ಲಿ ಕಾಲೂರಿ ನಿಲ್ಲುವ 'ಭವಾವಳಿ'ಗಳ ದಟ್ಟಣೆಯಿಂದಲೂ ತನ್ನ (ಅನೇಕ) ಕಥೆಗಳನ್ನು ಈತ ಪಾರು ಮಾಡಿದ್ದಾನೆ. "ಜೈನ ಧರ್ಮದ ಮರ್ಮವನ್ನರಿಯದೆ ನರಕದಲ್ಲಿ ಬಿದ್ದು ಹೋಗುತ್ತಿರುವ ಜನ ತನ್ನ ಕಾವ್ಯವನ್ನು ಓದಿ ಅಥವಾ ಕೇಳಿ ಸದ್ಗತಿಯನ್ನು ಪಡೆಯಲೆಂಬ ಮಹೋದ್ದೇಶ"[೭] ಮತ್ತು ತನ್ನ ಕಾವ್ಯ–ಕಥೆ ಪಂಡಿತರಿಗಿಂತಲೂ ವಿಶೇಷವಾಗಿ ಪಾಮರರಿಗೆ ತಿಳಿಯುವಂತಾಗಬೇಕೆಂಬ ಬಿಡಿಯಾಸೆ ನಯಸೇನನದು. ಹೀಗೆ ಕಾವ್ಯೋದ್ದೇಶ–ಜೀವನೋದ್ದೇಶಗಳ ಈಡೇರಿಕೆಗಾಗಿ ಕಥೆಗಳಲ್ಲಿ ನಯಸೇನ ವಡ್ಡಾರಾಧನೆಯಷ್ಟು 'ಭವಾವಳಿ'ಗಳನ್ನು ಬರಮಾಡಿಕೊಂಡಿಲ್ಲ. ಇದರಿಂದ ಅವನ ಕಥನಕಲೆ ಗರಿಗೆದರಿ ನಿಲ್ಲುವಂತಾಗಿದೆ. ತನ್ನ ಕಥನಕಲೆಯ ಹೆಗ್ಗಳಿಕೆಗಾಗಿ ಈತನು ವಿಡಂಬನೆಯನ್ನೂ ಸಮರ್ಥವಾಗಿ, ಸಾರ್ಥಕವಾಗಿ ಕಥೆಗಳಲ್ಲಿ ಬಳಸಿಕೊಂಡಿದ್ದಾನೆ.

ಇಲ್ಲಿ ಕವಿ ಅಥವಾ ಕಥೆಗಾರನ ಅನುಭವಗಳ ಅಭಿವ್ಯಕ್ತಿಗೆ ತಕ್ಕುದಾದ ಮಾಧ್ಯಮ, ಮಾಧ್ಯಮಕ್ಕನುಗುಣವಾದ ಭಾಷೆ, ಕೃತಿಯನ್ನು ಅರ್ಥೈಸಿಕೊಳ್ಳುವ ಜನವರ್ಗಗಳಲ್ಲಿ ಭಿನ್ನತೆ ಇರುವುದಿಲ್ಲ. ಈ ರೀತಿಯ ಏಕಸೂತ್ರತೆ, ಅಭಿನ್ನತೆಯನ್ನು ಜಾನಪದ ಕಥೆಗಳಲ್ಲಿ ಮಾತ್ರ ಕಾಣುತ್ತೇವೆ. ಜಾನಪದ ಕಥನಕಲೆಯನ್ನು ಜಾನಪದ ಕಥೆಗಳ (ಹಿನ್ನೆಲೆಯ) ಬೆಳಕಿನಲ್ಲಿ ಪರೀಕ್ಷಿಸಿದಾಗ ವಿದ್ವಾಂಸರು ಈತನ ಕಥನಕಲೆಯ ದೋಷಗಳೆಂದು ಕರೆದಿರುವ ಅಂಶಗಳು, (ನಿಜವಾದ ಅರ್ಥದಲ್ಲಿ) ದೋಷಗಳಲ್ಲವೆಂಬುದು ವಿದಿತವಾಗುತ್ತದೆ.

ಒಟ್ಟಿನಲ್ಲಿ ಸಹಜತೆ ಮತ್ತು ಸರಳತೆಗಳ ಮೇಳವಿಕೆ, ಜನಪರವಾದ ಭಾಷೆಯ ಬಳಕೆ, ಕುತೂಹಲ-ಆಸಕ್ತಿ-ಆಕರ್ಷಣೆ-ಆತ್ಮೀಯತೆಗಳಿಂದ ಸಹೃದಯರನ್ನು ಓದಿಸಿಕೊಂಡು ಇಲ್ಲವೆ ಕೇಳಿಸಿಕೊಂಡು ಹೋಗುವಿಕೆ, ಜಾನಪದ ಕಥೆಗಳ ಜಾಡಿನಲ್ಲಿ ಮುನ್ನಡೆಯುವಿಕೆ, ಜನಜೀವನದಿಂದ ಆಯ್ದುಕೊಂಡ ಗಾದೆಮಾತುಗಳ

೭ ಡಾ. ಎಂ. ಚಿದಾನಂದಮೂರ್ತಿ : ಸಂಶೋಧನ ತರಂಗ (ಸಂ. ೨) ಪುಟ ೯೮

ಸಂದರ್ಭಾನುಸಾರವಾದ ಬಳಕೆ, ಬಳಕೆಯ ಮಾತು–ನುಡಿಗಟ್ಟುಗಳ ಮೂಲಕ ಅಭಿವ್ಯಕ್ತಗೊಳಿಸಿದ ದೇಸೀಯತೆ, ಅಚ್ಚುಕಟ್ಟಾದ–ಅರ್ಥಪೂರ್ಣವಾದ ಸಂಭಾಷಣೆ. ಸನ್ನಿವೇಶ ನಿರ್ಮಾಣ–ವರ್ಣನಾಪ್ರಸಂಗ, ನೀತಿಬೋಧೆ–ತತ್ತ್ವನಿರೂಪಣಾ ಪ್ರಸಂಗಗಳಲ್ಲಿಯ 'ಪ್ರಮಾಣ ಪರಿಜ್ಞಾನ', ಹಿಂದುಹಿಂದಾಗಿ ನಡೆದುಬರುವ ಉಪಮೆಗಳನ್ನು ಸಮಯೋಚಿತವಾಗಿಯೂ ಕಾಲೋಚಿತವಾಗಿಯೂ ಅರ್ಥೋಚಿತವಾಗಿಯೂ ಬಳಸಿದ ಚತುರತೆ, ಪಾತ್ರರಚನಾಚಾತುರ್ಯ–ಹರಿತವಾದ ವಿಡಂಬನಾ ರೀತಿಗಳಿಂದ ನಯಸೇನನ ಕಥೆಗಳಿಗೆ ಅಪೂರ್ವವಾದ ಕಲಾತ್ಮಕತೆ ಉಂಟಾಗಿರುವುದಲ್ಲದೆ ಇವುಗಳ ಮೂಲಕ ಈತನ ಉತ್ಕೃಷ್ಟ ಕಥನಕಲೆಯೂ ಪ್ರಕಟಗೊಂಡಿದೆ. ಹೀಗೆ ಧರ್ಮಾಮೃತದ ಅನೇಕ ಕಥೆಗಳಲ್ಲಿ ನಯಸೇನನ ಕಥನಕಲೆ ಜೀವಂತವಾಗಿ, ಜ್ವಲಂತವಾಗಿ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

●

ದಲಿತ ಸಾಹಿತ್ಯ : ನಿಂತ ಬದುಕಿಗೊಂದು ಹೊಸ ಸೆಲೆ

● ತೇಜಸ್ವಿ ಕಟ್ಟೀಮನಿ

ಮೊದಲು ಇದ್ದವರಲ್ಲಿಯೇ ಜಾಣನಾದವ ಮಾಡಿದ ಸಂಚಿನಿಂದ ಜಾತಿ ಪ್ರಕಲ್ಪಗಳು ಬೆಳೆದಂತೆ, ಇದ್ದ ಕೆಲವರಲ್ಲಿಯೇ ವರ್ಗಗಳನ್ನು ನಿರ್ಣಯಿಸಲಾಯಿತು. ಈ ರೀತಿ ಶ್ರೇಣೀಕರಿಸಲ್ಪಟ್ಟ ವರ್ಗಗಳೇ ಜಾತಿಗಳೆಂದು ಗುರುತಿಸಲ್ಪಟ್ಟು. ಬಹು ಸಂಖ್ಯಾತರನ್ನು ಹಗಲಿರುಳು ದುಡಿಯಲು ಹಚ್ಚಿದರೆ; ಕೆಲವೇ ಕೆಲವರು ಸಂಸ್ಕೃತ ಪಠಿಸುತ್ತ. ದುಡಿಯದೇ ತಿನ್ನಲು ಹತ್ತಿದರು. ಇಂದಿನ ದಲಿತ ಸಾಹಿತ್ಯದ ಒಳಹೊರಗನ್ನು ತಿಳಿಯಬೇಕಾದರೆ, ಈ ಐತಿಹಾಸಿಕ ಶೋಷಣೆಯ ಜಾಲವನ್ನು ನಿಮ್ಮ ಮುಂದೆ ಬಿಚ್ಚಿಡುವದು ಚಾರಿತ್ರಿಕವಾಗಿ ಅನಿವಾರ್ಯ ಕೂಡಾ.

ಇಂದು ಸಾಹಿತ್ಯಿಕ ಗುದುಮುರಿಗೆಯಲ್ಲಿರುವ 'ದಲಿತ ಪ್ರಜ್ಞೆಗೆ' ತನ್ನದೇ ಆದ ದೀರ್ಘಯಾತನೆಯ ಪರಂಪರೆಯಿದೆ. ಬದುಕು-ಸಾವಿನೊಡನೆ ಹಾಸುಹೊಕ್ಕಾಗಿರುವ ಪ್ರತಿಯೊಂದು ಸಣ್ಣ ಸಮಸ್ಯೆಯೂ ದಲಿತನನ್ನು ಹಿಂಡಿ ಹಿಪ್ಪಿ ಮಾಡಿದೆ. ಇಡೀ ದಲಿತ ಸಮಸ್ಯೆ ಅನೇಕ ಗೋಜಲುಗಳಿಂದ ತುಂಬಿರುವ ಕಗ್ಗಂಟಾಗಿದ್ದು. ಧರ್ಮ, ಸಂಸ್ಕೃತಿ, ಶಾಸ್ತ್ರ, ಪುರಾಣ, ಸಾಹಿತ್ಯ. ದರ್ಶನ. ಸಾವಿರಾರು ವರ್ಷಗಳ ಸಾಮಾಜಿಕ ಆರ್ಥಿಕ-ರಾಜಕೀಯ ಚರಿತ್ರೆ ಮೇಲ್ವರ್ಗದ ಕೂದಲಿಂದ ಕುತ್ತಿಗೆ ಕೊಯ್ಯುವ ಒಿಕಮತ್ತುಗಳೆಲ್ಲಾ ಈ ಸಮಸ್ಯೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಸಂಬಂಧಿಸಿವೆ. ದಲಿತರ ಸಮಸ್ಯೆಯನ್ನು ಚರ್ಚಿಸುವುದು ಎಂದರೆ ಈ ಮೇಲಿನ ಎಲ್ಲರ ಐತಿಹಾಸಿಕ ಹೊಯ್ಕುಮಾಲಿಕ್ಷವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು. ಯಾಕೆಂದರೆ ಸಮಸ್ಯೆ ಸರಳವಾಗಿಲ್ಲ. ಯಾವ ನಿಟ್ಟಿನಿಂದ ಲಗ್ಗೆಹಾಕಿದರೂ ಭೇದಿಸದಂತೆ, ಬಹಳ ಜಾಗರೂಕತೆಯಿಂದ, ಅಷ್ಟೇ ಚಾಣತನದಿಂದ ಸಮಸ್ಯೆಯನ್ನು ಶತಮಾನಗಳಿಂದ ಜಟಿಲಗೊಳಿಸುತ್ತ ಬರಲಾಗಿದೆ.

ಜಗತ್ತಿನ ಇತಿಹಾಸ ಬಲ್ಲ ನಮಗೆ ಅಚ್ಚರಿಯಾಗುವ ಸಂಗತಿಯೆಂದರೆ, 'ಸರ್ವೇಜನಾಃ ಸುಖೀನೋಭವಂತು' ಎಂಬ ಉದ್ಘೋಷ ಮೊಳಗುವ ಈ ದೇಶದ ದಲಿತರಂತೆ ದೀರ್ಘಕಾಲ ಚಿತ್ರ ಹಿಂಸೆಗೆ ಒಳಗಾಗಿರುವವರು ವಿಶ್ವದಲ್ಲಿ ಯಾರೂ ಇಲ್ಲ. ಅತ್ಯಂತ ಅಹಿಂಸಾತ್ಮಕವಾಗಿ, ತೊಟ್ಟು ರಕ್ತ ಬೀಳಿಸದೆ ಶತಮಾನಗಳುದ್ದಕ್ಕೂ ಅನವರತವಾಗಿ ದಲಿತರ ಶೋಷಣೆ ಮಾಡಿಕೊಂಡು ಹೊಟ್ಟೆ ಹೊರಕೊಳ್ಳೊ ಸವರ್ಣೀಯರ 'ಅಕ್ಟೋಪಸ್' ಹಿಡಿತವನ್ನು ಹಗುರಾಗಿ ಅಲಕ್ಷಿಸುವಂತಿಲ್ಲ.

ದಲಿತರ್ಯಾರು ? :

ದಲಿತರ್ಯಾರು ಎನ್ನುವುದಕ್ಕೆ ಅನೇಕ ಮತಭೇದಗಳಿವೆ. ಕೆಲವರ ಪ್ರಕಾರ ದಲಿತರೆಂದರೆ ಅಸ್ಪೃಶ್ಯರು ಮಾತ್ರ. ಇನ್ನು ಕೆಲವರು ವಿಶಾಲ ಅರ್ಥದಲ್ಲಿ ಶತಮಾನಗಳಿಂದ ತುಳಿಯಲ್ಪಟ್ಟ ಕಾರ್ಮಿಕರು, ಶ್ರಮಜೀವಿಗಳು. ಕೃಷಿ ಕಾರ್ಮಿಕರು. ಅಲೆಮಾರಿಗಳು, ಆದಿವಾಸಿಗಳು, ಮುಸಲ್ಮಾನರು ಮತ್ತು ಮಹಿಳೆಯರು ದಲಿತರೆಂದು ಗುರುತಿಸುತ್ತಾರೆ. ಆದರೆ ಗಮನಿಸಬೇಕಾದ ಸಂಗತಿಯೆಂದರೆ-ದಲಿತ ಕೇವಲ ಶೋಷಣೆಗೊಳಪಟ್ಟವನೇ ಅಲ್ಲ, ಬಡವ ಮಾತ್ರ ಅಲ್ಲ, ಬರೀ ಅನಕ್ಷರಸ್ಥನಲ್ಲ. ತನ್ನದೇ ಆದ ವಿಶಿಷ್ಟ ಸಮಸ್ಯೆಯಲ್ಲಿ ಅಂವ ತೊಳಲಾಡುತ್ತಿದ್ದಾನೆ. ಅಂವ ಬಡವನಾಗಿರುವುದರ ಜೊತೆಗೆ ಅಸ್ಪೃಶ್ಯನೂ ಆಗಿದ್ದಾನೆ. ಗುಂಪಿನಲ್ಲಿದ್ದೂ ಅನಾಥ ಪ್ರಜ್ಞೆಯಿಂದ ಬಸವಳಿದಿರುವ ಅಸ್ಪೃಶ್ಯನಿಗೂ; ಮತ್ತು ಕೆಲಮಟ್ಟಿಗೆ ಮುಟ್ಟುವ, ಮಾತನಾಡುವ ಅವಕಾಶವಿರುವ ಶೂದ್ರರಿಗೂ ಅಂತರ ಮಾಡಲೇ-ಬೇಕಾಗಿ ಬಂದರೂ-ಶೋಷಿತರೆಲ್ಲಾ ಸಮಾನ ಮನೋಧರ್ಮದವರೆಂಬ ವಿಶಾಲ ತಳಹದಿಯ ಮೇಲೆ 'ತುಳಿತಕ್ಕೆ ಸಿಕ್ಕವರೆಲ್ಲರೂ ದಲಿತರು' ಎಂಬ ಹೊಸ ಅರಿವು ಮೂಡುತ್ತಿರುವುದು ಆಶಾದಾಯಕವಾಗಿದೆ.

ದಲಿತ ಎಂಬುದಕ್ಕೆ ಕವಿ ಸಿದ್ಧಲಿಂಗಯ್ಯನವರ ಅಭಿಪ್ರಾಯದಂತೆ- 'ಆತ ದಲಿತನಾಗಿ ಹುಟ್ಟಿರಬೇಕು, ದಲಿತರ ಬಗ್ಗೆ ಅನುಕಂಪ ಉಳ್ಳವನಾಗಿರಬೇಕು. ಅಷ್ಟೇ ಅಲ್ಲ, ಸ್ಥಾಪಿತ ಸಂಪ್ರದಾಯಗಳ ವಿರುದ್ಧ ಬಂಡೆದ್ದವನಾಗಿರಬೇಕು. ಶೋಷಣೆ ದಬ್ಬಾಳಿಕೆ ಅತ್ಯಾಚಾರಗಳ ವಿರುದ್ಧ ರಕ್ತ ಕುದಿಯುವವನಾಗಿರಬೇಕು. ಇವುಗಳ ಜೊತೆಗೆ ಆತ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಶೋಷಿಸಲ್ಪಟ್ಟು ಆ ಶೋಷಣೆಯ ಪ್ರಜ್ಞೆಯು ಅವನಿಗಿರಬೇಕು. ತಾನಿರುವ ಮಿತಿಯೊಳಗಿಂದ ಹೊರಬಂದು ಉಳಿದವರಿಗಿರುವ ಹಕ್ಕುಗಳೆಲ್ಲವನ್ನೂ ಪಡೆದುಕೊಳ್ಳಲು, ಹೋರಾಡಲು ಸಿದ್ಧನಿರಬೇಕು. ಯಾರಿಗೆ ಶೋಷಣೆಯ ಶ್ರದ್ಧೆ ಇಲ್ಲವೋ. ಯಾರಲ್ಲಿ ಹೋರಾಟದ ಭಾವನೆ ತಣ್ಣಗಾಗಿರುತ್ತವೆಯೋ ಅವರಾರೂ ದಲಿತರಲ್ಲ. ದಲಿತರ ಪ್ರಮುಖರೂ ಅಲ್ಲ. (೧) 'ಪ್ರಕೃತಿಯ ಸಹಜ ಕೊಡುಗೆಗಳಿಂದ ವಂಚಿಸಲ್ಪಟ್ಟವರು. ನಮ್ಮ ಶೋಷಿತ. ಲಾಚಾರ. ದುಃಖಿತ. ದರಿದ್ರ ಅಜ್ಞಾನಿಗಳಿಗೆ ಪ್ರಕೃತಿಯ ಸಹಜ ಕೊಡುಗೆಗಳನ್ನು ಕೊಡಿಸಲು ಕಂಕಣಬದ್ಧರಾದವರು ದಲಿತರು' ಎಂದು ಮರಾಠಿಯ ಖ್ಯಾತ ದಲಿತ ಕವಿ ಯಶವಂತ ಮನೋಹರ ಅಭಿಪ್ರಾಯಪಡುತ್ತಾರೆ. (೨)

ಮೂಲ ಪ್ರೇರಣೆ :

ಪ್ರಾಚೀನ ಇಂಡಿಯಾದ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ ರೂಪು ಕಂಡರೂ

ಮದ್ರಾಸಿನಲ್ಲಿ 'ಅಬ್ರಾಹ್ಮಣ್ಯ ಚಳುವಳಿ' ಪ್ರಾರಂಭಿಸಿದ ಪೆರಿಯಾರ ರಾಮಸ್ವಾಮಿ ನಾಯ್ಕರ್, ಕೇರಳದ ನಾರಾಯಣ ಗುರು, ಮಹಾರಾಷ್ಟ್ರದಲ್ಲಿ ಮೊಟ್ಟಮೊದಲು ಸ್ತ್ರೀ ಶಿಕ್ಷಣಕ್ಕಾಗಿ ಹೆಣಗಿದ ಜ್ಯೋತಿಬಾ ಫೂಲೆ, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ವೈಚಾರಿಕ ಸಾಹಿತ್ಯ ದಲಿತರ ಬದುಕಿನ ಬಗೆಗೆ ಕೆಲವು ಸವರ್ಣೀಯರು ಮತ್ತು ದಲಿತರು ಗೇಣಿಸುವಂತೆ ಮಾಡಿದವು.

ಇವರ ಕೂಡ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಹೊಸದೊಂದು ವೈಚಾರಿಕ ಅಲೆ ಯೆಬ್ಬಿಸಿದ ಆಫ್ರಿಕದ ಕಪ್ಪುಸಾಹಿತ್ಯ ಮತ್ತು ಅಮೆರಿಕೆಯ ನಿಗ್ರೋ ಸಾಹಿತ್ಯಗಳು ಇಂಡಿಯಾದ ದಲಿತರ ಮೇಲೆ ತಮ್ಮದೇ ಆದ ಅಚ್ಚನ್ನು ಒತ್ತಿದವು. ಇವೆಲ್ಲವುಗಳಿಂದ ದಲಿತರು ತಮ್ಮ ಅಪಾರ ನೋವಿನ, ಬೆಂಬಿಡದ ಯಾತನೆಯ ಮೂಲ ಬೇರುಗಳನ್ನು ಹುಡುಕಾಡತೊಡಗಿದರು.

ಅರಿವಿನ ಸ್ಫೋಟ :

ಅವಿರತವಾಗಿ ನಾನು ತುಳಿಸಿಕೊಂಡು ಬರುತ್ತಿರುವವ ನಾ ದುಡಿಯುವವ, ಆದರೆ ಉಣ್ಣುವವ ಅಲ್ಲ ಅನ್ನುವ ಅರಿವೇ ಇಲ್ಲದಿದ್ದವರಿಗೆ, ಶತಮಾನಗಳಿಂದ ಹೇರಲ್ಪಟ್ಟ ಜಾತೀಯ ಬಂಡೆಗಳನ್ನು ಹಣೆಬರಹವೆಂದು ಮೌನವಾಗಿ ಒಪ್ಪಿಕೊಂಡು ಬದುಕು ಸವೆಸುತ್ತಿದ್ದ ಇಂಡಿಯಾದ ದಲಿತರಿಗೆ ಎಚ್ಚೆತ್ತ ಪ್ರಜ್ಞೆಯ ಪ್ರತೀಕವಾಗಿ ಡಾ. ಅಂಬೇಡ್ಕರ ಮಿಂಚಿದರು. ಕೇವಲ ಮಹರಜನಾಂಗದ ಪ್ರತಿನಿಧಿಯಾಗಿ ಅಂಬೇಡ್ಕರ್ ಹೋರಾಡಿದರೆಂದು ದೂರ ದೃಷ್ಟಿಯಿಲ್ಲದ ಇತಿಹಾಸಕಾರರು ಅವರನ್ನು ಜರಿಯಬಹುದು: ಆದರೆ ಇಂದು ವ್ಯಾಪಕವಾಗಿ ಹತ್ತಿರುವ ಈ ಅರಿವಿನ ಬ್ಯಾಗಿಯನ್ನು ಚಕಮಿಕಿಸಿದವರು ಯಾರು ? ಸ್ಪಷ್ಟವಿದೆ, ಡಾ. ಅಂಬೇಡ್ಕರ್ ತಮ್ಮ ದೂರದೃಷ್ಟಿ ಯಿಂದ ಇಂಡಿಯಾದ ದಲಿತರನ್ನು ಹೊಸ ಬದುಕಿನ ಸಾಧ್ಯತೆಗಳ ಬಗೆಗೆ ಯೋಚಿಸಲು ಹಚ್ಚಿದರು. ದಲಿತರ ಅರಿವಿನ ಸ್ಫೋಟಕ್ಕೆ ಅಂಬೇಡ್ಕರ್ ಭೂಮಿ ಹದ ಮಾಡಿದರು. ಈ ಕೃಷಿಯಲ್ಲಿ ಅವರಿಗೆ ಪೆರಿಯಾರ್, ನಾರಾಯಣ ಗುರು ಹೆಗಲಿಗೆ ಹೆಗಲುಕೊಟ್ಟು ದುಡಿದರು.

ಹಿಂದಿನಿಂದ ಅನೂಚಾನವಾಗಿ ನಡೆದು ಬಂದುದನ್ನು ಯಾಕೆ ಹೀಗೆ ಎಂದು ಕೇಳುವುದೇ ಗಲ್ಲು ಶಿಕ್ಷೆಗೆ ಅರ್ಹವಾಗಿದ್ದ ನಾಡಲ್ಲಿ, ದಲಿತರು ತಲೆಯೆತ್ತಿ ನಡೆಯಲು, ಹಿಂದೂ ಧರ್ಮ ಎಂಬ ಹೆಸರಿನ ಹಂಗಿನರಮನೆಯ ಹೊರಗೆ ಕಾಲು ಹಾಕಲು. ಜಾತೀಯ ಹೆಸರಲ್ಲಿ ತಮ್ಮ ಶತಮಾನಗಳ ಬದುಕಿಗೆ ಕೊಳ್ಳಿ ಇಟ್ಟ ಧರ್ಮಕ್ಕೆ ಕಿಚ್ಚಿಡಲು ಅವರು ಸಜ್ಜುಗೊಂಡದ್ದು ಅಂಬೇಡ್ಕರರಿಂದ.

ದಲಿತರ ಬದುಕನ್ನು ಹಸನುಗೊಳಿಸಲು ಮಹಾತ್ಮಾ ಗಾಂಧಿ ಪ್ರಾಮಾಣಿಕ ಪ್ರಯತ್ನವನ್ನೇನೊ ಮಾಡಿದರು. ಆದರೆ ಅವರದು ಆಮೂಲಾಗ್ರ ಬದಲಾವಣೆಯ

ಪ್ರಯತ್ನವಾಗಿರದೆ, ಸ್ವಲ್ಪ ರಿಯಾಯ್ತಿ ಕೊಟ್ಟ ಹಾಗೆ ಮಾಡಿ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವಲ್ಲಿ ಗಾಂಧಿ ನಂಬಿಕೆಯಿಟ್ಟಿದ್ದರು. ಆದ್ದರಿಂದ ದಲಿತರ ವಿಷಯದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿಯ ದೃಷ್ಟಿಕೋನಗಳು ಮೂಲಭೂತ-ವಾಗಿ ತದ್ವಿರುದ್ಧವಿದ್ದವು. ಗಾಂಧೀಜಿ ದಲಿತರನ್ನು ಕಂಡು ಕರುಣೆಗೊಂಡು, ಅವರ ಏಳಿಗೆಗಾಗಿ ಸವರ್ಣೀಯರ ಮನ ಒಲಿಸಬೇಕೆಂಬ ಒರಸೆಯುವರಾಗಿದ್ದರೆ, ಅಂಬೇಡ್ಕರ ಹೋರಾಡದೇ ಹಕ್ಕು ಪಡೆಯಲು ಸಾಧ್ಯವಿಲ್ಲವೆಂದು ಅಚಲವಾಗಿ ನಂಬಿದ್ದರು. ಅಂಬೇಡ್ಕರ್ ಎದುರು ಇದ್ದವರು ಹೋರಾಡಬಲ್ಲ ಹರಿಜನರು, ಬರೀ ಮಾನವೀಯ ದಯೆ ಬೇಡುವ ಹರಿಜನರಲ್ಲ.

ಮರಾಠೀ ದಲಿತ ಸಾಹಿತ್ಯ :

ಔರಂಗಾಬಾದದ ಮಿಲಿಂದ ಕಾಲೇಜಿನಲ್ಲಿ ೧೯೬೭ ರಲ್ಲಿ 'ಮಿಲಿಂದ ಸಾಹಿತ್ಯ ಸಭಾ' ಪ್ರಾರಂಭವಾದ ಮೇಲೆ ಮರಾಠಿ ದಲಿತ ಸಾಹಿತ್ಯಕ್ಕೆ ಒಂದು ಅಧಿಕೃತ ವೇದಿಕೆ ಸಿಕ್ಕಿತು. ಮಿಲಿಂದ ಸಾಹಿತ್ಯ ಸಭಾದ 'ಅಸ್ಮಿತಾದರ್ಶನ' ಎಂಬ ಸಾಹಿತ್ಯಿಕ ಪತ್ರಿಕೆ ದಲಿತರ ಮುಖವಾಣಿಯಾಯಿತು. ಅಂಬೇಡ್ಕರರ ಒಡನಾಡಿಯಾಗಿದ್ದ ಗಂಗಾಧರ ಪಾಂತಾವಣೆ ಈಗ 'ಅಸ್ಮಿತಾದರ್ಶನ'ದ ಸಂಪಾದಕರಾಗಿದ್ದಾರೆ.

ವಿಚಿತ್ರವೆಂದರೆ 'ಅಸ್ಮಿತಾದರ್ಶನ' ಹುಟ್ಟುವ ಮೊದಲು ಬಹಳಷ್ಟು ದಲಿತ ಲೇಖಕರು ಸಶಕ್ತ ಕೃತಿಗಳನ್ನು ಕೊಟ್ಟು ಪ್ರಸಿದ್ಧರಾಗಿದ್ದರು. ಆದರೂ ಅವರ ಬರಹಗಳಿಗೆ 'ದಲಿತ ಸಾಹಿತ್ಯ'ವೆಂಬ ಸಂಜ್ಞೆ ಮಾತ್ರ ಸಿಕ್ಕಿರಲಿಲ್ಲ. ೧೯೬೭ರ ಮೊದ-ಲಿನ ಹಾಗೂ ನಂತರದ ಎಲ್ಲ ದಲಿತ ಬರಹಗಾರರಿಗೂ ಡಾ. ಅಂಬೇಡ್ಕರರ ಬರಹಗಳು ಪ್ರೇರಣೆಯಾಗಿವೆ. ಇದರ ಜೊತೆಗೆ ಬುದ್ಧ, ಮಾರ್ಕ್ಸ್, ಸಮಾಜವಾದ ಮುಂತಾದ ಪ್ರಗತಿಪರವಾದಗಳೊಡನೆ ಸಂಪರ್ಕವಿಟ್ಟುಕೊಂಡೂ ದಲಿತ ಬರಹಗಾರರು ತಮ್ಮ ಶತಮಾನಗಳ ನೋವಿನ ಹಿನ್ನೆಲೆಗೆ ಬದ್ಧರಾಗಿದ್ದಾರೆ. ಶಂಕರರಾವ್ ಖರಾತರ 'ರ್ಶೋಪಡಪಟ್ಟಿ' 'ಹಾಥಭಟ್ಟಿ' 'ಫುಟ್‌ಪಾಥ್' 'ಆಜ ಇಥೇ ಉದ್ಯಾ ತಿಥೇ' ಮುಂತಾದ ಕಾದಂಬರಿಗಳು ಹಾಗೂ 'ಬಾರಾ ಬಲೂತೇದಾರ' ಕಥಾ ಸಂಕಲನ ದಲಿತ ಸಾಹಿತ್ಯ ಚಳುವಳಿಗಿಂತ ಮೊದಲೇ ಪ್ರಸಿದ್ಧಿ ಪಡೆದ ಕೃತಿಗಳು ಅಣ್ಣಾಭಾವು. ಸಾಠೆ ಅವರ 'ಡೊಂಗರ ಚಿ ಮೈನಾ' 'ಮಾಕಡಿ ಚಾಮಾಳ.' 'ಫಕೀರಾ.' 'ಆಗ' 'ಫುಲಪಾಕರೂ' (ಪಾತರಗಿತ್ತಿ) ಮುಂತಾದ ಕಾದಂಬರಿಗಳಲ್ಲಿ ದಲಿತರ ನೋವಿನ ದಟ್ಟ ಚಿತ್ರಣವನ್ನು ಕಾಣುತ್ತೇವೆ. 'ದಲಿತ ಸಾಹಿತ್ಯ' ಇಂದಿನ ಕ್ರಾಂತಿ ವಿಜ್ಞಾನ ಎಂಬ ದಲಿತ ಸಾಹಿತ್ಯದ ವೈಜ್ಞಾನಿಕ ಚರಿತ್ರೆ ಬರೆದು, ಅದಕ್ಕೊಂದು ಸಾಹಿತ್ಯಿಕ ಬುನಾದಿಯನ್ನು ನೀಡಿದ 'ಬಾಬೂರಾವ ಬಾಗೂಲ'ರ 'ಸೂಡ' (ಸೇಡು). 'ಮರಣ ಸಸ್ತ ಹೋತ ಹೈ' (ಸೋವಿ ಸಾವು). 'ಮೀ ಜಂವಾ ಜಾತ ಚೋರಲಿ' (ನಾ ಜಾತಿ

ಕದ್ದಾಗ) ಮುಂತಾದ ಕಥೆ ಕಾದಂಬರಿಗಳ ಮುಖಾಂತರ ದಲಿತರಿಗೆ ಚಿರಪರಿಚಿತ-ರಾಗಿದ್ದಾರೆ.

'ಅಸ್ಮಿತಾದರ್ಶನ' ಪತ್ರಿಕೆ ಹೊರ ಬಂದ ನಂತರ ಮಹಾಪೂರದಾದಿಯಲ್ಲಿ ದಲಿತ ಬರಹಗಾರರು ಬರೆಯಹತ್ತಿದರು. ಇದಲ್ಲದೆ, ನಾಮದೇವ ಢಸಾಳ ಹಾಗೂ ರಾಜಾಢಾಲೆ ಕೂಡಿಕೊಂಡು ಮುಂಬೈಯಲ್ಲಿ 'ದಲಿತ ಪ್ಯಾಂಥರ' ಎಂಬ ಪ್ರಗತಿಪರ ಸಂಸ್ಥೆಯನ್ನು ಸ್ಥಾಪಿಸಿ, ಮುಂಬೈಯ ಯಾತನಾ ಶಿಬಿರಗಳಂಥ ಕೊಳೆಗೇರಿಗಳಲ್ಲಿರುವ ದಲಿತರನ್ನು ಸಂಘಟಿಸಿದರು. ನಾಮದೇವ ಢಸಾಳ ದಲಿತಪ್ಯಾಂಥರದ ಬಂದೂಕಾದರೆ, ರಾಜಾಢಾಲೆ ವೆದುಳೆಂದು ಜನ ಅವರಿಬ್ಬರನ್ನು ಕರೆಯುತ್ತಿದ್ದರು. ಇದೇ ಸಂದರ್ಭ-ದಲ್ಲಿ ಅಲೆಮಾರಿ ಜನಾಂಗದ ಮೊದಲ ಅಕ್ಷರಸ್ಥ 'ಲಕ್ಷ್ಮಣ ಮಾನೆ' ಅವರ 'ಉಪರಾ' (ಪರದೇಶಿ) ಎಂಬ ಆತ್ಮಚರಿತಾತ್ಮಕ ಕಾದಂಬರಿ ಪ್ರಕಟವಾಗಿ ಮರಾಠಿ ಸಾಹಿತ್ಯದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿತು. 'ಉಪರಾ' ಕಾದಂಬರಿಯ ಮೇಲೆ ಯಾವ ಸಿಟ್ಟಿನಿಂದ ರಾಡೀ ಬಳಿಯಬೇಕೆಂದು ತಿಳಿಯದೆ ಪರಂಪರಾಗತ ಮರಾಠಿ ವಿಮರ್ಶಕರು ತಮ್ಮ ಜುಟ್ಟನ್ನೇ ಕೀಳುತ್ತ ಕೂಡ್ರ ಬೇಕಾಯಿತು. ನಾಮದೇವ ಢಸಾಳ ಮರಾಠಿ ಕಾವ್ಯದಲ್ಲಿ ವಿಶಿಷ್ಟತೆಗೊಂಡು ಹೆಸರು ಕಮ್ಯೂನಿಷ್ಟ ವಿಚಾರಧಾರೆಯೊಂದಿಗೆ ಇವರ ಬಾಧ್ಯಸ್ಥಿಕೆ ದಲಿತರ ಕೈಗೆ ರಾಜ್ಯ ಕೊಡಿ, ದಲಿತರ ಡಿಕ್ಟೇಟರಶಿಪ್ ಸ್ಥಾಪನೆಯಾಗಬೇಕು. ಅದಲ್ಲದೆ ದಲಿತರ ನಿಮ್ನ ವರ್ಗಗಳ ಬಹುಜನ ಸಮುದಾಯದ ವಿಮೋಚನೆ ಸಾಧ್ಯವಿಲ್ಲ ಎಂದು ಕವಿ ಢಸಾಳರ ಪ್ರಾಮಾಣಿಕ ಪ್ರತಿಪಾದನೆ.

ಇದರಿಂದ ದಲಿತ ಪ್ಯಾಂಥರ್ ಸಂಘಟನೆ ಕವಲೊಡೆಯಿತು. ಇನ್ನೊಂದು ಕವಲು ದಲಿತರಿಗೆ ಸಾಮಾಜಿಕ ನ್ಯಾಯ ಹಾಗೂ 'ಸವರ್ಣೀಯರೊಂದಿಗೆ' ಸರಿ-ಸಮಾನತೆ ತಂದು ಕೊಡಬೇಕೆಂಬ ಸುಧಾರಣಾವಾದಿಯವರದು. ಈ ಕವಲಿಗೆ ಅರುಣ ಕಾಂಬಳೆ ಮುಖ್ಯರು. ಎರಡೂ ಕವಲುಗಳಿಗೂ ಮೂಲ ಪ್ರೇರಣೆ ಡಾ : ಅಂಬೇಡ್ಕರ್ ಅಂದೋಲನ.

ನಾಮದೇವ ಢಸಾಳರ ಜನ್ಮ ೧೯೪೬ ರಲ್ಲಿ 'ವಿದ್ರೋಹ' ನಿಯತಕಾಲಿಕದ ಸಂಪಾದಕರು 'ಗೋಲಪೀಠಾ' ಎಂಬ ಮೊದಲ ಸಂಕಲನದಲ್ಲಿಯೇ ಇವರಿಗೆ ಮರಾಠಿ ಕಾವ್ಯದಲ್ಲಿ ಮಹತ್ವದ 'ಸ್ಥಾನ. 'ಮೂರ್ಖಮ್ಹಾತಾರ್ಯನೆ ಡೋರಗರ ಹಾಲವಲೆ' (ಈ ಮೂರ್ಖ ಮುದುಕನು ಗುಡ್ಡ ಅಲುಗಾಡಿಸಿದನು.) ಇವರ ಎರಡನೆಯ ಕವನ ಸಂಗ್ರಹ 'ಪ್ರೀಯದರ್ಶಿನಿ' ಇವರ ಸುಧೀರ್ಘ ಕಾವ್ಯ ೧೯೭೫ ರಲ್ಲಿ ಪ್ರಕಟವಾಯಿತು.

ಕಾವ್ಯದ ಬಗೆಗೆ ಅವರ ಕೈಫೀಯತ್ತು ಹೀಗೆ 'ಪ್ರತಿಯೊಬ್ಬ ಕಲಾವಿದನಿಗೂ ಸ್ವಂತದ ಒಂದು ವರ್ಗ ಚರಿತ್ರವಿರುತ್ತದೆ' ನಾನೂ ಅದಕ್ಕೆ ಅಪವಾದವಲ್ಲ.

ಯಾರನ್ನು ವ್ಯವಸ್ಥೆಯು ೨೦೦೦ ವರ್ಷ ಜ್ಞಾನ, ಸಂಪತ್ತು ಮತ್ತು ಮಾನ, ಪ್ರತಿಷ್ಠೆಗಳಿಂದ ವಂಚಿತರನ್ನಾಗಿ ಮಾಡಿತೋ ಅಂಥ ಎಲ್ಲ ರೀತಿಯಲ್ಲೂ ದಲಿತ ವರ್ಗದ ಒಬ್ಬ ಕವಿ ನಾನು. ಈ ೨೦ನೆಯ ಶತಮಾನದ ಕೆಳವರ್ಗದವರ ಪರಿವರ್ತನೆಯಿಂದಾಗಿ ಕಾವ್ಯದತನಕ ಬಂದು ತಲುಪಿದೆನು ..ನೀರು ತುಂಬಿ ಬಕೆಟ್ ಎತ್ತುವಾಗ ನೆಲದ ಸಂಬಂಧ ಬರುತ್ತದೆ. ಆದ್ದರಿಂದ ನನ್ನ ಕವಿತೆಯು ನೆಲಭೂಮಿ. ನನಗೆ ನನ್ನ ಹಾಗೂ ನನ್ನ ಕವಿತೆಯ ವರ್ಗ ಮೂಲವನ್ನು ಹೇಳುವಾಗ ಅಭಿಮಾನವೆನ್ನಿಸುತ್ತದೆ...ನಾನು ಒಂದು ಕವಿತೆ ಬರೆಯುತ್ತೇನೆ. ಅಂದರೆ ಒಂದು ರಾಜಕೀಯ ಕೃತ್ಯವನ್ನೇ ಮಾಡುತ್ತೇನೆ. ಇದೆಲ್ಲ ಅತ್ಯಂತ ಅಗತ್ಯದೊಳಗಿಂದಲೇ ಒದಗಿ ಬರುತ್ತದೆ. ಎಳೆದು ಜಗ್ಗಿ-ತಂದು ಮಾಡಬೇಕಾಗುವುದಿಲ್ಲ. ನನ್ನ ಕವಿತೆ ಹಳ್ಳ ಹಟ್ಟಿಗಳ ಬಟಾಬಯಲು ಬಡತದನ ಭೇದವನ್ನು ಹಿಡಿಯುತ್ತದೆ. ಅವುಗಳ ಬುಡಕ್ಕೇ ಕೊಡಲಿ ಇಕ್ಕುತ್ತದೆ. ಇದು ನಡೆಯುವಾಗ ನನ್ನ ಕವಿತೆಗೆ ಹುರಿಕಟ್ಟಾದ ಕಲಾತ್ಮಕ ಘಾಟು ಬರುತ್ತದೆ. ನನ್ನ ಕವಿತೆ ವರ್ಗ ಶತ್ರುಗಳೊಡನೆ ಕಡು ಹಗೆಯ ಆಟವಾಡುತ್ತದೆ... ನನ್ನ ಕವಿತೆ ಓದಿ ದಲಿತ ವರ್ಗ ದ್ವೇಷದಿಂದ ಎಚ್ಚೆತ್ತು ಏಳಬಹುದು. ಎಂದು ನಾನೇಕೆ ಇಚ್ಛೆ ಇಟ್ಟುಕೊಳ್ಳಬಾರದು? ಅಂತ ಕವಿ ನಮ್ಮನ್ನೇ ಪ್ರಶ್ನಿಸುತ್ತಾನೆ.

ಮರಾಠೀ ದಲಿತ ಲೇಖಕರಲ್ಲೇ ದಯಾ ಪವಾರರಷ್ಟು ಚರ್ಚಿತ ಬರಹಗಾರರಿಲ್ಲ ಪವಾರ ಯಾವಾಗಲೂ ಒಂದಿಲ್ಲೊಂದು ವಾದ ವಿವಾದದ ಕೇಂದ್ರಬಿಂದುವಾಗಿರುತ್ತಾರೆ. 'ಕೊಂಡವಾಡ' ಎಂಬ ಕವನ ಸಂಕಲನ 'ಚಾವಡಿ' ಎಂಬ ಲೇಖನ ಸಂಗ್ರಹ ಹಾಗೂ 'ಬಲೂತ' (ದಾನ) ಎಂಬ ಆತ್ಮ ಚರಿತಾತ್ಮಕ ಕಾದಂಬರಿಯನ್ನು ಪವಾರ ಪ್ರಕಟಿಸಿದ್ದಾರೆ.

ಕೇಶವ ಮೇಶ್ರಾಮ್‌ರ 'ಜಟಾಯು ಆಣಿ ಹಕೀಕತ್' ಎಂಬ ಕಾದಂಬರಿ 'ಉತ ನಸ'ವೆಂಬ ಕವನ ಸಂಕಲನದಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹೊಸದೃಷ್ಟಿ ಕಂಡು ಬರುತ್ತದೆ. ಅರ್ಜುನ ಡಾಂಗಳೆಯ 'ಛಾವಣೀ ಹಲ್ತಿ ಆಹೇ' (ಛಾವಣಿಗಳು ನಡುಗುತ್ತಿವೆ) ಸಂಕಲನದಲ್ಲಿಯ ಕವಿತೆಗಳು ನಮ್ಮ ಸಿದ್ಧಲಿಂಗಯ್ಯನ 'ಹೊಲೆ ಮಾದಿಗರ ಹಾಡು' ಸಂಕಲನದಲ್ಲಿಯ 'ಬಂಗ್ಲೆಗಳು ನಡುಗುತ್ತಿವೆ' ಮುಂತಾದ ಕವಿತೆಗಳ ಮಾದರಿಯಲ್ಲಿ ಹೊಸ ಬದುಕಿನ ಆಶಯವನ್ನು ವ್ಯಕ್ತ ಮಾಡುತ್ತವೆ. ಅರ್ಜುನ ಡಾಂಗಳೆಯ 'ಏನನ್ನು ಏರಿ?' ಕವನದಲ್ಲಿ

ಬೋಜಾಗಳ
ಜಾತ್ರೆಯಲ್ಲಿ ಚಪ್ಪಾಳೆತಟ್ಟುತ್ತ,
ಟೊಂಕದಕೆಳಗಿನ ಟಂಕಸಾಲೆಯಲ್ಲೇ
ಪಿಲಾಸ್ ಆಗುವಿರೋ?

ಇಲ್ಲಾ,
ರೊಕ್ಕಿದ್ದವರ
ಕುಂಡೀ ನೆಕ್ಕುತ್ತ
ವಿದೇಶೀ ಗೋದಿ ಹೊಟ್ಟನ್ನು
ಹೊಟ್ಟೆ ತುಂಬಿಸಿಕೊಳ್ಳೋ
ಬಾಂಧವರೇ
ಹತ್ತುಗಳೊಂದಿಗೆ ಹನ್ನೊಂದಾಗುವಿರೋ
ಅಥವಾ
ನಿಮ್ಮದನ್ನೋದನ್ನು ತೋರಿಸುವಿರೋ?

ಹೀಗೆ ವ್ಯವಸ್ಥೆಯ ಕ್ರೂರ ಹಿಡಿತದ ಚಿತ್ರಣದೊಂದಿಗೆ, ಮಲಗಿರುವ ದಲಿತರನ್ನು ಎಬ್ಬಿಸುವ ಕೆಲಸವನ್ನು ಕವಿ ಮಾಡುತ್ತಿದ್ದಾನೆ. ವಾಮನ ನಿಂಬಾಳ್ಕರರ 'ಗಾವಕುಸಾ ಬಾಹೆರಿಲ ಕವಿತಾ' (ಊರಹೊರಗಿರುವವರ ಕವಿತೆ) ಸಂಕಲನದಲ್ಲಿ ಹರಿಜನ ಕೇರಿಗಳ ನಗ್ನಚಿತ್ರಣವಿದೆ. ತ್ರ್ಯಂಬಕ ಸಪ್ಕಾಳೆ ಅವರ 'ಸುರುಂಗ' (ಸುರಂಗ)ಕವಿತಾ ಸಂಕಲನ ತನ್ನ ಜನ ಭಾಷೆಯಿಂದ ಮರಾಠಿ ಕಾವ್ಯಭಾಷೆಗೆ ಹೊಸನೊಂದು ಶಕ್ತಿಯನ್ನು ನೀಡಿದೆ. ಅವರ ಒಂದು ಕವನದಲ್ಲಿ–

ಬತ್ತಲೆಯಾಗಿ ಬಂದೆನು
ಆದರೆ ಇಲ್ಲಿಯೂ ನನ್ನನು
ಬತ್ತಲೆಯನ್ನಾಗೇ ಮಾಡಿದರು,
ಸಮಾಜ ಪುರುಷನ
ಅಹಂಕಾರದಿಂದ ಸೆಟೆದ
ಹೇ ಸಂಸ್ಕೃತಿ ಪ್ರಿಯ ದೇಶವೇ
ನನ್ನ ಬತ್ತಲೆಯನ್ನು
ಮುಚ್ಚಬೇಕೆಂದು
ಅನ್ನಿಸಿಲ್ಲವೇ ನಿನಗೆ ?'

ಎಂದು ದಮ್ಮಳಿತರ ಅಖಂಡ ಪರಂಪರೆಯನ್ನು ಕವಿ ಹೀಯಾಳಿಸುತ್ತಾನೆ.

ಇನ್ನೊಬ್ಬ ಕ್ರಾಂತಿಕಾರೀ ಬರಹಗಾರ ಪ್ರ. ಇ. ಸೋನ್ ಕಾಂಬಳೆ ಅವರ 'ಅಠವಣೀಂಚೆ ಪಕ್ಷಿ' (ನೆನಪಿನ ಹಕ್ಕಿ) ೧೯೭೯ರಲ್ಲಿ ಪ್ರಕಟವಾಗಿದ್ದು. ಇಲ್ಲಿಯವರೆಗೆ ಈ ಆತ್ಮಕತೆಯ ಐದು ಸಂಸ್ಕರಣಗಳು ಬಂದಿವೆಯೆಂದರೆ ಅದರ ಜನಪ್ರಿಯತೆಯ ಅನುಮಾನ ತಮಗೆ ಬರಬಹುದು. ಇಂಡಿಯಾದ ಆರು ಭಾಷೆಗಳಲ್ಲಿ ಅನುವಾದಗೊಂಡ ಈ ಕೃತಿ. ಮಹಾರಾಷ್ಟ್ರದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿದೆ.

ನಾರಾಯಣ ಸುರ್ವೆ ಅವರ 'ಮಾಝೆ ವಿದ್ಯಾಪೀಠ'(ನನ್ನ ವಿಶ್ವವಿದ್ಯಾಲಯ) ಕವನ ಸಂಕಲನದಲ್ಲಿ, ನನ್ನ ಬದುಕೇ ವಿಶ್ವವಿದ್ಯಾಲಯ, ಫುಟ್‌ಪಾತೇ ನನ್ನ ಮನೆ, ಕೈಯೇ ನನ್ನ ಖಡ್ಗ ಅಂತ ಘೋಷಿಸುತ್ತಾನೆ. 'ಜಾಹೀರನಾಮಾ' (ಘೋಷಣೆ) ಕಮ್ಯೂನಿಷ್ಟ ವಿಚಾರಧಾರೆಯಿಂದ ಪ್ರಭಾವಿತ ಕವನ ಸಂಕಲನವಾದರೆ. 'ಸನದ' (ಪದವಿ ಪ್ರಮಾಣಪತ್ರ), 'ಐಸಾಗಾಮಿ ಬ್ರಹ್ಮ' (ನನ್ನ ಜಿಟ್ಟು ಬ್ರಹ್ಮನಿಲ್ಲ) ಮುಂತಾದ ಸಂಕಲನಗಳಲ್ಲಿ ತನ್ನ ಸುತ್ತುಮುತ್ತಲಿನ ದರಿದ್ರ ಬದುಕನ್ನು ಚಿತ್ರಿಸುವ ಕವಿಯ ಕಲೆಗಾರಿಕೆ ಎದ್ದು ಹೊಡೆಯುತ್ತದೆ.

ನಾಮದೇವ ಢಸಾಳ ಜೊತೆ 'ದಲಿತಪ್ಯಾಂಥರ್ಸ್' ಕಟ್ಟಿದ ರಾಜಾಢಾಲೆ ಯುವ ವಕೀಲ, ಖ್ಯಾತ ವಿಚಾರವಾದಿ ಹಾಗೂ ಉಗ್ರ ಭಾಷಣಕಾರನಾಗಿದ್ದಾನೆ. ಹೋದ ವರ್ಷ ಅಕಾಲ ಮೃತ್ಯುವಿಗೆ ತುತ್ತಾದ ಗೆಳೆಯ ದೇವಯ್ಯ ಹರವೆಯ ವಿಚಾರಗಳೊಂದಿಗೆ ರಾಜಾ ಢಾಲೆಯ ವಿಚಾರಗಳನ್ನು ಹೋಲಿಸಿದಾಗ ಆಶ್ಚರ್ಯಕರವಾದ ಸಾಮ್ಯ ಕಂಡುಬರುತ್ತವೆ. ಅರುಣ ಕಾಂಬಳೆಯ 'ರಾಮಾಯಣಾತೀಲ ಸಂಸ್ಕೃತಿ ಸಂಘರ್ಷ' (ರಾಮಾಯಣದಲ್ಲಿ ಸಂಸ್ಕೃತಿಯ ಸಂಘರ್ಷ) ಲೇಖನ ಸಂಗ್ರಹದಲ್ಲಿ ದಲಿತ ಸಂಸ್ಕೃತಿಯ ನಿರ್ಮಾಣದ ಪ್ರಯತ್ನ ನಡೆದಿದೆ. ಕಾಂಬಳೆಯ ಈ ಕೃತಿ ಕನ್ನಡದಲ್ಲಿ ಇತ್ತೀಚೆಗೆ ಬಿರುಗಾಳಿ ಎಬ್ಬಿಸಿರುವ ಡಾ. ಪ್ರೋ.ಲಂಕಿ ರಾಮಮೂರ್ತಿಯವರ 'ಸೀತಾಯಣ'ದ ಒರಸೆಯನ್ನು ಹೋಲುತ್ತದೆ. ರಾವಸಾಹೇಬ ಕಸ್ಬೆಯ 'ಝೋತ' (ಬೆಳಕು)ದಲ್ಲಿ ರಾಷ್ಟ್ರೀಯ ಸ್ವಯಂಸೇವಕಸಂಘದ ಅಂದರ-ಬಾಹರಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಯಶವಂತ ಮನೋಹರರ 'ಉತ್ಥಾನ ಗುಂಫಾ' (ಜಮುರಿದ ಗುಹೆ) ಕವನ ಸಂಕಲದಲ್ಲಿ ಅಲ್ಲಲ್ಲಿ ಹರಡಿರುವ ದಲಿತ ಪ್ಯಾಂಥರ್‌ಗಳನ್ನು ಒಗ್ಗೂಡಿಸಿ ಹೊಸ ಶಕ್ತಿಯನ್ನು ಹುಟ್ಟುಹಾಕುವ ಸಾಧ್ಯತೆಗಳನ್ನು ಗುರುತಿಸಲಾಗಿದೆ. 'ದಲಿತ ಸಾಹಿತ್ಯ' ಸಿದ್ಧಾಂತ ಮತ್ತು ಸ್ವರೂಪದಲ್ಲಿ ದಲಿತ ಸಾಹಿತ್ಯ ಕುರಿತ ಸೈದ್ಧಾಂತಿಕ ವಿಶ್ಲೇಷಣೆಯನ್ನು ಮಾಡಲಾಗಿದೆ.

ಇನ್ನೊಬ್ಬ ತಣ್ಣಗಿನ ಬೆಂಕಿಯಂತಹ ದಲಿತ ಗದ್ಯಕಾರ ಬಾಬೂರಾವ ಗಾಯಕವಾಡರ ಕಥೆ. ಕಾದಂಬರಿ. ನಾಟಕಗಳಲ್ಲಿ-ಹಳ್ಳಿಗಳಲ್ಲಿ ಸವರ್ಣೀಯರು ದಲಿತರ ಮೇಲೆ ನಡೆಸುವ ದಬ್ಬಾಳಿಕೆಯನ್ನು, ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಅಲ್ಲದೇ ವ್ಯಾಪಕವಾಗಿ, ಅಹಿಂಸಾತ್ಮಕವಾಗಿ ದಲಿತ ಚಳುವಳಿಯನ್ನು ಹಬ್ಬಿಸಬೇಕಾದರೆ, ಶೋಷಿತರೆಲ್ಲಾ ಒಗ್ಗೂಡಬೇಕೆಂಬ ಸಾಮೂಹಿಕ ಧ್ವನಿ ಬಾಬೂರಾವ ಸಾಹಿತ್ಯದ ಒಟ್ಟು ಆಶಯವಾಗಿದೆ. ಇಲ್ಲಿಯವರೆಗೆ ಇವರ – 'ಝಳ' (ಸಾಮಾಜಿಕ ನೋವು) ಕಾದಂಬರಿ 'ಜಾರ್ಷ' (ಹೊರಸು, ಕಥಾ ಸಂಕಲನ, 'ನಾತ' (ಸಂಬಂಧಗಳು) 'ಟಿಳಾ'

(ಕುಂಕುಮ) ನಾಟಕಗಳು ಹೊರ ಬಂದಿವೆ. ಇವರ ರಚನೆಗಳ ಮೇಲೆ ಅಂಬೇಡ್ಕರ ಮತ್ತು ಸಾಮ್ಯವಾದವ ನಿಚ್ಚಳ ಪ್ರಭಾವ ಕಂಡುಬರುತ್ತದೆ.

ಹೀಗೆ ಮರಾಠಿ ದಲಿತ ಸಾಹಿತ್ಯ ಕೇವಲ ಆರ್ಥಿಕ, ಸಾಮಾಜಿಕ ಪರಿವರ್ತನೆಯ ಆಶಯವನ್ನು ಇಟ್ಟುಕೊಳ್ಳದೆ. ಹೊಸ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುವ, ಶೋಷಣೆ ತುಂಬಿದ ದಲಿತರ ಬದುಕನ್ನು ಹಸನುಗೊಳಿಸುವ ಧ್ಯೇಯವನ್ನು ಇಟ್ಟುಕೊಂಡಿದೆ.

ಕನ್ನಡ ದಲಿತ ಸಾಹಿತ್ಯ :

ವಚನಕಾರರ ಸಂದರ್ಭದಲ್ಲಿ ದಲಿತ ವಚನಕಾರರು ಬೆಳೆದು ಬಂದರೂ ಬಸವಣ್ಣನನ್ನು ಹಿಡಿದು ಉಳಿದ ದಲಿತ ವಚನಕಾರರ ಜೀವನದೃಷ್ಟಿ ಸೀಮಿತವಾಗಿತ್ತು. ತಮ್ಮದೇ ಆದರ ಪರಿಧಿಯಲ್ಲಿ ಅವರು ಅಸ್ಪೃಶ್ಯತೆಯನ್ನು ಮೆಟ್ಟುವ ಕೆಲಸ ಮಾಡಿದರಾದರೂ. ಆಮೂಲಾಗ್ರ ಬದಲಾವಣೆಯ ಆಶಯದ ಅಭಾವದಿಂದ ಅವರ ಹೋರಾಟ ಸೋಲನ್ನಪ್ಪಿತು.

ನವೋದಯ. ನವ್ಯ ಪಂಥಗಳು ತಮ್ಮ ಸೀಮಿತ ಧ್ಯೇಯ. ಧೋರಣೆಗಳಿಂದ ಸಮಾಜದಲ್ಲಿನ ಎಲ್ಲ ಬಗೆಯ ಕ್ರೌರ್ಯ, ದಬ್ಬಾಳಿಕೆ, ಅನ್ಯಾಯಗಳ ವಿರುದ್ಧ ದನಿ ಎತ್ತದೇ ಹೋದವು.ಸಾಹಿತ್ಯ ಎಂದರೆ ಸೌಂದರ್ಯೋಪಾಸನೆ, ರಸಾನಂದ ಎಂದು. ಸಾಹಿತ್ಯ ಸಾಹಿತ್ಯಕ್ಕಾಗಿ ಎಂಬ ವಂಚನೆಯ ಬದುಕಿನಲ್ಲಿ ವಿಹರಿಸಿದ ರಮ್ಯ ಕವಿಗಳಿಗೆ ಸಾಹಿತ್ಯ ಅವರವರನ್ನೇ ಖುಷಿಪಡಿಸಿತು, ಈ ನಿಟ್ಟಿನಲ್ಲಿ ಬೆಳೆದ ಸಾಹಿತ್ಯ ಹೊಟ್ಟೆ ತುಂಬಿದವರಿಗೇ ನಿದ್ದೆ ಹತ್ತುವತನಕ ಕೇಳುವ ಶಾಸ್ತ್ರೀಯ ಸಂಗೀತದಂತೆ. ಹೊತ್ತು ಕಳೆಯಲು ಆಡುವ ಇಸ್ಪೀಟ ಆಟದಂತೆ, ವಿಶ್ವವಿದ್ಯಾಲಯಗಳಲ್ಲಿ ಕೆಲಸವಿಲ್ಲದೆ ಅಂಡಲೆಯುವ, ಜಾತೀ ರಾಜಕೀಯ ಮಾಡುತ್ತ ಕುರ್ಚಿಗಳನ್ನು ಉಡದಂತೆ ಹಿಡಿದುಕೊಂಡು ಕುಂತಿರುವ ಬುದ್ಧಿಜೀವಿಗಳ ಬೌದ್ಧಿಕ ತೀಟೆ ತೀರಿಸಿಕೊಳ್ಳುವ ಸಾಧನವಾಯಿತು.

೧೯೭೫ ರ ವರೆಗೆ ಪ್ರಚಾರದ ಭರಾಟೆಯಲ್ಲಿ ಕವಿಗಳ ವೈಯಕ್ತಿಕ ಹಿಯಾಳಿಕೆ. ಗಿಮಿಕ್ಸ್‌ಗಳಲ್ಲಿ. ಹೇಸಿಗೆ ತರಿಸುವ ಆತ್ಮ ಪ್ರಶಂಸೆಯಲ್ಲಿ. ಜಗತ್ತನ್ನೇ ಹೊತ್ತುಕೊಂಡು ನಡೆಯುವ ಗತ್ತಿನಲ್ಲಿದ್ದ, 'ನವ್ಯಸಾಹಿತ್ಯ' ದಲಿತರ ಬಗೆಗಿರಲಿ. ಬರೆದವರ ಬಗೆಗೇ ಯೋಚಿಸದೆ, ಮನುಷ್ಯರಿಂದ ದೂರ ಉಳಿಯಿತು. ವಾಸ್ತವವಾಗಿ ಸಾಮಾನ್ಯ ಓದುಗ ಮತ್ತು ಬರಹದ ನಡುವೆ ಇರಬೇಕಾದ ಸಾಮಾನ್ಯ ಸಂಬಂಧವೂ ಈ ಹಂತದಲ್ಲಿ ಮಾಯವಾಯಿತು. ಸಾಹಿತ್ಯವೆಂದರೆ ಬುದ್ಧಿಜೀವಿಗಳಿಗೆ ಮಾತ್ರ. ಅದೊಂದು ತಲೆಯ ತಿಂಡಿ ಎಂಬಂತೆ ನವ್ಯ ಸಾಹಿತಿಗಳು ಬರೆದರು. ರೂಪಕ.

ಪ್ರತಿಮೆ, ಉಪಮೆ, ಸಂಕೇತ, ಅಸ್ತಿತ್ವ ಸಂಕಟ, ಒಬ್ಬಂಟಿ, ಪರಕೀಯತೆ ಮುಂತಾದ ಬಾಡಿಗೆ ಸಂವೇದನೆಗಳನ್ನು ತಮ್ಮ ಮೇಲೆ ಹೇರಿಕೊಂಡು ಯಾರೂ ಮೂಸಿನೋಡದ ಮದ್ದುಗುಣಿಕೆ ಗಿಡವಾದರು. ಆಗ ತಾನೆ ಅಕ್ಷರ ಕಲಿತು ತಮ್ಮ ಯಾತನೆ, ನೋವು, ಅಟ್ಟುಂಡ ಹಿಂಸೆಗಳನ್ನು ಅಕ್ಷರದಲ್ಲಿ ಮೂಡಲೆತ್ನಿಸಿದ ಕೆಳವರ್ಗದ ಜನರಲ್ಲಿ ಈ ಭಾಡಿಗೆ ಸಂವೇದನೆಗಳು ಸಾಹಿತ್ಯದ ಬಗೆಗೆ ಭಯವನ್ನು ಮೂಡಿಸಿದವು. ಇದರಿಂದಾಗಿ ದಲಿತ ವರ್ಗದ ಜನ ಅನೇಕ ವರ್ಷಗಳಿಂದ ಲೇಖನಿ ಹಿಡಿದು ತಮ್ಮ ಮನಸ್ಸಿನ ಆಲೋಚನೆ, ಎದೆಯಾಳದ ನೋವ ಹೇಳಲಾಗದೆ ಮೂಕರಾಗಿ ಕುಳಿತಿದ್ದರು. ನವೋದಯ ಮತ್ತು ನವ್ಯ ಸಾಹಿತ್ಯ ಪ್ರಕಾರಗಳು ಕೆಳವರ್ಗದ ಜನರ ಬರವಣಿಗೆಗೆ ಈ ಬಗೆಯ ಬೆದರಿಕೆ ಉಂಟು ಮಾಡಿದವಲ್ಲದೆ ಆಯಾ ಸಂದರ್ಭದ ದಲಿತ ಕಾಳಜಿಯನ್ನು, ಆಶಯವನ್ನು ಕೂಡ ಪ್ರತಿಬಿಂಬಿಸಲಿಲ್ಲ. ಇದರಿಂದ ಕನ್ನಡ ಸಾಹಿತ್ಯ ಸ್ಥಗಿತಗೊಂಡು ಮಾನವನ ವಾಸ್ತವ ಬದುಕಿಗೆ ಸಾಹಿತ್ಯ ಸತ್ತಿತು. ಅನ್ನುವಷ್ಟರಲ್ಲಿ ಬದುಕಿನ ಒಳ ಪದರುಗಳನ್ನು ನಿಜವಾದ ಅರ್ಥದಲ್ಲಿ ಅಭಿವ್ಯಕ್ತಿಸಿ ತಮ್ಮ ನೋವು, ಯಾತನೆ ಮತ್ತು ವಾಸ್ತವ ಭೀಕರತೆಯ ಚಿತ್ರವನ್ನು ದಲಿತ ಬರಹಗಾರರು ಅಕ್ಷರದ ಮೂಲಕ ಹೇಳಲಾರಂಭಿಸಿದ ನಂತರ ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಚಾಲನೆ ಜೀವ ಬಂದಿತು, ದಲಿತತನದ ಈ ಬರವಣಿಗೆ ಅರೆಬಂಡವಳಿಗೆ ಮತ್ತು ಅರೆ ಭೂಮಾಲೀಕತ್ವದ ಊಳಿಗಮಾನ್ಯ ಪದ್ಧತಿಯ ಪಳೆಯುಳಿಕೆ ಇರುವ ಈ ವ್ಯವಸ್ಥೆಯಲ್ಲಿನ ಅನಿವಾರ್ಯ ಮತ್ತು ಚಾರಿತ್ರಿಕ ಬೆಳವಣಿಗೆ ಕೂಡ.

ಐತಿಹಾಸಿಕ ಪ್ರಜ್ಞೆಯುಳ್ಳ ನಮಗೆ ಹಿಂದಿನ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಚಳುವಳಿಗಳು ವಿಫಲವಾದ ಕಾರಣವನ್ನು ಹುಡುಕುವದು, ನಮ್ಮ ಬೆಳವಣಿಗೆಯ ದೃಷ್ಟಿಯಿಂದ ಆರೋಗ್ಯಕರವಾದುದು. ಧಾರ್ಮಿಕ ಹಿನ್ನಲೆಯ ಸುಧಾರಣೆಯೇ ವಿಫಲವಾದಾಗ ಸಾಹಿತ್ಯ ಚಟುವಟಿಕೆ ಈ ಸಮಸ್ಯೆಯನ್ನು ಎಷ್ಟು ಮಾತ್ರ ಪರಿಹರಿಸೀತು ಎಂಬ ಬಗ್ಗೆ ಅನುಮಾನ ಮೂಡುವುದು ಸಹಜ. ಇದನ್ನು ಇಂದು ನಾವು ತೀವ್ರವಾಗಿ ಚಿಂತಿಸಬೇಕಾಗಿದೆ. ಇಂದಿನವರೆಗೆ ಬಂದಿರುವ ಚೂರು–ಪೂರು ಸಾಹಿತ್ಯ ದಲಿತರ ಸಮಸ್ಯೆಯ ನೀರಿಲ್ಲದ ಸಾಗರದಲ್ಲಿ ಒಂದು ಹನಿ ಇದ್ದಂತೆ ಮಾತ್ರ. ಕೇವಲ ಸಾಹಿತ್ಯಾಭ್ಯಾಸಿಗಳ, ಸಾಹಿತ್ಯ ವಿದ್ಯಾರ್ಥಿಗಳ ಚರ್ಚೆಗೆ ವಿಮರ್ಶೆಗೆ ಸೆಮಿನಾರುಗಳಿಗೆ ಸೀಮಿತವಾಗಿದೆ.

ಕೇವಲ ಸಾಹಿತ್ಯಿಕ ಚಟುವಟಿಕೆ ಯಾವ ಬದಲಾವಣೆಯನ್ನೂ ತನಗೆ ತಾನೇ ಮಾಡದು. ಜೀವನದ ಅನೇಕ ರಂಗಗಳು ಬದುಕಿನಲ್ಲಿ ಹಾಸುಹೊಕ್ಕಾಗಿರುವ ಇವತ್ತಿನ ಸಂದರ್ಭದಲ್ಲಿ, ಸಾಹಿತ್ಯ ಕೂಡಾ ಕೇವಲ ಅಕೆಡೆಮಿಕ್ ಆಗಿ ಉಳಿಯದೆ, ಜೀವನದ ಪ್ರತಿಯೊಂದು ಮಜಲಿನ ಜೊತೆಗೂ ಕೊಡುಕೊಳ್ಳಿ ಇಟ್ಟುಕೊಳ್ಳಬೇಕಾಗುತ್ತದೆ.

ಬರೀ ಘೋಷಣೆಯ ಘಟ್ಟದಲ್ಲಿಯೇ ಉಳಿಯದೆ, ಹೋರಾಟದ ಕಣಕ್ಕೆ ಇಳಿಯು ವುದು ಇಂದಿನ ಬರವಣಿಗೆಯ ಬಹು ಮುಖ್ಯ ಘಟ್ಟವೆಂದು ಎಲ್ಲರಿಗೂ ಮನ–ವಟ್ಟಾಗಿದೆ. ಸಾಮಾಜಿಕ ಬದಲಾವಣೆಗಾಗಿ ನಾನು ಬರೆದೆ– ಇನ್ನು ಬದಲಾವಣೆಗಾಗಿ ಹೋರಾಡುವುದು ನಿಮ್ಮ ಹೆಗಲ ಮೇಲಿದೆ ಅಂತ ಕೈತೊಳೆದುಕೊಳ್ಳುತ್ತಿದ್ದ ಹಿಂದಿನ ಬರಹಗಾರರಂತೆ ಇಂದಿನ ಬರಹಗಾರ ಹಿತ್ತಲಬಾಗಿಲ ಹೋರಾಟಗಾರನಾಗಿ ಉಳಿಯ ಲಾರ. ಬರೆಯುವುದರೊಂದಿಗೆ ಬೀದಿಗಿಳಿದು, ದಲಿತರ ಪ್ರತಿಯೊಂದು ತೊಡಕನ್ನು ಬಿಡಿಸಲು ಬರಹಗಾರ ಏನೆಲ್ಲವನ್ನೂ ಮಾಡಬೇಕಾಗುತ್ತದೆ. ಈ ಬಿಡಿಸುವ ಪ್ರಯತ್ನ ದಲ್ಲಿ ಸಾಹಿತ್ಯ ಒಂದು ಉಪಾಯ ಮಾತ್ರವೇ ಹೊರತು ಎಲ್ಲವೂ ಅದೇ ಅಲ್ಲ. ದಲಿತ ರನ್ನು ಕುರಿತು ಬರೆದ ಮಾತ್ರದಿಂದಲೇ ದಲಿತರಿಗೆ ಬೇಕಾದ ಸಮಾಜ ಸ್ಥಾಪನೆ ಸಾಧ್ಯವಾಗುವುದಿಲ್ಲ. ಸಂಪೂರ್ಣ ಶೋಷಣೆ ರಹಿತ ಸಮಾಜ ಸ್ಥಾಪನೆಯ ನೂರಾರು ಅಂಶಗಳನ್ನೆಲ್ಲಾ ಸಾಹಿತ್ಯ ಗಮನಿಸಬೇಕಾಗುತ್ತದೆ. ಕಣ್ಣೆದುರಿನಲ್ಲಿಯೇ ವಿಫಲ ವಾಗುತ್ತಿರುವ ಯೋಜನೆಗಳು, ಹರಿಜನ–ಗಿರಿಜನ ಕಲ್ಯಾಣ ಕಾರ್ಯಕ್ರಮಗಳಂತಹ ಬೊಗಳೆಗಳು ವರ್ತಮಾನದ ಎಚ್ಚೆತ್ತ ಪ್ರಜ್ಞೆಯ ಸೋಲಿನ ಪ್ರತೀಕಗಳಾಗಿ ನಿಂತಿವೆ.

ದಲಿತ ಸಾಹಿತಿಗಳ ಧೋರಣೆಗಳಲ್ಲಿ ಬದಲಾವಣೆಯಾಗಿದೆ. ತಮ್ಮ ಕೃತಿಗಳು ಅಮರವಾಗಬೇಕು, ಶಾಶ್ವತವಾಗಬೇಕು ಎಂಬ ಭ್ರಾಮಕ ಧೋರಣೆ ಹೋಗಿ, ಹ್ಯಾಂಡ ಬಿಲ್ ಆದರೂ ಚಿಂತೆಯಿಲ್ಲ ನನ್ನ ಬರವಣಿಗೆ ನೋವುಂಡವರಿಗೆ ಸಾಂತ್ವನವೀಯಬೇಕೆಂಬ ರೊಚ್ಚು ಸಾರ್ವತ್ರಿಕವಾಗುತ್ತಿದೆ. ದಲಿತರ ಬದುಕು ಮತ್ತು ಅವರ ಸಾಹಿತ್ಯವನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವಿಲ್ಲ. ಯಾಕೆಂದರೆ ಬರವಣಿಗೆಯಲ್ಲಿ ಅವರ ಬದುಕು, ಬದುಕಿನಲ್ಲಿ ಅವರ ಬರವಣಿಗೆ ಒಂದಕ್ಕೊಂದು ಹೆಣೆದುಕೊಂಡಿವೆ. ಖ್ಯಾತ ಕತೆಗಾರ ದೇವನೂರು ಮಹಾದೇವರ 'ದ್ಯಾವನೂರು' ಕಥಾ ಸಂಕಲನ ಈ ಹಂತದಲ್ಲಿ ಪ್ರತ್ಯಕ್ಷ ಪ್ರಮಾಣವನ್ನು ನೀಡುತ್ತದೆ. 'ದ್ಯಾವನೂರು' ಸಂಕಲನದ ಕಥೆಗಳಲ್ಲಿ ವ್ಯಕ್ತ ವಾಗುವ ದಲಿತರ ಹತಾಶೆ, ನೋವುಗಳನ್ನು ಹುಟ್ಟಿನಿಂದಲೇ ದಲಿತನಾದ ದೇವನೂರು ಮಹದೇವ ತನ್ನ ಜನರ ಬಗ್ಗೆ ಬರೆಯಲು ಹೊರಟಾಗ ಆತ ನೋಡುವ ದೃಷ್ಟಿಕೋನ ಮತ್ತು ತನ್ನದೇ ಆದ ಹೊಸ ಭಾಷೆ, ಹೊಸ ಭಾವನೆ, ಹೇಳುವ ಹೊಸ ರೀತಿ ಮತ್ತು ವಾಸ್ತವ ಬದುಕನ್ನು ಚಿತ್ರಿಸುವ ಕಲೆಗಾರಿಕೆ; ನೈಜೀರಿಯಾದ ಕಪ್ಪು ಕಾದಂಬರಿಕಾರ ಚಿನುವಾ ಅಚುಬೆನ ಖ್ಯಾತ 'ಥಿಂಗ್ಸ್ ಫಾಲ್ ಅಪಾರ್ಟ'ನಲ್ಲಿ ಕಾದಂಬರಿಕಾರ ಸಾಧಿಸಿ ರುವ ಏಕಾಗ್ರತೆ ಹಾಗೂ ಹೊರ ಬದುಕಿನ ಜೊತೆಗೆ ದಲಿತ ಬದುಕನ್ನು ಹೋಲಿಸುತ್ತ ಹೋಗುವ ಕಲೆಗಾರನ ತನ್ಮಯತೆ ಈ ಹಿಂದೆ ಕನ್ನಡದಲ್ಲಿ ನಡೆದ ಉದಾಹರಣೆಯಿಲ್ಲ. ತನ್ನ ಜನಾಂಗದ ಬದುಕು. ಅವರ ಚಿಂತನೆ, ಆಲೋಚನೆ ಅವರ ನಂಬುಗೆಗಳು ಜೀವ ನದಲ್ಲಿಟ್ಟಿರುವ ವಿಶ್ವಾಸಗಳು, ನೋವು ನಲಿವು, ಹಾದರ, ಕಳವು, ಕುಡುಕುತನ, ಸುಳ್ಳು ಗಾರಿಕೆ, ಕೆಲವರಲ್ಲಿ ಸೂಕ್ಷ್ಮವಾಗಿ ಚಾಚಿರುವ ಬೂರ್ಜ್ವಾತನ, ಇವೆಲ್ಲದರ ಜೊತೆಗೆ

ಕೆಲವು ಕಲಿತ ದಲಿತರು ತಮ್ಮವರನ್ನು ತೊರೆದು, ತಮ್ಮ ಐಡೆಂಟಿಟಿಯನ್ನೇ ಮರೆಮಾಚಿ ಹೊಸ ಬ್ರಾಹ್ಮಣಿಕೆಯ ಬದುಕನ್ನು ನಡೆಸುವ ವಂಚನೆ ಮತ್ತು ದಲಿತರ ಹೆಸರಿನಲ್ಲಿ ಎಲ್ಲದರ ಮೇಲೂ ತನ್ನದೊಬ್ಬನದೇ ಪ್ರಭುತ್ವವಿರಬೇಕೆಂಬ ಹೊಸ ಸಮೂಹ ನೆಯ ಪಾಳೇಗಾರಿಕೆ ಇವೆಲ್ಲ ಆಹ್ವಾನಗಳು ಇಂದು ದಲಿತ ಲೇಖಕನ ಮುಂದಿವೆ. ದಲಿತ ಸಾಹಿತ್ಯಕ್ಕೆ ತನ್ನದೇ ಆದ ಪ್ರತ್ಯೇಕ ಲೋಕವಿದೆ. ಯಾರೂ ಹೆಸರಿಸಿದ ಶೈಲಿ ಯಿದೆ ಬಂಧವಿದೆ. ದಲಿತರ ಹಾಡಿನ ಲಯ ಗದ್ಯದ ನಡಿಗೆ. ಕಥನದ ರೀತಿ ಕಾಣೆತದ ಗತ್ತನ್ನು ಕೇವಲ ಆದರೊಂದಿಗೆ ಅಡುತ್ತಾಡುತ್ತಾ ಬೆಳೆದ ದಲಿತ ಮಾತ್ರ ಮೈಗೂಡಿಸಿ ಕೊಂಡು ಅದನ್ನು ಸಾಹಿತ್ಯವಾಗಿ ಮಾಡಬಲ್ಲ.

ದಲಿತ ಬರಹಗಾರರು ಈ ಸಮಾಜದ ಒಟ್ಟು ಏವಸೆಗೆ ತಮ್ಮ ಸಾಮಾಜಿಕ ಜವಾಬ್ದಾರಿಗನುಗುಣವಾಗಿ ದಲಿತ ಕಾಳಜಿಗಳಿಗೆ ಬದ್ಧವಾಗಿ ಮತ್ತು ಹೊಸ ಆಶಯ ಗಳನ್ನು ಇಟ್ಟುಕೊಂಡು ಬರೆಯದೇ ಹೋದಲ್ಲಿ ಈ ವಲಯದಲ್ಲಿನ ವ್ಯಾಖ್ಯಾನ ಕಾಲಾಂತರದಲ್ಲಿ ಸಾಹಿತ್ಯ ಸಾಹಿತ್ಯಕ್ಕಾಗಿ. ಕಲೆ ಕಲೆಗಾಗಿ ಎಂಬ ಶುದ್ಧ ಸಾಹಿತಿಗಳ ವಾದವನ್ನು ತಲುಪಿಬಿಡಬಹುದೆಂಬ ಅನುಮಾನ ಆತಂಕಗಳನ್ನು ಅನೇಕ ಲೇಖಕರು ವ್ಯಕ್ತಪಡಿಸುತ್ತಾ ಸಾಹಿತ್ಯದ ಮೌಲ್ಯವನ್ನು ನಿರ್ಧರಿಸಲು ಕಲಾತ್ಮಕತೆಯೇ ಮುಖ್ಯ ಮಾನದಂಡವಲ್ಲ, ಒಂದು ಕೃತಿಯ ವಸ್ತು. ಅದು ಏನನ್ನು ಹೇಳಲು ಹೊರಟಿದೆ ಮತ್ತು ಯಾರ ಪರ ಮಾತನಾಡಲು ಯತ್ನಿಸಿದೆ ಎಂಬುದು ಇಂದಿನ ಸಾಮಾಜಿಕ ಸಂದರ್ಭದ ಅಗತ್ಯ ಎಂಬ ಅಭಿಪ್ರಾಯಗಳು ಮೂಡಿ ಬರುತ್ತಿವೆ.

ಜನಶಕ್ತಿಯ ಬೆಳೆತೆಗೆವ ಹಠದಿಂದ ಹುಟ್ಟಿರುವ 'ಮುಂಗಾರು' ದಿನಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ನನಗೆ ಬಹಳ ಖುಶಿಯನ್ನು ಕೊಟ್ಟ ಕವಿ ಕೆ. ರಾಮಯ್ಯನ 'ಘೋಮಾ' ಕವಿತೆ ಇಲ್ಲಿ ಪ್ರಸ್ತುತ ಎಂದು ಭಾವಿಸಿರುವೆ. ದಲಿತ ಹೋರಾಟದ ಶಿಲ್ಪಿಗಳಲ್ಲಿ ಒಬ್ಬರಾದ ರಾಮಯ್ಯ ರಂಗಭೂಮಿಯಲ್ಲಿ ಕೂಡಾ ಕ್ರಿಯಾಶೀಲನಾದ ಬರಹಗಾರ. ನನ್ನ ಸರೀಕರಲ್ಲಿಯೇ ಅಂಬೇಡ್ಕರ್ ಬಗೆಗೆ ಸ್ಪಷ್ಟ ನಿಲುವುಳ್ಳ ಈ ಕವಿಯು ಆದಿವಾಸಿಗಳಲ್ಲಿ, ದಲಿತರ ಎಚ್ಚೆತ್ತ ಪ್ರಜ್ಞೆಯ ಸಂಕೇತವಾಗಿರುವ 'ಘೋಮಾ'ನ ಪರಿಸರದ ಕಣಿದ ಕಣ್ಣಿಗೆ ವರ್ಣನೆಯೊಂದಿಗೆ ಶುರುವಾಗುವ ಕವಿತೆ.

'ಅನ್ನ ಕಾಣದ ಅವ್ವನೆದೆಯಲಿ ಪೈಲೀಸ.
ಬತ್ತಿದ ಮೊಲೆಯ ಚೀಪುತ ಘೋಮ ಪೈಲೀಸ
ಮಣ್ಣು ಕುಡಿಕೆಯ ಬೆಳ್ಳಿ ಬಟ್ಟಲು
ಚಿಂದಿಸೀರೆಯ ತೂಗುತೊಟ್ಟಿಲು
ತುಂಡು ಮುಡಿಕೆಯ ಆಟಿಗೆ ಅವಗೆ

ಬೆಳೆಯುತ ಬಂದನೊ ಬಾಲಕ ಭೋಮ ಹೈಲೇಸ
ಸಾವು ನೋವುಗಳ ಬೆನ್ನಲೊತ್ತು ಹೈಲೇಸ ॥
ಘೂತಾಯಿ ಮಗನಿಗೆ ಭೂಮಿಯೇ ಇಲ್ಲವೋ ಹೈಲೇಸ
ಮಡಿಯುವ ಕೈತುಂಬ ಅನ್ನವೆ; ಇಲ್ಲವೋ ಹೈಲೇಸ
ಮೇಲುಕೀಳಿನ ಪಂಜರದಲ್ಲಿ
ಉತ್ತಮರೆಂಬೋರ ಕಾಲಡಿಯಲ್ಲಿ
ಬೇಯುತ್ತಿದ್ದನೋ ಹರಯದ ಭೋಮ
ಸುರಿಸಿದ ಬೆವರು ಸುರಿಸಿದ ರಕ್ತ ಹೈಲೇಸ
ದಿಕ್ಕು ತೋರುತ ದೀವಿಗೆಯಾದವು ಹೈಲೇಸ ॥

ಈ ಕವಿತೆಯನ್ನು ಯಾವ ಮಾನದಂಡದಿಂದ ಅಳೆಯಬೇಕು ? ಆದಿವಾಸಿ ಭೋಮನ ಬದುಕು ದುರಂತಕ್ಕೊಳಗೀಡಾಗುವದು, ಬರಬರುತ್ತ ಭೋಮಾ ಒಬ್ಬಂಟಿಯಾಗುವುದನ್ನು ಕವಿತೆ ಹೇಳುತ್ತ ಹೇಳುತ್ತ, ಇಡೀ ಆದಿವಾಸಿಗಳ ಕಣ್ಣೀರ ಕತೆಯನ್ನೇ ನಮ್ಮ ಮುಂದೆ ತೆರೆದಿಡುತ್ತದೆ. ಇಲ್ಲಿ ಕಲೆ ಮುಖ್ಯವಾಗದೆ, ಕವಿ ಹೇಳ ಹೊರಟಿರುವ ಐತಿಹಾಸಿಕ ನಗ್ನಸತ್ಯ ಬಹುಮುಖ್ಯವಾಗುತ್ತದೆ. ಹಾಗೆ ನೋಡಿದರೆ 'ಭೋಮ' ಕವಿತೆ ಕಲಾತ್ಮಕತೆಯನ್ನು ಸಾಧಿಸಿರುವ ರೀತಿ ಕೂಡಾ ಅದ್ಭುತವಾಗಿದೆ.

ಪ್ರಮುಖ ಬರಹಗಾರರು ;

ದೇವನೂರು ಮಹದೇವ ;

ನವ್ಯ ಸಾಹಿತಿಗಳ ನಡುವೆ ಬೆಳೆದು ಬಂದ ದೇವನೂರು ಮಹದೇವ ಅವರೊಡ ನಿದ್ದೂ ಅವರಂತಾಗದೇ ತನ್ನತನವನ್ನು ಉಳಿಸಿಕೊಂಡು, ಬಂದರೆಂಬುದಕ್ಕೆ ೧೯೭೩ ರಲ್ಲಿ ಪ್ರಕಟವಾದ ಅವರ 'ದ್ಯಾವನೂರು' ಕಥಾ ಸಂಕಲನ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಹಿಂದೆಂದೂ ಮೂಡಿಬರದ ದಲಿತರ ವಾಸ್ತವ ಬದುಕಿನ ಕ್ರೌರ್ಯ, ಸಾವು–ನೋವು, ನರಳಿಕೆಯ ಜೀವಂತ ಚಿತ್ರಣವನ್ನು ಮಹದೇವ ತಮ್ಮ ಕತೆಗಳ ಮೂಲಕ ಕೊಟ್ಟು ದಲಿತ ಸಾಹಿತ್ಯದ ಪ್ರತ್ಯೇಕ ಪರಂಪರೆಯನ್ನೇ ಹುಟ್ಟು ಹಾಕಿದರು. ದಲಿತ ಸಾಹಿತ್ಯವೆಂದರೆ ಅಬ್ಬರ, ಆರ್ಭಟ ಎಂಬ ಅಪವಾದಗಳಿಗೆ ಮಹದೇವರ ಕತೆಗಳು ದೂರ. ಯಾವುದೇ ತತ್ವಗಳ ವಕ್ತಾರನಾಗದೇ ಸಹಜ ದಲಿತ ಬದುಕನ್ನು ದಲಿತರ ಆಡುವ ಭಾಷೆಯಲ್ಲಿಯೇ ತಮ್ಮ ದಟ್ಟ ಅನುಭವ ಗಳಿಂದ ಮಾನವ ಸಂಬಂಧಗಳ ನೋವು, ಆಲೋಚನೆಗಳನ್ನು ಮತ್ತು ತನ್ನ ಜನ ರೊಡನೆ ಭಾವನಾತ್ಮಕ ಹಾಗೂ ಬೌದ್ಧಿಕ ಸಂಬಂಧವನ್ನು ಕತೆಗಳಲ್ಲಿ ಅಭಿವ್ಯಕ್ತಿಸು ತ್ತಾರೆ. ಅವರ ವಸ್ತುವಿನ ಆಯ್ಕೆ ಮತ್ತು ಕತೆಗಳನ್ನು ಹೇಳಿಕೊಂಡು ಹೋಗುವ

ಅವರ ಬಾಸಾ ಅನುಭವ ಭಾಷೆಯಲ್ಲಿ ಕತೆಯನ್ನು ಹರಿತಗೊಳಿಸುವ ಕಲೆಗಾರಿಕೆಯನ್ನು ಕಂಡುಕೊಂಡಿದ್ದಾರೆ.

೧೯೭೯ ರಲ್ಲಿ ಪ್ರಕಟವಾದ ಅವರ ನೀಳ್ಗತೆ 'ಒಡಲಾಳ' ಕಥೆ ಹೇಳುವ ಶೈಲಿ, ಭಾಷೆಯ ದೃಷ್ಟಿಯಿಂದ ಕನ್ನಡದಲ್ಲಿಯೇ ಮೊಟ್ಟ ಮೊದಲ ಕ್ರಾಂತಿಕಾರೀ ಕೃತಿ. ಇದರ ಒಟ್ಟು ಆಶಯದ ಪರಿಧಿಯನ್ನು ದಾಟಿನಿಲ್ಲುವ ಸಾಕವ್ವನ ಪಾತ್ರ ನನಗೆ ಪ್ರೇಮಚಂದರ 'ಕಫನ್' ಕತೆಯು ನೆನಪನ್ನು ತರುತ್ತದೆ. ಪ್ರೇಮಚಂದರ ಕಾಲ, ದೃಷ್ಟಿಯನ್ನು ಮೀರಿ ಭವಿಷ್ಯದಲ್ಲಿ ತನ್ನ ಮೂರ್ತಿ ಚಾಚಿರುವ 'ಕಫನ್' ಕಥೆಯಂತೆ 'ಒಡಲಾಳ' ಕಾಲಾತೀತ ಸತ್ಯವನ್ನು ತೋರಿಸುವ ಕೃತಿಯಾಗಿದೆ.

ಇದೀಗ ಪ್ರಕಟವಾಗುತ್ತಿರುವ ದೇವನೂರರ ಜನಪದ ಕಾವ್ಯ 'ಕುಸುಮಬಾಲೆ' ಜಗದೇಕವೀರ ಅಮಾಸನ ಅದ್ಭುತ ಲೀಲೆಗಳ ಆಗರವಾಗಿವೆಯೆಂದು ಹೇಳಲಾಗುತ್ತಿದೆ.

ಸಿದ್ಧಲಿಂಗಯ್ಯ :

'ಹೊಲೆ ಮಾದಿಗರ ಹಾಡು' 'ಸಾವಿರಾರು ನದಿಗಳು' ಎಂಬ ಕವನ ಸಂಕಲನಗಳು, 'ಪಂಚಮ ಮತ್ತು ನೆಲಸಮ'ವೆಂಬ ನಾಟಕದ ಮೂಲಕ ಕನ್ನಡ ದಲಿತ ಸಾಹಿತ್ಯವನ್ನು ಗಟ್ಟಿಗೊಳಿಸಿರುವ ಸಿದ್ಧಲಿಂಗಯ್ಯ ಮೂಲತಃ ಕವಿ. ಆ ಮೇಲೆ ವಿಚಾರವಾದಿಯಾಗಿದ್ದಾರೆ. ಮೊದಲು ಮಾರ್ಕ್ಸ್‌ವಾದದಿಂದ ಪ್ರಭಾವಿತರಾದಂತೆ ಕಂಡ ಕವಿ ಈಗ 'ದಲಿತ ಪ್ರಜ್ಞೆಯ' ಒಟ್ಟು ಸಾಕಾರತನವನ್ನು ಕಾವ್ಯದಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ಇವರ ಕಾವ್ಯವನ್ನು ಸಾಂಪ್ರದಾಯಿಕ ಕಾವ್ಯ ಮೀಮಾಂಸೆಯಿಂದ ನೋಡಲಾಗದು. ಸಿದ್ಧಲಿಂಗಯ್ಯನ ಕಾವ್ಯಕ್ಕೆ ತನ್ನದೇ ಆದ 'ದಲಿತ ಕಾವ್ಯ ಮೀಮಾಂಸೆ'ಯ ಅವಶ್ಯಕತೆಯಿದೆ.

ಇಂದೂಧರ ಹೊನ್ನಾಪುರ :

'ಬಂಡಾಯ' ಕವನ ಸಂಕಲನದ ಮೂಲಕ ಸುದ್ದಿ ಮಾಡಿರುವ ಹೊನ್ನಾಪುರ ತಾನೊಬ್ಬ ಗಟ್ಟಿ ಧೈರ್ಯದ ಪತ್ರಕರ್ತನೆಂಬುದನ್ನು ಅನೇಕ ಸಾಮಾಜಿಕ ಸಂದರ್ಭಗಳಲ್ಲಿ ಸಾಬೀತುಮಾಡಿದ್ದಾರೆ. 'ದಲಿತ ಸಂಘರ್ಷ ಸಮಿತಿಯ' ಹೋರಾಟದ ಗೀತೆಗಳಾಗಿ ಇವರ ಹಾಡುಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಚೆನ್ನಣ್ಣ ವಾಲೀಕಾರ :

'ಕಪ್ಪು ಕಥೆಗಳು' 'ಪ್ಯಾಂಥರ್ ಪದ್ಯಗಳು' 'ಬಂಡೆದ್ದ ದಲಿತರ ಬೀದಿ ಹಾಡುಗಳು' ಮುಂತಾದ ಕವನ ಸಂಕಲನಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಜಾನಪದ

ಸೊಗಡಿನ ಬಿರುಗಾಳಿ ಎಬ್ಬಿಸಿರುವ ಚೆನ್ನಣ್ಣ ವಾಲೀಕಾರ. ಮೂಲತಃ ದಲಿತ ಪ್ರಜ್ಞೆಯುಳ್ಳ ಅಪ್ಪಟ ಕಲಾಕಾರ. ಅವರ ಪ್ರತಿಯೊಂದು ಕವಿತೆ, ನಾಟಕವಾಗಲಿ, ಭಾಷಣವಾಗಲಿ, ದಲಿತರ ಬಗೆಗಿನ ಕಳಕಳಿಯಿಂದ, ಶೋಷಕರ ಮೇಲಿರುವ ರೊಚ್ಚಿನಿಂದ ತುಂಬಿಕೊಂಡಿರುತ್ತವೆ.

ಚಂಬಣ್ಣ ಅಮರಚಿಂತ :

'ಅಧೋಜಗತ್ತಿನ ಆಕಾವ್ಯ' ಪ್ರಕಟಿಸಿ ದಲಿತಕಾವ್ಯದಲ್ಲಿ ತಮ್ಮದೇ ಆದ ಮಾರ್ಗವನ್ನು ಗುರುತಿಸಿಕೊಂಡಿರುವ ಈ ಕವಿಯು ಮೇಲೆ ತೆಲುಗು ವಿಪ್ಲವ ಕವಿಗಳ ಪ್ರಭಾವ ಕಂಡುಬರುತ್ತದೆ.

ಬರಗೂರು ರಾಮಚಂದ್ರಪ್ಪ:

'ಒಂದು ಊರಿನ ಕಥೆ', 'ಬೆಂಕಿ' ಮುಂತಾದ ಕಾದಂಬರಿಗಳಿಂದ ಮತ್ತೀಗ ನೆತ್ತರಲ್ಲಿ ನೆಂದ ಹೂವು' ಕವಿತಾ ಸಂಕಲನದ ಮೂಲಕ ದಲಿತ ಸಾಹಿತ್ಯದಲ್ಲಿ ದರ್ಜೆಯ ಅಲೆ ಎಬ್ಬಿಸಿರುವ ಬರಗೂರರ ಸಾಹಿತ್ಯದಲ್ಲಿ ಭಂಡವಾಳಶಾಹಿಗಳ ಹಾಗೂ ಭೂಹಿಡುವಳಿದಾರರ ದಬ್ಬಾಳಿಕೆ, ಕ್ರೌರ್ಯವನ್ನು ಬಯಲಿಗೆಳೆಯಲಾಗಿದೆ.

ಸುಕನ್ಯಾ ಮಾರುತಿ :

'ಪರಿಸರ' ಕವನ ಸಂಕಲನದ ಮೂಲಕ ಮಹಿಳೆಯರ ಕತ್ತಲ ಜಗತ್ತನ್ನು ಕುರಿತು ಬರೆಯಲು ಶುರು ಮಾಡಿದ ಕವಯಿತ್ರಿ ಸುಕನ್ಯಾ 'ಪಂಚಾಗ್ನಿ ಮಧ್ಯೆ' ಸಂಕಲನದಲ್ಲಿ–ಮಹಿಳೆಯನ್ನು ಮೀರಿ, ಒಟ್ಟು ಸಾಮಾಜಿಕ ಸಂದರ್ಭದಲ್ಲಿ ನಿಂತು ಮಾತನಾಡುತ್ತಿರುವುದು ಕವಯಿತ್ರಿಯ ಆರೋಗ್ಯಕರ ಮನೋಭಾವವನ್ನು ತೋರಿಸಿಕೊಡುತ್ತದೆ.

ಶಂಕರ ಕಟಗಿ ;

ಅಲ್ಲಲ್ಲಿ ಬಿಡಿಗವನಗಳಿಂದ ಎಲ್ಲರ ಗಮನ ಸೆಳೆದಿದ್ದ ಕವಿ ಶಂಕರ ಕಟಗಿ 'ನೆಲದ ನಾಲಗೆ' ಸಂಕಲನದ ಮೂಲಕ ತಾನೊಬ್ಬ ಹುಟ್ಟು ಹೋರಾಟಗಾರನೆಂದು ತೋರಿಸಿಕೊಟ್ಟಿದ್ದಾರೆ. ಕಾರ್ಮಿಕರ ಬಡವರ, ಅಸ್ಪೃಶ್ಯರ ಬಗೆಗಿನ ಕವಿಯ ಕಳಕಳಿ ಅನನ್ಯವಾದುದು.

ಬಿ. ಟಿ. ಲಲಿತಾ ನಾಯಕ :

ದಲಿತ ಸಾಹಿತ್ಯಕ್ಕೆ ಹೊಸದೊಂದು ತೊರೆಯನ್ನು ತಂದು ಕೂಡಿಸುವಲ್ಲಿ ಲಲಿತಾ ನಾಯಕರ ಸಾಧನೆ ಗಮನಾರ್ಹವಾದುದು. ಲಮಾಣಿ ಜನಾಂಗದಲ್ಲಿ ಹುಟ್ಟಿದ

ಕವಯಿತ್ರಿ ತನ್ನ ಜನಾಂಗದ ಬಡತನ, ಅಜ್ಞಾನ, ಮೂಢನಂಬಿಕೆ, ಜಾಪಲೂಸಿಗಳನ್ನು '[illegible]' ಕವನ ಸಂಕಲನದಲ್ಲಿ ಚಿತ್ರಿಸಿದ್ದಾರೆ.

ಅರವಿಂದ ಮಾಲಗತ್ತಿ ;

'ಮೂಕನಿಗೆ ಬಾಯಿ ಬಂದಾಗ' ಕವನ ಸಂಕಲನದ ಮೂಲಕ ಕಾವ್ಯ ಕ್ಷೇತ್ರ ಪ್ರವೇಶಿಸಿದ ಮಾಲಗತ್ತಿಯವರಲ್ಲಿ ದಲಿತರ ಬವಣೆಯನ್ನು ಕಂಡು ಕುದಿಯುವ. ಅದನ್ನು ಕೊನೆಗಾಣಿಸಲು ಕ್ರಾಂತಿ ಮಾಡಬೇಕೆನ್ನುವ ಕವಿಯನ್ನು ನಾವು ಕಾಣುತ್ತೇವೆ.

ಇದಲ್ಲದೆ ಹೆಚ್. ಗೋವಿಂದಯ್ಯ, ಕೆ. ರಾಮಯ್ಯ. ಮುನಿವೆಂಕಟಪ್ಪ, ಗಂಗಾರಾಂ ಚಂಡಾಲ. ಬಸವರಾಜ ಸಬರದ, ಮಳ್ಳೂರು ನಾಗರಾಜ, ಹೆಚ್. ಎಸ್. ಶಿವಪ್ರಕಾಶ, ಮ. ನ. ಜವರಯ್ಯ, ಜೋಳು ಬಂಡೆಪ್ಪ ಮುಂತಾದ ಕವಿಗಳ ಬಿಡಿ–ಗವಿತೆಗಳು ಸಂಕಲನಗಳಲ್ಲಿ ದಲಿತರ ಯಾತನೆಯ ಬದುಕಿನ ವಿವಿಧ ಆಯಾಮಗಳನ್ನು ಅಭಿವ್ಯಕ್ತಿಸಲಾಗಿದೆ. ಹೀಗೆ ದಲಿತರ ಹೊಸ ಬದುಕಿನ ಸಾಧ್ಯತೆಗೆ ಬರಹಗಾರರ ಅಸಂಖ್ಯ ಪ್ರಯತ್ನಗಳು ನಡೆಯುತ್ತಿದ್ದರೂ, ಮರಾಠಿಯಲ್ಲಿ ಆದಂತೆ ಸಾಮೂಹಿಕ ಎಚ್ಚರ ಕನ್ನಡದಲ್ಲಿ ಇನ್ನೂ ಆಗಿಲ್ಲವೆಂದೇ ಹೇಳಬೇಕು. ಅವರೂ ಇಲ್ಲಿಯವರೆಗೆ ಆಗಿರುವ ಅರಿವು ಕಡಿಮೆಯೇನಲ್ಲ.

ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಾಹಿತ್ಯ ;

'ದಲಿತ ಸಂಘರ್ಷ ಸಮಿತಿ' ಮತ್ತು ದಲಿತ ಸಾಹಿತ್ಯವನ್ನು ಬೇರ್ಪಡಿಸುವಂತಿಲ್ಲ. ಅವು ಒಂದಕ್ಕೊಂದು ಹೊಂದಿಕೊಂಡಿರುವಂತೆ ಪೂರಕವೂ ಆಗಿವೆ. ದಲಿತರ ಆರ್ಥಿಕ-ಸಾಮಾಜಿಕ-ರಾಜಕೀಯ ದಾಸ್ಯದ ಬಿಡುಗಡೆಯೇ ಗುರಿಯಾಗಿರುವ 'ದಲಿತ ಸಂಘರ್ಷ ಸಮಿತಿ' ಮರಾಠಿಯ 'ದಲಿತ ಪ್ಯಾಂಥರ್ಸ' ರಂತೆ –

'ದಲಿತರು ಬಂದರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ'

ಅಂತ ಗಟ್ಟಿಯಾಗಿ ನಂಬಿವೆ. ಸಮಿತಿ' ಯಾವುದೇ ಪಕ್ಷ ರಾಜಕೀಯಕ್ಕಾಗಲಿ. ವಾದಕ್ಕಾಗಲಿ, ಬದ್ಧವಾಗಿಲ್ಲ. ಆದರೆ ಎಲ್ಲ ಪಕ್ಷ. ವಾದಗಳಲ್ಲಿರುವ ಪ್ರಗತಿಪರ ಅಂಶಗಳನ್ನು ಸ್ವಾಗತಿಸುವ 'ಸಮಿತಿ' ತನ್ನದೇ ಆದ ಆರ್ಥಿಕ-ರಾಜಕೀಯ ಸಾಮಾಜಿಕ "ಸಿದ್ಧಾಂತಗಳನ್ನು" ರೂಪಿಸುತ್ತ ದಾಪುಗಾಲು ಹಾಕುತ್ತಿದೆ. "ದಲಿತ ಸಂಘರ್ಷ ಸಮಿತಿ"ಯ [illegible]ದಿ ಹೋರಾಟಗಳಲ್ಲಿ ದಲಿತ ಸಾಹಿತಿಗಳ ಕ್ರಾಂತಿಕಾರೀ

ಗೀತೆಗಳನ್ನು, ಬೀದಿ ನಾಟಕಗಳನ್ನು ಬಳಸಿಕೊಳ್ಳಲಾಗುತ್ತಿದೆ. ಕೆಲವು ಸಮಿತಿಯ ಹೋರಾಟವನ್ನು ಚಿತ್ರಿಸಿ ಬರೆದ ಕ್ರಾಂತಿಕಾರೀ ಗೀತೆಗಳಿಗೂ ಕಡಿಮೆಯೇನಿಲ್ಲ.

ಹೀಗೆ 'ದಲಿತ ಸಂಘರ್ಷ ಸಮಿತಿ' ದಲಿತ ಸಾಹಿತಿಗಳಿಗೆ ಸಾಹಿತಿಗಳು ಸಮಿತಿಗೆ ಆಸರೆಯಾಗಿ ಬೆಳೆಯುತ್ತಿದ್ದಾರೆ.

ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ :

೧೯೭೪ ರಲ್ಲಿ ದಲಿತ ಬರಹಗಾರರಾದ ದೇವನೂರ ಮಹದೇವ, ಸಿದ್ಧಲಿಂಗಯ್ಯ, ಬಿ.ಕೃಷ್ಣಪ್ಪ. ಬರಗೂರು ರಾಮಚಂದ್ರಪ್ಪ. ಚೆನ್ನಣ್ಣ ವಾಲೀಕಾರ, ಎಸ್. ಗಣೇಶನ್, ರಾಮದೇವ ರಾಕೆ. ಇಂದೂಧರ ಹೊನ್ನಾಪೂರ, ಮುಂತಾದವರಿಂದ ಸ್ಥಾಪನೆಗೊಂಡ 'ದಲಿತ ಸಂಘರ್ಷ ಸಮಿತಿ' ೧೯೭೬ ರ ಡಿಸೆಂಬರ ೧೮ ಮತ್ತು ೧೯ ರಂದು ಪ್ರಥಮ ದಲಿತ ಸಾಹಿತ್ಯ ಸಮ್ಮೇಳನವನ್ನು ಭದ್ರಾವತಿಯಲ್ಲಿ ನಡೆಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ, ಧರ್ಮಸ್ಥಳದಲ್ಲಿ ೧೯೭೯ ರ ಮಾರ್ಚದಲ್ಲಿ ನಡೆಯಲಿದ್ದ ಸಾಹಿತ್ಯ ಸಮ್ಮೇಳನದಲ್ಲಿ 'ದಲಿತ ಸಾಹಿತ್ಯ' ಕುರಿತ ಗೋಷ್ಠಿಯನ್ನು ಏರ್ಪಡಿಸಬೇಕೆಂದು ಕವಿಗಳಾದ ಚೆನ್ನಣ್ಣ ವಾಲೀಕಾರ ಮತ್ತು ಜೋಳ ಬಂಡೆಪ್ಪ ಪತ್ರಿಕೆಗಳಿಗೆ ಹೇಳಿಕೆಯಿತ್ತರು. ಆದರೆ ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ನವ್ಯಾಚಾರಿ ಅಡಿಗರ ಪ್ರಭಾವದಲ್ಲಿದ್ದ ಹಂಪನಾಗರಾಜಯ್ಯ ದಲಿತ ಸಾಹಿತ್ಯದ ಅಸ್ತಿತ್ವವನ್ನೇ ಅಲ್ಲಗಳೆದದ್ದು; ನಂತರ ಬಾರಿಸುತ್ತಿರುವ ಎಚ್ಚರಿಕೆಯ ಗಂಟೆಯನ್ನು ಕಂಡು ಅಡಿಗಗಳನ್ನು ಕೊಡವಿ 'ದಲಿತಸಾಹಿತ್ಯ' ಕುರಿತ ಗೋಷ್ಠಿ ಏರ್ಪಡಿಸಲು ಒಪ್ಪಿಕೊಂಡಿರುವುದಾಗಿ ದಲಿತ ಸಾಹಿತಿಗಳಿಗೆ ಪತ್ರ ಬರೆದರಾದರೂ, ದೇವನೂರು, ಸಿದ್ಧಲಿಂಗಯ್ಯ, ವಾಲೀಕಾರ, ಬರಗೂರು ಮುಂತಾದವರು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಂದ ಆಹ್ವಾನಗಳನ್ನು ತಿರಸ್ಕರಿಸಿದರು.

ಬದಲಾಗಿ ೧೯೭೯ ರ ಆ ಕ್ರಾಂತಿಕಾರೀ ವರ್ಷದಲ್ಲಿ – ಧರ್ಮಸ್ಥಳದಲ್ಲಿ ಮಂಜುನಾಥನ ಕೃಪಾಶೀರ್ವಾದದಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನದ ದಿನಗಳಲ್ಲಿಯೇ, ಬೆಂಗಳೂರಲ್ಲಿ ಮೊದಲ "ಬಂಡಾಯ ಸಾಹಿತ್ಯ ಸಮ್ಮೇಳನ" ನಡೆಯಿತು. ತೆಲುಗಿನ ಖ್ಯಾತ ವಿಪ್ಲವ ಕವಿ ಶ್ರೀ ಶ್ರೀ ಶ್ರೀ ಸಮ್ಮೇಳನವನ್ನು ಉದ್ಘಾಟಿಸಿದರು. ಈ "ಬಂಡಾಯ ಸಮ್ಮೇಳನ"ದ ಮುಂಚೂಣಿಯಲ್ಲಿದ್ದವರು–ದೇವನೂರು ಮಹದೇವ. ಚೆನ್ನಣ್ಣ ವಾಲೀಕಾರ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ ಮುಂತಾದ ದಲಿತ ಸಾಹಿತಿಗಳು. ಹೀಗಾಗಿ ದಲಿತ ಸಾಹಿತ್ಯಕ್ಕೂ. ಬಂಡಾಯ ಸಾಹಿತ್ಯಕ್ಕೂ ಸಾಂಸ್ಕೃತಿಕವಾದ ನಿಕಟ ಸಂಬಂಧವಿದೆ. ಒಂದು ರೀತಿಯಿಂದ–ಬಂಡಾಯ ಸಾಹಿತ್ಯ ದಲಿತ ಸಾಹಿತ್ಯದ ಇನ್ನೊಂದು ಮುಖ ಎಂದು ಹೇಳಬಹುದು.

೧೯೮೩ ರ ಡಿಸೆಂಬರಿನಲ್ಲಿ ಧಾರವಾಡದಲ್ಲಿ ಎರಡನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ನಡೆದು ದಲಿತ ಸಾಹಿತ್ಯ ಇನ್ನಷ್ಟು ವ್ಯಾಪಕವಾಗಿ ಹಬ್ಬುತ್ತಿರುವ ಸ್ಪಷ್ಟ ಸೂಚನೆಗಳು ಸಿಗುತ್ತಿವೆ.

ಹೊಸ ಆಹ್ವಾನಗಳು:

ಡಾ. ಬಾಬಾಸಾಹೇಬ ಅಂಬೇಡ್ಕರ್‌ರ ವಿಚಾರಧಾರೆಯಿಂದ ಇಷ್ಟೆಲ್ಲ ಬದಲಾ-ವಣೆಯಾಯಿತೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ದಲಿತರ ಇಂದಿನ ಸಮಸಮಾಸಿಯ ಸಮಸ್ಯೆಗಳಿಗೆ ಅಂಬೇಡ್ಕರ್ ಅಂತಿಮ ಪರಿಹಾರ ವಲ್ಲವೆಂಬುದನ್ನು ನಾವೆಲ್ಲಾ ಬೇಗ ತಿಳಿದಷ್ಟು ಒಳ್ಳೆಯದು. ಅಂಬೇಡ್ಕರ್‌ರ ವಿಶಾಲದೃಷ್ಟಿಯನ್ನು ಯಾರೂ ಪ್ರಶ್ನಿಸಲಾರರು. ಆದರೆ ತಾನು ಕೇವಲ ಮಹಾ ರಾಷ್ಟ್ರದ ಮಹರ್ ಜನಾಂಗದ ನಾಯಕ ಮಾತ್ರ ಎಂದು ವಾಸ್ತವವನ್ನು ಒಪ್ಪಿಕೊಂಡ, ತನ್ನ ಮಿತಿಯನ್ನು ಅರಿತಿದ್ದ, ಅಂಬೇಡ್ಕರ್‌ರನ್ನು ಮೀರಿ ಬೆಳೆಯುವುದು 'ದಲಿತ ಪ್ರಜ್ಞೆ'ಗೆ ಅನಿವಾರ್ಯ ಕೂಡಾ.

ಎಪ್ಪತ್ತರ ದಶಕದ ಕೊನೆಗೆ ಕರ್ನಾಟಕದಲ್ಲಿ ಸಾಮಾಜಿಕ ಪರಿವರ್ತನೆಯ ಹೊಸ ಅಧ್ಯಾಯ ಪ್ರಾರಂಭ ಮಾಡಿದ 'ಹಾವನೂರು ವರದಿ'ಯ ಸೋಲನ್ನು ನಾವು ಸೀರಿಯಸ್ಸಾಗಿ ತೆಗೆದುಕೊಳ್ಳದೆ ಇರುವುದು, ಮುಂದೆ ನಮಗೆ ಬರಬಹುದಾದ ಸಂಕ್ರಮಣ ಸ್ಥಿತಿಯ ಮುನ್ಸೂಚನೆ ಎಂದು ನಾ ನಂಬಿರುವೆ. ಅಂಬೇಡ್ಕರ್‌ರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ 'ದಮ್ಮಳಿತ ಸಮೂಹ'ಕ್ಕೆಲ್ಲಾ ಆಸರೆಯಾಗಬೇಕೆಂದ ಹಾವನೂರ ವರದಿಯನ್ನು ಬಹುಸಂಖ್ಯಾತ ಸವರ್ಣೀಯರು ತಮ್ಮ ಲಾಭಕ್ಕೆ ತಿರುಚಿ ಕೊಂಡು, ಹೊರಳಿ ವರದಿಯ ವಿರುದ್ಧವೇ ಬೊಬ್ಬೆ ಹೊಡೆಯುತ್ತಿರುವುದು: ಇಂಥ ಸಂದರ್ಭಗಳಲ್ಲಿ ದಲಿತರೆಲ್ಲಾ ತಮಗೆ ಇದು ಸಂಬಂಧವಿಲ್ಲದವರ ಹಾಗೆ ನೀರೋನಂತೆ ಪಿಟೀಲು ಬಾರಿಸುತ್ತ ಕುಳಿತಿರುವುದು 'ಹಾವನೂರ ವರದಿ'ಯ ಐತಿಹಾಸಿಕ ಸೋಲಿಗೆ ಮುಖ್ಯ ಕಾರಣಗಳು.

ಇದಲ್ಲದೆ. ಸಾಹಿತ್ಯಿಕವಾಗಿ 'ಚೋಮನ ದುಡಿ' ಬರೆದು. ಬಹಿರಂಗವಾಗಿ ಸಂವಿಧಾನದ ಮೀಸಲಾತಿ ನೀತಿಯನ್ನು ಲೇವಡಿ ಮಾಡುವ ಶಿವರಾಮ ಕಾರಂತರಂಥ ಇಬ್ಬದಿಗಿಗಳು ಬೀಜಾಸುರರಂತೆ ಬೆಳೆಯುತ್ತಿರುವುದು, ಒಂದಿಲ್ಲೊಂದು ದಿನ ಈ ಸವರ್ಣೀಯರು ಮತ್ತೆ ಘುತ್ತೆಂದು ನಿಲ್ಲುವರೆಂಬಲ್ಲಿ ಸಂಶಯವಿಲ್ಲ.

'ದಲಿತ ಸಮಸ್ಯೆ' ಒಂದು ರೀತಿಯ ಜಾತಿಯ ಕಲಹವಾಗಿ ಕಾಣುವುದ ರೊಂದಿಗೆ ಸೂಕ್ಷ್ಮವಾಗಿ ಅದು ವರ್ಗಕಲಹವೂ ಆಗಿರೋದ್ರಿಂದ ಇಲ್ಲಿಯತನಕ ಉಪ ಯೋಗಿಸಿಕೊಂಡು ಬಂದ ಮೊಂಡ ಹತಾರಗಳನ್ನು ಎಸೆದು ನಮ್ಮದೇ ಆದ

ಸೈದ್ಧಾಂತಿಕ ಬುನಾದಿಯನ್ನು ಕಟ್ಟಿಕೊಳ್ಳುವುದು, ದಲಿತರಿಗೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯವಿದೆ.

ಜೊತೆಗೆ ಪ್ರಗತಿಪರ ವಿಚಾರಗಳ ಸೋಗು ಹಾಕಿಕೊಂಡಿರುವ, ದಲಿತರ ವಿಷಯದಲ್ಲಿ ಇನ್ನೂ ಬಾದರಾಯಣ ಕಾಲದ ದೃಷ್ಟಿಕೋನ ಇಟ್ಟುಕೊಂಡಿರುವ 'ರೈತ ಸಂಘ'ಗಳು ಮತ್ತು "ನಕ್ಸಲ್‌ವಾದಿಗಳ" ಬಗೆಗೂ ದಲಿತರು ಇಂದು ಪುನರ್ ಪರಿಶೀಲನೆ ನಡೆಸಬೇಕಾಗಿದೆ. ಇತ್ತೀಚೆಗೆ ಹಾಸನ ಜಿಲ್ಲೆಯಲ್ಲಿ ದಲಿತರ ಮೇಲೆ ರೈತ ಸಂಘದವರಿಂದ ನಡೆಯುತ್ತಿರುವ ವ್ಯಾಪಕವಾದ, ಮರಣಾಂತಿಕ ಹಲ್ಲೆಗಳು ಹಾಗೂ ಮೊನ್ನೆ ಮೊನ್ನೆ ಆಂಧ್ರದ ರಾಯಲ್ ಸೀಮೆಯಲ್ಲಿ ನಕ್ಸಲ್‌ವಾದಿಗಳಿಂದ ಹರಿಜನ ಕೃಷಿಕಾರ್ಮಿಕರ ಕಗ್ಗೊಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿರುವೆ.

ಇದಲ್ಲದೆ ನಮ್ಮವೇ ಆದ ಕೆಲವು ಕ್ಲೀಷೆಗಳಿಂದ ಕೂಡಾ ನಾವಿಂದು ಹೊರ ಬರಬೇಕಾಗಿದೆ. ವೀರಶೈವರಿಂದ 'ಬಸವಣ್ಣ' ಚಿಂದಿ ಎದ್ದಂತೆ, ದಲಿತರಿಂದ ಅಂಬೇಡ್ಕರ್ ಧ್ವಂಸವಾಗುತ್ತಿದ್ದಾರೆ. 'ಅಂಬೇಡ್ಕರ್ ವಾದ' ಬೆಳೆಯಬೇಕಾದರೆ– ಇಂದು ಅವರನ್ನು ಹೊಗಳುವ ಬದಲು, ವಸ್ತುನಿಷ್ಠವಾಗಿ ಅವರ ಸಿದ್ಧಾಂತಗಳನ್ನು ವಿಶ್ಲೇಷಿಸಿ, ಇಂದಿನ ತುರ್ತಿಗೆ ಅಗತ್ಯವಾದ ಅಂಬೇಡ್ಕರ್‌ರನ್ನು ಬಯಲಿಗೆ ನೀಡಬೇಕಾಗಿದೆ, ಅದು ಬಿಟ್ಟು ––

೧) 'ನಮ್ಮ ತಂದೆ ಅಂಬೇಡ್ಕರ್'
೨) 'ದೇಶವನ್ನಾದರೂ ಮರೆತೇವು
ಅಂಬೇಡ್ಕರ್‌ರನ್ನು ಮರೆಯಲಾರೆವು'

ಎಂಬಂಥ ಬಾಲಿಶ ಘೋಷಣೆಗಳು ಅಂಬೇಡ್ಕರ್‌ರನ್ನು ಯಾವ ಪತನದತ್ತ ಒಯ್ಯುತ್ತಿರುವವೆಂದು ಇತಿಹಾಸ ಪ್ರಜ್ಞೆಯುಳ್ಳ ಎಲ್ಲರೂ ಬಲ್ಲರು.

ದಲಿತ ಸಾಹಿತ್ಯ ಬೆಳೆಯುತ್ತಿರುವ ಫಸಲಾದುದರಿಂದ ನನ್ನ ಈ ಮಾತುಗಳೇ ಕೊನೆ ಎಂದು ಭಾವಿಸದೆ, ಅದರ ಒಲವುಗಳನ್ನು ಕುರಿತ ಒಂದು ಚಿಂತನೆ ಎಂದು ಮಾತ್ರ ಭಾವಿಸಬೇಕು.

ಅಡಿ ಟಿಪ್ಪಣಿ :

೧. ದಲಿತ ಸಾಹಿತ್ಯ ಚಳವಳಿ : ಎಸ್. ಗಣೇಶನ್ ಪುಟ – ೨
೨. ದಲಿತ ಸಾಹಿತ್ಯ: ಸಿದ್ಧಾಂತ ಆಣಿ ಸ್ವರೂಪ: ಯಶವಂತ ಮನೋಹರ ಪುಟ – ೨

ಮದ್ಯಪಾನ ಮತ್ತು ಸಮಾಜಕಾರ್ಯ

● ವೈ. ಜಿ. ಶೋಭಾದೇವಿ

ಮದ್ಯಪಾನ ಸೇವನೆಯು ಪ್ರಾಚೀನ ಕಾಲದಿಂದಲೂ ಪ್ರಪಂಚದಲ್ಲಿ ರೂಢಿಯಲ್ಲಿದೆ. ಭಾರತದಲ್ಲಿ ಮಾತ್ರವಲ್ಲದೆ ಇತರ ದೇಶಗಳಲ್ಲಿಯೂ ಮದ್ಯಸೇವನೆಯು ರೂಢಿಯಲ್ಲಿದೆ. ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಮಿತವಾದ ಕುಡಿತವನ್ನು ಎಲ್ಲಾ ಸಾಮಾಜಿಕ ಕೂಟಗಳಲ್ಲಿ ಏರ್ಪಡಿಸುತ್ತಾರೆ. ಮತ್ತೂ ಆ ದೇಶಗಳಲ್ಲಿ ಸಾಮಾಜಿಕ ಕುಡಿತವನ್ನು ಸಮಾಜವು ಅಂಗೀಕರಿಸುತ್ತದೆ.

ಭಾರತದಲ್ಲಿ, ರಾಮಾಯಣ. ಮಹಾಭಾರತ ಕಾಲದಲ್ಲಿ 'ಸುರಾಪಾನ' ಅಭ್ಯಾಸವು ಕೆಲವೇ ವರ್ಗದ ಜನರಲ್ಲಿ ಇತ್ತೆಂಬ ಉಲ್ಲೇಖಗಳಿವೆ. ಭಾರತದ ಚರಿತ್ರೆಯಲ್ಲಿಯೂ ನಮ್ಮ ರಾಜರುಗಳು ವಿದೇಶೀ ಸಂಪರ್ಕಹೊಂದಿ, ವಿದೇಶಿ ಮದ್ಯವನ್ನು ತರಿಸಿ ಸೇವಿಸುತ್ತಿದ್ದರೆಂಬುದರ ಉಲ್ಲೇಖಗಳಿವೆ. ಆದ್ದರಿಂದ ನಮ್ಮ ಆಧುನಿಕ ಸಮಾಜವು ರೂಪುಗೊಳ್ಳುವುದಕ್ಕಿಂತ ಮೊದಲಿನಿಂದಲೂ ಮದ್ಯಪಾನ ಅಭ್ಯಾಸವು ಜನರಲ್ಲಿ ಇತ್ತೆಂದು ಹೇಳಿದರೆ ತಪ್ಪಾಗಲಾರದು.

ಈ ಲೇಖನದಲ್ಲಿ ಮದ್ಯಪಾನದಿಂದ ಉಂಟಾಗುವ ಕೆಲವು ಅನುಕೂಲಕರ ಹಾಗೂ ಅನಾನುಕೂಲಕರ ಪರಿಣಾಮಗಳನ್ನು ವಿಚಾರ ಮಾಡಲಾಗಿದೆ. ಈ ಲೇಖನದ ಇನ್ನೊಂದು ಮುಖ್ಯ ಉದ್ದೇಶವೆಂದರೆ, ಮದ್ಯಪಾನದಿಂದಾಗುವ ಅನಾಹುತಗಳನ್ನು ನಿವಾರಿಸಲು ಸಮಾಜಕಾರ್ಯಕರ್ತನು ಯಾವ ರೀತಿಯಲ್ಲಿ ನೆರವಾಗಬಹುದು ಎಂಬುದರ ಬಗ್ಗೆ ವಿಚಾರ ಮಾಡಲಾಗಿದೆ.

ಮದ್ಯಸಾರವನ್ನು Ethenol (ಇಥೇನಾಲ್) ಅಥವಾ Ethyl alcohol (ಇಥೈಲ್ ಆಲ್ಕೋಹಾಲ್) ಎಂದು ಕರೆಯುತ್ತಾರೆ. ಅಮೇರಿಕದ ಆರೋಗ್ಯ. ಶಿಕ್ಷಣ ಮತ್ತು ಕಲ್ಯಾಣ ಇಲಾಖೆಯು ೧೯೭೪ ರಲ್ಲಿ 'ಮಿತವಾದ Moderate ಆಲ್ಕೋ-ಹಾಲ್ ಸೇವನೆಯು ಸಾಮಾನ್ಯವಾಗಿ ಹಾನಿಕರವಾಗುವುದಿಲ್ಲ.' ಎಂದು ಸಾರಿತು. ಆದರೆ ವಾಸ್ತವಿಕವಾಗಿ ಎಲ್ಲರೂ ಹಿತಮಿತವಾದ ರೀತಿಯಲ್ಲಿ ಕುಡಿತವನ್ನು ಪ್ರಾರಂಭಿಸಿದರೂ ಸಹ. ಶೇಕಡ ೧೦ ರಷ್ಟಾದರೂ ಜನರು ಅತಿಯಾಗಿ ಕುಡಿತವನ್ನು ಮುಂದುವರೆಸಿ. ಕೊನೆಯಲ್ಲಿ ಕುಡುಕರಾಗಿ ಪರಿವರ್ತನೆ ಹೊಂದುತ್ತಾರೆ. ಕುಡಿತದ ಚಟದಿಂದ ಮಾನವನ ವೈಯಕ್ತಿಕ. ಕೌಟುಂಬಿಕ ಮತ್ತು ಸಾಮಾಜಿಕ ಜೀವನವು ಅಸ್ತವ್ಯಸ

ಗೊಳ್ಳುತ್ತದೆ. ಅವನ ದಿನನಿತ್ಯ ಚಟುವಟಿಕೆಗಳಲ್ಲಿ, ಜೀವನ ಕ್ರಮದಲ್ಲಿ ಏರು ಪೇರಾಗುತ್ತದೆ. ತನ್ನ ಕೆಲಸಕಾರ್ಯಗಳನ್ನು ಸಮರ್ಪಕ ರೀತಿಯಲ್ಲಿ ನೆರವೇರಿಸಲು ವಿಫಲನಾಗುತ್ತಾನೆ. ಹೀಗಾಗಿ ತನ್ನ, ತನ್ನ ಸಂಸಾರದ, ಹಾಗೂ ಸಮಾಜದ ವಿಪ್ಲವ ಸ್ಥಿತಿಗೆ ಕಾರಣನಾಗುತ್ತಾನೆ. ಅದ್ದರಿಂದ ಮದ್ಯಪಾನ ಸೇವನೆಯು ಯಾವ ಮಟ್ಟದಲ್ಲಿ ಮಾನವನಿಗೆ ಹಾನಿಕರ, ಹಾಗೂ ಇವರ ಪರಿಹಾರ ಕಾರ್ಯದಲ್ಲಿ ಸಮಾಜಕಾರ್ಯ ಕರ್ತನ ಪಾತ್ರವನ್ನು ಕುರಿತು, ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಹೊರೇಸ್ (Horace) ಎಂಬ ರೋಮನ್ ಕವಿಯ ಪ್ರಕಾರ ಮದ್ಯಪಾನದಿಂದ ಮಾನವನು ಹೆಚ್ಚು ಉಲ್ಲಾಸಿತನಾಗುತ್ತಾನೆ. ಹೆಚ್ಚಿನ ಧೈರ್ಯ ಮತ್ತು ಕೆಚ್ಚನ್ನು ಹೊಂದುತ್ತಾನೆ. ಆತನ ಕಳವಳವು ಕುಗ್ಗಿ, ಅಭಿಲಾಷೆಯು ಹೆಚ್ಚುತ್ತದೆ. ಚಿಂತೆಗಳು ಕಡಿಮೆಯಾಗಿ, ಹೆಚ್ಚು ಸಂತೋಷ ಮತ್ತು ಸುಖವನ್ನು ಅವನು ಅನುಭವಿಸುತ್ತಾನೆ. ಅದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಯಾವಾಗಲೂ ಮೇಲೆ ತಿಳಿಸಿದ ರೀತಿಯಲ್ಲಿ ಉಪಯುಕ್ತವಾಗಿರುವುದಿಲ್ಲ. ಜಪಾನಿನ ಒಂದು ಗಾದೆಯಂತೆ 'ಮೊದಲು ಮನುಷ್ಯನು ಮಧ್ಯವನ್ನು ಸೇವಿಸುತ್ತಾನೆ. ನಂತರ ಮದ್ಯವು ಮದ್ಯವನ್ನು ಸೇವಿಸುತ್ತದೆ, ಕೊನೆಗೆ ಮದ್ಯವು ಮನುಷ್ಯನನ್ನು ಸೇವಿಸುತ್ತದೆ.

ಆದುದರಿಂದ ಆಲ್ಕೋಹಾಲ್ ಸೇವನೆಯು ಮೊದಲನೆಯ ಹಂತದಲ್ಲಿ ಮಾನವನಿಗೆ ಅನುಕೂಲಕರವಾದುದು. ಕ್ರಮೇಣ ಅತನಿಗೆ ಕುಡಿತದ ಮೇಲಿನ ಮಿತಿ ತಪ್ಪಿ ಮದ್ಯಕ್ಕೆ ಬಲಿಯಾಗುತ್ತಾನೆ. ಇವರಿಂದ ಕುಡಕ ತನ್ನ ಅವನತಿಗಾಗಿ ತಾನೇ ಕಾರಣನಾಗುತ್ತಾನೆ.

ಮಧ್ಯಸೇವನೆ ಮತ್ತು ಅದರಿಂದಾಗುವ ಕೆಲವು ದುಷ್ಪರಿಣಾಮಗಳು !

ಮದ್ಯಸೇವನೆಯಿಂದ ಮೊದಲಿಗೆ ವ್ಯಕ್ತಿಯು ಹಿತ-ಅನುಭವ ಹೊಂದಿದರೂ ಸಹ, ದೀರ್ಘಾವಧಿ ಸೇವನೆಯ ನಂತರ ಕುಡಿತದ ಮೇಲೆ ಹಿಡಿತ ತಪ್ಪಿದಂತೆ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ. ದುಷ್ಪರಿಣಾಮಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು. (೧) ಆಲ್ಕೋಹಾಲ್ ವಿಷಮತೆ(Alcohol Intoxication) (೨) ಆಲ್ಕೋಹಾಲಿನಿಂದ ಉಂಟಾಗುವ ಬುದ್ಧಿವಿಕಲ್ಪತೆ (Alcoholic prychorin) (೩) ತೀವ್ರ ಸಾರಾಯಿ, ವಿಭ್ರಮಿತ ಮನೋವಿಕೃತಿ, (Acute Alcoholic hallu cinoris). (೪) ಕಾರಸೋಕಾಫ್ (Karsokoffs prychorin) ವಿಕಲ್ಪತೆ.

೧. **ಆಲ್ಕೊಹಾಲ್ ವಿಷಮತೆ** (Alchoholic Intoxication) :– ಜೆ.ಸಿ. ಕೋಲ್ಮನ್ (೧೯೭೬)ಮನುಷ್ಯನ ರಕ್ತದಲ್ಲಿ ಆಲ್ಕೋಹಾಲ್ ಅಂಶ ಶೇಕಡಾ ೦·೧ಕ್ಕಿಂತ ಹೆಚ್ಚಾದಾಗ ಅವನ ಸ್ನಾಯು ಹಾಗೂ ಅಂಗಾಂಗಗಳ ಸಂಘಟನೆ, (Muscular

& organ Coordination) ಮಾತು (Speech) ಮತ್ತು ದೃಷ್ಟಿಯು ಕೆಳಮಟ್ಟ ವಾಗುತ್ತವೆ. ಈ ಸ್ಥಿತಿಯಲ್ಲಿ ಅವನನ್ನು ಮತ್ತೇರಿದವನೆಂದು (intoxication) ಎಂದು ಕರೆಯುತ್ತೇವೆ. ಮತ್ತೇರಿದಾಗ ಮನುಷ್ಯನ ವಿವೇಚನಾ ಶಕ್ತಿ (judgement) ಮತ್ತು ಆತ್ಮಸಂಯಮ (Self Control) ಕುಂಠಿತವಾಗುತ್ತದೆ. ಅವನ ಅಸಂಸ್ಕೃತ ಆವೇಗ (Primitive Impulses)ವು ಸಹಾ ಜಾಗೃತವಾಗುತ್ತದೆ. ಹೀಗಾಗಿ, ಮತ್ತೇರಿ ಕುಡಿದವನು ಹಿಂಸೆ, ಕೊಲೆ, ಸುಲಿಗೆ ಮತ್ತು ಬಲಾತ್ಕಾರ (rape) ಮುಂತಾದ ಹೀನ ಕೆಲಸಗಳಲ್ಲಿ ತೊಡಗುತ್ತಾನೆ. ಅಮಲಿನಲ್ಲಿ ತಾನೇ ಎಲ್ಲರಿ-ಗಿಂತಲೂ ಉತ್ತಮ ಎಂಬ ಮೇಲರಿಮೆ ಮೂಡುತ್ತದೆ. ಇದರಿಂದಾಗಿ ಅವನಿಗೆ ಅರೆ ಘಳಿಗೆ ತನ್ನ ದುಃಖವನ್ನು ಮರೆಯಲು ಸಹಾಯಕವಾಗುತ್ತದೆ. ಮಾನವನ ರಕ್ತದಲ್ಲಿ ಆಲ್ಕೋಹಾಲಿನ ಅಂಶ ಶೇಕಡಾ ೦.೫. ರಷ್ಟು ಹೆಚ್ಚಾದಾಗ ಅವನ ನರಮಂಡಲದ ಸಮತೋಲನ (balance) ತಪ್ಪಿ ಅವನು ಸಾವನ್ನಪ್ಪುತ್ತಾನೆ.

೨. ಆಲ್ಕೋಹಾಲಿನಿಂದ ಉಂಟಾಗುವ ಬುದ್ಧಿವಿಕಲ್ಪತೆ (Alcoholic prychorin) : ಬುದ್ಧಿವಿಕಲ್ಪತೆಯು ದೀರ್ಘಕಾಲದ ಅತಿಯಾದ ಮದ್ಯಪಾನದಿಂದ ಬರಬಹುದು, ಅಥವಾ ಮೆದುಳು ಹುಣ್ಣಿನಿಂದ (brain lesion)ಉಂಟಾಗಬಹುದು. ಇದನ್ನು ಸಾಮಾನ್ಯವಾಗಿ ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು.

i) ವಿಕಾರಾತ್ಮಕ ಮತ್ತತೆ (Pathological intoxication)

ii) ನಡುಕ ಸನ್ನಿ (Delirium Tremeus)

ii) ತೀವ್ರ ಸರಾಯಿ ಭ್ರಮೆ, (Acute Alcoholic hallucinoris)

iv) ಕಾರ್ಸೋಕಾಫ್ ಬುದ್ಧಿವಿಕಲ್ಪತೆ (Karsokaff's prychorin)

i) ವಿಕಾರಾತ್ಮಕ ಮತ್ತತೆ : ಅತಿ ಮದ್ಯ ಸೇವನೆಯಿಂದ ಮಾನವನಲ್ಲಿ ವಿಪರೀತ ಪ್ರತಿಕ್ರಿಯೆ (acute reaction) ಉಂಟಾಗುತ್ತದೆ. ಇದನ್ನು ವಿಕಾರಾತ್ಮಕ ಮತ್ತತೆಯೆಂದು ಕರೆಯಲಾಗಿದೆ. ಸಾಮಾನ್ಯವಾಗಿ ಈ ತೊಂದರೆಯು ಅಸ್ಥಿರ ವ್ಯಕ್ತಿತ್ವ (curtable personalities) ದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಒಮ್ಮೊಮ್ಮೆ ದಣಿವು (erchaustios) ಮಾನಸಿಕ ಒತ್ತಡ. ಮತ್ತಿತರ ತೊಂದರೆ-ಗಳಿಂದ ಬಳಲುತ್ತಿರುವ ವ್ಯಕ್ತಿಯು ಮಿತವಾದ ಮದ್ಯ ಸೇವನೆ ಮಾಡಿದಾಗ್ಯೂ ಈ ರೀತಿಯ ಮಾನಸಿಕ ಅಸ್ತವ್ಯಸ್ತತೆಗೊಳಗಾಗುತ್ತಾನೆ. ಈ ವೇಳೆಯಲ್ಲಿ ಅವನು ವಿಧ್ವಂಸ ಕೃತ್ಯಗಳಲ್ಲಿ ತೊಡಗಬಹುದು. ಈ ತೆರನಾದ ಅಸ್ತವ್ಯಸ್ತತೆ (Confused State)ಯ ನಂತರ ಅವನು ದೀರ್ಘವಾಗಿ ನಿದ್ರಿಸುತ್ತಾನೆ. ನಂತರ ಅವನಿಗೆ ಹಿಂದೆ ನಡೆದ ಘಟನೆಯ ಬಗ್ಗೆ ಅರಿವೇ ಇರುವುದಿಲ್ಲ.

ii) ನಡುಕ ಸನ್ನಿ (Delirium tremens) :ನಡುಕ ಸನ್ನಿಯನ್ನು ಅಪಗಮನ ಲಕ್ಷಣವೆಂದು (Withdrawal Symptoms) ಎಂದು ಕರೆಯಲಾಗಿದೆ. ಇದು ಬಹು ಕಾಲದಿಂದ ವಿಪರೀತ ಮದ್ಯಪಾನವನ್ನು ಮಾಡುತ್ತಿದ್ದು. ಒಮ್ಮೆಗೇ ಸೇವನೆಯನ್ನು ನಿಲ್ಲಿಸಿದ ವ್ಯಕ್ತಿಯಲ್ಲಿ ಕಂಡು ಬರುವ ಸ್ಥಿತಿ. ಸಾಮಾನ್ಯವಾಗಿ ಎಲ್ಲಾ ಕುಡುಕರು ಈ ವಿಕಲ್ಪಸ್ಥಿತಿಯನ್ನು ಅನುಭವಿಸುತ್ತಾರೆ. ಈ ಸ್ಥಿತಿಯು ನಿದ್ರಾಹೀನತೆ, ಮತ್ತು ಅಶಾಂತತೆ (restlessness) ಯಿಂದ ಪಾರಂಭವಾಗುತ್ತದೆ. ಇದರ ಮುಖ್ಯ ಲಕ್ಷಣಗಳೆಂದರೆ (ಅ) ನೆಲೆ ಪರಿಜ್ಞಾನದ ಅಭಾವ (Disorientation to time & place) (ಬ) ವಿಶದ ಭ್ರಾಂತಿ (Vivid hallucinations (ಕ) ತೀವ್ರಭಯ (Acute fear) (ಇ) ಉತ್ಕಟ ಸೂಚನತ್ವ (extreme suggestibility) (ಉ) ಕೈ, ನಾಲಿಗೆ, ತುಟಿಗಳ ಕಂಪನ (tremor of head tongue & lips) (ಊ) ಜೆವರಿಕೆ, ಜ್ವರ, ಉಲ್ಬಣ ಹೃದಯ ಬಡಿತ, ದುರ್ವಾಸನೆ, ಇತ್ಯಾದಿ.

ಈ ಲಕ್ಷಣಗಳು ಸಾಮಾನ್ಯವಾಗಿ ಒಂದು ವಾರದವರೆಗೆ ಕಂಡು ಬರುತ್ತದೆ. ಚಿಕಿತ್ಸೆಯಿಂದ ವ್ಯಕ್ತಿಯು ಮಾಮೂಲು ಸ್ಥಿತಿಗೆ ಬರುತ್ತಾನೆ, ಹಾಗೂ ಅವನು ಕಾಯಿಲೆಯ ಭಯದಿಂದ ಕೆಲವು ದಿನಗಳ ವರೆಗೆ ಕುಡಿಯುವುದನ್ನು ನಿಲ್ಲಿಸಿದರೂ ಸಹ. ಅಭ್ಯಾಸ ಬಲದಿಂದ ಮತ್ತೆ ಕುಡಿತ ಪ್ರಾರಂಭಿಸುತ್ತಾನೆ. ಹೀಗಾಗಿ ಕೆಲ ದಿನಗಳ ನಂತರ ನಡುಕಸನ್ನಿಗೆ ಮತ್ತೆ ಬಲಿಯಾಗುತ್ತಾನೆ. ಈ ಸ್ಥಿತಿಯಲ್ಲಿ ವ್ಯಕ್ತಿಯು ಸಾವನ್ನಪ್ಪಲೂಬಹುದು.

೩. ತೀವ್ರ ಸಾರಾಯಿ ವಿಭ್ರಮಿತ ಮನೋವಿಕೃತಿ (Acute alcoholic hallucination)ಇಲ್ಲಿ ವ್ಯಕ್ತಿಯು ಶ್ರವಣ ವಿಭ್ರಮೆ (auditor hallucination) ಯನ್ನು ಹೊಂದಿರುತ್ತಾನೆ. ಪ್ರಾರಂಭದಲ್ಲಿ ಆವನಿಗೆ ಸರಳವಾದ ಮಾತುಗಳು ಕೇಳುತ್ತಿದ್ದರೂ ಕ್ರಮೇಣ ತುಂಬಾ ಜನರು ಮಾತನಾಡುವಂತೆ ಭ್ರಮಿಸುತ್ತಾನೆ. ಮತ್ತು ಆ ಮಾತುಗಳು ಹೆಚ್ಚಾಗಿ ಅವನ 'ಲೈಂಗಿಕ ಜೀವನ'ದ ಬಗ್ಗೆ ಸಂಭಂದಿಸಿರುತ್ತದೆ. ಈ ಸ್ಥಿತಿಯಲ್ಲಿ ಕುಡುಕನು ತನ್ನನ್ನು ಜನರು ಬಯ್ಯುತ್ತಿರುವಂತೆಯೂ. ಹೊಡೆಯಲು ತಯಾರಾಗಿರುವಂತೆಯೂ ಭಾವಿಸುತ್ತಾನೆ. ಈ ತೆರನಾದ ಅನುಭವ ದಿಂದ ಆತನು ಭಯಗ್ರಸ್ಥನಾಗಿ ಕೆಲವು ವೇಳೆ ಆತ್ಮಹತ್ಯೆಯನ್ನು ಮಾಡಿಕೊಳ್ಳಬಹುದು.

೪. ಕೊರ್ಸೊಕಾಫ್ ವಿಕಲ್ಪತೆ (Korsakoffs prychosis) : ಈ ರೋಗದ ಮುಖ್ಯ ಲಕ್ಷಣವೆಂದರೆ ವ್ಯಕ್ತಿಯಲ್ಲಿ ಜ್ಞಾಪಕ ಶಕ್ತಿ ಕುಂದುತ್ತದೆ. ರೋಗಿಯು ಪ್ರಸ್ತುತ ಕ್ರಿಯೆಗೂ, ಮಾತಿಗೂ ಹೊಂದಾಣಿಕೆ ಕಂಡು ಬರುವುದಿಲ್ಲ. ಆದ್ದರಿಂದ ಅವನ ಹೇಳಿಕೆಗಳು ಸುಳ್ಳಾಗಿ ಕಾಣಬಹುದು. ಅಲ್ಲದೆ ರೋಗಿಯು ಉನ್ಮತ್ತ ಮತ್ತು ಭ್ರಮಾಪೂರಿತನಾಗಿಯೂ, (delirious) ಹಾಗೂ ನೆಲೆ ಪರಿಜ್ಞಾನ ಇಲ್ಲದವನಾಗಿಯೂ

ಕಾಣಬಹುದು, (Delirious disoriented & nallucination) ಈ ಕಾಯಿಲೆಗೆ ಮುಖ್ಯವಾಗಿ ವ್ಯಕ್ತಿಯಲ್ಲಿಯೇ ಕುಡಿತದಿಂದ ಉಂಟಾಗುವ ವಿಟಮಿನ್ 'B' ಯ ಅಭಾವವೇ ಕಾರಣ. ರಷ್ಯಾದ ಮನೋಶಾಸ್ತ್ರಜ್ಞ ಕಾರ್ಸ್ಕೋಕಾಫ್ (Korsokoff) ಎಂಬುವವನು, ಕಂಡು ಹಿಡಿದಿದ್ದರಿಂದ ಅವನ ಹೆಸರಿನಲ್ಲೆ ಈ ಲಕ್ಷಣಗಳನ್ನು ಗುರುತಿಸಲಾಗಿದೆ. ಸೂಕ್ತ ಚಿಕಿತ್ಸೆಯಿಂದ ರೋಗಿಯು ಗುಣಹೊಂದಬಹುದು.

ಮದ್ಯಪಾನವು ಎಲ್ಲರಲ್ಲಿಯೂ ಒಂದೇ ರೀತಿಯ ಪರಿಣಾಮವನ್ನು ಬೀರುವುದಿಲ್ಲ. ಮದ್ಯಪಾನದ ದುಷ್ಪರಿಣಾಮಗಳು ಕುಡಿಯುವ ವ್ಯಕ್ತಿಯ ವ್ಯಕ್ತಿತ್ವ, ದೇಹದ ಸ್ಥಿತಿ, ಆಹಾರ ಸೇವನೆ, ಕುಡಿತದ ಅವಧಿ ಮತ್ತು ಪದ್ಧತಿಗಳನ್ನು ಅವಲಂಬಿಸಿರುತ್ತದೆ.

ಮದ್ಯಪಾನ ಚಟಕ್ಕೆ ಕಾರಣಗಳು :

ಮದ್ಯಪಾನ ಚಟಕ್ಕೆ ನಿಕಟವಾಗಿ ಒಂದೇ ಒಂದು ಸಂಗತಿ ಕಾರಣವೆಂದು ಹೇಳಲಾಗುವುದಿಲ್ಲ. ವ್ಯಕ್ತಿಯು ನಾನಾ ಕಾರಣಗಳಿಂದ ಕುಡುಕನಾಗಿ ಪರಿವರ್ತಿತನಾಗುತ್ತಾನೆ. ಮದ್ಯಪಾನಚಟವು ಮಾನವನ ೧) ದೈಹಿಕ ೨) ಮಾನಸಿಕ ೩) ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಕ (factor) ಗಳಿಂದ ರೂಪಿತಗೊಳ್ಳುತ್ತದೆ. ಜೆ. ಸಿ. ಕೋಲ್ಮನ್ (೧೯೭೬) ಇಲ್ಲಿ ನಾವು ಒಬ್ಬ ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಕ್ರಿಯೆಗಳು ಮದ್ಯಪಾನವನ್ನು ಅವಲಂಬಿಸಿದ್ದರೆ ಮಾತ್ರ ಅವನನ್ನು ಕುಡುಕ ((alcoholic) ನೆಂದು ಕರೆಯುತ್ತೇವೆ. ಆದ್ದರಿಂದ ಒಮ್ಮೊಮ್ಮೆ ಸಾಮಾಜಿಕ ಸಮಾರಂಭ, ಸತ್ಕಾರಕೂಟ, ಅಥವಾ ವಿಶೇಷ ಸಂದರ್ಭದಲ್ಲಿ ಹಿತಮಿತವಾಗಿ ಕುಡಿಯುವವರನ್ನು ಕುಡುಕರೆಂದು ಕರೆಯಲಾಗುವುದಿಲ್ಲ. ಈ ವರ್ತನೆಯನ್ನು ಸ್ವಾಭಾವಿಕವೆಂದು ಹೇಳಬಹುದು. ಆದ್ದರಿಂದ ಮುಂದಿನ ಸಾಲುಗಳಲ್ಲಿ ಕುಡಿತದ ಚಟಕ್ಕೆ ವಿವಿಧ ಕಾರಣಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೧) **ಜೈವಿಕ ಕಾರಣಗಳು (Biological factor) :–** ಕುಡಿಯುವ ಅಭ್ಯಾಸವಿರುವವರಲ್ಲಿ ದೀರ್ಘಾವಧಿ ಸೇವನೆಯ ನಂತರ, ಮದ್ಯಸಾರದ ಸಂಯಮ ಮಟ್ಟವು ಹೆಚ್ಚುತ್ತದೆ. ಕ್ರಮೇಣ ಅವನು ಹೆಚ್ಚಿನ ಪ್ರಮಾಣದಲ್ಲಿ ಮದ್ಯಸೇವನೆ ಪ್ರಾರಂಭಿಸುತ್ತಾನೆ. ಈ ಸ್ಥಿತಿಯಲ್ಲಿ ವ್ಯಕ್ತಿಯು ಕುಡಿಯುವುದನ್ನು ನಿಲ್ಲಿಸಿದರೆ ನಡುಕ ಸನ್ನಿಯ ಲಕ್ಷಣಗಳು ಕಂಡುಬರುತ್ತವೆ. ತನ್ನ ದೈಹಿಕ ಸ್ಥಿತಿಯನ್ನು ಮೂಲ ಸ್ಥಿತಿಗೆ ತರಲು ಅವನು ಪುನ: ಮದ್ಯಸಾರದ ಮೊರೆಹೋಗುತ್ತಾನೆ. ಹೀಗಾಗಿ ಆ ವ್ಯಕ್ತಿಯು ಮದ್ಯಸೇವನೆಯನ್ನು ಮಾನಸಿಕವಾಗಿ ಬಿಡಬೇಕೆಂದರೂ ಅವನ ದೈಹಿಕ ಸ್ಥಿತಿಯು ಮದ್ಯಸೇವನೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈ ಸ್ಥಿತಿಯಿಂದಾಗಿ ಕುಡುಕನು ಮದ್ಯಪಾನದ ಬಲೆಯಿಂದ ಬಿಡಿಸಿಕೊಳ್ಳಲಾಗದೆ ತೊಳಲಾಡುತ್ತಾನೆ. ಈ ಮಟ್ಟದಲ್ಲಿ ಮದ್ಯಸಾರವು ಮನುಷ್ಯನನ್ನು ಸೇವಿಸುತ್ತದೆ ಎಂದರೆ ತಪ್ಪಾಗಲಾರದು.

ಅನುವಂಶಿಕ ಕಾರಣಗಳನ್ನು ಕಂಡುಹಿಡಿಯಲು ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ. Goodwin et al (1973) ರವರ ಇತ್ತೀಚಿನ ವರದಿಯ ಪ್ರಕಾರ, ಕುಡುಕರಲ್ಲದ ತಂದೆ ತಾಯಿಗಳ ಮಕ್ಕಳಿಗೆ ಹೋಲಿಸಿದಾಗ ಪರಿಸರ ನಿರ್ಮಲ-ವಾಗಿದ್ದಾಗೂ ಕುಡುಕ ತಂದೆ ತಾಯಿಯರ ಮಕ್ಕಳಲ್ಲಿ ೩೦ನೇ ವಯಸ್ಸಿನ ನಂತರ ಎರಡು ಪಟ್ಟು ಹೆಚ್ಚಾಗಿ ಮದ್ಯಸೇವನೆ ಕಂಡು ಬರುತ್ತದೆ. ಆದರೆ ಸಮಾಜದಲ್ಲಿ ಎಲ್ಲ ಕುಡುಕರ ತಂದೆ ತಾಯಿಯರು ಕುಡುಕರಲ್ಲದೇ ಇರುವುದು ಅಡ್ಡನಿಲುವಾಗಿ (Contradiction) ಕಾಣುತ್ತದೆ. ಆದ್ದರಿಂದ ನೇರವಾಗಿ ಅನುವಂಶಿಕತೆ ಕುಡಿತಕ್ಕೆ ಕಾರಣವೆಂದು ಹೇಳಲಾಗದಿದ್ದರೂ ಅದು ಒಂದು ಮುಖ್ಯವಾದ ಪೂರ್ವಪ್ರವರ್ತಕ (Predisposing factor) ಕಾರಕವೆಂದು ಪರಿಗಣಿಸಬಹುದು.

ಮಾನಸಿಕ ಮತ್ತು ಅಂತರ್ ವ್ಯಕ್ತಿಯ ಸಂಬಂಧಗಳ ಕಾರಣಗಳು (Psycho logical and inter personal factors) ಕುಡುಕನು ದೈಹಿಕವಾಗಿ ಮದ್ಯಪಾನದ ಮೇಲೆ ಅವಲಂಬಿತನಾಗುವವನಲ್ಲದೆ, ಮಾನಸಿಕವಾಗಿಯೂ ಮದ್ಯ ಸೇವನೆಯ ಮೇಲೆ ಅವಲಂಭಿತನಾಗುತ್ತಾನೆ. ಅನೇಕ ಮಾನಸಿಕ ಹಾಗೂ ಅಂತರ್ ವ್ಯಕ್ತಿ ಪರಸ್ಪರ ಸಂಬಂಧಗಳು ಇದಕ್ಕೆ ಕಾರಣವೆಂದು ಹಲವಾರು ಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ. ಇವುಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು. (ಅ) ಮಾನಸಿಕ ವೇದ್ಯತೆ (Psychological vulnerability) (ಬ) ಒತ್ತಡ, ಬಿಕ್ಕಟ್ಟು ಇಳಿಕೆ ಮತ್ತು ಪುನರ್ಬಲನ (Stress, tension reduc ion ard Reinforcement) (ಕ) ದಾಂಪತ್ಯ ಹಾಗೂ ಇನ್ನಿತರ ನಿಕಟ ಸಂಬಂಧಗಳು (Marital and other int imate relationships)

ಮಾನಸಿಕ ವೇದ್ಯತೆ :- ಈ ತತ್ವದ ಪ್ರಕಾರ 'ಕುಡುಕ ವ್ಯಕ್ತಿತ್ವ'ವೇ ಕುಡಿತ ಚಟಕ್ಕೆ ಕಾರಣವೆಂದು ತಿಳಿಯುತ್ತದೆ. ಈ ತತ್ವದಲ್ಲಿ ಕುಡುಕನು ತನ್ನ ಮದ್ಯಪಾನ 'ಪೂರ್ವ ವ್ಯಕ್ತಿತ್ವ'ದಲ್ಲಿ ಸಾಮಾನ್ಯವಾಗಿ ಮನೋಭಾವ ಅಪಕ್ವತೆ(emotional immaturity)ಹೊಂದಿ ಅತಿಆಸೆ ಆಕಾಂಕ್ಷಿಗಳಾಗಿ, ಸೋಲನ್ನು ಧೈರ್ಯದಿಂದ ಎದುರಿಸಲಾರದೆ, ತನ್ನ ಮೇಲೆ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಇಲ್ಲಿ ಕುಡಿತವನ್ನು ಒಂದು ಸಮಾಜ ವಿರೋಧಿವ್ಯಕ್ತಿತ್ವ ಮತ್ತು ಖಿನ್ನತೆಗಳಿಂದ ಉಂಟಾಗುತ್ತದೆ ಎಂದು ತಿಳಿಯಬಹುದು. ಆದರೆ ಇಲ್ಲಿಯೂ ಸಹ 'ಮದ್ಯಪಾನ ಪೂರ್ವ ವ್ಯಕ್ತಿತ್ವವೇ' ನೇರ ಕಾರಣವೆಂದು ಹೇಳಲಾಗುವುದಿಲ್ಲ. ಏಕೆಂದರೆ ಎಲ್ಲಾ ಕುಡುಕರೂ ಒಂದೇ ವ್ಯಕ್ತಿತ್ವವನ್ನು ತೋರಿಸುವುದಿಲ್ಲ, ಮತ್ತು ಎಲ್ಲಾ ಕುಡುಕರೂ.... Pre alcoholic personality ಲಕ್ಷಣಗಳನ್ನು ಹೊಂದಿರುವುದಿಲ್ಲ. ಆದುದರಿಂದ ಈ ತತ್ವದ ಬಗ್ಗೆ ಇನ್ನೂ ಹೆಚ್ಚಿನ ಅಭ್ಯಾಸದ ಅವಶ್ಯಕತೆ ಇದೆ.

(ಬ) ಒತ್ತಡ, ಬಿಕ್ಕಟ್ಟು ಇಳಿಕೆ ಮತ್ತು ಪುನರ್ಬಲನ: -

ಷಾಫರ (Shaffer) (1971)ನ ಪ್ರಕಾರ ಕುಡಿತವು "ಕಳವಳಕ್ಕೆ ನಿಶ್ಚಿತ ಪ್ರತಿಕ್ರಿಯೆ". (Conditioned response to anxiety) ಎಂದು ತಿಳಿಯಲಾಗಿದೆ. ಇಲ್ಲಿ ವ್ಯಕ್ತಿಯು ಮದ್ಯಸಾರ ಸೇವನೆಯಿಂದ ತನ್ನ ಕಷ್ಟ ಮತ್ತು ತೊಂದರೆಗಳಿಂದ ಹೊರಬಂದವನಂತೆ ಅನುಭವಪಡುತ್ತಾನೆ. ಈ ಅನುಭವವು ಅವನ ಮುಂದಿನ ಯಾವುದೇ ಕಷ್ಟ ಪರಿಸ್ಥಿತಿಯಲ್ಲಿ ಮದ್ಯಸೇವನೆಗೆ ಅವನನ್ನು ಪ್ರಚೋದಿಸುತ್ತಿದೆ. ಹೀಗೆ, ಅವನಲ್ಲಿ ಮದ್ಯಸಾರವು ಆಸರೆಯಾಗಿ ಅವತರಿಸಿ, ಅವನನ್ನು ಕುಡುಕನಾಗಿ ಪರಿವರ್ತಿಸುತ್ತದೆ.

(ಕ) ದಾಂಪತ್ಯ ಹಾಗೂ ಇನ್ನಿತರ ನಿಕಟ ಸಂಬಂಧಗಳು :-

ಒಮ್ಮೊಮ್ಮೆ ದಾಂಪತ್ಯವಿರಸ, ಮತ್ತು ಬಾಳಿನಲ್ಲಿ ಬರುವ ಪರ್ವಕಾಲದ ತೊಂದರೆಗಳು ಮದ್ಯಸೇವನೆಗೆ ಕಾರಣವಾಗುತ್ತವೆ. ಇದರಿಂದಾಗಿ ಪರಸ್ಪರ ಸಂಪರ್ಕವು ಕುಟುಂಬ ಸದಸ್ಯರಲ್ಲಿ ಮತ್ತಷ್ಟು ಕೆಡುತ್ತದೆ. ಈ ವಿರಸವು ಅವನಲ್ಲಿ ಕುಡಿತವನ್ನು ಹೆಚ್ಚಿಸುತ್ತದೆ. ಹೀಗೆ ಈ ವಿಷವರ್ತುಲವು ಸಾಗಿ ಕುಡುಕನು ಬಾಳಿನಲ್ಲಿ ಪೂರ್ತಿಯಾಗಿ ನಿರ್ನಾಮವಾಗುತ್ತಾನೆ, ಇದರಿಂದ ಕೌಟುಂಬಿಕ ಸಮಸ್ಯೆಗಳು ವಿಪರೀತವಾಗುತ್ತದೆ.

೩. **ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳು:** ಸಾಮಾಜಿಕ ಕಾರಣಗಳೂ ಸಹ ಕುಡಿತಕ್ಕೆ ಕಾರಣವೆನ್ನಬಹುದು. ಯಾಕೆಂದರೆ ಪಾಶ್ಚಾತ್ಯ ದೇಶಗಳಲ್ಲಿ ಇರುವಷ್ಟು ಮದ್ಯಸೇವನೆಯ ಚಟ ನಮ್ಮ ದೇಶದಲ್ಲಿ ಕಂಡುಬರುವುದಿಲ್ಲ. ನಾವು ಕಾಫಿ, ನೀರು, ಇತರ ಮೃದು ಪಾನೀಯವನ್ನು ಸೇವಿಸುವಂತೆ ಅಲ್ಲಿ ಮದ್ಯಸಾರವನ್ನು ಸೇವಿಸುತ್ತಾರೆ. ಬೇಲ್ಸ್(೧೯೪೬)ನ ಪ್ರಕಾರ ಒಂದು ಸಮಾಜದ ಕುಡಿತದ ಮಟ್ಟವನ್ನು ನಿರ್ಧರಿಸಲು ಮೂರು ಸಾಂಸ್ಕೃತಿಕ ಕಾರಣಗಳು ಆಧಾರವಾಗುತ್ತವೆ.

ಅ) ಸಂಸ್ಕೃತಿಯಿಂದ ಉಂಟಾದ ಒತ್ತಡ ಮತ್ತು ಆಂತರಿಕ ಬಿಕ್ಕಟ್ಟು.
ಬ) ಮದ್ಯಪಾನದ ಬಗ್ಗೆ ಸಮಾಜದಲ್ಲಿರುವ ಭಾವನೆ, ಮತ್ತು
ಕ) ಸಮಾಜದಲ್ಲಿ ಕ್ಲಿಷ್ಟ ಸ್ಥಿತಿ ಮತ್ತು ಕಳವಳ ಸ್ಥಿತಿಯನ್ನು ಎದುರಿಸಲು ದೊರೆಯುವ ಬದಲಿ (Substitute)ಸೌಕರ್ಯಗಳು.

ಈ ಮೇಲಿನ ತತ್ವದಂತೆ ಭಾರತದಲ್ಲೂ ಇತ್ತೀಚೆಗೆ ಯುವಕರಲ್ಲಿ ಬೆಳೆಯುತ್ತಿರುವ, ಮದ್ಯಪಾನ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಮುಖ್ಯವಾಗಿ ನಮ್ಮ ಸಾಮಾಜಿಕ ವ್ಯವಹಾರಗಳಲ್ಲಿ ಹೆಚ್ಚುತ್ತಿರುವ ಪಾಶ್ಚಿಮಾತ್ಯತೆಯ ಅನುಕರಣೆ. ಜೀವನದಲ್ಲಿ ಹೆಚ್ಚುತ್ತಿರುವ ಕ್ಲಿಷ್ಟತೆ, ಮತ್ತು ತೀವ್ರವಾಗಿ ಬದಲಾಗುತ್ತಿ

ರುವ ಕೌಟುಂಬಿಕ ಹಾಗೂ ಆಪ್ತ ಸಂಪರ್ಕಗಳು, ಹೆಚ್ಚುತ್ತಿರುವ ಕುಡುಕರ ಸಂಖ್ಯೆಗೆ ಕಾರಣವೆನ್ನಬಹುದು.

ಮದ್ಯಪಾನ ಚಿಕಿತ್ಸೆ:- ಕುಡಿತ ಚಟವು ನಾನಾ ಕಾರಣಗಳಿಂದ ರೂಪುಗೊಂಡಿರುವುದರಿಂದ ನಾನಾ ರೀತಿಯ ಚಿಕಿತ್ಸೆಗಳನ್ನು ಕುಡುಕನಿಗೆ ಮದ್ಯಸಾರದ ಸೆರೆಯಿಂದ ಹೊರಬರಲು ಉಪಯೋಗಿಸಬೇಕಾಗುತ್ತದೆ, ಚಿಕಿತ್ಸಾ ವಿಧಾನಗಳನ್ನು ಮೂರು ಭಾಗಗಳನ್ನಾಗಿ ಮಾಡಬಹುದು. (೧) ದೈಹಿಕ, (೨) ಮಾನಸಿಕ, (೩) ಸಾಮಾಜಿಕ. ಜೆ. ಸಿ. ಕೋಲ್ಮನ್ (೧೯೭೬).

(೧) **ದೈಹಿಕ ಮಾದರಿ ಚಿಕಿತ್ಸೆ :-** ಒಬ್ಬ ಕುಡುಕನು ನಡುಕಸನ್ನಿ ಮತ್ತು ಮದ್ಯಸಾರದ ವಿಷಮತೆಯಿಂದ ನರಳುತ್ತಿದ್ದರೆ ಅವನನ್ನು ಆಸ್ಪತ್ರೆಯಲ್ಲಿ ಸೇರಿಸಿ, ಆ ಲಕ್ಷಣಗಳನ್ನು ಔಷಧಗಳ ಮೂಲಕ ನಿವಾರಿಸುವುದು ಮೊದಲ ಕರ್ತವ್ಯವಾಗಿದೆ. ಈ ತುರ್ತ ಚಿಕಿತ್ಸೆಯ ನಂತರ ಅವನ ಮಾನಸಿಕ ಮತ್ತು ಸಾಮಾಜಿಕ ತೊಂದರೆಗಳನ್ನು ಪರಿಶೀಲಿಸಿ ಸೂಕ್ಷ್ಮ ಮಾರ್ಗದರ್ಶನ ನೀಡಬೇಕಾಗುತ್ತದೆ.

ವಿಮುಖತೆ ಚಿಕಿತ್ಸೆ (Aversion Thsrapy)ಯು ಇನ್ನೊಂದು ಬಗೆಯ ವೈದ್ಯಕೀಯ ಚಿಕಿತ್ಸೆಯಾಗಿದೆ. ಈ ಚಿಕಿತ್ಸೆಯನ್ನು ಪಡೆಯುತ್ತಿರುವ ವ್ಯಕ್ತಿಯು, ಮದ್ಯಸಾರ ಸೇವಿಸಿದರೆ ವಿಪರೀತ ಅಹಿತಕರ ಪರಿಣಾಮಗಳು ರೋಗಿಯಲ್ಲಿ ಕಾಣುತ್ತವೆ. ಇದರಿಂದ ಅವನಿಗೆ ಮದ್ಯಸಾರದ ಮೇಲೆ ವಿಮನಸ್ಕತೆ ಉಂಟಾಗಿ, ಪಾನೀಯದ ಮೇಲೆ ಮೋಹ ಕಡಿಮೆಯಾಗಿ ಸಾಮಾನ್ಯ ಸ್ಥಿತಿಗೆ ಬರುತ್ತಾನೆ. ನಂತರ ಅವನು ಮದ್ಯಸೇವನೆ ಮಾಡದೆ ಸಾಮಾನ್ಯ ಮನುಷ್ಯನಾಗಿ ಬಾಳಲು ಶಕ್ತನಾಗುತ್ತಾನೆ.

ಮೆದುಳು ಶಸ್ತ್ರ ಚಿಕಿತ್ಸೆಯನ್ನು ಕೆಲವುಬಾರಿ ಮಾಡಬೇಕಾಗುತ್ತದೆ ಆದರೆ ಈ ಪದ್ಧತಿಯನ್ನು ಕೊನೆಯ ಅಸ್ತ್ರವನ್ನಾಗಿ ಮಾತ್ರ ಉಪಯೋಗಿಸುತ್ತಾರೆ.

೨) **ಮಾನಸಿಕ ಚಿಕಿತ್ಸೆ :–** ಮನೋವಿಜ್ಞಾನಿಗಳ ಪ್ರಕಾರ ಕುಡಿತವು ಒಂದು ಕಲಿತವರ್ತನೆ. ಪರಿವರ್ತನೆ (behaviour Modification) ಕ್ರಮಗಳನ್ನು ಉಪಯೋಗಿಸಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ಚಿಕಿತ್ಸಾ ವಿಧಾನಗಳಲ್ಲಿ ವಿಸೂಕ್ಷ್ಮ ಸಂವೇದಿಕರಣ(dereusigation) ಮತ್ತೆ ಮಾನಸಿಕ ಚಿಕಿತ್ಸೆ (Psycho therapy) ಗಳನ್ನು ಹೆಚ್ಚಾಗಿ ಉಪಯೋಗಿಸಲಾಗುತ್ತದೆ.

೩) **ಸಾಮಾಜಿಕ ಚಿಕಿತ್ಸೆ :–** ಇಲ್ಲಿ ಸಮಾಜ ಕಾರ್ಯಕರ್ತನ ಕಾರ್ಯ ಮತ್ತು ಜವಾಬ್ದಾರಿಯು ಹಿರಿದಾದುದು. ಒಮ್ಮೆ ಒಬ್ಬ ಸಾಮಾನ್ಯ ವ್ಯಕ್ತಿಯು ಕುಡುಕನಾಗಿ

ಪರಿವರ್ತನೆ ಹೊಂದಿದರೆ ಅವನು ತನ್ನ ಪರಿಸರದಿಂದ ದೂಷಿಸಲ್ಪಡುತ್ತಾನೆ. ಅನೇಕ ಅವಹೇಳನೆಗೆ ಗುರಿಯಾಗುತ್ತಾನೆ. ಅವನು ಮದ್ಯಸಾರವನ್ನು ಹೆಚ್ಚಾಗಿ ಅವಲಂಬಿಸಿದಷ್ಟೂ, ಅವನ ಸಂಸಾರ, ಸ್ನೇಹಿತರು ಅವನಿಂದ ದೂರವಾಗುತ್ತಾರೆ. ಇದರಿಂದ ಅವನ ಮತ್ತು ಸಮಾಜದ ಪರಸ್ಪರ ಸಂಬಂಧ, ನೆರವು, ಕ್ಷೀಣಿಸುತ್ತದೆ. ಕೊನೆಯಲ್ಲಿ ಕುಡುಕನು ಮತ್ತೆ ಸಾಮಾನ್ಯ ಜೀವಿಯಾಗಿ ತನ್ನ ಕುಟುಂಬದೊಂದಿಗೆ ಮತ್ತು ಸಮಾಜದಲ್ಲಿ ಬಾಳಬೇಕೆಂದರೂ ಸಾಧ್ಯವಾಗದೆ ಮತ್ತೆ ಮದ್ಯಸಾರದ ಸಂಗವನ್ನೇ ಮೊರೆ ಹೋಗುತ್ತಾನೆ. ಇಂತಹ ವ್ಯಕ್ತಿಗಳಿಗೆ ಸಮಾಜ ಕಾರ್ಯಕರ್ತನ ಸಹಾಯವು ಅತ್ಯವಶ್ಯಕ. ಇಲ್ಲಿ ಸಮಾಜ ಕಾರ್ಯಕರ್ತನು ಸಮಾಜ ಮತ್ತು ಕುಡುಕನ ನಡುವೆ ಒಂದು ಬೆಸುಗೆಯಾಗಿ ಕೆಲಸ ಮಾಡುತ್ತಾನೆ. ಅವನು ತನ್ನ ಕಕ್ಷಿ (Client)ಯ ಸಮಸ್ಯೆಗಳನ್ನು ವಿವರವಾಗಿ ಅಭ್ಯಾಸಿಸಿ ಅವನಿಗೆ ವ್ಯಯಕ್ತಿಕ, ಸಾಮೂಹಿಕ ಮತ್ತು ಕೌಟುಂಬಿಕ ಸಲಹೆ, ಮಾರ್ಗದರ್ಶನಗಳ ಮೂಲಕ ಚಿಕಿತ್ಸೆ ನೀಡುತ್ತಾನೆ. ಸಮಾಜ ಕಾರ್ಯಕರ್ತನು ಈ ರೀತಿಯಲ್ಲಿ ಸಮಾಜ ಮತ್ತು ಕುಡುಕನನ್ನು ಒಂದಾಗಿಸಿ ಇಬ್ಬರ ನಡುವೆ ಹೊಸ ಸಂಪರ್ಕ, ಸಂಬಂಧಗಳು ಉಂಟಾಗಲು ನೆರವಾಗುತ್ತಾನೆ. ಇದರಿಂದ ಒಬ್ಬ ವ್ಯಕ್ತಿಯು ಮತ್ತು ಪರಿಸರದ ನಡುವಿನ ತಪ್ಪಿದ ವ್ಯವಸ್ಥೆ (maladjustment) ಯನ್ನು ನಿವಾರಿಸಲು ಸಾಧ್ಯವಾಗುತ್ತದೆ.

ಇಷ್ಟಲ್ಲದೇ ಸಮಾಜ ಕಾರ್ಯಕರ್ತನು 'ಕುಡುಕತನ ನಿವಾರಣೆ' (Prevention of alcoholism) ಯಲ್ಲೂ ಮಹತ್ತರ ಪಾತ್ರ ವಹಿಸುತ್ತಾನೆ. ಉದಾಹರಣೆಗೆ : ನಮ್ಮ ಸಮಾಜದಲ್ಲಿ ಕುಡುಕತನದ ವಿಧ್ವಂಸಕ್ಕೆ ಬಲಿಯಾಗುವವರು ಹೆಚ್ಚಾಗಿ ಕೆಳದರ್ಜೆಯ ಬಡಜನರು. ನಾವು ಹೆಚ್ಚು ಕುಡುಕರನ್ನು ಕೊಳಗೇರಿಯಲ್ಲಿ ಕಾಣುತ್ತೇವೆ. ಸುಮಾರು ಇಲ್ಲಿಯ ಶೇಕಡ ೭೫ ರಷ್ಟು ಜನರು ಮದ್ಯಪಾನದ ಕೆಡುಕಿಗೆ ಬಲಿಯಾಗುತ್ತಿದ್ದಾರೆಂದು ಉಲ್ಲೇಖನಗಳಿವೆ. ಅವರಲ್ಲಿ ಬಹಳಷ್ಟು ಜನರು ಒಳ್ಳೆಯ ಮದ್ಯವನ್ನು ಸೇವಿಸಲು ಹಣವಿಲ್ಲದೇ ಕಳ್ಳಭಟ್ಟಿ – ಸರಾಯಿಗಳನ್ನು ಸೇವಿಸಿ ತಮ್ಮ ಕೊನೆಯನ್ನು ಕೇವಲ ಕೆಲವೇ ದಿನಗಳಲ್ಲಿ ಕಾಣುತ್ತಾರ. ಆದುದರಿಂದ ಇಂತಹ ಜನರ ಜೀವನ ಕ್ರಮಗಳನ್ನು ಸಮಾಜ ಕಾರ್ಯಕರ್ತನು ಅಭ್ಯಾಸಿಸಿ, ಕಾರಣಗಳನ್ನು ಕಂಡುಹಿಡಿಯಬೇಕಾಗುತ್ತದೆ. ಈ ಜನರು ಹೆಚ್ಚಾಗಿ ಅನಕ್ಷರಿಗಳಾಗಿರುತ್ತಾರೆ. ಹಾಗೂ ಮದ್ಯಸಾರದ ದುಷ್ಪರಿಣಾಮಗಳ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಆದ್ದರಿಂದ ಸಮಾಜ ಕಾರ್ಯಕರ್ತನು ಮುಖ್ಯವಾಗಿ ಸಾರ್ವಜನಿಕ ಶಿಕ್ಷಣ ಕಾರ್ಯಕ್ರಮದಿಂದ ಆರೋಗ್ಯ ಮತ್ತು ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಉಂಟು ಮಾಡುತ್ತಾನೆ. ಇದರಿಂದ ಮದ್ಯಪಾನದ ಬಗ್ಗೆ ಈ ಜನರಲ್ಲಿರುವ ಮೂಢ ನಂಬಿಕೆ ಮತ್ತು ಅಂಧವಿಶ್ವಾಸವನ್ನು ಅಳಿಸಲು ಸಾಧ್ಯವಾಗುತ್ತದೆ. ನಂತರ ಅವರ ಸಮಸ್ಯೆಗಳಿಗೆ ಬದಲೀ ಸೌಕರ್ಯವಾಗಿ, ಸಂಜೆಯ ವೇಳೆ ಜನರು ತಮ್ಮ

ತೊಂದರೆಗಳನ್ನು ಮರೆತು ಸಂತೋಷದಿಂದ ಕಾಲಕಳೆಯಲು ಅನುಕೂಲ ಮಾಡಲು, ಇಂತಹ ಪರಿಸರಗಳಲ್ಲಿ ಸಂಜೆಯ ವೇಳೆ ವಿವಿಧ ಮನರಂಜನೆಗಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾನೆ. ಸಮಾಜ ಕಾರ್ಯಕರ್ತನು ತನ್ನ ಕಾರ್ಯವನ್ನು ಸಮರ್ಪಕವಾಗಿ ನೆರವೇರಿಸಲು ಇತರ ಇಲಾಖೆಗಳ ಸಿಬ್ಬಂದಿ ವರ್ಗ, ಸಹಾಯ ಮತ್ತು ಸಂಪರ್ಕಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಹೀಗೆ ಸಾಮೂಹಿಕ ಕಾರ್ಯಕ್ರಮದಿಂದ ಈ ಒಂದು 'ಸಾಮಾಜಿಕ ಸಮಸ್ಯೆ'ಯನ್ನು ಎದುರಿಸಲು ಸಮಾಜ ಕಾರ್ಯಕರ್ತನು ನೆರವಾಗುತ್ತಾನೆ. ●

References

1. Bales R. F., "Cultural Differences in Rates of Alcoholism" Quart. J. Stud. Alcohol, 1946, 6, 480-99.

2. Coleman J. C., Abnormal Psychology and Modern Life. Bombay. D. B. Taraporevala Sons & Co., 1976, 418-420.

3. Goodwin et. al., Alcohol Problems in Adoptees raised apart from alcoholic biological parents. Arch. Gen. Psychiat, Feb. 1973, 28 (2), 238-43.

4. Schafer H. H. Accepted theses disproven. Sci. News. 1971, 99 (11), 182.

5. U. S. Department of Health, Education and Welfare (HEW), Alcohol and Health. Morris E. Chafetz, Chairman of the Task Force, Washington, D.C., U. S. Government Printing Office, 1974, P. Xi.

ಭಾಷಾ ವಿಜ್ಞಾನ ಇತಿಹಾಸ

(ಸಿಂಹಾವಲೋಕನ)

● ವಿಲ್ಯಂ ಮಾಡ್ತ

1. ಪ್ರವೇಶ

ಭಾಷೆ, ಉಸಿರಿನ ಕೂಸಾಗದೆ ಮಾನವ ಬುದ್ಧಿಯ ಕೂಸಾದುದರಿಂದ ಅದು ಮಾನವ ನಿರ್ಮಿತ ಹಾಗೂ ಮಾನವ ಸೀಮಿತ ಸಂಪರ್ಕ ಸಾಧನವಾಗಿದೆ; ಅದು ಸಮಸ್ತ ಮಾನವ ಜನಾಂಗದ ಅತ್ಯಮೂಲ್ಯವಾದ ಏಕೈಕ ಸೂತ್ರವಾಗಿದೆ– ಎಂಬುದು ಇಂದಿನ ಭಾಷಾ ವಿಜ್ಞಾನಿಗಳ ಅಭಿಪ್ರಾಯ. ಭಾಷೆ ಮಾನವನೊಂದಿಗೆಯೇ ಹುಟ್ಟಿದರೂ ಭಾಷಾಭ್ಯಾಸ ಅಷ್ಟೇ ಹಿಂದಿನದ್ದಿರಲಿಕ್ಕಿಲ್ಲ; ಆದರೂ ಭಾಷಾಭ್ಯಾಸ ಇಂದು ನಿನ್ನೆಯದಲ್ಲ, ಅದು ಬಹು ಪ್ರಾಚೀನದ್ದೆಂದೇ ಹೇಳಬೇಕು.

ಭಾಷಾಭ್ಯಾಸ ಪ್ರಾಚೀನದ್ದಾದರೂ ಅದರ ವೈಜ್ಞಾನಿಕ ಅಭ್ಯಾಸ ಮಾತ್ರ ಅರ್ವಾಚೀನದ್ದು. ಮಾನವೇತಿಹಾಸದಲ್ಲಿ ವೈಜ್ಞಾನಿಕ ದೃಷ್ಟಿಕೋನ ಪುಟಿದು ಚಿಗುರಿ ಹುಲುಸಾಗಿ ಬೆಳೆಯಲು ಸುರುವಾದದ್ದೇ ೧೯ನೆಯ ಶತಮಾನದಿಂದೀಚೆಗಿರುವಾಗ ಈ ಹೊಸ ದೃಷ್ಟಿಕೋನದಿಂದ ಭಾಷಾಧ್ಯಯನ, ೧೯ನೆಯ ಶತಮಾನದಿಂದ ಈಚೆಗೆ ನಡೆದದ್ದು ಆಶ್ಚರ್ಯಕರವೇನಲ್ಲ. ಭಾಷಾವಿಜ್ಞಾನ ಇತಿಹಾಸದಲ್ಲಿ ಪ್ರಮುಖವಾಗಿ ಎರಡು ಘಟ್ಟಗಳನ್ನು ನಾವು ಗುರುತಿಸಬಹುದು:

೧) ೧೯ನೆಯ ಶತಮಾನದ ಐತಿಹಾಸಿಕ ತೌಲನಿಕ ಭಾಷಾವಿಜ್ಞಾನ.

೨) ೨೦ನೆಯ ಶತಮಾನದ ವಿವರಣಾತ್ಮಕ ಭಾಷಾವಿಜ್ಞಾನ.

2) ಐತಿಹಾಸಿಕ-ತೌಲನಿಕ ಭಾಷಾವಿಜ್ಞಾನ

ಭಾಷೆಯೆಂಬುದು ನಿಂತ ನೀರಲ್ಲ; ಅದು ನಿರಂತರ ಹರಿಯುವ ಪ್ರವಾಹ; ಅದು ನಿತ್ಯ ಪರಿವರ್ತನಶೀಲ : (ಪಾಂತ ರೇಯಿ) : ಆದುದರಿಂದ ಭಾಷಾಧ್ಯಯನವೆಂದರೆ ಭಾಷೆಯ ಐತಿಹಾಸಿಕ ಅಧ್ಯಯನವೆಂಬ ಹೊಸಗಾಳಿ ಹತ್ತೊಂಬತ್ತನೆಯ ಶತಮಾನದಲ್ಲಿ ಬೀಸತೊಡಗಿತು. ಈ ಗಾಳಿ ಬೀಸಲು ಪಾಶ್ಚಾತ್ಯರಿಗೆ ಆದ ಸಂಸ್ಕೃತದ ಪರಿಚಯವೇ ಮುಖ್ಯ ಕಾರಣವೆಂದರೆ ತಪ್ಪಾಗಲಾರದು.

ಪಾಶ್ಚಾತ್ಯರು-ಕ್ರೈಸ್ತ ಮಿಷನರಿಗಳು ಹಾಗೂ ವಿದ್ವಾಂಸರು-ಭಾರತಕ್ಕೆ ಬಂದಾಗ

ಇಲ್ಲಿಯ ಧರ್ಮ, ಸಂಸ್ಕೃತಿ ಹಾಗೂ ಭಾಷೆಗಳನ್ನು ತೀವ್ರಾಸಕ್ತಿಯಿಂದ ಗಮನಿಸಿದರು. ಈ ಸಂದರ್ಭದಲ್ಲಿ ಸಂಸ್ಕೃತದ ಪರಿಚಯವಾದಾಗ ಹಲವಾರು ಪಂಡಿತರು ಅದರ ಆಳವಾದ ಅಧ್ಯಯನದಲ್ಲಿ ತೊಡಗಿದರು. ಆಳಕ್ಕೆ ಇಳಿದಂತೆ ಇಲ್ಲಿಯವರೆಗೆ ಅಪರಿಚಿತವಾದ ಸಂಸ್ಕೃತ ಹಾಗೂ ತಮಗೆ ಪರಿಚಿತವಾದ ಯುರೋಪಿಯನ್ ಭಾಷೆಗಳ(ಗ್ರೀಕ್. ಲ್ಯಾಟಿನ್, ಜರ್ಮನ್...) ನಡುವೆ ಇರುವ ನೈಜ ಹಾಗೂ ಗಾಢ ಸಂಬಂಧವನ್ನು ಗುರುತಿಸಿದರು.

ಕ್ರೈಸ್ತ ಮಿಷನರಿಗಳಲ್ಲಿ ಯೇಸುಸಭೆಯವರು (Jesuits) ತಾವು ಹೋದೆಡೆಗಳಲ್ಲೆಲ್ಲ ಸಿಕ್ಕಿದ ಭಾಷಾ ರೂಪಗಳನ್ನು ತೌಲನಿಕ ಅಧ್ಯಯನದ ಮಾದರಿಯಲ್ಲಿ ಗಮನಿಸಿ ತಾವು ಕಂಡ ಭಾಷಾಸಾಮ್ಯವೈಷಮ್ಯಗಳನ್ನು ವರದಿ ಮಾಡಿದವರಲ್ಲಿ ಅಗ್ರಗಣ್ಯರು. ೧೭೬೭ರಲ್ಲಿ ಫ್ರಾನ್ಸ್‌ದೇಶದ ಕೋರ್ದೋ (Courdeaux) ಎಂಬ 'ಜೆಸ್ವಿಟ್' ಪಾದ್ರಿ ಹಲವಾರು ಸಾಮ್ಯಪದಗಳನ್ನು ಗುರುತಿಸಿ ಲ್ಯಾಟಿನ್ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವನ್ನು ನಿಚ್ಚಳವಾಗಿ ತೋರಿಸಿ ಫ್ರೆಂಚ್ ಸಂಸ್ಥೆಗೆ ವರದಿಯನ್ನು ಕಳುಹಿಸಿದನು. ಆದರೆ ಈ ವರದಿ ಬೆಳಕಿಗೆ ಬರಲು, ಪ್ರಕಟವಾಗಲು ೧೪೦ ವರ್ಷಗಳು ಹಿಡಿದವಂತೆ![1] ಸ್ಪೇಯ್ನ್ ದೇಶದ ಜೆಸ್ವಿಟ್ ಪಾದ್ರಿ ರೆ| ಲೊರೆನ್ಸೊ ಹೆರ್ವಸ್ ಪಾನ್ದುರೊ (Lorenzo Hervas y Panduro) ೨೧ ಸಂಪುಟಗಳ ವಿಶ್ವಕೋಶವೊಂದನ್ನು ಸಂಪಾದಿಸಿ 'ಮಾನವ ಕುಲಂ ಒಂದೇ ವಲಂ' ಎಂಬ ಸತ್ಯವನ್ನು ಪ್ರತಿಪಾದಿಸಿದನು. ಇಲ್ಲಿಯ ೧೭ನೆಯ ಸಂಪುಟ (೧೭೮೪) ಅವಗಾಹನೆಗೆ ಬಂದ ಭಾಷೆಗಳ ಸಾಮ್ಯವೈಷಮ್ಯಗಳನ್ನು ಕುರಿತಾಗಿದೆ. ಈ ವಿಶ್ವಕೋಶದ ಸಂಕ್ಷಿಪ್ತ ಆವೃತ್ತಿ (೧೮೦೦–೧೮೦೫) ಆರು ಸಂಪುಟಗಳಲ್ಲಿ ಸ್ಪೆನಿಷ್ ಭಾಷೆಯಲ್ಲಿ ಆತ ಹೊರತಂದ. ಇಲ್ಲಿ ೩೦೦ಕ್ಕೂ ಮಿಕ್ಕಿದ ಏಷ್ಯಾ, ಯುರೋಪ್ ಮತ್ತು ಅಮೇರಿಕನ್ ಭಾಷೆಗಳ ಸಂಕ್ಷಿಪ್ತ ವ್ಯಾಕರಣ ಮತ್ತು ಪದಕೋಶಗಳು ಅಡಕವಾಗಿವೆ. ಈ ಭಾಷೆಗಳ ವ್ಯಾಕರಣ ಸಾಮ್ಯತೆಗಳನ್ನು ಗಮನಿಸಿ ಅವುಗಳ ವಾಂಶಿಕ ಸಂಬಂಧವನ್ನು ಗುರುತಿಸಲಾಗಿದೆ, ಹೀಗೆಯೇ ಜ್ಞಾತಿ ಪದ (Cognate word) ಗಳನ್ನು ಗುರುತಿಸುವ ಕಾರ್ಯವೂ ೧೭೮೬ರ ಪೂರ್ವದಲ್ಲಿ ನಡೆದಿತ್ತು.

ಈ ಹಿಂದೆ ನಡೆದ ಭಾಷಾ ವಿವೇಚನೆಯನ್ನು ಗಮನಿಸಿ ಸರ್ ವಿಲ್ಯಂ ಜೋನ್ಸ್[2] ಹೇಳಿದ ಮಾತು ಅರ್ಥಪೂರ್ಣವಾಗಿದೆ:

1) ಈ ವಿಷಯ ನಾನು ವಿದ್ಯಾರ್ಥಿಯಾಗಿದ್ದಾಗ ಮಾಡಿದ ಟಿಪ್ಪಣಿಯಿಂದ ಆರಿಸಿದ್ದೇನೆ.

2) 'Asiatic Researches' *Journal of the Asiatic Society* 1785

ಸಂಸ್ಕೃತ ಭಾಷೆಯ ಪ್ರಾಚೀನತೆ ಏನೇ ಇದ್ದರೂ ರಾಚನಿಕವಾಗಿ ಅದು ಅದ್ಭುತವಾದುದು, ಅದು ಗ್ರೀಕಕ್ಕಿಂತಲೂ ಪರಿಪೂರ್ಣ, ಲ್ಯಾಟಿನ್ನಿಗಿಂತ ಸಮೃದ್ಧ, ಅವೆರಡಕ್ಕಿಂತಲೂ ಹೆಚ್ಚು ಸುಸಂಸ್ಕೃತಗೊಂಡ ಭಾಷೆ. ಈ ಭಾಷೆಗಳಲ್ಲಿಯ ಕ್ರಿಯಾಪ್ರಕೃತಿ ಹಾಗೂ ವ್ಯಾಕರಣಗಳನ್ನು ಗಮನಿಸಿದಾಗ ಅವುಗಳ ನಡುವಿನ ಗಾಢವಾದ ಸಂಬಂಧ ಆಕಸ್ಮಿಕವಲ್ಲವೆಂಬುದು ಖಚಿತವಾಗುತ್ತದೆ. ಅಷ್ಟೇ ಅಲ್ಲದೆ ಈ ಮೂರು ಭಾಷೆಗಳು ಬೇರೊಂದು, ಬಹುಷಹ ಸಧ್ಯದಲ್ಲಿ ಇಲ್ಲದ. ಮೂಲ ಭಾಷೆಯಿಂದ ಹುಟ್ಟಿಕೊಂಡಿರಬೇಕೆಂಬುದು ಭಾಷಾ ಶಾಸ್ತ್ರಜ್ಞರಿಗೆ ವೇದ್ಯವಾಗುತ್ತದೆ.

ಒಟ್ಟಿನಲ್ಲಿ. ಸಂಸ್ಕೃತ ಭಾಷೆಯ ಪರಿಚಯ ಹಾಗೂ ಅಧ್ಯಯನದಿಂದಾಗಿ ಭಾಷಾಧ್ಯಯನ ಐತಿಹಾಸಿಕ ಮತ್ತು ತೌಲನಿಕ ಮಾದರಿಗಳಲ್ಲಿ ಮುಂದುವರೆಯಿತು. ಭಾಷೆ ಆಂತರಿಕ ವ್ಯತ್ಯಾಸಗಳಿಂದಾಗಿ ಬೆಳೆಯುತ್ತದೆ ಹಾಗೂ ಭಿನ್ನತೆಯನ್ನು ಪಡೆಯುತ್ತದೆಂಬ ಸತ್ಯ, ಭಾಷೆಗಳ ತೌಲನಿಕ ಅಧ್ಯಯನದಿಂದಾಗಿ ಭಾಷಾವಿಜ್ಞಾನಿಗಳಿಗೆ ಹೊಳೆಯಿತು. ತತ್ಪರಿಣಾಮವಾಗಿ ಭಾಷೇತಿಹಾಸದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ನಿಯಮಗಳಿಗೊಳಪಡಿಸುವುದತ್ತ ಅವರ ಗಮನ ಹರಿಯಿತು. ಈ ದೆಸೆಯಲ್ಲಿ ವೈಜ್ಞಾನಿಕವಾಗಿ ಕೆಲಸ ಮಾಡಿದವರಲ್ಲಿ ರಾಸ್ಕ್ ಮತ್ತು ಗ್ರಿಮ್ ಪ್ರಮುಖರು.

ರಾಸ್ಮಸ್ ರಾಸ್ಕ್

ಡೇನಿಷ್ ವಿದ್ವಾಂಸ, ರಾಸ್ಮಸ್ ರಾಸ್ಕ್ (Rasmus Rask) ೧೮೧೮ರಲ್ಲಿ 'ಪ್ರಾಚೀನ ನೊರ್ಡಿಕ್ ಅಥವಾ ಐಸ್‌ಲ್ಯೇಂಡಿಕ್ ಭಾಷೆಯ ಮೂಲವನ್ನು ಕುರಿತು ವಿವೇಚನೆ' ಎಂಬ ತನ್ನ ಬಹುಮಾನಿತ ಪ್ರಬಂಧವನ್ನು ಪ್ರಕಟಿಸಿದ. ಹಲವಾರು ಬಾಷೆಗಳಲ್ಲಿಯ ರೂಪ ವ್ಯತ್ಯಾಸಗಳ ಕ್ರಮಬದ್ಧ ಅನುರೂಪತೆಗಳ ಅಧ್ಯಯನ ಆ ಪ್ರಬಂಧದಲ್ಲಿ ಪ್ರಪ್ರಥಮವಾಗಿ ಹಾಗೂ ವೈಜ್ಞಾನಿಕವಾಗಿ ಮೂಡಿಬಂದಿದೆ. ಕೇವಲ ಪದಾನುರೂಪತೆ (Lexical Correspondence) ಯಿಂದಾಗಿ ಭಾಷೆಯ ಮೂಲ ಅಥವಾ/ಮತ್ತು ಭಾಷಾಸಂಬಂಧವನ್ನು ಗುರುತಿಸುವುದು ಸಲ್ಲದೆಂದು ಅಲ್ಲಿ ಸುಸ್ಪಷ್ಟಗೊಳಿಸಿದ್ದಾನೆ. ಪದಾನುರೂಪತೆ, ಸ್ವೀಕರಣ (borrowing) ದಿಂದಾಗಿ ಅಥವಾ ಕೇವಲ ಆಕಸ್ಮಿಕವಾಗಿ ಕಾಣಿಸಿಕೊಳ್ಳಬಹುದಾದುದರಿಂದ ಭಾಷೆಗಳ ತೌಲನಿಕಾಧ್ಯಯನದಲ್ಲಿ ಭಾಷೆಯಲ್ಲಿಯ ಮೂಲ ಪ್ರಕೃತಿಗಳನ್ನು (roots) ಮತ್ತು ಮೂಲ ಪ್ರಕೃತಿಗಳಲ್ಲಿಯ ಧ್ವನ್ಯಾನುರೂಪತೆಗಳನ್ನು ಗಮನಿಸುವುದೇ ಸರಿಯೆಂದು ಅತ ವಾದಿಸಿದ.

ರಾಸ್ಕನ ಕೃತಿ ಡೇನಿಷ್‌ಭಾಷೆ[3] ಯಿಂದ ಜರ್ಮನ್‌ಭಾಷೆಗೆ ಅನುವಾದಗೊಂಡರೂ ಅದು ಬಹು ಜನಕ್ಕೆ ಮುಟ್ಟದಂತಾಯಿತು. ಭಾಷೆಯ ಐತಿಹಾಸಿಕ ಅಧ್ಯಯನಕ್ಕೆ ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಗಣ್ಯಸ್ಥಾನವಿತ್ತು. ಇಲ್ಲಿ ಸಂಸ್ಕೃತಭಾಷೆಯ ಉಚ್ಚ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನ ಕಾರ್ಯಗಳು ನಡೆಯುತ್ತಿದ್ದುವು. ಇಲ್ಲಿಯೇ ಸುಪ್ರಸಿದ್ಧ ಜರ್ಮನ್ ವಿದ್ವಾಂಸರಾದ ಫ್ರೆಡ್ರಿಕ್ ಮತ್ತು ಅವನ ತಮ್ಮ ವೆಲ್ಹೆಲ್ಮ್ ಫೊನ್ ಶ್ಲೆಗೆಲ್ ಹಾಗೂ ಫ್ರಾನ್ಸ್ ಬೊಪ್ ಸಂಸ್ಕೃತ ವ್ಯಾಸಂಗವನ್ನು ಮಾಡಿದರು. ಈ ಭಾಷಾ ಶಾಸ್ತ್ರಜ್ಞರು ಸಂಸ್ಕೃತ, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿಯ ಕೆಲವು ಸಾಮ್ಯಪದಗಳನ್ನು ಗಮನಿಸಿದಾಗ ಅಲ್ಲಿಯ ನಿಯಮಬದ್ಧತೆ ಅವರ ಕಣ್ಣು ಕುಕ್ಕುವಂತಿತ್ತು. ಉದಾಹರಣೆಗೆ 'ಇರು' ಕ್ರಿಯಾಪದದ ವರ್ತಮಾನ ಕಾಲದಲ್ಲಿಯ ಏಕವಚನ ರೂಪಗಳನ್ನು ಪರಿಶೀಲಿಸಬಹುದು.

ಸಂಸ್ಕೃತ	ಗ್ರೀಕ್	ಲ್ಯಾಟಿನ್	ಅರ್ಥ
1. ಅಸ್ಮಿ/asmi	ಏಯ್ಮಿ/eimi	ಸುಮ್/sum	'ಇದ್ದೇನೆ'
2. ಅಸಿ/asi	ಏಯ್/ei	ಏಸ್/es	'ಇದ್ದಿ'
3. ಅಸ್ತಿ/asti	ಏಸ್ತಿ/esti	ಏಸ್ತ್/est	'ಇದ್ದಾನೆ' 'ಇದ್ದಾಳೆ' 'ಇದೆ'

ಮೇಲಿನ ಕೋಷ್ಟಕದಲ್ಲಿಯ ಉದಾಹರಣೆಗಳನ್ನು ಗಮನಿಸಿದಾಗ ಸಂಸ್ಕೃತದ ಆದಿಯ ಅಕಾರ ಗ್ರೀಕ್ ಮತ್ತು ಲ್ಯಾಟಿನ್‌ಗಳಲ್ಲಿ ವಿಕಾರಗೊಳ್ಳುತ್ತದೆಂಬುದು ತಿಳಿದು ಬರುತ್ತದೆ.

ಸಂ' # /ಅ/ → /ಏ/ { ಗ್ರೀ. / ಲ್ಯಾ. }

ಈ ಉದಾಹರಣೆಗಳು ಸ್ವೀಕರಣದಿಂದಾಗಿ ಎರವಲಾಗಿ ಬಂದವುಗಳಲ್ಲ. ಅಂತೆಯೇ ಅವು ಸಂಸ್ಕೃತಿ ಪದ (Cultural word)ಗಳಿಗಿಂತ ಭಿನ್ನವೂ ಆಗಿರುವುದರಿಂದ ಅವು ಸಾಮ್ಯಪದಗಳ ಧ್ವನ್ಯಾನುರೂಪತೆಯನ್ನು ನಿರ್ಧರಿಸುವಲ್ಲಿ ಬಹಳ ಸಹಾಯಕಾರಿಯಾದವುಗಳು.

ಪದಗಳ ಧ್ವನ್ಯಾನುರೂಪತೆಯನ್ನು ಗಮನಿಸಿದಾಗ ಭಾಷೆಗಳ ಸಂಬಂಧವನ್ನು ಕುರಿತಾಗಿ ಕೆಲವೊಂದು ಪ್ರಮೇಯಗಳು ಹುಟ್ಟಿರುವುವು:

---

3. ಡೇನಿಷ್ ಭಾಷೆಯನ್ನು ಕುರಿತ ವಿವರಣೆಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದಲ್ಲಿ ನನ್ನ ಲೇಖನವನ್ನು ಓದಬಹುದು.


(೧) ಸಾಮ್ಯಭಾಷೆಗಳಲ್ಲಿ ಒಂದು ಭಾಷೆ ಇನ್ನೊಂದು ಭಾಷೆಯಿಂದ ಹುಟ್ಟಿಕೊಂಡಿರಬೇಕು;

(೨) ಪ್ರತಿ ಸಾಮ್ಯಭಾಷೆ ಮೂಲಭಾಷೆಯಿಂದ ಹುಟ್ಟಿರಬೇಕು:

(೩) ಪ್ರತಿ ಭಾಷೆ ತನ್ನದೇ ಆದ ರೀತಿಯಲ್ಲಿ ಬೆಳೆದಿರಬೇಕು.

ರೊಮಾನ್ಸ್ ಭಾಷೆಗಳು ಲ್ಯಾಟಿನ್ ಭಾಷೆಯಿಂದ ಹುಟ್ಟಿದವುಗಳೆಂದು ಹೇಳಲು ಸಾಕಷ್ಟು ಭಾಷಾವೈಜ್ಞಾನಿಕ, ಪ್ರಾದೇಶಿಕ ಮತ್ತು ರಾಜಕೀಯ ಆಧಾರಗಳು ಸಿಗುತ್ತವೆ. ಜಗತ್ತಿನ ಎಲ್ಲ ಭಾಷೆಗಳಿಗೂ ಸಂಸ್ಕೃತವೇ ಮೂಲ, ತಾಯಿಯೆಂಬ ಪ್ರಮೇಯವೂ ಇತ್ತು. ಆದರೆ ಯುರೋಪಿಯನ್ ಭಾಷೆಗಳ ಪ್ರಾಕ್-ರೂಪ ಹಾಗೂ ಇಂಡೋ-ಆರ್ಯನ್ ಭಾಷೆಗಳ ಪ್ರಾಕ್-ರೂಪ ಭಿನ್ನವೆಂಬ ಪ್ರಮೇಯ ಇಂದು ಸರ್ವಸಮ್ಮತವಾಗಿದೆ. ಈ ಪ್ರಾಕ್-ರೂಪಗಳನ್ನು ತೌಲನಿಕ ವಿಧಾನ (Comparative method) ದಿಂದಾಗಿ ನಿರ್ಧರಿಸಬಹುದಾದರೂ ಪ್ರಾಕ್-ಭಾಷೆಗಳು ಕೇವಲ ಕಲ್ಪನಾ ರಚನೆ (Constructs) ಗಳಾಗಿರಲೂ ಸಾಕು ! ಅರ್ಥಾತ್, ಪುನರ್ರಚಿತ (reconstructed) ಭಾಷೆಗಳು ಪೂರ್ವಭಾಷೆಗಳಾಗಿರಬೇಕಾಗಿಲ್ಲ: ಇದ್ದುವು ಎಂಬುದಕ್ಕೆ ಆಧಾರಗಳಂತೂ ಇಲ್ಲವೆನ್ನಬಹುದು.

ತೌಲನಿಕ ಭಾಷಾವಿಜ್ಞಾನದ ಪ್ರಕಾರ ಮೂಲಭಾಷೆ ಪ್ರಾಕ್-ಇಂಡೋಯುರೋಪಿಯನ್ (PIE), ಇದರಿಂದ ಎರಡು ಮಹಾಶಾಖೆಗಳು ಹೊರಟವು. ಅವು ಮುಂದೆ ಕೆಳಗೆ ಸೂಚಿಸಿದ ರೀತಿಯಲ್ಲಿ ಕವಲೊಡೆದವು.



ಭಾಷೆ ಕವಲೊಡೆದು ಭಿನ್ನವಾಗಲಿಕ್ಕೆ ಧ್ವನಿವ್ಯತ್ಯಾಸ (Phonetic Change) ಗಳೇ ಕಾರಣ. ಈ ಧ್ವನಿವ್ಯತ್ಯಾಸಗಳು ಕ್ರಮಬದ್ಧವಾಗಿವೆ. ಈ ಕ್ರಮಬದ್ಧತೆಯನ್ನು ಕಂಡುಹಿಡಿಯುವುದೇ ಭಾಷಾ ವಿಜ್ಞಾನವೆಂದು ನವ್ಯ ವ್ಯಾಕರಣಕಾರರು

(*Junggrammatiker* : Neo-grammarians 1820-70) ಅಭಿಪ್ರಾಯ ಪಟ್ಟರು. ನವ್ಯ ವ್ಯಾಕರಣಕಾರರಲ್ಲಿ ಜೇಕಬ್ ಗ್ರಿಮ್ (Jacob Grimm) ಮತ್ತು ಕಾರ್ಲ್‌ವರ್ನರ್ (Carl Verner) ಮೊದಲಾದವರು ಪ್ರಮುಖರು.

ಜೇಕಬ್ ಗ್ರಿಮ್ (1785- 86)

ಜೇಕಬ್ ಗ್ರಿಮ್ ೧೮೧೮ ಜರ್ಮಾನಿಕ್ ಭಾಷೆಗಳ ವ್ಯಾಕರಣವನ್ನು ಬರೆದನು. ಅದರ ದ್ವಿತೀಯ ಆವೃತ್ತಿಯಲ್ಲಿ (೧೮೨೨) ಜರ್ಮಾನಿಕ್ ಮತ್ತು ಇಂಡೋ-ಯುರೋಪಿಯನ್ ಭಾಷಾ ವರ್ಣಗಳ ಸಾಮ್ಯತೆಯನ್ನು ತೋರಿಸುವ ಪ್ರಯತ್ನ ಮಾಡಿದ್ದಾನೆ. ಈ ಪ್ರಯತ್ನ ಗ್ರಿಮ್-ನಿಯಮ (Grimm's Law) ಎಂದೂ ಪ್ರಸಿದ್ಧಿಯನ್ನು ಪಡೆಯಿತು.

ಇಂಡೋ-ಯುರೋಪಿಯನ್ ಅಘೋಷ, ಮಹಾಪ್ರಾಣ ಮತ್ತು ಘೋಷ ವರ್ಣಗಳು ಜರ್ಮಾನಿಕ್ ಭಾಷೆಗಳಲ್ಲಿ ಅನುಕ್ರಮವಾಗಿ ಘರ್ಷ ಘೋಷ ಮತ್ತು ಅಘೋಷಗಳಾಗುತ್ತವೆಂದು ಸ್ಥೂಲವಾಗಿ ಹೇಳುವುದೇ ಗ್ರಿಮ್ ನಿಯಮ .

ಇಂಡೋಯುರೋಪಿಯನ್	೧. ಅಘೋಷ	ವರ್ಣ —>	ಜರ್ಮಾನಿಕ್	೧ ಘರ್ಷ
	೨. ಮಹಾಪ್ರಾಣ			೨ ಘೋಷ
	೩. ಘೋಷ			೩ ಅಘೋಷ

ಉದಾಹರಣೆ ;

1. tres (Lat) > three (Eng.) : t > th
2. Phrater (Gk) > brother („) : ph > b
3. duo (Lat) > two („) : d > t

ಜರ್ಮಾನಿಕ್ ಭಾಷೆಗಳ ಅಧ್ಯಯನ ಮುಂದುವರೆದಂತೆ ಗ್ರಿಮ್ ನಿಯಮಕ್ಕೆ ಅಪವಾದಗಳು ಅಪಾರವಾಗಿ ಸಿಕ್ಕಿದುವು. ಈ ಅಪವಾದಗಳಿಗೆ ವರ್ಣಗಳ ಪರಿಸರವೇ ಕಾರಣವೆಂದು ಹರ್ಮನ್ ಗ್ರಾಸ್‌ಮನ್ (Hermon Grassmann) ತೋರಿಸಿಕೊಟ್ಟರೆ ಇಂಡೋಯುರೋಪಿಯನ್ ಭಾಷೆಗಳ ಸ್ವರಾಘಾತ (accent) ಗಳೂ ಅದಕ್ಕೆ ಕಾರಣಗಳೆಂದು ಖಚಿತಪಡಿಸಿದರು. ಕಾರ್ಲ್ ವೇರ್ನರ್ (Carl Verner) ವ್ಹಿಟ್ನಿ (Whitney), ಲೆಸ್ಕಿನ್ (Leskein), ಬ್ರುಗ್‌ಮನ್ (Brugmann) ಮೊದಲಾದವರು ಈ ಸಂದರ್ಭದಲ್ಲಿ ಭಾಷೆಯ ಬೆಳವಣಿಗೆಯ ವಿವಿಧ ಹಂತಗಳತ್ತ ಗಮನ ಹರಿಯಿಸಬೇಕೆಂದು ವಾದಿಸಿದರು.

ಒಟ್ಟಿನಲ್ಲಿ ಭಾಷೆಗಳ ತೌಲನಿಕ ಅಧ್ಯಯನಕ್ಕೆ ಭಾಷೆಗಳ ವಿವಿಧ ಹಂತಗಳ ವಿವರಣಾತ್ಮಕ ಅಧ್ಯಯನ ಅಗತ್ಯವೆಂಬ ಕಲ್ಪನೆಯನ್ನು ನಾವಿಲ್ಲಿ ಕಾಣಬಹುದು. ಈ ದೆಸೆಯಲ್ಲಿ ನಡೆದ ಪ್ರಯತ್ನಗಳೇ ೨೦ ನೆಯ ಶತಮಾನದ ವಿವರಣಾತ್ಮಕ ಭಾಷಾ ವಿಜ್ಞಾನ (Descriptive or Synchronic Linguistics).

೩. ವಿವರಣಾತ್ಮಕ ಭಾಷಾವಿಜ್ಞಾನ

ವೇದ, ತತ್ವಶಾಸ್ತ್ರ ಮೊದಲಾದ ವಿಷಯಗಳ ಅಂಗವಾಗಿ ಅಥವಾ ಪ್ರಮಾಣ ಭಾಷೆ (Standard language)ಗೆ ಸೀಮಿತವಾಗಿ ಭಾಷಾಭ್ಯಾಸ ಬಹಳ ಹಿಂದಿನ ಕಾಲದಿಂದ ನಡೆದುಬಂದಿರುವುದಕ್ಕೆ ಭಾರತೀಯ ಶಿಕ್ಷಾ, ವ್ಯಾಕರಣ, ನಿರುಕ್ತ್ಯಾದಿಗಳೇ ಸಾಕ್ಷಿಯಾಗಿವೆ. ಇದೇ ರೀತಿಯಲ್ಲಿ ಬೇರೆ ಬೇರೆ ಕಾಲದಲ್ಲಿ, ವಿವಿಧ ಸಂಸ್ಕೃತಿಗಳಲ್ಲಿ ಅ-ವೈಜ್ಞಾನಿಕ (Non-Scientific) ರೀತಿಯಲ್ಲಿ ಅರ್ಥಾತ್ ನಿಗಮನ (deductive) ಪದ್ಧತಿಯನ್ನು ಅಳವಡಿಸಿಕೊಂಡು ಭಾಷಾಭ್ಯಾಸ ಪ್ರಾಚೀನ ಕಾಲದಿಂದಲೂ ನಡೆದಿತ್ತು. ಆದರೆ ವೈಜ್ಞಾನಿಕ ರೀತಿಯಲ್ಲಿ ಅರ್ಥಾತ್ ಅನುಗಮನ (Inductive) ಪದ್ಧತಿಯನ್ನು ಜೀವಂತ ಬಾಷೆಗಳಿಗೆ ಅಳವಡಿಸಿಕೊಂಡು ಏಕಕಾಲಿಕ (Sychronic) ಭಾಷಾ ವಿಶ್ಲೇಷಣೆ ವಿವರಣೆಗಳಿಗೆ ನಾಂದಿ ಮಾಡಿದ ಆಧುನಿಕರಲ್ಲಿ ಸ್ವಿಸರ್ಲೇಂಡಿನ ಫರ್ದಿನಾಂದ್ ದ ಸೊಸ್ಯೂರ್ (Fordinand de Saussure). ಅಗ್ರಗಣ್ಯರು,

ಫರ್ದಿನಾಂದ್ ದ ಸೊಸ್ಯೂರ್ (1857-1913)

ಸ್ವಿಸರ್ಲೇಂಡಿಗೆ ವಲಸೆಹೋದ ಫ್ರೆಂಚ್ ಕುಟುಂಬದಲ್ಲಿ ಹುಟ್ಟಿದ (ನವೆಂಬರ್ ೧೭,೧೮೫೭)ಫರ್ದಿನಾಂದ್ ದ ಸೊಸ್ಯೂರ್ ಆಧುನಿಕ ಬಾಷಾವಿಜ್ಞಾನದ ಪಿತಾಮಹ. ಆತನಿಗಿಂತ ಪೂರ್ವದಲ್ಲಿ ಭಾಷಾಶಾಸ್ತ್ರಜ್ಞರು (philologists) ಭಾಷಾ ವ್ಯತ್ಯಾಸಗಳ ಅಧ್ಯಯನದಲ್ಲಿ ಅಥವಾ/ಮತ್ತು ಭಾಷೇತಿಹಾಸವನ್ನುಕಂಡು ಹುಡುಕುವುದರಲ್ಲಿ ನಿರತರಾಗಿದ್ದರಲ್ಲದೆ ಅದೇ ಭಾಷಾವಿಜ್ಞಾನವೆಂದು ತಿಳಿದುಕೊಂಡಿದ್ದರು(ನೋಡಿ ಭಾಗ-೨).

ಕಾಲಚಕ್ರಕ್ಕೆ ಸಿಲುಕಿ ನಿತ್ಯ ಹರಿಯುತ್ತಿರುವ ಭಾಷಾಪ್ರವಾಹವನ್ನು ತಡೆದು ನಿರ್ದಿಷ್ಟ ಕಾಲಕ್ಕೆ ಅದನ್ನು ಸೀಮಿತಗೊಳಿಸಿ ಆ ಕಾಲದಲ್ಲಿ ಸಿಗುತ್ತಿರುವ ಭಾಷೆಯ ಘಟಕಗಳನ್ನು ವಿವರಿಸಬೇಕು ಅರ್ಥಾತ್, ಭಾಷೆಯ ಇತಿಹಾಸ (diachronic linguistics) ದಲ್ಲಿ ಪ್ರಮುಖ ಘಟ್ಟಗಳನ್ನು ಗುರುತಿಸಿ ವಿವಿಧ ಘಟ್ಟಗಳಲ್ಲಿಯ ಏಕಕಾಲಿಕ ಭಾಷಾರಚನೆಯನ್ನು ವಿವರಿಸಬೇಕು (Synchronic linguistics) ಆಗ ಮಾತ್ರ ಭಾಷೆಯ ಸಮಗ್ರ ಹಾಗೂ ಪರಿಪೂರ್ಣ ಅಧ್ಯಯನ ಸಾಧ್ಯ ಹಾಗೂ ಸಾಧು ಎಂದು ಪ್ರಪ್ರಥಮವಾಗಿ ಸಾರಿದರು. ದ ಸೊಸ್ಯೂರ್ *Course de Linguistique General*. Paris : 1915 : translated as *Introduction to General Linguistices*, New York : 1959).

ದ ಸೊಸ್ಯೂರಿನ ಪ್ರಕಾರ ಭಾಷೆ ತ್ರಯೇಕ (triune) ಸ್ವರೂಪದ್ದು; ಒಂದೇ ಭಾಷೆಗೆ ರೂಪಗಳು ಮೂರು ಮೊದಲನೆಯದು ಲಾ ಪರೋಲ್ *La parole* ಅರ್ಥಾತ್ ಆಡು-ಮಾತು ಒಂದು ಭಾಷೆ ಒಂದು ಸಮಾಜದ ಸದಸ್ಯರಲ್ಲಿ ವೈಯಕ್ತಿಕ ವಾಗಿ ಅಭಿವ್ಯಕ್ತಗೊಂಡಾಗ ಆ ಭಾಷಾರೂಪವನ್ನು ದ ಸೊಸ್ಯೂರ್ 'ಲಾ ಪರೋಲ್' ಎಂದು ಕರೆದಿದ್ದಾನೆ. ಕರಿಯಪ್ಪನು ಮಾತಾಡುವ ಕನ್ನಡ ಬಿಳಿಯಪ್ಪನು ಮಾತನಾಡುವ ಕನ್ನಡಕ್ಕಿಂತ ಭಿನ್ನ. ಅವರು ಮಾತನಾಡುವುದು ವ್ಯಕ್ತಿ ಭಾಷೆ *(La parole)* ಗಳನ್ನು. ಇವುಗಳ ಮೊತ್ತ ಹಾಗೂ ಆ ಮೊತ್ತದಲ್ಲಿ ಕಂಡುಬರುವ ವ್ಯಾಕರಣ ನಿಯಮಗಳನ್ನು ಒಟ್ಟಾಗಿ ಲ ಲಂಗಾಜ್ *Le langage* ಸಮಾಜ ಭಾಷೆ) ಎಂದು ಆತ ಕರೆದಿದ್ದಾನೆ. ಸಮಾಜ ಭಾಷೆಯಿಂದ ವೈಯಕ್ತಿಕಾಂಶ ಗಳನ್ನು ಕಳೆದಾಗ ಅಲ್ಲಿ ಉಳಿಯುವ ಭಾಷಾ ವ್ಯವಸ್ಥೆಯನ್ನು ಆತ ಲಾ ಲುಂಗ್ (*La langue* : ಭಾಷೆ) ಎಂದು ಹೆಸರಿಸಿದ್ದಾನೆ. 'ಲಾ ಪರೋಲ್'ಅತೀ ಮೂರ್ತ ಸ್ವರೂಪದ್ದಾದರೆ 'ಲಾ ಲಾಂಗ್' ಅತೀ ಅಮೂರ್ತ ಸ್ವರೂಪದ್ದಾಗಿದೆ.

ದ ಸೊಸ್ಯೂರನ ಪ್ರಕಾರ. ಭಾಷಾವಿಜ್ಞಾನ ತನ್ನ ಅಧ್ಯಯನದ ವಸ್ತು (material object) ವನ್ನಾಗಿ ಇಟ್ಟುಕೊಳ್ಳಬೇಕಾದುದು ಭಾಷೆ (ಲಾ ಲಾಂಗ್) ಯನ್ನೇ ಹೊರತು ಅದರ ಮಿಕ್ಕ ರೂಪಗಳನ್ನಲ್ಲ. 'ಲಾ ಪರೋಲ್' ವ್ಯಕ್ತಿ ವ್ಯಕ್ತಿ ಗಳಿಗೆ ಭಿನ್ನ (heterogenous) ವಾಗುವುದರಿಂದ ಕೇವಲ ಲಾ ಪರೋಲಿನ ಆಧಾರದ ಮೇಲೆ ಸಮಗ್ರ ಭಾಷಾ ವೈಜ್ಞಾನಿಕ ಅಧ್ಯಯನ ಅಸಾಧ್ಯ, ವೈಜ್ಞಾನಿಕ ಅಧ್ಯಯನಕ್ಕೆ ಅದರ ವಸ್ತುವಿನಲ್ಲಿ ಇರಬೇಕಾದ ಸಮತೆ (homogeneity) ಹಾಗೂ ಸ್ಥಿರತೆ(Stabilility) ಭಾಷೆ(ಲಾ ಲಾಂಗ್)ಯಲ್ಲಿ ಮಾತ್ರ ದೊರಕುತ್ತದೆಂದು ಆತನ ಅಭಿಪ್ರಾಯ,

ಭಾಷೆಯಲ್ಲಿ ಎರಡು ಸ್ತರಗಳು : ಒಂದು, ಅರ್ಥ *(Signifie* : Signified/ concept);ಇನ್ನೊಂದು, ಅದನ್ನು ಅಭಿವ್ಯಕ್ತಪಡಿಸುವ ಶ್ರವಣ ರೂಪ (Significant signifier / form). ಶ್ರಾವಣ ರೂಪ (acoustic image)ದ ಅತ್ಯಲ್ಪ ಅರ್ಥರಹಿತ ವೈದೃಶಾತ್ಮಕ ಘಟಕವೇ ಧ್ವನಿಮ (phoneme)[4]ಧ್ವನಿಯಿಂದುಂಟಾದ ಅತ್ಯಲ್ಪ ಅರ್ಥ ಸಹಿತ ಘಟಕ, ಸರಳರೂಪ (Simple Sign) ಆದರೆ ಅಂತಹ ಎರಡು ಅಥವಾ ಹೆಚ್ಚಿನ ಘಟಕಗಳಿಂದುಂಟಾದ ಬೃಹದ್ಘಟಕ, ರಚನಾರೂಪ (Syntagme) ಎಂದು ಪರಿಗಣಿಸಲಾಗುತ್ತದೆ· ಭಾಷೆಯಲ್ಲಿ ಅರ್ಥಕ್ಕೂ ರೂಪಕ್ಕೂ ಅನ್ಯೋನ್ಯ ಸಂಬಂಧ- ವಿದೆಯಾದುದರಿಂದ ಭಾಷಾವಿಜ್ಞಾನದಲ್ಲಿ ಇವೆರಡಕ್ಕೂ ಸ್ಥಾನವಿರಬೇಕೆಂದು

4. ಧ್ವನಿಮಾದಿ ಭಾಷಾಘಟಕಗಳನ್ನು ಕುರಿತಾದ ಸಂಪೂರ್ಣ ಮಾಹಿತಿಗೆ ನೋಡಿ : ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು, ೧೯೭೫. ಧಾರವಾಡ ; ಕರ್ನಾಟಕ ವಿಶ್ವವಿದ್ಯಾಲಯ.

ದ ಸೊಸ್ಸ್ಯೂರಿನ ಅಭಿಮತ, ಈ ಯಾದೃಚ್ಛಿಕ (arbitrnry) ರೂಪಗಳು ಸರಪಳಿಯ ಕೊಂಡಿಯಂತೆ ಒಂದರ್ನಂತರ ಇನ್ನೊಂದಾಗಿ–ಸಾಲಾಗಿ (linear) ಬಂದು ಸಂಯೋಜನಾ ಸಂಬಂಧ (Syntagmatic relation)ವುಳ್ಳವುಗಳಾಗಿವೆ. [5] ಸಾಲಾಗಿ ಬರುವ ಈ ರೂಪಗಳಲ್ಲಿ ಅರ್ಥ ಮತ್ತು / ಅಥವಾ ರೂಪ ವ್ಯತ್ಯಾಸಗಳಿರುತ್ತವೆ: ಅರ್ಥಾತ್ ಈ ರೂಪಗಳು ವ್ಯತ್ಯಾಸಾತ್ಮಕ ಸಂಬಂಧ (paradigmatic relation)ದಲ್ಲಿರುತ್ತವೆ. ಈ ಸಂಬಂಧದ್ವಯವನ್ನು ಗುರುತಿಸಿ ಅಲ್ಲಿಯ ಘಟಕಗಳ ರೂಪ, ವಿತರಣೆ ಮತ್ತು ಅರ್ಥಗಳನ್ನು ಭಾಷಾವಿಜ್ಞಾನ ವಿವರಿಸಬೇಕಾಗುತ್ತದೆ. ಹೀಗೆ ವಿವರಿಸುವಾಗ ಭಾಷಾ ಪ್ರವಾಹವನ್ನು ಒಂದು ಕಾಲಕ್ಕೆ ಸ್ಥಗಿತಗೊಳಿಸಬೇಕಾಗುತ್ತದೆ; ಒಂದು ಸಮಾಜಕ್ಕೆ ಸೀಮಿತಗೊಳಿಸಬೇಕಾಗುತ್ತದೆ. ಹೀಗೆ ಮಾಡದಿದ್ದಲ್ಲಿ ವೈಜ್ಞಾನಿಕ ಭಾಷಾಸಂಶೋಧನೆ ಅಸಾಧ್ಯವೆಂದು ದ ಸೊಸ್ಸ್ಯೂರ್ ಮೊಟ್ಟಮೊದಲಿಗೆ ಸಾರಿ ಆಧುನಿಕ ಭಾಷಾ ವಿಜ್ಞಾನಕ್ಕೆ ಭದ್ರವಾದ ಬುನಾದಿಯನ್ನು ಹಾಕಿದನು.

ಎಡ್ವರ್ಡ್ ಸಪೀರ್ (೧೮೮೪–೧೯೩೯)

ಪ್ರತಿಯೊಂದು ಭಾಷೆಗೂ ವಿಶಿಷ್ಟ ವ್ಯವಸ್ಥೆಯೊಂದಿರುತ್ತದೆ. ಕಾರಣ, ಒಂದು ಭಾಷೆಯನ್ನು ವಿವರಿಸುವಾಗ ಭಾಷಾವಿಜ್ಞಾನ ಅನ್ಯಭಾಷೆಯ ಪ್ರಭಾವಕ್ಕೊಳಗಾಗಬಾರದು. ಭಾಷೆ ಒಂದು ಕಲಿತ (non-instinctive) ಸಂಪರ್ಕ ಮಾಧ್ಯಮ (*Language* : An Introduction to the Study of Speech, 1921)ಅಲ್ಲಿಯ ಸಂಕೇತಗಳು ಯಾದೃಚ್ಛಿಕ. ಸಮಾಜವೇ ಭಾಷೆಯ ಉಗಮ ಸ್ಥಾನ(situs) ಆದುದರಿಂದಲೇ ಒಂದು ವ್ಯಕ್ತಿ ಸಮಾಜದ ಹೊರಗೆ ಇದ್ದು ನಡೆಯಬಲ್ಲನು; ಆದರೆ ಆ ಸಮಾಜದ ಮಾತನ್ನು ಮಾತ್ರ ಆಡಲಾರನು ಎಂದು ಎಡ್ವರ್ಡ್ ಸಪೀರನು (Edward Sapir) ತನ್ನ ಮೇಲಿನ ಗ್ರಂಥದಲ್ಲಿ ಪ್ರತಿಪಾದಿಸಿದನು.

ಭಾಷಾರೂಪಗಳನ್ನು ಗುರುತಿಸುವಲ್ಲಿ ಅರ್ಥವನ್ನು ಕಡೆಗಣಿಸಬಾರದೆಂಬ ಎಚ್ಚರಿಕೆಯನ್ನು ಸಪೀರ್ ನೀಡಿದ್ದಾನೆಯಲ್ಲದೆ ಭಾಷಾಧ್ಯಯನದಲ್ಲಿ ಭಾಷಾರೂಪಗಳೊಡನೆ ಅವುಗಳ ಪರಸ್ಪರ ಸಂಬಂಧಗಳನ್ನು ಕಂಡುಹುಡುಕಿ ವಿವರಿಸಬೇಕೆನ್ನುತ್ತಾನೆ ಆತ. ಭಾಷಾವಿವರಣೆಯಲ್ಲಿ ಕೇವಲ ಧ್ವನ್ಯಾತ್ಮಕ ವಿವರಣೆ ಮತ್ತು ಘಟಕಗಳ ಸಂಯೋಜನೆಯ ವರ್ಣನೆ ಸಾಲದು; ಅವುಗಳ ಕ್ರಿಯೆಪ್ರಕ್ರಿಯೆಗಳನ್ನು ಗಮನಿಸ–

---

5. ಹೊಕೆಟನು (Hockett) ಸೂಚಿಸಿದ ಭಾಷೆಯ ಸಪ್ತವೈಶಿಷ್ಟಗಳನ್ನು-ದ್ವೈತ ಭಾವ ಉತ್ಪಾದಕತೆ, ಯಾದೃಚ್ಛಿಕತೆ, ವಿನಿಮಯತೆ, ವಿಶಿಷ್ಟತೆ, ಸ್ಥಾನಪಲ್ಲಟತೆ ಮತ್ತು ಸಂಸ್ಕೃತಿ ವಾಹಕತೆ ಕುರಿತು ನೋಡಿ : ವಿಲ್ಯಂ ಮಾಡ್ರ, ಅನ್ಯಭಾಷಾಭೋಧೆ. (೧೯೭೫) ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ

ಬೇಕೆಂಬ ಎಚ್ಚರಿಕೆಯನ್ನು ರೂಪಾತ್ಮಕ ವಿಶ್ಲೇಷಣೆಗೆ ಮಹತ್ವವನ್ನೀಯುತ್ತಿದ್ದ ಅಂದಿನ ಭಾಷಾವಿಜ್ಞಾನಿಗಳಿಗೆ ಆತ ನೀಡಿದ.

ಸಪೀರನಿಗೆ ಧ್ವನಿಮವೆಂಬುದು ಕ್ರಿಯಾತ್ಮಕ ಅರ್ಥವುಳ್ಳ ಘಟಕ. ಧ್ವನಿಮ ವ್ಯವಸ್ಥೆ ಎಲ್ಲ ಭಾಷೆಗಳಲ್ಲಿಯೂ ಏಕರೂಪದಲ್ಲಿಲ್ಲ. ಈ ವ್ಯವಸ್ಥೆ ಪ್ರತಿಯೋರ್ವ ಭಾಷಿಗನಲ್ಲಿ ಅಂತರ್ಗತವಾಗಿರುತ್ತದೆ. ಭಾಷಾವಿಶ್ಲೇಷಣೆಯಲ್ಲಿ ವಾಕ್ಯವೇ ಪ್ರಮುಖ ಹಾಗೂ ಪರಿಪೂರ್ಣ ಘಟಕ; ಯಾಕೆಂದರೆ, ಇಲ್ಲಿ ಒಂದು ಪರಿಪೂರ್ಣ ವಿಚಾರ ಒಂದು ಪೂರ್ಣ ರೂಪದ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.

ಭಾಷೆಗೂ ಜನಾಂಗ(race)ಕ್ಕೂ ಸಂಬಂಧವಿಲ್ಲವೆಂಬುದು ಸಪೀರನ ನಿಲುವು. ಒಂದು ಜನಾಂಗಕ್ಕೆ ಸೇರಿದವರು ಇನ್ನೊಂದು ಜನಾಂಗದ ಭಾಷೆಯನ್ನು ಆಡಬಲ್ಲರು, ಆಡುತ್ತಾರೆ. ಆದರೆ ಭಾಷೆಗೂ ಸಂಸ್ಕೃತಿಗೂ ನಿಕಟ ಸಂಬಂಧವಿದೆ. ಈ ಸಂಬಂಧವನ್ನು ಭಾಷೆಯ ಪದಗಳಲ್ಲಿ ನಾವು ಗುರುತಿಸಬಹುದು. ಭಾಷೆ ತನ್ನ ಪ್ರಭಾವವನ್ನು ಸಮಾಜದ ವಿಚಾರ ಹಾಗೂ ಕ್ರಿಯೆಗಳ ಮೇಲೆ ಬೀರುತ್ತದೆಂದು ಆತನ ವಾದ ಮುಂದೆ ಸಪೀರ್-ವ್ಹರ್ಫ್ ಪ್ರಮೇಯ (Sapir-Whorf hypothesis) ಎಂದು ಪ್ರಸಿದ್ಧಿಯನ್ನು ಪಡೆಯಿತು. ನಮ್ಮ ಅನುಭವಗಳ ಸರ್ವಾಭಿವ್ಯಕ್ತಿಗೆ ಭಾಷೆ ಎಷ್ಟೋ ಸಲ ತೊಡಕನ್ನುಂಟು ಮಾಡುತ್ತದೆ. ಮಾನವನಾಗಿ ಮಾನವನ ಅನುಭವ ಒಂದು ಹಂತವಲ್ಲಿ ಸಮಾನವಾದರೂ ಅದರ ಅಭಿವ್ಯಕ್ತಿ ಭಿನ್ನರೂಪಿಯಾಗಿರುವುದರಿಂದ ಭಿನ್ನ ಭಿನ್ನ ಭಾಷೆಗಳು ಹುಟ್ಟುತ್ತವೆಂದು ಆತನ ಅಭಿಮತ.

ಲೆನಾರ್ಡ್ ಬ್ಲೂಮ್‌ಫೀಲ್ಡ್ (1887-1949)

ಇಲ್ಲಿಯ ತನಕ ದ ಸೊಸ್ಯೂರನಾಗಲಿ, ಸಪೀರನಾಗಲಿ ಭಾಷಾವಿಜ್ಞಾನದಲ್ಲಿ ರೂಪ ಅರ್ಥಗಳೆರಡಕ್ಕೂ ಮಹತ್ವವನ್ನಿತ್ತಿದ್ದರು. ಆದರೆ ಲೆನಾರ್ಡ ಬ್ಲೂಮ್-ಫೀಲ್ಡನು (Leonard Bloomfield)ಅಗೋಚರ ಅರ್ಥಕ್ಕಿಂತ ಗೋಚರ ರೂಪಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟನು. (*Language* 1933). ಭಾಷಾರೂಪಗಳು ಕಾಲದಿಂದ ಕಾಲಕ್ಕೆ ಪಡೆಯುವ ಅರ್ಥ ಹಾಗೂ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುವ ಅವುಗಳ ಉಚ್ಚಾರ – ಇವೆರಡನ್ನೂ ಭಾಷಾವಿಜ್ಞಾನದ ವ್ಯಾಪ್ತಿಯಿಂದ ಹೊರಗೆ ಅಭ್ಯಸಿಸಬಹುದು. ಆದುದರಿಂದ, ಧ್ವನಿ ಉಚ್ಚಾರಣೆ ಮತ್ತು ಅರ್ಥವಿವೇಚನೆಗಳಿಗೆ ಭಾಷಾವಿಜ್ಞಾನದಲ್ಲಿ ಗೌಣಸ್ಥಾನ.

ಬ್ಲೂಮ್‌ಫೀಲ್ಡನಿಗೆ ಭಾಷೆಯೆಂದರೆ ನಿರ್ದಿಷ್ಟ ಸಮಾಜದಲ್ಲಿ ಸಂಪರ್ಕ ಸಾಧನವಾಗಿ ಕಲಿತುಕೊಂಡ ಸಂಜ್ಞಾ ವ್ಯವಸ್ಥೆ, ಈ ಸಂಜ್ಞಾವ್ಯವಸ್ಥೆಯ ರಚನೆಯ ವಿಶ್ಲೇ-ಷಣೆಯೇ ಭಾಷಾವಿಜ್ಞಾನಿಗೆ ಪ್ರಮುಖವೇ ಹೊರತು ಅವು ನಿರ್ದೇಶಿಸುವ ಅರ್ಥವೂ

ಅಲ್ಲ, ಆ ವ್ಯವಸ್ಥೆಯು ಕಾರ್ಯಕಾರಣಗಳೂ ಅಲ್ಲ. ಎರಡನೆಯದಾಗಿ. ಪ್ರತಿಯೊಂದು ಭಾಷೆಯು ರೌಪಿಕ ವ್ಯವಸ್ಥೆ ಇನ್ನೊಂದು ಭಾಷೆಗೆ ಸಮಾನವಾಗಿರುವುದಿಲ್ಲ, ಆದುದರಿಂದ ಆಯಾಯ ಭಾಷೆಗೆ ಭಾಷಾ ವಿಶ್ಲೇಷಣೆ ಆಯಾಯ ಸೀಮಿತವಾಗಿರಬೇಕು.

ಭಾಷೆಯನ್ನಾಡುವ ಪೂರ್ವದಲ್ಲಿ ಕೆಲವು ಘಟನೆಗಳು ನಡೆಯುತ್ತವೆ. ಈ ಘಟನೆಗಳ ಅನುಭವ ನಮಗೆ ಆದಾಗ ನಮ್ಮಲ್ಲಿ ಪ್ರತಿಕ್ರಿಯೆ ಉಂಟಾಗುತ್ತದೆ. ಈ ಪ್ರತಿಕ್ರಿಯೆ ಭಾಷಿಕವಾಗಿ ಅಭಿವ್ಯಕ್ತಗೊಳ್ಳಬಹುದು. ಈ ಅಭಿವ್ಯಕ್ತಿಯನ್ನು ಪುನರುಚ್ಚಿಸಿದಾಗ ಹಲವಾರು ಸೂಕ್ಷ್ಮ ವ್ಯತ್ಯಾಸಗಳುಂಟಾಗುತ್ತವೆಯಾದರೂ ಅದೇ ಭಾಷೆಯ ಕೇಳುಗನಿಗೆ ಇದರಿಂದ ತೊಂದರೆಯಾಗುವುದಿಲ್ಲ. ನಮ್ಮ ಮಾತಿನ ಘಟಕಗಳಲ್ಲಿ ವೈದೃಶಾತ್ಮಕ ಮತ್ತುಅವೈದೃಶಾತ್ಮಕ ಗುಣಗಳಿರುವುದೇ ಇದಕ್ಕೆಕಾರಣ. ವೈದೃಶಾತ್ಮಕತೆ ಕಡಿಮೆಯಾದಂತೆ ಕೇಳುಗನಿಗೆ ಅರ್ಥ ತಿಳಿದುಕೊಳ್ಳುವುದು ಸುಲಭ ಸಾಧ್ಯವಾಗುತ್ತದೆ. ಉದಾಹರಣಾರ್ಥವಾಗಿ ಪೇಟೆ ಮತ್ತು ಬೇಟೆ ಎಂಬ ಪದಗಳನ್ನು ಸೋಡಿಸಿದಾಗ ಇವುಗಳಲ್ಲಿ ಪಕಾರ ಮತ್ತು ಬಕಾರ ಮಾತ್ರ ಭಿನ್ನ; ಉಳಿದವು ರೌಪಿಕವಾಗಿ ಸಮಾನ. ಬಕಾರ ತನ್ನ ಘೋಷತ್ವ ಗುಣದಿಂದಾಗಿ ಮಾತ್ರ ಪಕಾರಗಿಂತ ಭಿನ್ನ; ಉಭಯೋಷ್ಠ್ಯ ಹಾಗೂ ಸ್ಪರ್ಶಗಳೆಂಬ ಅವುಗಳ ಇನ್ನಿತರ ಲಕ್ಷಣಗಳು ಅವುಗಳಿಗೆ ಸಮಾನ. ಆದ್ದರಿಂದಲೇ ಇವು ಅವೈದೃಶಾತ್ಮಕ ಗುಣಗಳಾಗಿರುತ್ತವೆ: ಘೋಷತ್ವ ಮಾತ್ರ ವೈದೃಶಾತ್ಮಕ ಗುಣವಾಗಿರುತ್ತದೆ. ಇಂತಹ ವೈದೃಶಾತ್ಮಕ ಗುಣಗಳ ಮೊತ್ತವೇ ಧ್ವನಿಮವೆಂದು ಬ್ಲೂಮ್‌ಫೀಲ್ಡನು ಭಾಷೆಯ ಈ ಅರ್ಥರಹಿತ ಅತ್ಯಲ್ಪ ಘಟಕದ ವ್ಯಾಖ್ಯೆಯನ್ನಿತ್ತಿದ್ದಾನೆ. ಈ ವೈದೃಶಾತ್ಮಕ ಗುಣಗಳನ್ನು ಉಚ್ಚರಿಸುವ ಹಾಗೂ ಗುರುತಿಸುವ ಸಾಮರ್ಥ್ಯ ಭಾಷಿಗರಿಗೆ ಇರುತ್ತದೆ. ಇದರಿಂದಾಗಿ ಪರಸ್ಪರ ವಿಚಾರವಿನಿಮಯ ಅವರಲ್ಲಿ ಸರಳವಾಗಿ ನಡೆಯುತ್ತದೆ.

ವೈದೃಶಾತ್ಮಕ ಗುಣಗಳನ್ನು ಗುರುತಿಸಲು (ಪೇಟೆ ÷ ಬೇಟೆಯಂತಹ) ಕನಿಷ್ಠತಮ ಯುಗ್ಮಗಳು ಬ್ಲೂಮ್‌ಫೀಲ್ಡನ ವಿಶ್ಲೇಷಣಾ ಪದ್ಧತಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಆತ ಭಾಷಾಘಟಕಗಳನ್ನು ವಿಭಾಜಕ ಮತ್ತ ಅವಿಭಾಜಕಗಳೆಂದು ವಿಭಜಿಸಿ, ವಿಭಾಜಕಗಳನ್ನು ವ್ಯಂಜನ ಮತ್ತು ಸ್ವರಗಳೆಂದು ವರ್ಗೀಕರಿಸಿ ಇವುಗಳನ್ನು ಉಪವರ್ಗೀಕರಿಸಿದ್ದಾನೆ.[6]

ಧ್ವನಿಮಗಳನ್ನು ನಿರ್ಧರಿಸಿದ ಬಳಿಕ ಅವುಗಳ ಅರ್ಥಪೂರ್ಣ ಅತ್ಯಲ್ಪ ಘಟಕಗಳು ಮತ್ತು ಅವುಗಳ ವಿಶ್ಲೇಷಣೆಯನ್ನು ಅರ್ಥವಿಜ್ಞಾನ (Semantics)

---

6. ಧ್ವನಿಮಗಳ ಪ್ರಚಲಿತ ವರ್ಗೀಕರಣಕ್ಕೆ ನೋಡಿ : ಮಾಷ್ತ, 1975 : 1-21: 22-32.

ದೊಳಗೆ ನಾವು ಕಾಣಬಹುದು. ಈ ಭಾಗವನ್ನು ಬ್ಲೂಮ್‌ಫೀಲ್ಡನು ವ್ಯಾಕರಣ ಮತ್ತು ನಿಘಂಟು (Lexicon) ಎಂದು ಎರಡು ವಿಭಾಗಗಳನ್ನಾಗಿ ಮಾಡುತ್ತಾನೆ. ಆ ಬಳಿಕ ವ್ಯಾಕರಣವನ್ನು ಆಕೃತಿಮ ವಿಜ್ಞಾನ (morphology) ಮತ್ತು ವಾಕ್ಯ ವಿಜ್ಞಾನ (Syntax) ಎಂದು ವಿಂಗಡಿಸುತ್ತಾನೆ. ಮೊದಲನೆಯದರಲ್ಲಿ ಪದರಚನೆ, ಎರಡನೆಯದರಲ್ಲಿ ಪದಪುಂಜ (Phrase) ದ ರಚನೆಗಳು ಪರಶೀಲಿಸಲಾಗುತ್ತವೆ. ನಿಘಂಟುವಿನಲ್ಲಿ ರೂಪಗಳ ಸಂಪೂರ್ಣ ಯಾದಿ ಕೊಡಲಾಗುತ್ತದೆ. ವ್ಯಾಕರಣವಲ್ಲಿ ವ್ಯಾಕರಣಾತ್ಮಕ ಸಂಯೋಜನೆಯನ್ನು–ಟ್ಯಾಕ್ಸೀಮ್ (Taxeme) ಕುರಿತು ವಿವರಣೆ ಸಿಗುತ್ತದೆ. ಟ್ಯಾಕ್ಸೀಮಿನ ಅತ್ಯಲ್ಪ ಘಟಕವೇ ಟಗ್ಮೀಮ್ (Tagmeme) ಅದು ಅಭಿ-ವ್ಯಕ್ತೀಕರಿಸುವ ಅರ್ಥವೇ ಎಪಿಸೀಮ್(Episeme) ಟ್ಯಾಕ್ಸೀಮಿನ ವೈವಿಧ್ಯತೆಯಿಂದಾಗಿ ಪದಪುಂಜರಚನೆ / ವಾಕ್ಯ ರಚನೆ ವೈವಿಧ್ಯತೆಯನ್ನು ಪಡೆಯುತ್ತದೆ. ಆಕೃತಿಮಗಳು ಕ್ರಮಬದ್ಧವಾಗಿ ಪ್ರತ್ಯಯೀಕರಣಕ್ಕೆ (Affixation) ಒಳಗಾಗುತ್ತವೆ. ಒಂದೇ ರಾಚನಿಕಾರ್ಥ (Structural meaning) ಹಾಗೂ ಶಬ್ದಾರ್ಥ (Lexical meaning) ಗಳ ಆಕೃತಿಮಗಳು ಒಂದೇ ಆಕೃತಿಮ ವರ್ಗಕ್ಕೆ(Morpheme clas)ಸೇರಿದವುಗಳೆಂದು ಪರಿಗಣಿಸಲಾಗುತ್ತವೆ. ಇದು ಎಲ್ಲ ಭಾಷೆಗಳಿಗೂ ಅನ್ವಯವಾಗುವಂತಹ ವಿಷಯ. ಪ್ರತಿಯೊಂದು ವಾಕ್ಯವನ್ನು ಅವರ ನಿಕಟತಮ ಘಟಕಗಳನ್ನಾಗಿ (Immediate constituents/Ics) ವಿಭಜಿಸಬಹುದು. ಈ ರೀತಿ ಭಾಷೆಯನ್ನು ರೌಪಿಕವಾಗಿ (Formally) ವಿಶ್ಲೇಷಿಸುವ ಭಾಷಾವಿಜ್ಞಾನವನ್ನು ಸ್ವತಂತ್ರ ವಿಜ್ಞಾನವೆಂದು ಸಾರಿದನು.

ಬ್ಲೂಮ್‌ಫೀಲ್ಡಿನಿಂದ ಪ್ರಭಾವಿತಗೊಂಡ ಭಾಷಾವಿಜ್ಞಾನಿಗಳು ದತ್ತ ಸಂಗ್ರಹಣೆ (Gathering) ಹಾಗೂ ಸಂಯೋಜನೆ (Collation) ಗಳ ಮೂಲಕ ಭಾಷಿಕ ಅಧ್ಯಯನವನ್ನು ಹುರುಪಿನಿಂದ ಮುಂದುವರೆಸಿದರು. ದತ್ತ ಸಂಗ್ರಹಣೆಗೆ ನಾನಾ ವಿಧಾನಗಳನ್ನು ಬೆಳೆಯಿಸಿದರು.[7] ವೈಜ್ಞಾನಿಕ ವಿಶ್ಲೇಷಣಾಪದ್ಧತಿಗಳ ಮೂಲಕ ಧ್ವನಿಮ, ಆಕೃತಿಮವೇ ಮೊದಲಾದ ಭಾಷಿಕ ಮೂಲಘಟಕಗಳನ್ನು ಹುಡುಕಿ ಅವುಗಳ ವಿವಿಧ ರಚನೆಗಳನ್ನು ವಿವರಿಸುವುದು ಸುಲಭ ಸಾಧ್ಯವಾಯಿತು.

೪. ಅಮೇರಿಕನ್ ಭಾಷಾವಿಜ್ಞಾನ ಪಂಥ

ಭಾಷಾವಿಜ್ಞಾನೇತಿಹಾಸದಲ್ಲಿ ಬ್ಲೂಮ್‌ಫೀಲ್ಡ್ ಒಂದು ಮೈಲುಗಲ್ಲು. ಆತನ ಪ್ರಭಾವಕ್ಕೊಳಗಾದ ಪ್ರಮುಖ ಭಾಷಾ ವಿಜ್ಞಾನಿಗಳು ಅಮೇರಿಕನ್ನ ರಾದುದರಿಂದ ಈ ಭಾಷಾವಿಜ್ಞಾನ ಪಂಥವನ್ನು ಅಮೇರಿಕನ್ ಭಾಷಾ ವಿಜ್ಞಾನ ಪಂಥವೆಂದು ಕರೆಯುತ್ತಾರೆ. ಈ ಪಂಥದಲ್ಲಿ ಭಾಷೆಯು ಧ್ವನಿಮಾತ್ಮಕ


7. ಜಾನಪದವಿಜ್ಞಾನ (Folkloristics) ದಲ್ಲಿಯೂ ಪಚ್ಚುಕಡಿಮೆ ಇವುಗಳನ್ನೇ ಬಳಸುತ್ತಾರೆ : ನೋಡಿ, ವಾಡ್ತ 1982

ವಿಶ್ಲೇಷಣೆಗೆ ಮಹತ್ವದ ಸ್ಥಾನ ದೊರಕಿತು. ಹ್ಯಾರಿಸ್ (Harris) ಹೊಕೆಟ್ (Hockett) ನಾಯ್ಡ (Nida) ಪೈಕ್ (Pike) ಬ್ಲೊಕ್ (Blocn) ಟ್ರೇಗರ್ (Trager)ಮೊದಲಾದವರು ಧ್ವನಿಮವಿಜ್ಞಾನ ಮತ್ತು ಆಕೃತಿಮ ವಿಜ್ಞಾನಗಳಲ್ಲಿ ಅತಿ ಶೀಘ್ರದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದರು. ಒಂದೇ ಪಂಥಕ್ಕೆ ಸೇರಿದ ಈ ಭಾಷಾ ವಿಜ್ಞಾನಿಗಳು ಗುರುವಿನ ಗುಲಾಮರಾಗಿ ಉಳಿಯದೆ ಸ್ವಂತಿಕೆಯನ್ನು ಮೆರೆದಿದ್ದಾರೆಂಬುದನ್ನು ಗಮನಿಸಬೇಕು.

ಪ್ರಸ್ತುತದಲ್ಲಿ ಅಮೇರಿಕನ್ ಪಂಥದ ಪ್ರತಿನಿಧಿಯಾಗಿ ಸಿ. ಎಫ್. ಹೊಕೆಟ್‌ನ ಕೆಲವು ವಿಚಾರಗಳನ್ನು ಗಮನಿಸಬಹುದು. ಭಾಷೆಯೆಂಬುದು ಒಂದು ಸಮಾಜದಲ್ಲಿ ರೂಢಿಯಿಂದಾಗಿ ಉಂಟಾದ ಮೌಖಿಕ ಸಂಕೇತಗಳ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಧ್ವನಿಮಾತ್ಮಕ ವ್ಯವಸ್ಥೆ ಮತ್ತು ವ್ಯಾಕರಣ ವ್ಯವಸ್ಥೆಗಳಿವೆ. ವ್ಯಾಕರಣ ವ್ಯವಸ್ಥೆಯಲ್ಲಿ ಆಕೃತಿಮಾತ್ಮಕ ಮತ್ತು ವಾಕ್ಯಾತ್ಮಕವೆಂಬ ಎರಡು ಉಪವ್ಯವಸ್ಥೆಗಳಿವೆ. ಧ್ವನಿಮಗಳ ಮೊತ್ತ ಮತ್ತು ಸಂಯೋಜನ (ಸಂಧಿ)ಯೇ ಧ್ವನಿಮಾತ್ಮಕ ವ್ಯವಸ್ಥೆ. ಆಕೃತಿಮಗಳ ಮೊತ್ತ ಮತ್ತು ಅವುಗಳ ಸಾಂದ್ರ ರಚನೆ (Tight construction) ಯೇ ಆಕೃತಿಮಾತ್ಮಕ ವ್ಯವಸ್ಥೆ (Morphological Structure) ಆಕೃತಿಮಗಳ ಅಸಾಂದ್ರ ರಚನೆ (Non-tight construction) ಯೇ ವಾಕ್ಯಾತ್ಮಕ ವ್ಯವಸ್ಥೆ (Syntactic structure) ಈ ಉಪವ್ಯವಸ್ಥೆಗಳು ಭಾಷಾ ವೈಜ್ಞಾನಿಕ ದೃಷ್ಟಿಯಿಂದ ಭಾಷಾವ್ಯವಸ್ಥೆಯ ತಿರುಳು (Core) ಇವು ಭಾಷಾವಿಜ್ಞಾನದ ವ್ಯಾಪ್ತಿಗೆ ನೇರವಾಗಿ ಒಳಗಾಗತಕ್ಕಂಥವುಗಳು.

ಭಾಷೆಯಲ್ಲಿಯ ಅರ್ಥವ್ಯವಸ್ಥೆ (Semantic structure) ಮತ್ತು ಧ್ವನಿ ವ್ಯವಸ್ಥೆ (Phonetic Structure) ಗಳನ್ನು ಇತರ ವಿಜ್ಞಾನಗಳ, ಶಾಸ್ತ್ರಗಳ ವ್ಯಾಪ್ತಿಯಲ್ಲಿ ಪರಿಶೀಲಿಸಬಹುದಾದವುಗಳು. ಆದುದರಿಂದ, ಅಷ್ಟರ ಮಟ್ಟಿಗೆ ಭಾಷಾ ವಿಜ್ಞಾನಕ್ಕೆ ಬಾಹ್ಯ (Peripheral) ವಾದವುಗಳು. ಅದರೆ ಇವನ್ನು ಭಾಷಾವಿಜ್ಞಾನದಲ್ಲಿ ಸಂಪೂರ್ಣವಾಗಿ ಬಿಡಲಾಗುವುದಿಲ್ಲ.

ಭಾಷಾವ್ಯವಸ್ಥೆಗಳ ಈ ವರ್ಗೀಕರಣವನ್ನು ವೃಕ್ಷ ಚಿತ್ರದ ಮೂಲಕ ಈ ಕೆಳಗಿನಂತೆ ಸ್ಪಷ್ಟೀಕರಿಸಬಹುದು:



೫. ಬ್ರಿಟಿಷ್ ಭಾಷಾ ವಿಜ್ಞಾನ ಪಂಥ

ಭಾಷಿಕ ಅಧ್ಯಯನದಲ್ಲಿ ಅಮೇರಿಕನ್ ಪಂಥದವರು ಧ್ವನಿಮಾತ್ಮಕ ವ್ಯವಸ್ಥೆಯ ವಿಶ್ಲೇಷಣೆಗೆ ಹೆಚ್ಚು ಮಹತ್ವವನ್ನಿತ್ತರೆ ಬ್ರಿಟಿಷ್ ಪಂಥದವರು ಧ್ವನ್ಯಾತ್ಮಕ ವ್ಯವಸ್ಥೆಯ ಅವಗಾಹನೆಗೆ ಪ್ರಾಧಾನ್ಯತೆಯನ್ನಿತ್ತರು. ಈ ಪಂಥದಲ್ಲಿ ಜೆ. ಆರ್. ಫೇರ್ಥ್ (J. R. Firth) ಅಗ್ರಗಣ್ಯರು.

ಜೆ. ಆರ್. ಫೇರ್ಥ್ (೧೮೯೦-೧೯೬೦):

ಫೇರ್ಥ್‌ನ ಪ್ರಕಾರ ಭಾಷೆಯ ಮೂಲ ಘಟಕ ವಾಕ್ಯ, ರೂಪಿಕವಾಗಿ ಈ

ವಾಕ್ಯ, ಧ್ವನ್ಯಾತ್ಮಕ ಸಂಕೇತಗಳ ಸರಪಳಿ (Catenation), ನಿರ್ದಿಷ್ಟ ಸಂದರ್ಭ (Con-text)ದಲ್ಲಿ ಬಳಸುವಂತಹ ವಾಕ್ಯಗಳೇ ಭಾಷಾವಿಜ್ಞಾನದ ವಸ್ತು. ವಸ್ತುಸ್ಥಿತಿ ಹೀಗಿರುವಾಗ ಅಮೇರಿಕನ್ ಪಂಥದವರ ಧ್ವನಿಮಾತ್ಮಕ ವಿಶ್ಲೇಷಣೆಯ ಮೂಲಕ ಭಾಷೆಯ ನೈಜ ವಿವರಣೆ ಸಿಗದೆಂದು ಆತನ ಅಭಿಪ್ರಾಯ. ಭಾಷೆ ಸ್ವಭಾವತಹ ಧ್ವನ್ಯಾತ್ಮಕ (Phonetic)ವಾಗಿರುವುದರಿಂದ ಧ್ವನ್ಯಾತ್ಮಕ ವಿಶ್ಲೇಷಣೆಯ ಮೂಲಕವೇ ಭಾಷಾ ವಿವರಗಳನ್ನು ಕೊಡಬೇಕೆಂದು ಆತನ ಅಭಿಮತ.

ಭಾಷೆಯಲ್ಲಿ ಒಂದು ಧ್ವನಿಯ ಬದಲು ಇನ್ನೊಂದು ಧ್ವನಿ ಬಂದು ಅರ್ಥ ಬದಲಾವಣೆಗೆ ಕಾರಣವಾಗುತ್ತದೆ. ಕೆಲವೊಮ್ಮೆ ಒಂದರ ನಂತರ ಇನ್ನೊಂದಾಗಿಯೂ ಕೆಲವೊಮ್ಮೆ ಒಂದರೊಡನೆ ಇನ್ನೊಂದಾಗಿಯೂ ಉಚ್ಚಾರಗೊಳ್ಳುತ್ತವೆ. ಮೊದಲನೆಯದು ರೂಪವೈದೃಶ್ಯ (Paradigmatic) ಸಂಬಂಧ; ಎರಡನೆಯದು ಸರಪಳಿ (Syntagmatic) ಸಂಬಂಧ; ಮೂರನೆಯದು ಸಹೋಚ್ಚಾರಣೆ (Co-articulation). ಈ ಮೂರು ದೃಷ್ಟಿಕೋನಗಳಿಂದ ಭಾಷಾಘಟಕಗಳನ್ನು ಗಮನಿಸಿದಾಗ ನಮಗೆ ಸಿಗುವ ಮೂಲ ಘಟಕವೆಂದರೆ ಅಕ್ಷರ (Syllable). ಆಘಾತ (Stress), ಮಾತ್ರೆ (Morae) ಅನುನಾಸಿಕತೆ (Nasality) ಸಹೋಚ್ಚಾರಣೆ, ಮಹಾಪ್ರಾಣಾಂಶ (Aspiration) ಮೊದಲಾದ ಅವಿಭಾಜಕಾಂಶಗಳನ್ನು ಅಕ್ಷರ ಹೊಂದಿಕೊಂಡಿರುತ್ತದೆ. ಈ ಧ್ವನ್ಯಾತ್ಮಕ ಲಕ್ಷಣಗಳು ಅಕ್ಷರದೊಂದಿಗೆ ಬಂದಾಗ ಅದು ಭಾಷೆಯ ಛಂದೋಗುಣ (Prosodic Feature)ಗಳನ್ನು ನಿರ್ಧರಿಸುತ್ತದೆ. ಭಾಷೆಯ ಈ ಗುಣಲಕ್ಷಣಕ್ಕೆ ಅಮೇರಿಕನ್ ಭಾಷಾವಿಜ್ಞಾನ ಪಂಥದಲ್ಲಿ ಸರಿಯಾದ ಸ್ಥಾನ ದೊರಕಿಲ್ಲವೆಂಬುದು ಆತನ ಟೀಕೆ. ಅದನ್ನು ಒದಗಿಸಿಕೊಟ್ಟಿದ್ದೇ ಫರ್ಥನ ಕೊಡುಗೆ.

೬. ಪ್ರಾಗ್ ಭಾಷಾವಿಜ್ಞಾನ ಪಂಥ

ಅಮೇರಿಕನ್ ಮತ್ತು ಬ್ರಿಟಿಷ್ ಭಾಷಾವಿಜ್ಞಾನ ಪಂಥಗಳು ಭಾಷೆಯ ರೂಪಕ್ಕೆ ಪ್ರಾಶಸ್ತ್ಯವನ್ನಿತ್ತರೆ, ಪ್ರಾಗ್ ಪಂಥ ಭಾಷೆಕ್ರಿಯೆಗೆ (Linguistic Function) ಪ್ರಾಧಾನ್ಯತೆಯನ್ನು ಕೊಟ್ಟಿತು. ಭಾಷೆಯನ್ನು ಕೇವಲ ಭೌತಿಕ ವಸ್ತುವನ್ನಾಗಿ ಪರಿವೀಕ್ಷಿಸದೆ ಅದನ್ನು ಮಾತುಗ (Speaker), ಕೇಳುಗ (Hearer) ಮತ್ತು ವಸ್ತು (Object) ಗಳೆಂಬ ಮೂರು ವಿಷಯಗಳ ಹಿನ್ನೆಲೆಯಲ್ಲಿ ಪರಿಗಣಿಸಬೇಕೆನ್ನುವಲ್ಲಿ ಭಾಷೆಯ ಸಹ-ಪಾಠ (Co-text)ದ ಜೊತೆಗೆ ಸಂದರ್ಭಕ್ಕೂ (Con-text)ಇವರು ಮಹತ್ವವನ್ನು ಕೊಟ್ಟಂತಾಯಿತು (ವಾಡ್ತ 1981 : 196, ಅ. ಟಿ. 2).

ನಿಕೋಲಸ್ ಎಸ್. ಟ್ರ್ಯೂಬೆಟ್ಸ್‌ಕೋಯ್ (Nicholas S. Trubetzkoy)

1890-1938). ಪ್ರಾಗ್ ಪಂಥವಲ್ಲಿ ಹೆಸರುವಾಸಿಯಾದವನು. ಆತ ಧ್ವನಿಸಂಕೇತಗಳ ಅಭಿವ್ಯಕ್ತಿಕ್ರಿಯೆಗೆ ಮಹತ್ವವನ್ನಿತ್ತನು *Principles of Phonology*, **Prague** 1939). ಭಾಷೆಯ ಅರ್ಥವತ್ತಾದ ಘಟಕಗಳನ್ನು ಬೇರೆಬೇರೆಯಾಗಿಡುವುದೇ ಧ್ವನಿವ್ಯವಸ್ಥೆಯ ಪಾತ್ರವೆಂದು ಆತ ಸಾರಿದ. ಧ್ವನಿಗಳ ಈ ವೈದೃಶಾತ್ಮಕ ಗುಣಗಳ ಕಂಡು ಹಿಡಿಯುವಿಕೆಗೆ ಆತ ಹೆಚ್ಚಿನ ಪ್ರಾಶಸ್ತ್ಯವನ್ನಿತ್ತ. ಈ ಗುಣವಿಶ್ಲೇಷಣೆ (Feature analysis) ಯ ಜೊತೆಗೆ ಪ್ರಾಗ್ ಪಂಥದವರು ಭಾಷಾರೀತಿವಿಶ್ಲೇಷಣೆ (Stylistic analysis)ಯತ್ತ ಹೆಚ್ಚಿನ ಗಮನವನ್ನು ಹರಿಯಿಸಿದರು.

ಭಾಷಾಘಟಕವಾದ ವಾಕ್ಯದಲ್ಲಿ ವ್ಯಾಕರಣ ವ್ಯವಸ್ಥೆಯಲ್ಲದೆ ಅರ್ಥವ್ಯವಸ್ಥೆಯೊಂದಿಗೆ ವ್ಯಾಕರಣ ವ್ಯವಸ್ಥೆ ಭಾಷೆಯ 'ರೂಪಿಕ' ರಚನೆಯನ್ನು ಕೊಡುತ್ತದೆಯಾದರೆ ಅರ್ಥವ್ಯವಸ್ಥೆ ವಾಕ್ಯ ಪಡೆದುಕೊಂಡ ಅರ್ಥ ಮತ್ತು ಸಮಾಜದಲ್ಲಿರುವ ವಸ್ತುಸ್ಥಿತಿಗಳೊಡನೆ ಸಂಬಂಧ ಕಲ್ಪಿಸುತ್ತದೆ. ವಾಕ್ಯದ ಆಖ್ಯೇಯ (Subject) ಆಖ್ಯಾತ (object) ಗಳು ವ್ಯಾಕರಣ ವ್ಯವಸ್ಥೆಯ ಪ್ರಮುಖ ಅಂಗಗಳು. ಇವು ವಾಕ್ಯದ ಬಹಿರಂಗವಾದರೆ ಅಲ್ಲಿಯ ಅರ್ಥ ಅದರ ಅಂತರಂಗ. ಶೈಲಿವಿಜ್ಞಾನ (Stylistics) ಈ ಅಂತರಂಗವನ್ನು ತನ್ನ ವಸ್ತುವನ್ನಾಗಿಟ್ಟುಕೊಳ್ಳುತ್ತದೆಂಬುದು ಪ್ರಾಗ್ ಪಂಥದವರ ಅಭಿಮತ.

ಭಾಷೆ,ಕೇವಲ ಸಂಪರ್ಕ ಮಾಧ್ಯಮವಲ್ಲ. ಅದೊಂದು ಕಲಾಮಾಧ್ಯಮವೂ ಹೌದು. ಕಲಾತ್ಮಕತೆಗೆ ಅನುಕೂಲವಾಗಿ ಭಾಷಾರಚನೆಯಲ್ಲಿ ಸಾಹಿತಿಯಾದವನು ಸೂಕ್ತವಾದ ಬದಲಾವಣೆಗಳನ್ನುಂಟುಮಾಡುತ್ತಾನೆ. ಈ ಕಾರ್ಯವನ್ನು ತನ್ನ ಪ್ರತಿಭೆಗನುಗುಣ-ವಾಗಿ, ಅರ್ಥಕ್ಕೆ ಭಂಗವುಂಟಾಗದಂತೆ ಆತ ಮಾಡಬಲ್ಲ. ಸಮಾಜದಲ್ಲಿ ಹಲವಾರು ಆಡುಮಾತುಗಳಿರುವಾಗ ಒಂದು ಪ್ರಮಾಣ ಭಾಷೆ (Standard Language) ಯ ಆಗತ್ಯತೆಯನ್ನು ಪ್ರಾಗ್ ಭಾಷಾವಿಜ್ಞಾನಿಗಳು ಎತ್ತಿತೋರಿಸಿದರು. ಸಮತ್ವ (Sameness) ಮತ್ತು ಅರ್ಥವ್ಯಾಪಕತೆಗಳು (Intelligibility) ಪ್ರಮಾಣ ಬಾಷೆಯ ಪ್ರಮುಖ ಲಕ್ಷಣಗಳು: ಕೊಂಡುಕೊಳ್ಳುವಿಕೆ ಇದರ ಜೀವಂತ ಗುಣ. ಬದಲಾಗು-ತ್ತಿರುವ ಸಂಸ್ಕೃತಿಯೊಡನೆ ಜೀವಂತ ಸಂಬಂಧವನ್ನಿಟ್ಟುಕೊಂಡು ಪ್ರಮಾಣಭಾಷೆ ಮುಂದುವರಿಯಬೇಕೆಂದು ಈ ಭಾಷಾವಿಜ್ಞಾನಿಗಳ ಧೋರಣೆ.

೭. ರೂಪಾಂತರ-ಉತ್ಪಾದಕ ವ್ಯಾಕರಣ ಪಂಥ

ರೂಪಾಂತರ-ಉತ್ಪಾದಕ ಮಾದರಿಯಲ್ಲಿ ವ್ಯಾಕರಣವೆಂದರೆ ಕೇವಲ ವ್ಯಾಕರ-ಣಾತ್ಮಕ ವಾಕ್ಯಗಳನ್ನು ಉತ್ಪಾದಿಸುವ ಒಂದು ಸಾಧನ. ರಾಚನಿಕ ಮಾದರಿಯಲ್ಲಿ ಭಾಷಾಘಟಕಗಳ ವಿಭಜನೆ ಮತ್ತು ವರ್ಗೀಕರಣಕ್ಕೆ ಮಹತ್ವವಿದ್ದರೆ ಪ್ರಸ್ತುತದಲ್ಲಿ ವ್ಯಾಕರಣಾತ್ಮಕ ವಾಕ್ಯಗಳ ಉತ್ಪಾದನೆಗೆ ಪ್ರಾಶಸ್ತ್ಯ.

ನೊಆಮ್ ಚೊಮ್‌ಸ್ಕಿ (Noam Chomsky) ರೂಪಾಂತರ-ಉತ್ಪಾದಕ ಮಾದರಿಯ ಕೇಂದ್ರ ಬಿಂದು. ಈತನಿಗೆ ಭಾಷೆಯೆಂದರೆ ಕೇವಲ ಮೌಖಿಕ ಸಂಕೇತಗಳ ವ್ಯವಸ್ಥೆಯಲ್ಲ, ಆದು ಅನಿರ್ದಿಷ್ಟ(Infinite) ವಾಕ್ಯಗಳನ್ನೊಳಗೊಂಡ ವ್ಯವಸ್ಥೆ. ಭಾಷಾಘಟಕವಾದ ವಾಕ್ಯವನ್ನು ನಮ್ಮ ಇಚ್ಛೆಗನುಸಾರವಾಗಿ ನಾವು ಬೇಕಾದ ಗಾತ್ರದಲ್ಲಿ ಬೆಳೆಯಿಸಬಹುದು. ಇದಕ್ಕೆ ಭಾಷೆಯಲ್ಲಿಯ ಆವರ್ತಕತೆ (Recursiveness) ಯೇ ಕಾರಣ. ಅನಿರ್ದಿಷ್ಟ ಗಾತ್ರದ ಹಾಗೂ ಸಂಖ್ಯೆಯ ವಾಕ್ಯಗಳನ್ನು ಉತ್ಪಾದಿಸುವ ನಿರ್ದಿಷ್ಟ (Finite) ತಂತ್ರವೇ ವ್ಯಾಕರಣ.

ಭಾಷೆಯೆಂಬುದು ಮಾತುಗ ಮತ್ತು ಕೇಳುಗರ ನಡುವೆ ನಡೆಯುವ ಒಂದು ಸಾಮಾಜಿಕ ಕ್ರಿಯೆ. ಈ ಭಾಷೆಯನ್ನು ಕುರಿತು ಇವರಿಬ್ಬರಲ್ಲಿ ಇರುವ ಜ್ಞಾನವೇ ಭಾಷಾಶಕ್ತಿ (Linguistic competence); ನಿರ್ದಿಷ್ಟ ಸಂದರ್ಭದಲ್ಲಿ ಜರಗುವ ಅದರ ಅಭಿವ್ಯಕ್ತಿಯೇ ಭಾಷೋಕ್ತಿ (Linguistic performance) ಭಾಷೆಯಲ್ಲಿಯ ಈ ಎರಡು ಸ್ತರಗಳ ವ್ಯತ್ಯಾಸ ರೂಪಾಂತರ ಉತ್ಪಾದಕ ವ್ಯಾಕರಣದಲ್ಲಿ ಅತಿ ಪ್ರಮುಖವಾದುದು. ಭಾಷಾಶಕ್ತಿ ಸಂಪೂರ್ಣವಾಗಿ ಎಂದೆಂದೂ ಭಾಷೆಯಲ್ಲಿ ಅಭಿವ್ಯಕ್ತಿ ಪಡೆಯಲಾರದು; ಅಷ್ಟೇ ಅಲ್ಲದೆ, ಭಾಷಾಭಿವ್ಯಕ್ತಿಯನ್ನು ತಿಳಿದುಕೊಳ್ಳಬೇಕಾದರೆ ಭಾಷಾಶಕ್ತಿಯ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆಂಬುದು ಚೊಮ್‌ಸ್ಕಿಯ ಅಭಿಮತ. ಭಾಷಾಶಕ್ತಿ ಭಾಷೋಕ್ತಿಯಾಗಿ ಅಭಿವ್ಯಕ್ತಗೊಂಡಾಗ ಹಲವಾರು ತಪ್ಪು-ದೋಷಗಳು ಕಾರಣಾಂತರಗಳಿಂದ ಭಾಷಿಗನಲ್ಲಿ ತಲೆದೋರಬಹುದು. ಅಲ್ಲದೆ. ವ್ಯಾಕರಣಾತ್ಮಕವಾಗಿ ಸರಿಯಾಗಿರಬಹುದಾದ ವಾಕ್ಯ ಸಮಾಜದಲ್ಲಿ ಒಪ್ಪಿತವಾಗದೆಯೂ ಇರಬಹುದು.

ಪ್ರಸ್ತುತ ಮಾದರಿಯ ವ್ಯಾಕರಣ ಭಾಷೆಯಲ್ಲಿಯ ವಾಕ್ಯಗಳ ನಡುವಿನ ಪರಸ್ಪರ ಸಂಬಂಧಗಳನ್ನು ವಿವರಿಸುತ್ತದೆ. ಕೆಲವೇ ಮೂಲವಾಕ್ಯಗಳಿಂದ ಹಲವಾರು ವಾಕ್ಯಗಳನ್ನು ರೂಪಾಂತರಿಸಿ ಉತ್ಪಾದಿಸುವ ಭಾಷಿಕ ಶಕ್ತಿಯನ್ನು ಅದು ಅಭಿವ್ಯಕ್ತಗೊಳಿಸುತ್ತದೆ (ಮಾಡ್ತ, 1975': 82-91).

ಉತ್ಪಾದಕ ವ್ಯಾಕರಣ (Generative Grammar) ದಲ್ಲಿ ಪ್ರಮುಖವಾಗಿ ವಾಕ್ಯಾತ್ಮಕಾಂಗ (Syntactic component) ಅರ್ಥಾತ್ಮಕಾಂಗ (Semantic component) ರೂಪಾಂತರ ನಿಯಮಗಳು (T-Rules) ಮತ್ತು ಧ್ವನಿಮಾತ್ಮಕಾಂಗ (Phonological component) ಗಳೆಂಬ ನಾಲ್ಕು ಘಟಕಗಳಿವೆ.

ವಾಕ್ಯಾತ್ಮಕಾಂಗ : ವಾಕ್ಯದ ರಚನೆಯನ್ನು ಕುರಿತ ವಿವರಗಳನ್ನು ವಾಕ್ಯಾತ್ಮಕಾಂಗ ನೀಡುತ್ತದೆ. ಈ ವಿವರ ಪದಪುಂಜ ರಚನಾನಿಯಮ (P- Rule) ಗಳ


ಮೂಲಕ ಉತ್ಪಾದಿತಗೊಳ್ಳುತ್ತದೆ. ಪದಪುಂಜರಚನಾನಿಯಮಗಳು ವಾಕ್ಯದ ಅಂತಃಸ್ತರವನ್ನು ಉತ್ಪಾದಿಸುತ್ತವೆ; ಅರ್ಥಾತ್, ಮೂಲವಾಕ್ಯದ ನಿಕಟತಮ ಪದಪುಂಜಗಳ ವರ್ಗಗಳನ್ನೂ ಅವುಗಳ ವ್ಯಾಕರಣ ಸಂಬಂಧಗಳನ್ನೂ ಬಳಸಿದ ರೂಪಗಳ ಅರ್ಥಗಳನ್ನೂ ಅವು ಸೂಚಿಸುತ್ತವೆ (ಮಾಸ್ತ್ರ, ಅದೇ 79-81).

ಅರ್ಥಾತ್ಮಕಾಂಗ : ವಾಕ್ಯದ ಅಂತಃಸ್ತರಕ್ಕೆ ಸೇರಿದ ಅರ್ಥವನ್ನು ಅರ್ಥಾತ್ಮಕಾಂಗ ನಿರ್ಧರಿಸುತ್ತದೆ (ನೋಡಿ : Katz and Fodor 1963, Katz and Postal 1964).

ರೂಪಾಂತರ ನಿಯಮಗಳು : ವಾಕ್ಯದ ಬಹಿಃಸ್ತರವನ್ನು ರೂಪಾಂತರ ನಿಯಮಗಳು ಉತ್ಪಾದಿಸುತ್ತವೆ; ಅರ್ಥಾತ್, ಅವು (ಮೂಲವಾಕ್ಯದಲ್ಲಿ/ಅಂತಃಸ್ತರದಲ್ಲಿ) ಬದಲಾವಣೆಯನ್ನುಂಟುಮಾಡುತ್ತವೆ.

ಧ್ವನಿಮಾತ್ಮಕಾಂಗ : ವಾಕ್ಯದ ಬಹಿಃಸ್ತರದ ಧ್ವನ್ಯಾತ್ಮಕ ರೂಪವನ್ನು ಧ್ವನಿಮಾತ್ಮಕಾಂಗ ನಿರ್ಧರಿಸುತ್ತದೆ.

ಈ ಮೇಲಿನ ವಿವರಗಳನ್ನು ಈ ಕೆಳಗಿನ ರೀತಿಯಲ್ಲಿ ಸಂಕ್ಷಿಪ್ತವಾಗಿ ನಮೂದಿಸಬಹುದು:



ಕೊನೆಯದಾಗಿ ಹೇಳುವುದಾದರೆ, ಭಾಷೆಯನ್ನು ಕುರಿತು ಭಾಷಿಕ ವಿವರಣೆಗಳನ್ನು ವೈಜ್ಞಾನಿಕ ರೀತಿಯಲ್ಲಿ ನೀಡುವುದೇ ಭಾಷಾವಿಜ್ಞಾನದ ಹೆಗ್ಗುರಿ. ಇಂದು

ಭಾಷಾವಿಜ್ಞಾನ ಪುಂಖಾನುಪುಂಖವಾಗಿ ಬೆಳೆಯುತ್ತಿದೆಯಾದರೂ ಅದರಲ್ಲಿ ನಾವು ಪ್ರಮುಖವಾಗಿ ಎರಡು ಮಾದರಿಗಳನ್ನು ಗುರುತಿಸುತ್ತೇವೆ. ಒಂದು, ರಾಚನಿಕ: ಇನ್ನೊಂದು, ರೂಪಾಂತರ-ಉತ್ಪಾದಕ, ರಾಚನಿಕ ಮಾದರಿಯಲ್ಲಿ ಭಾಷೆಯಲ್ಲಿಯ ಹಲವಾರು ವ್ಯವಸ್ಥೆಗಳನ್ನು ಕಂಡುಹುಡುಕಿ ಅವುಗಳ ವಿವರಣೆಯನ್ನು ವಸ್ತುನಿಷ್ಠ-ವಾಗಿ ಕೊಡಲಾಗುತ್ತದೆ. ಉತ್ಪಾದಕ ಮಾದರಿಯಲ್ಲಿ ಹೊಸಹೊಸ ವ್ಯಾಕರಣಾತ್ಮಕ ವಾಕ್ಯಗಳನ್ನು ಅನಿರ್ದಿಷ್ಟ ಗಾತ್ರ ಹಾಗೂ ಸಂಖ್ಯೆಯಲ್ಲಿ ಉತ್ಪಾದಿಸುವ ಹಾಗೂ ರೌಪಿಕವಾಗಿ ವಿವರಿಸುವ ಕಡೆಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಭಾಷಾವಿಜ್ಞಾನ ಬೆಳೆದು ಬಂದ ರೀತಿಯ ಸಿಂಹಾವಲೋಕನವನ್ನು ಮಾತ್ರ ಕೊಡುವ ಪ್ರಯತ್ನ ಮಾಡಲಾಗಿದೆ. ಇದರಿಂದಾಗಿ ಭಾಷಾ ವಿಜ್ಞಾನವನ್ನು ಕುರಿತು ಓದುಗರಲ್ಲಿ/ಕೇಳುಗರಲ್ಲಿ ಆಸಕ್ತಿ ಹುಟ್ಟಿದರೆ ಪ್ರಸ್ತುತ ಪ್ರಯತ್ನ ಸಾರ್ಥಕವೆಂದು ನನ್ನ ಅನಿಸಿಕೆ.

೮. ಆಕರ ಸೂಚಿ

Dinneen (S. J.) Francis

1967 *An Introduction to General Linguistics*, New York : Holt, Rinehart and Winston Inc.

Thirumalai, M. S,

1977 *Learning Theories and Linguistics (An Introduction)*. Madras : Tamil Nuualgam.

Waterman, John T.

Perspectives in Linguistics Chicago & London : 1963 Phonenix Books. The University of Chicago Press.

ಮಾಡ್ತ, ವಿಲ್ಯಂ

1975 **ಕನ್ನಡ ಭಾಷೆಯ** ರೂಪರೇಷೆಗಳು, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ

ಮಾಡ್ತ, ವಿಲ್ಯಂ

1976 **ಅನ್ಯಭಾಷಾಬೋಧೆ**, ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

ಮಾಡ್ತ, ವಿಲ್ಯಂ

1981 “ಜನಪದ ಕಥೆ : ಪಠ್ಯವಿಶ್ಲೇಷಣೆ”, **ಕರ್ನಾಟಕ ಜಾನಪದ**, ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯ.

ಮಾಡ್ತ, ವಿಲ್ಯಂ

1982 “ಜಾನಪದ ಭಾಷಾವಿಜ್ಞಾನ”, **ಶಿರಸಿ ಕನ್ನಡ ಸಾಹಿತ್ಯ ಸಮ್ಮೇಳನ**, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

ಬೀದರ ಜಿಲ್ಲೆಯ ಸಾಹಿತ್ಯ ಪರಂಪರೆ

● ಬಸವರಾಜ ಸಬರದ

ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಪರಂಪರೆಯಿದೆ. ಕನ್ನಡ ಸಾಹಿತಿಗಳು ಆಯಾ ಕಾಲದ ಪ್ರತಿ ಸಂದರ್ಭದಲ್ಲೂ ಹೊಸಮನುಷ್ಯನ ಹುಡುಕಾಟಕ್ಕಾಗಿ ತೊಡಗಿರುವದು ಸಾಹಿತ್ಯದ ಅಧ್ಯಯನ ಮಾಡಿದವರಿಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಕಾಲ-ದೇಶ-ಭಾಷೆ-ಪರಿಸರ ಬದಲಾದರೂ ಕೂಡ ಸಾಹಿತ್ಯದ ಮೂಲ ಕಾಳಜಿಗಳು ಮಾತ್ರ ಒಂದೇಯಾಗಿವೆ. ಶತಮಾನಗಳೇ ಉರುಳಿಹೋದರೂ ಹಿಂದಿನ ಕಾವ್ಯ-ಸಾಹಿತ್ಯ ನಮಗಿಂದಿಗೂ ಪ್ರಸ್ತುತವಾಗುತ್ತವೆ. ಮಾನವೀಯ ಮೌಲ್ಯಗಳು ಮನುಷ್ಯ ಸಂಬಂಧಗಳು ಸಾರ್ವಕಾಲಿಕವಾಗಿ ಸ್ಪಂದಿಸುವದರಿಂದ ಅವೆಲ್ಲಾ ನಮಗೆ ಅನಿವಾರ್ಯ ಸತ್ಯಗಳಾಗುತ್ತವೆ.

ಆದರೆ ಒಟ್ಟಾರೆ ನಮ್ಮ ಸಾಹಿತ್ಯ-ಸಂಸ್ಕೃತಿ, ಸಾಮಾನ್ಯ ಮನುಷ್ಯರ ದನಿಯಾಗಿ-ಪ್ರತಿಧ್ವನಿಸಿದ್ದು, ನೋವಾಗಿ-ಮಾತನಾಡಿದ್ದು ಸಾಹಿತ್ಯದ ಸಂದರ್ಭದಲ್ಲಿ ಬಹಳ ವಿರಳವೆನ್ನಬಹುದು. ಅಂದಿನ ಪರಿಸ್ಥಿತಿಗನುಗುಣವಾಗಿ, ಆಗಿನ ಪರಿಸರಕ್ಕೆ ತಕ್ಕಂತೆ, ತಮ್ಮ ಸುತ್ತಲಿನ ಇತಿ-ಮಿತಿಗಳೊಂದಿಗೇನೇ ಅಂದಂದಿನ ಕವಿಗಳು ಹೊಸದನ್ನು ಕೊಡಲು ಪ್ರಯತ್ನಿಸಿದರು. ನಮ್ಮ ಸಂಸ್ಕೃತಿ ಸ್ತೋತ್ರ ಸಂಸ್ಕೃತಿಯಾಗಿ, ನಮ್ಮ ಸಾಹಿತ್ಯ ರಾಜರ ತುತ್ತೂರಿಯಾಗಿ ಉಪಯೋಗವಾದದ್ದಂತೂ ಚಾರಿತ್ರ್ಯಕ ಸತ್ಯ.

ನಮ್ಮ ಸಾಹಿತ್ಯ ಪೂಜ್ಯತೆಗೆ ಬದಲು-ಪ್ರಜ್ಞೆಯನ್ನು: ವಿಧೇಯತೆಗೆ ಬದಲು-ವಿನಯವನ್ನು ; ಶರಣಾಗತಿಗೆ ಬದಲು-ಸ್ವಾಭಿಮಾನವನ್ನು ಬೆಳೆಸಬೇಕಾಗಿತ್ತು. ಆದರೆ ಇದುವರೆಗಿನ ನಮ್ಮ ಸಾಹಿತ್ಯವನ್ನು ಅಧ್ಯಯನ ಮಾಡಿದಾಗ ಪ್ರಜ್ಞೆಗೆ ಬದಲು ಪೂಜ್ಯತೆ, ವಿನಯಕ್ಕೆ ಬದಲು-ವಿಧೇಯತೆ. ಸ್ವಾಭಿಮಾನವನ್ನೇ ಅಳಿಸಿಹಾಕುವ ಶರಣಾಗತಿ ಬೆಳೆದುಕೊಂಡು ಬಂದದ್ದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ನಮ್ಮ ಸಾಹಿತ್ಯ ಪರಂಪರೆಯಲ್ಲೂ ಕೂಡ ಅಲ್ಲಲ್ಲಿ ಪ್ರತಿಭಟನೆಯ ಗಟ್ಟಿ ಧ್ವನಿಗಳು ಮೊಳ ಗಿರುವದನ್ನು ಅಲ್ಲಗಳೆಯುವಂತಿಲ್ಲ.

ಅಂದಂದಿನ ಬದುಕಿನ ಮೌಲ್ಯಗಳು. ಅಂದಂದಿನ ವ್ಯವಸ್ಥೆಯಲ್ಲೇ ಸ್ಥಗಿತ ಗೊಂಡರೆ ಅದು ಸಂಪ್ರದಾಯವಾಗುತ್ತದೆ. ಆ ಮೌಲ್ಯಗಳು ಜೀವನದಿಯಾಗಿ ಹರಿದು ಸಾರ್ವಕಾಲಿಕವಾದಾಗ-ಸಾರ್ವತ್ರಿಕವಾದಾಗ ಅದು ಪರಂಪರೆಯಾಗುತ್ತದೆ.

ಸಂಪ್ರದಾಯ ನಿಂತ ನೀರಾದರೆ, ಪರಂಪರೆ ಹರಿವ ಹೊಳೆ. ಸಂಪ್ರದಾಯ ಹಾವಿನ ಪರೆಯಾದರೆ, ಪರಂಪರೆ ಹರಿದಾಡುವ ಹಾವು. ಪರಂಪರೆ ಕ್ರಿಯಾಶೀಲ ವಾಗಿ ನಳ-ನಳಿಸುತ್ತಿದ್ದರೆ, ಸಂಪ್ರದಾಯ ಜಿಡ್ಡುಗಟ್ಟಿ ನಾರುತ್ತಿರುತ್ತದೆ. ಅಂತೆಯೇ ನಾವು ಸಂಪ್ರದಾಯವನ್ನು ಅಲ್ಲಗಳೆಯುತ್ತ ಪರಂಪರೆಯನ್ನು ಒಪ್ಪಿಕೊಳ್ಳಬೇಕಾಗಿದೆ.

ಕನ್ನಡ ಸಾಹಿತ್ಯಪರಂಪರೆಗೆ ಅರ್ಥಪೂರ್ಣ ಕೊಡುಗೆಯನ್ನು ಕೊಟ್ಟಿದ್ದು ಬೀದರ ಜಿಲ್ಲೆ. ಆದ್ದರಿಂದ ಬೀದರ ಜಿಲ್ಲೆಯ ಸಾಹಿತ್ಯ ಪರಂಪರೆಯೂ ಕೂಡ ವಿಶಿಷ್ಟ ವಾಗಿದೆ. ಕನ್ನಡ ಸಾಹಿತ್ಯದಲ್ಲಿ ವಚನಕಾರರು, ದಾಸರು, ಸರ್ವಜ್ಞ ಮುಂತಾದವರು ಕನ್ನಡವಲ್ಲಿ ಆ ಹೊಸ ಆಶಯಗಳನ್ನು ಹುಟ್ಟುಹಾಕುವವರ ಮೂಲಕ ಹೊಸ ಪರಂಪರೆಯನ್ನೇ ಬೆಳೆಸಿದರು. ಅದರಲ್ಲಿಯೂ ವಚನಚಳುವಳಿಯ ಸಂದರ್ಭ ತುಂಬಾ ಗಮನಾರ್ಹವಾದುದು.

ಬೀದರ ಜಿಲ್ಲೆಯ ನಿಜವಾದ ಸಾಹಿತ್ಯ ಪರಂಪರೆ ವಚನಕಾರರಿಂದಲೇ ಪ್ರಾರಂಭವಾಗುತ್ತದೆ. ಬೇರೆ-ಬೇರೆ ಪ್ರದೇಶಗಳಿಂದ, ವಿವಿಧ ಜಾತಿ-ಅಂತಸ್ತು ಅಧಿ-ಕಾರಗಳನ್ನು ಬಿಟ್ಟುಕೊಟ್ಟು ಈ ಜಿಲ್ಲೆಯ ಕಲ್ಯಾಣದಲ್ಲಿ ವಚನಕಾರರು ಸಾಮಾಜಿಕ ಆಂದೋಲನ ಪ್ರಾರಂಭಿಸಿದ್ದು ಇಂದು ಚರಿತ್ರೆಯ ಸಂಗತಿಯಾದರೂ ಕೂಡ, ಅವರ ನೆನಪು ಮಾತ್ರ ಇಂದಿಗೂ ಹಸಿರಾಗಿದೆ. (ಜಾತಿ-ವರ್ಗ, ಲಿಂಗ-ವಯಸ್ಸು. ದೇಶ-ಭಾಷೆ ಇವೆಲ್ಲಾ ಭಿನ್ನತೆಗಳನ್ನು ಮರೆತು, ಒಂದೇ ಸ್ಥಳದಲ್ಲಿ ಬಂದು ನೆಲಸಿ. ಸಮಾನ ತೆಗಾಗಿ ಹಾತೊರೆದು ಹೊಸ ಸಮಾಜದ ನಿರ್ಮಾಣಕ್ಕಾಗಿ ಎಲ್ಲ ವಚನಕಾರರೂ ಶ್ರಮಿಸಿದರು.) ಮಾದಿಗ–ಮಡಿವಾಳ–ಕಮ್ಮಾರ–ಕುಂಬಾರ-ಡೋಹರ–ಅಂಬಿಗ–ಹಡಪದ–ವಣಜಿಗ ಮೊದಲಾದ ದುಡಿಯುವ ವರ್ಗವೇ ಸಾಹಿತ್ಯದಲ್ಲಿ ತಮ್ಮನ್ನು ಮೊಟ್ಟಮೊದಲಬಾರಿಗೆ ಗುರುತಿಸಿಕೊಂಡಿತು.

ಇವರೆಲ್ಲಾ ಸಾಹಿತಿಗಳಾಗಬೇಕೆಂದು ಸಾಹಿತ್ಯ ಬರೆದವರಲ್ಲ. ಪ್ರಮುಖವಾಗಿ ಇದೊಂದು ಧಾರ್ಮಿಕ ಚಳುವಳಿ. ಧಾರ್ಮಿಕ ಕ್ಷೇತ್ರದೊಂದಿಗೆ ಪ್ರಾರಂಭವಾದ ಇವರ ಹೋರಾಟ ಸಾಮಾಜಿಕಕ್ಕೂ ವ್ಯಾಪಿಸಿ,ಸಾಹಿತ್ಯವನ್ನು ಮಾಧ್ಯಮವನ್ನಾಗಿಸಿಕೊಂಡಿತು. ಅಂತೆಯೇ ಇವರು ಮೊದಲು ಶರಣರು–ನಂತರ ವಚನಕಾರರು. ಇವರ ಉದ್ದೇಶ ಸಾಹಿತ್ಯ ಸೃಷ್ಟಿಯಾಗಿದ್ದರೂ ಸಾಹಿತ್ಯವನ್ನವರು ತಮ್ಮ ಧೋರಣೆಗಳಿಗನುಣವಾಗಿ ಬಳಸಿಕೊಂಡ ರೀತಿ, ದುಡಿಸಿಕೊಂಡ ಬಗೆ ಗಮನಾರ್ಹವಾಗಿವೆ.

ಹಿಂದೆ ಇದ್ದ ಸಾಹಿತ್ಯದ ಲಕ್ಷಣಗಳನ್ನೇ ಕೈಬಿಟ್ಟು, ಸಂಸ್ಕೃತದ ಚಂಪೂ ಶೈಲಿಯಿಂದ ಕನ್ನಡವನ್ನು ಮುಕ್ತಗೊಳಿಸಿ 'ವಚನ'ವೆನ್ನುವ ಹೊಸ 'ಫಾರ್ಮ್'ನ್ನು ಹುಟ್ಟುಹಾಕುವವರ ಮೂಲಕ ವಚನಕಾರರು ಸಾಹಿತ್ಯದ ದಿಕ್ಕನ್ನೇ ಬದಲಿಸಿದರು.

ಅಂತೆಯೇ ಹನ್ನೆರಡನೇ ಶತಮಾನದ ವಚನಕಾರರ ಸಂದರ್ಭವೆಂದರೆ, ಧಾರ್ಮಿಕ-ಸಾಮಾಜಿಕ-ಸಾಹಿತ್ಯಕ ಕ್ಷೇತ್ರಗಳಿಗೆ ಹೊಸ ವ್ಯಾಖ್ಯಾನ ಬರೆದ ಕಾಲ.

ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಾದರ ಹರಳಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ನೀಲಾಂಬಿಕೆ, ಗಂಗಾಂಬಿಕೆ, ಕಾಳವ್ವೆ, ಲಕ್ಕಮ್ಮ, ಗೊಗ್ಗವ್ವ, ಸಂಕವ್ವೆ ಈ ಮೊದಲಾದ ಶರಣ-ಶರಣೆಯರು ದುಡಿವ ವರ್ಗದ ಧ್ವನಿಯಾಗಿ, ದಲಿತರ ನೋವಾಗಿ, ಶೋಷಣೆಗೊಳಗಾದವರ ಬಾಯಿಯಾಗಿ ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಮಾತನಾಡಿದರು. ಇವರ ಆ ಮಾತುಗಳೇ, ನುಡಿಯಾಗಿ ಇಂದು ಕನ್ನಡ ಸಾಹಿತ್ಯದ ಕಣ್ಣಾಗಿ ಕಂಗೊಳಿಸುತ್ತಲಿದೆ.

ಅರಸೊತ್ತಿಗೆಯಲ್ಲಿದ್ದುಕೊಂಡೇ ಇವರು ರಾಜ್ಯಶಾಹಿಯನ್ನು ಟೀಕಿಸಿದವರು.; ವೈದಿಕ ವ್ಯವಸ್ಥೆಯಲ್ಲೇ ಬೆಳೆದು ಯಜಮಾನ ಸಂಸ್ಕೃತಿಯನ್ನು ಧಿಕ್ಕರಿಸಿದವರು. ಅಂದಿನ ಹದಗೆಟ್ಟ ಪರಿಸರದಲ್ಲಿದ್ದುಕೊಂಡೇ ಮಾನವೀಯತೆಗಾಗಿ ದುಡಿದವರು. ಅಂತೆಯೇ ವಚನಕಾರರ ಕಾಲಕ್ಕೆ ಅತ್ಯಂತ ಕಠಿಣವಾಗಿದ್ದ ಧರ್ಮ-ಕರ್ಮಗಳ ಗುಟ್ಟು ಬಯಲಾಯಿತು. ಇವರ ಕಾಲಕ್ಕೆ ಧರ್ಮ-ದಯೆಯಾಯಿತು, ಕರ್ಮ-ಕ್ರಿಯೆಯಾಯಿತು, 'ದಯೆಯೇ ಧರ್ಮದ ಮೂಲವಯ್ಯ' ಎನ್ನುವ ಬಸವಣ್ಣನವರ ನುಡಿ ಜೀವನದಿಯಾಗಿ ಹರಿದು ಬಂದು ಎಲ್ಲಾ ಕಾಲದಲ್ಲಿಯೂ, ಎಲ್ಲ ಜೀವಿಗಳಿಗೂ ನಿತ್ಯ ಸತ್ಯವಾಗಿ, ನಿರಂತರ ಹಸಿರಾಗಿ ವಿಜೃಂಭಿಸಿತು.

ವೀರಶೈವ ಧರ್ಮವನ್ನೇ ಇವರು ಆಯ್ಕೆ ಮಾಡಿಕೊಂಡಿದ್ದರೂ, ಅದು ಮೊದಲಿನ ವೀರಶೈವವಾಗಿರಲಿಲ್ಲ, ಸಾಹಿತ್ಯದ ಮುಖಾಂತರವೇ ಇವರು ಮಾತನಾಡಿದರೂ ಅದು ಮೊದಲಿನ ಸಾಹಿತ್ಯವಾಗಿರಲಿಲ್ಲ. ಅನುಭಾವದ ವಿಚಾರಗಳನ್ನೇ ಹೇಳಿದ್ದರೂ ಅದು ಮೊದಲಿದ್ದ ಅಧ್ಯಾತ್ಮದಂತಲ್ಲ. ವಚನಕಾರರದು ಜನಪರ ಚಳುವಳಿ ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಜನಸಾಮಾನ್ಯರು ಸಾಹಿತ್ಯ ರಚಿಸಿದ್ದು, ಸಮಾನತೆಗಾಗಿ ಹೋರಾಡಿದ್ದು ಇದೇ ಪ್ರಥಮ ಸಲ. ಅಂತೆಯೇ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಭ್ಯಾಸ ಮಾಡುವಾಗ ಸಾಮಾನ್ಯ ಮನುಷ್ಯರ ಉಲ್ಲೇಖ ಮೊದಲು ಪ್ರಾರಂಭವಾಗುವದು ವಚನಗಳಿಂದ. ಇಂತಹ ಜನಪರ ಚಳುವಳಿಯನ್ನು ಹುಟ್ಟು-ಹಾಕಿ, ಜನಸಾಮಾನ್ಯರನ್ನು ಸಾಹಿತ್ಯದಲ್ಲಿ ಮೊಟ್ಟಮೊದಲು ಪರಿಚಯಿಸಿದ್ದು ಈ ಬೀದರ ಜಿಲ್ಲೆ.

ಈ ಜಿಲ್ಲೆ ವಚನಕಾರರ ಕಾರ್ಯಕ್ಷೇತ್ರವಾಗಿತ್ತು. ವಿಶಿಷ್ಟವೆಂದರೆ ಇಲ್ಲಿಯ ಪ್ರಮುಖ ವಚನಕಾರರೆಲ್ಲಾ ಈ ಜಿಲ್ಲೆಯವರಲ್ಲ. ನಾಡಿನ ಮೂಲೆ-ಮೂಲೆಗಳಿಂದ ಬಂದು ಸೇರಿ ಹೋರಾಟ ಮಾಡಿದರು. ಅಂದರೆ ಕನ್ನಡದ ಪ್ರಮುಖ ಶಕ್ತಿಗಳನ್ನೆಲ್ಲಾ

ಒಂದೆಡೆ ಸೇರಿಸಿ ಅವರನ್ನು ಅರ್ಥಪೂರ್ಣ ಹೋರಾಟಕ್ಕೆ ಹಚ್ಚಿದ ಶ್ರೇಯಸ್ಸು ಈ ಜಿಲ್ಲೆಗೆ ಸೇರುತ್ತದೆ.

ಕಲಚುರಿ ಅರಸ ಬಿಜ್ಜಳನ ಸಂದರ್ಭದಲ್ಲಿ ನಡೆದ ಈ ಚಳುವಳಿ ಕನ್ನಡದಲ್ಲಿ ಹಚ್ಚಹಸಿರಾಗಿ ನಿಂತಿದೆ. ಬಸವಣ್ಣ ಮುಂತಾದ ಶರಣರ ಉದಯದಿಂದಲೇ ಕರ್ನಾಟಕದ ಚರಿತ್ರೆಯಲ್ಲಿ ಕಲಚುರಿಗಳಿಗೆ ಹೆಚ್ಚಿನ ಮಹತ್ವವುಂಟಾಗಿದೆ. ಹಾಗೆ ನೋಡಿದರೆ ಕಲಚುರಿಗಳ ಈ ಚಿಕ್ಕ ಆಳ್ವಿಕೆಯಲ್ಲಿ ನಾಡಿನಲ್ಲಿ ಶಾಂತಿಯಾಗಲಿ, ಸ್ಥಿರತೆಯಾಗಲಿ ಇರಲಿಲ್ಲ. ಕಲಚುರಿಗಳಿಗಿಂತ ಮೊದಲು ಅಧಿಕಾರದಲ್ಲಿದ್ದ ಕಲ್ಯಾಣಚಾಲುಕ್ಯರು ಹಲವಾರು ಕವಿಗಳಿಗೆ ಕಲಾವಿದರಿಗೆ ಪ್ರಾಶಸ್ತ್ಯಕೊಟ್ಟಿದ್ದಾರೆ. ಬಿಜಾಪುರ ಜಿಲ್ಲೆಯ ರನ್ನ ಕವಿ ಆಶ್ರಯ ಪಡೆದದ್ದು ಆಗಿನ ಚಾಲುಕ್ಯ ದೊರೆಯಾದ ತೈಲಪನಲ್ಲಿ.

ಬಸವಣ್ಣ ಮುಂತಾದ ವಚನಕಾರರಿಂದ ಸಾಹಿತ್ಯ ಸೃಷ್ಟಿಸಿದ ಈ ಜಿಲ್ಲೆ ಮುಂದೆ ಕಾಲಕ್ರಮೇಣ ಪರಕೀಯರ ದಬ್ಬಾಳಿಕೆಗೆ ತುತ್ತಾಗಿ, ನಿಜಾಮರ ಆಳ್ವಿಕೆಗೆ ಒಳಗಾಗಿ. ಅನ್ಯಸಂಸ್ಕೃತಿಯ- ಬೇರೆ ಭಾಷೆಗಳ ಹಿಡಿತದಲ್ಲಿ ಸಿಕ್ಕು ಈ ಎಂಟುನೂರು ವರ್ಷಗಳ ಅವಧಿಯಲ್ಲಿ ಇಲ್ಲಿ ಕನ್ನಡ ಉಳಿದುಕೊಂಡದ್ದೇ ಒಂದು ದೊಡ್ಡ ಸಾಧನೆಯೆನ್ನಬಹುದು.

ಬಹಮನಿ ಸುಲ್ತಾನರ ಕಾಲದಲ್ಲಿಯ ಪ್ರಸಿದ್ಧ ಪರ್ಶಿಯನ್ ಕವಿ 'ಅಧರಿ' ಯೆಂಬುವನು ಬೀದರದ ವೈಭವ ಕುರಿತು ಬಣ್ಣಿಸಿದ್ದಾನೆ. 'ಬಹಮನ್ ನಾಮಾ' ಎಂಬುದು ಆತನ ಪ್ರಸಿದ್ಧ ಕೃತಿ. ಮುಂದೆ ಹಲವಾರು ಉರ್ದು–ಮರಾಠಿ ಕೃತಿಗಳು ಇಲ್ಲಿ ರಚನೆಯಾದವು.

ಒಂದು ಕಾಲಕ್ಕೆ 'ವಚನ'ದಂತಹ ಅಮೂಲ್ಯ ಸಾಹಿತ್ಯವನ್ನು ಕನ್ನಡಕ್ಕೆ ನೀಡಿದ ಈ ಜಿಲ್ಲೆ ಇಂದು ಸಾಹಿತ್ಯಕವಾಗಿ-ಸಾಂಸ್ಕೃತಿಕವಾಗಿ ಬಹಳ ಹಿಂದುಳಿದಿದೆ. ವಚನ ಕಾರರ ನಂತರ ಎಂಟು ನೂರು ವರ್ಷಗಳ ಅವಧಿಯಲ್ಲಿ ಪರಕೀಯ ಸಂಸ್ಕೃತಿ-ಸಾಹಿತ್ಯ ದಲ್ಲಿ ಕರಗಿಹೋದ ಇಲ್ಲಿಯ ಕನ್ನಡಿಗ ಇಂದಿಗೂ ಕೂಡ ರಾಜಧಾನಿಯಿಂದ ದೂರವಾಗಿ ಎಲ್ಲ ಸವಲತ್ತುಗಳಿಂದಲೂ ವಂಚಿತನಾಗಿದ್ದಾನೆ.

ವಚನ ಸಾಹಿತ್ಯದ ನಂತರ ಮತ್ತೆ ಹೇಳಿಕೊಳ್ಳುವಂತಹ ಸಾಹಿತ್ಯ ಸೃಷ್ಟಿಯಾಗ ಲಿಲ್ಲ. ಆದರೆ ಇಂದಿಗೆ ಮೂರುನೂರು ವರ್ಷಗಳ ಹಿಂದೆ ಜೀವಿಸಿದ್ದ ಕಲ್ಯಾಣದ ಶಿವರಾಮ ಸ್ವಾಮಿಗಳು ಕನ್ನಡದಲ್ಲೂ ಕೆಲವು ಗ್ರಂಥಗಳನ್ನು ರಚಿಸಿದರು. ನಂತರ ದಲ್ಲಿ ಬಂದ ಮಾಣಿಕ ಪ್ರಭುಗಳು ಮತ್ತು ಮನೋಹರ ಪ್ರಭುಗಳು ಅನೇಕ ಭಕ್ತಿ ಗೀತೆಗಳನ್ನು ರಚಿಸಿದರು. ಮಾರ್ತಾಂಡ ಪ್ರಭುಗಳು 'ಜ್ಞಾನ ಮಾರ್ತಾಂಡ' ಮತ್ತು 'ಗಾನ ಮಾರ್ತಾಂಡ' ಕೃತಿಗಳನ್ನು ರಚಿಸಿದರು: ಮದನೂರಿನ ರೇವಣಸಿದ್ಧೇಶ್ವರರು ಕನ್ನಡದಲ್ಲಿ ಸಿದ್ಧಲಿಂಗೇಶ್ವರ ಪುರಾಣ ಬರೆದರು. ಮೆಹಕರ್‌ಮಠದ ಸುರೇಶಸ್ವಾಮಿ

ಯವರು ಮಾನವ ಧರ್ಮವೆಂಬ ಗ್ರಂಥ ರಚಿಸಿದರು. ಆದರೆ ಇವಾವೂ ಕನ್ನಡ ಸಾಹಿತ್ಯದಲ್ಲಿ ನೆಲೆಯೂರಿ ನಿಲ್ಲಬಲ್ಲಂತ ಗಟ್ಟಿಕೃತಿಗಳಲ್ಲ.

ವಚನಕಾರರ ನಂತರ ಮತ್ತೆ ಬೀದರ ಜಿಲ್ಲೆ ಸಾಹಿತ್ಯಕ್ಷೇತ್ರದಲ್ಲಿ ತನ್ನನ್ನು ತೀವ್ರ ವಾಗಿ ತೊಡಗಿಸಿಕೊಂಡದ್ದು ಈ ಎರಡು ದಶಕಗಳಿಂದ ಮಾತ್ರ.

ಈ ಎರಡು ದಶಕಗಳ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ಮತ್ತೆ ನಮ್ಮ ದೃಷ್ಟಿಯಲ್ಲಿ ಉಳಿಯುವವರು ಕೇವಲ ಬೆರಳೆಣಿಕೆಯ ಬರಹಗಾರರು ಮಾತ್ರ, ಇಲ್ಲಿಯ ಲೇಖಕರನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯವರು ಈ ನೆಲದ ಮಣ್ಣಿನ ಮಕ್ಕಳು. ಇವರು ಇದೇ ಜಿಲ್ಲೆಯಲ್ಲಿ ಹುಟ್ಟಿ, ಇಲ್ಲಿಯೇ ವಾಸ ಮಾಡುತ್ತಿರುವವರು. ಎರಡನೆಯದಾಗಿ - ಬೇರೆ ಜಿಲ್ಲೆಗಳಿಂದ ಬಂದು ಇದೇ ಜಿಲ್ಲೆ ಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಇಲ್ಲಿಯೇ ಖಾಯಂ ಆಗಿ ವಾಸ ಮಾಡುತ್ತಿರುವವರು.

ಜಿ. ಬಿ. ವಿಸಾಜಿ, ಬಸವರಾಜ ಸೈನೀರ್, ಕಾಶೀನಾಥ ಅಂಬಲಗೆ, ಎಂ. ಜಿ. ಗಂಗನಪಳ್ಳಿ, ಎಂ. ಜಿ. ದೇಶಪಾಂಡೆ, ಡಾ. ಮಾಣಿಕರಾವ್ ಧನಶ್ರೀ, ಪಂಚಾಕ್ಷರಿ ಪುಣ್ಯಶೆಟ್ಟಿ. ಪ್ರಮೀಳಾ ಶಿರ್ಸೆ, ವಿಜಯಶ್ರೀ ಸಬರದ ಇವರು ಈ ನೆಲದಲ್ಲೆ ಹುಟ್ಟಿ, ಇಲ್ಲಿಯೇ ಇದ್ದು ಇಲ್ಲಿಯೇ ಸಾಹಿತ್ಯದಲ್ಲಿ ತಮ್ಮನ್ನು ಗುರುತಿಸಿಕೊಂಡವರು.

ವೀರೇಂದ್ರ ಸಿಂಪಿ, ಡಾ. ಎಲ್. ಆರ್. ಕುಲಕರ್ಣಿ ಇವರೆಲ್ಲಾ ಬೇರೆ ಜಿಲ್ಲೆ-ಗಳಿಂದ ಬಂದು ಇಲ್ಲಿಯೇ ವಾಸಿಸುತ್ತಿರುವ ಬರಹಗಾರರು. ಇವರನ್ನು ಬಿಟ್ಟು ಇನ್ನೂ ಕೆಲವು ಲೇಖಕರಿದ್ದಾರೆ-ಕವಿಗಳಿದ್ದಾರೆ. ಒಂದಾದರೂ ಕೃತಿಯನ್ನು ಪ್ರಕಟಿಸಿ ಸಾಹಿತ್ಯ ದಲ್ಲಿ ತಮ್ಮನ್ನು ತೊಡಗಿಸಿಕೊಂಡವರ ಹೆಸರುಗಳನ್ನು ಮಾತ್ರ ನಾನಿಲ್ಲಿ ಉಲ್ಲೇಖಿಸಿದ್ದೇನೆ.

ನವೋದಯ ಕಾವ್ಯ ಬೇರೆಕಡೆ ಸಂಭ್ರಮಿಸುತ್ತಿರುವಾಗ ಈ ಜಿಲ್ಲೆಯಿನ್ನೂ ಗಾಢನಿದ್ದೆಯಿಂದ ಎಚ್ಚರಗೊಂಡಿರಲಿಲ್ಲ. ಆ ವೇಳೆಯಲ್ಲಿ ಇಲ್ಲಿ ಕನ್ನಡ ಮಾತನಾಡು-ವದೇ ಒಂದು ದೊಡ್ಡ ಸಾಧನೆಯಾಗಿತ್ತು. ನವೋದಯದ ನಂತರ ಬಂದ ನವ್ಯವೂ ಈ ಜಿಲ್ಲೆಯ ಲೇಖಕರನ್ನು ತಟ್ಟಲಿಲ್ಲ. ಮುಂದೆ ಬಂದ ಬಂಡಾಯದ ಬಿಸಿಯುಸಿರು ಮಾತ್ರ ಜಿಲ್ಲೆಗೆ ತಾಕಿದೆ. ಇತ್ತೀಚೆಗೆ ಗಮನಿಸಬಹುದಾದಂತಹ ಪ್ರತಿಭಟನೆಯ ಕಾವ್ಯ ವೈಚಾರಿಕ ಬರಹ ಈ ಜಿಲ್ಲೆಯಿಂದ ಹೊರಬರುತ್ತಲಿದೆ.

ನವೋದಯದ ನಂತರ ನವ್ಯ ಕನ್ನಡದಲ್ಲಿ ಕಾಲಿಟ್ಟು ಗಟ್ಟಿಯಾಗುತ್ತಿದ್ದ ಸಂದ-ರ್ಭದಲ್ಲಿ ಇಲ್ಲಿಯ ಕೆಲವು ಕವಿಗಳು ನವೋದಯದಿಂದ ಪ್ರಭಾವಿತರಾದರು. ಅವರಲ್ಲಿ

ಜಿ. ಬಿ. ವಿಸಾಜಿ, ಬಸವರಾಜ ಸೈನೀರ್, ಎಂ. ಜಿ. ಗಂಗನಪಳ್ಳಿಯವರನ್ನು ಹೆಸರಿಸಬಹುದು. ಮೂರು ಕವನಸಂಗ್ರಹ ಒಂದೆರಡು ಲೇಖನ ಸಂಗ್ರಹಗಳನ್ನು ಪ್ರಕಟಿಸಿದ ವಿಸಾಜಿಯವರ ಕಾವ್ಯದಲ್ಲಿ ನಾಡು-ನುಡಿಯ ಅಭಿಮಾನ, ಪ್ರಕೃತಿಸೌಂದರ್ಯ ಎದ್ದು ಕಾಣುತ್ತದೆ. ಇತ್ತೀಚೆಗೆ ಅವರು ಹೊಸ ಸಾಹಿತ್ಯದ ಪ್ರೇರಣೆಯಿಂದ ಪ್ರಸ್ತುತ ಸಮಸ್ಯೆಗಳ ಬಗೆಗೆ ಬರೆಯುತ್ತಿದ್ದರೂ ಅದಾವುದೂ ಇನ್ನೂ ಕೃತಿಯ ರೂಪ ಪಡೆದು ಹೊರಬಂದಿಲ್ಲ. ಬಸವರಾಜ ಸೈನೀರ್ ಅವರು 'ಬೆಳಗಾಯಿತು' ಕವನಸಂಕಲನವನ್ನು ನೀಡಿ ಮಲಗಿಬಿಟ್ಟರು. ಅಂದು ಮಲಗಿದವರು ಮತ್ತೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ಏಳಲೇ ಇಲ್ಲ. ಅವರ ಕಾವ್ಯದಲ್ಲಿಯ ಲಯಬದ್ಧವಾದ ಭಾಷೆ ಆಕರ್ಷಕವಾಗಿದೆ. ಎಂ. ಜಿ. ಗಂಗನಪಳ್ಳಿಯವರು 'ಬಾಳಹಂದರ'ವೆಂಬ ಒಂದು ಕವನ ಸಂಕಲನ ಪ್ರಕಟಿಸಿದ್ದಾರೆ. ಇವರ ಕಾವ್ಯದಲ್ಲಿ ನವೋದಯದ ಪ್ರೇರಣೆಗಳು ಹಸಿ-ಹಸಿಯಾಗಿ ಮೂಡಿವೆ. ಇಲ್ಲಿಯ ಯಾವ ಕವಿತೆಗಳೂ ತೃಪ್ತಿಕೊಡದೆ ಸೋಲುತ್ತವೆ.

ಗದ್ಯಲೇಖಕರಾದ ಎಂ. ಜಿ. ದೇಶಪಾಂಡೆಯವರು ಎರಡು ಕಾದಂಬರಿ ಪ್ರಕಟಿಸಿದ್ದಾರೆ. ಇದರಲ್ಲಿ ವರ್ಣನಾತ್ಮಕವಾದ ಭಾವುಕ ಶೈಲಿಯಿದೆ. ವಸ್ತುವಿನಲ್ಲಾಗಲಿ, ಭಾಷೆಯಲ್ಲಾಗಲಿ ಗಟ್ಟಿತನವಿಲ್ಲ. ಮಾಣಿಕರಾವ್ ಧನಶ್ರೀಯವರು ಶಿಶುಗೀತೆಗಳ ಒಂದು ಚಿಕ್ಕ ಸಂಕಲನ ಹೊರ ತಂದಿದ್ದಾರೆ. ಹೇಳಿಕೊಳ್ಳುವಂತಹ ಯಾವುದೇ ಗಟ್ಟಿ ಕೃತಿಯೂ ಇವರಿಂದ ಬಂದಿಲ್ಲ. ಪಂಚಾಕ್ಷರಿ ಪುಣ್ಯಶೆಟ್ಟಿಯವರನ್ನು ಲೇಖಕರ ಸಾಲಿನಲ್ಲಿ ಸೇರಿಸಬೇಕೆಂದು ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗುವದಿಲ್ಲ. ಕಾರಣ ಅವರು ಬರೆದಿರುವವರಲ್ಲಿ ಎಳ್ಳಷ್ಟೂ ಗಟ್ಟಿತನವಿಲ್ಲ. ನಾವದಗಿ ರೇವಪ್ಪಯ್ಯನವರ ಬಗೆಗೆ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಬರೆದ ಇವರು ಇತ್ತೀಚೆಗೆ ತಮಗೆ ಬೇಕಾದ ಕೆಲವರನ್ನು ಹೊಗಳುವದಕ್ಕಾಗಿಯೊ, ಅಥವಾ ಅವರಿಂದ ತಾನು ಹೊಗಳಿಸಿಕೊಳ್ಳುವದಕ್ಕಾಗಿಯೊ, 'ಸಜ್ಜನರ ಸಂಗದಲ್ಲಿ' ಎಂಬ ಚಿಕ್ಕ ಕೃತಿ ಹೊರತಂದಿದ್ದಾರೆ, ಇವಾವುದರಲ್ಲಿಯೂ ಸಾಹಿತ್ಯಕ ಗುಣಗಳಿಲ್ಲ.

ಪ್ರಗತಿಪರ ವಿಚಾರಗಳನ್ನು ಸಾಹಿತ್ಯದಲ್ಲಿ ಮೂಡಿಸುವದರ ಮೂಲಕ ಕಾವ್ಯದಲ್ಲಿ ಪ್ರತಿಭಟನೆಯ ಧ್ವನಿ ಎತ್ತಿರುವ ಕಾಶೀನಾಥ ಅಂಬಲಗೆ, ಪ್ರಮೀಳಾ ಶಿರ್ಸೆ, ವಿಜಯಶ್ರೀ ಸಬರದ ಗಮನಾರ್ಹರು. 'ಮೂವತ್ತೈದು ಕವನಗಳು' ಎಂಬ ಕವನ ಸಂಕಲನದ ಮೂಲಕ ಕಾವ್ಯಕ್ಷೇತ್ರ ಪ್ರವೇಶಿಸಿದ ಕಾಶೀನಾಥ ಅವರು ಗಟ್ಟಿಯಾಗಿ ಬರೆಯಬಲ್ಲ ಭರವಸೆಯನ್ನು ಮೊದಲ ಸಂಕಲನವಲ್ಲೇ ಕೊಟ್ಟಿದ್ದಾರೆ. ಕವಿತೆಗಳು ವಾಚ್ಯವೆನಿಸಿದರೂ ಜಿಲ್ಲೆಯ ಪ್ರಾದೇಶಿಕ ಭಾಷೆ ಇವರ ಕಾವ್ಯದಲ್ಲಿ ಅರ್ಥವತ್ತಾಗಿ ಒಡಮೂಡಿದೆ. ಈ ಜಿಲ್ಲೆಯ ಭಾಷೆಯ ದೃಷ್ಟಿಯಿಂದ ಈ ಸಂಕಲನ ಗಮನಿಸುವಂತಹದು. 'ಇದೂ ಒಂದು ಮಹಾಭಾರತ' ಎಂಬ ಕವನ ಸಂಕಲನವೊಂದನ್ನು

ಪ್ರಮೀಳಾ ಶಿರ್ಸೆ ರಚಿಸಿದ್ದಾರೆ. ಇವರಲ್ಲಿ ಹೇಳಿಕೊಳ್ಳುವಂತಹ ಕವಿತೆಗಳೇ ಇಲ್ಲ. ಇದ್ದ ಕವಿತೆಗಳೆಲ್ಲಾ ಕೇವಲ ಒಣ ವರದಿಗಳಂತೆ ವಾಚ್ಯವಾಗಿವೆ. ಆದರೆ ಇತ್ತೀಚೆಗೆ ಪ್ರಕಟವಾಗುತ್ತಿರುವ ಇವರ ಕವಿತೆಗಳು ಕುತೂಹಲ ಕೆರಳಿಸಿವೆ.

'ಜ್ವಲಂತ' ಕವನ ಸಂಕಲನದ ಮೂಲಕ ಕನ್ನಡ ಓದುಗರ ಗಮನ ಸೆಳೆದ ವಿಜಯಶ್ರೀ ಸಬರದವರ ಕವಿತೆಗಳಲ್ಲಿ ಹೆಣ್ಣಿನ ಶೋಷಣೆ, ಯಜಮಾನ ಸಂಸ್ಕೃತಿಯ ಸೋಗಲಾಡಿತನ, ಬಾಬಾಗಳ ಗೋಸುಂಬಿತನ ಅರ್ಥವತ್ತಾಗಿ ಹೊರಹೊಮ್ಮಿವೆ. ಅಲ್ಲಲ್ಲಿ ಕೆಲವು ಕವಿತೆಗಳು ವಾಚ್ಯವೆನಿಸಿದರೂ ಪರಿಣಾಮಕಾರಿಯಾಗಿವೆ. ಇವರ 'ತ್ರಿವೇಣಿಯವರ ಕಾದಂಬರಿಗಳು' ಎಂಬ ಕಿರುಹೊತ್ತಿಗೆ ಮಾತ್ರ ಕೇವಲ ಪರಿಚಯಾತ್ಮಕವಾಗಿದೆಯೇ ಹೊರತು ವಿಮರ್ಶಾತ್ಮಕವಾಗಿಲ್ಲ. ಪ್ರಮೀಳಾ ಅವರಾಗಲಿ, ವಿಜಶ್ರೀಯವರಾಗಲಿ ಇವರಿಬ್ಬರ ಕೃತಿಗಳಲ್ಲೂ ಈ ಜಿಲ್ಲೆಯ ಪ್ರಾದೇಶಿಕತೆ ಎದ್ದು ಕಾಣುವದಿಲ್ಲ.

ಇನ್ನು ವೀರೇಂದ್ರ ಸಿಂಪಿ ಹಾಗೂ ಡಾ. ಎಲ್. ಆರ್. ಕುಲಕರ್ಣಿಯವರು ಗದ್ಯಲೇಖಕರು. ಸಿಂಪಿಯವರು ಲಲಿತ ಪ್ರಬಂಧಗಳಿಗೆ ಹೆಸರಾದವರು. 'ಕಾಗದದ ಚೂರು' 'ಭಾವ ಮೈದುನ' ಇವರ ಪ್ರಬಂಧ ಸಂಕಲನಗಳು. 'ಲಲಿತ ಪ್ರಬಂಧಗಳು' ಎಂಬ ಸಮೀಕ್ಷೆಯನ್ನೂ ಬರೆದಿದ್ದಾರೆ. ಇವರ ಪ್ರಬಂಧಗಳಲ್ಲಿ ಏಕತಾನತೆ ಕಂಡು ಬರುತ್ತದಾದರೂ ನವುರಾದ ಹಾಸ್ಯಶೈಲಿ ಗಮನಸೆಳೆಯುತ್ತದೆ.

ಡಾ. ಕುಲಕರ್ಣಿಯವರು ಬೀದರದರ್ಶನ, ಬಹಮನಿರಾಜ್ಯ, ಮಹಮ್ಮದ ಗವಾನ, ಬಕ್ಕಪ್ರಭು ಮುಂತಾದ ಚಿಕ್ಕಕೃತಿಗಳನ್ನು ಬರೆದಿದ್ದಾರೆ. ಇವೆಲ್ಲಾ ವರ್ಣನಾತ್ಮಕ ಶೈಲಿಯಿಂದೊಡಗೂಡಿವೆಯೇ ಹೊರತು ಸಂಶೋಧನಾತ್ಮಕ ಗುಣ ಕಂಡು ಬರುವದಿಲ್ಲ. ಕವಿ ರವೀಂದ್ರರ ಸಾಹಿತ್ಯ ಸಾಧನೆಗಳ ಬಗೆಗೂ ಬರೆದಿದ್ದಾರೆ. ಇಷ್ಟಾದರೆ ಬೀದರ ಜಿಲ್ಲೆಯ ಕೃತಿಗಳ ಸಮೀಕ್ಷೆ ಮುಗಿದಂತೆ. ಇನ್ನು ನನ್ನ ಕೃತಿಗಳ ವಿಮರ್ಶೆಯನ್ನು ಓದುಗರಿಗೆ ಬಿಟ್ಟಿದ್ದೇನೆ.

ಕಾಲ-ಕಾಲದಿಂದ ಬೇರೆ-ಬೇರೆ ಧರ್ಮ ಮತ್ತು ರಾಜ್ಯಶಾಹಿ ಹಿಡಿತಕ್ಕೊಳಗಾದ ಈ ಜಿಲ್ಲೆಯ ಜನತೆ ತತ್ತರಿಸಿದ ಐತಿಹಾಸಿಕ ಸತ್ಯ ಮನದಟ್ಟಾದಾಗ ಇಲ್ಲಿ ಈಗ ಇಷ್ಟಾದರೂ ಲೇಖಕರಿದ್ದಾರಲ್ಲಾ ಎಂಬುದೇ ಸಮಾಧಾನದ ಸಂಗತಿ. ಈ ಜಿಲ್ಲೆಯಿಂದ ಇದುವರೆಗೂ ಒಬ್ಬರಾದರೂ ರಾಜ್ಯಮಟ್ಟದ ಪ್ರಸಿದ್ಧ ಸಾಹಿತಿಯಾಗಿ ಹೋಗಿಲ್ಲವಾದರೂ ಇತ್ತೀಚಿನ ಬೆಳವಣಿಗೆ ಮಾತ್ರ ಬಹಳ ಆಶಾದಾಯಕವಾಗಿದೆ.

ಈ ಭಾಷೆಯ ಮೂಲಸತ್ವವನ್ನು ಇಲ್ಲಿಯ ಲೇಖಕರು ಸಾಹಿತ್ಯದಲ್ಲಿ ಅರ್ಥಪೂರ್ಣವಾಗಿ ದುಡಿಸಿಕೊಳ್ಳಬೇಕಾಗಿದೆ.

'ವಚನ'ದಂತಹ ಹಚ್ಚಹಸಿರಾದ ಸಾಹಿತ್ಯವನ್ನು ಕೊಟ್ಟ ಈ ಜಿಲ್ಲೆಯಿಂದ ಗಟ್ಟಿಯಾದ ಮಹತ್ವಪೂರ್ಣ ಕೃತಿಗಳು ಅರಳಲೆಂದು ಹಾರೈಸುತ್ತೇನೆ. ●

ವಯಸ್ಕರ ಶಿಕ್ಷಣ ಮತ್ತು ಅರಿವಿನ ಜಾಗೃತಿ

(ಫಾಲೋ-ಫ್ರೇರೆಯುವರ ವಿಚಾರಗಳು)

● ಕಿರಣ್ ಕಮಲಾಪ್ರಸಾದ ಜೆ. ಸ.

ಪ್ರಸ್ತಾವನೆ :

ವ್ಯಾಪಕ ಅನಕ್ಷರತೆ ಹಿಂದುಳಿದ ರಾಷ್ಟ್ರಗಳ ಬಹು ದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದೆ. ಅನಕ್ಷರತೆ ಒಂದು ರಾಷ್ಟ್ರದ ಪ್ರಗತಿಪರ ಧೋರಣೆಗಳನ್ನು ಯಶಸ್ವಿಯಾಗುವಂತೆ ಮಾಡುವದಿಲ್ಲ. ಆದ್ದರಿಂದ ಈ ಶತಮಾನದಲ್ಲಿ ಸ್ವಾತಂತ್ರ್ಯವನ್ನು ಪಡೆದಿರುವ ಪ್ರತಿಯೊಂದು ಹಿಂದುಳಿದ ರಾಷ್ಟ್ರವು ಅನಕ್ಷರಸ್ಥರಾಗಿರುವ ವಯಸ್ಕರ ಶಿಕ್ಷಣದತ್ತ ಹೆಚ್ಚಾದ ಗಮನವನ್ನು ಹರಿಸುತ್ತದೆ. ಈ ದಿಶೆಯಲ್ಲಿ ಭಾರತ ಸರಕಾರವು ೧೯೭೮ ರ ಅಕ್ಟೋಬರ ೨ನೇ ತಾರೀಖಿನಲ್ಲಿ ಒಂದು ಮಹತ್ವಾಕಾಂಕ್ಷಿಯಾದ ಯೋಜನೆಯನ್ನು ಹಾಕಿತು. ವಯಸ್ಕರ ಶಿಕ್ಷಣದ ಗುಣಮಟ್ಟಕ್ಕೂ, ವ್ಯಾಪಕತೆಗೂ ಮಹತ್ವವನ್ನು ನೀಡಿತು. ೧೯೮೩-೮೪ ರೊಳಗೆ ೨೩೦ ದಶಲಕ್ಷ ಅನಕ್ಷರಸ್ಥರಲ್ಲಿ ೬೫ ದಶಲಕ್ಷ ವಯಸ್ಕರನ್ನು ಸಾಕ್ಷರರನ್ನಾಗಿ ಮಾಡುವ ಯೋಜನೆಯನ್ನು ರೂಪಿಸಿತು. ಈ ಯೋಜನೆಯ ಯಶಸ್ವಿಯ ಬಗ್ಗೆ ಮೌಲ್ಯಮಾಪನ ಇನ್ನೂ ನಡೆಯಬೇಕಾಗಿದೆ. ಈ ಯೋಜನೆಯ ಒಂದು ವಿಶಿಷ್ಟ ಸಂಗತಿ ಏನಂದರೆ ೧೫ ರಿಂದ ೩೫ ವರ್ಷಗಳ ವರೆಗಿನ ವಯಸ್ಕರ ಶಿಕ್ಷಣದ ಧ್ಯೇಯದಲ್ಲಿ ಸಾಕ್ಷರತೆ ಕ್ರಿಯಾಶೀಲತೆ ಹಾಗೂ ಅರಿವಿನ ಜಾಗೃತಿಗಳ ಸಂಯೋಜನೆಯನ್ನು ಸಾಧಿಸಿದ್ದು.

ಇಲ್ಲಿಯ ವರೆಗಿನ ವಯಸ್ಕರ ಶಿಕ್ಷಣ ಕೇವಲ ಓದು ಬರಹ ಮತ್ತು ಅಲ್ಪಸ್ವಲ್ಪ ಅಂಕಿ ಮಗ್ಗಿಗಳ ಜ್ಞಾನ ನೀಡುವುದರಲ್ಲಿ ಸೀಮಿತವಾಗಿತ್ತು. ಕೆಲವೆಡೆ ಕಾರ್ಯಾತ್ಮಕ ಶಿಕ್ಷಣ ಅಂದರೆ ಬೇಸಾಯ ಅಥವಾ ಇತರ ಕಸಬುಗಳ ಬಗ್ಗೆ ವೈಜ್ಞಾನಿಕವಾದ ತರಬೇತಿ ನೀಡುವುದರ ಮೂಲಕ ಸಾಕ್ಷರತೆಯನ್ನು ಸಾಧಿಸುವುದು ವಯಸ್ಕರ ಶಿಕ್ಷಣದ ಉದ್ದೇಶವಾಗಿತ್ತು. ಆದರೆ ವಯಸ್ಕರ ಶಿಕ್ಷಣದ ಹೊಸ ಯೋಜನೆಯಲ್ಲಿ ಸಾಕ್ಷರತೆ ಹಾಗೂ ಕಾರ್ಯಾತ್ಮಕತೆಗಳೊಡನೆ ಅರಿವಿನ ಜಾಗೃತಿಯ ಸಮ್ಮಿಶ್ರವಿದೆ. ಅನಕ್ಷರಸ್ಥ ವಯಸ್ಕರು ತಮ್ಮ ಸಮಸ್ಯೆಗಳನ್ನು ಶಿಕ್ಷಣದ ಸಹಾಯದಿಂದ ಬಿಡಿಸಲು ಸಾಧ್ಯವಾಗಬಹುದೆಂದು ಖಾತ್ರಿಯಾಗುವತನಕ ಶಿಕ್ಷಣ ಪಡೆಯಲು ತಯಾರಾಗಲಾರರು. ವಯ-ಸ್ಕರ ಶಿಕ್ಷಣದ ಯೋಜನೆ ಸಫಲವಾಗಬೇಕಾದರೆ ಶಿಕ್ಷಣದ ಮೂಲಕ ಸಮಾಜ

ಸಂಘಟಿತವಾಗಿ ತನ್ನ ಸಮಸ್ಯೆಗಳನ್ನು ಅರಿತು ಅವುಗಳನ್ನು ಪರಿಹರಿಸಲು ಕೃತಿ ಮಾಡುವಷ್ಟು ಇಚ್ಛೆ ಮತ್ತು ಶಕ್ತಿಯ ನಿರ್ಮಾಣ ಮಾಡುವಲ್ಲಿ ಸಹಾಯಕವಾಗಬೇಕು. ಇದೇ ಅರಿವಿನ ಜಾಗೃತಿ ಅಂದರೆ ವಯಸ್ಕರ ಶಿಕ್ಷಣದಲ್ಲಿ ಸಾಕ್ಷರತೆ (ಓದು ಬರಹ ಮತ್ತು ಪ್ರಾಥಮಿಕ ಗಣಿತಗಳ ಜ್ಞಾನ);ಕಾರ್ಯಾತ್ಮಕತೆ(ಒಂದು ಕಸುಬಿನ ತರಬೇತಿ) ಮತ್ತು ಅರಿವಿನ ಜಾಗೃತಿ (ತಮ್ಮ ಸಮಸ್ಯೆಗಳ ಪೂರ್ಣ ತಿಳುವಳಿಕೆ ಮತ್ತು ಅವುಗಳ ಪರಿಹಾರಕ್ಕಾಗಿ ಕೃತಿಗಿಳಿಯುವ ಇಚ್ಛೆ ಮತ್ತು ಶಕ್ತಿ)ಗಳು ಒಂದಕ್ಕೊಂದು ಪೂರಕ ವಾಗಿ ಬರಬೇಕು.

'ಅರಿವಿನ ಜಾಗೃತಿ'ಯ ಕಲ್ಪನೆ, ಸಾಕ್ಷರತೆ ಮತ್ತು ಕ್ರಿಯಾಶೀಲತೆಗಳಿಗಿಂತ ಭಿನ್ನವಾಗಿದ್ದು ಅದರ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಕಲ್ಪನೆ ಯನ್ನು ಈ ಶತಮಾನದಲ್ಲಿ ಬಳಕೆಯಲ್ಲಿ ತಂದವರು ಬ್ರೇಝಿಲ್ ದೇಶದ ಶಿಕ್ಷಣ ತಜ್ಞ ಪೌಲೋ-ಫ್ರೇರೆ ಎಂಬುವವರು.

ಫ್ರೇರೆಯ ಶಿಕ್ಷಣ ಪದ್ಧತಿಯ ರೂಪರೇಷೆಗಳು

ಅರಿವಿನ ಜಾಗೃತಿಯ ಮುಖ್ಯ ಸಾಧನ ಸಂವಾದ. ಹತ್ತಿಕ್ಕಿದವರು ಕೀಳು. ದಬ್ಬಾಳಿಕೆ ನಡೆಸುವವರು ಮೇಲು ಎಂಬ ಭಾವನೆಯನ್ನು ಅಯೋಗ್ಯ ಎಂದು ಖಚಿತ ಪಡಿಸುವುದು ಸಂವಾದದಿಂದ. ಅರಿವಿನ ಎಚ್ಚರಿಕೆಯ ಕ್ರಿಯೆಯಲ್ಲಿ ಕಲಿಯುವವ ಕಲಿಸುವವನ ಸಾಧನ ಸಾಮುಗ್ರಿ ಅಲ್ಲ. ಸಂವಾದದಿಂದ ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಗಳಲ್ಲಿಯ ಅಂತರ್ವಿರೋಧಗಳು ಮನದಟ್ಟಾಗಿ ಪ್ರಚಲಿತ ಪರಿಸ್ಥಿತಿ ಯಲ್ಲಿ ತೋರುವ ದಬ್ಬಾಳಿಕೆ ವಿರುದ್ಧ ಹೋರಾಡಲು ಪ್ರವೃತ್ತನಾಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಕಲಿಯುವವನು ಸಕ್ರಿಯವಾಗಿ ಭಾಗವಹಿಸಲು ಸಾಧ್ಯ.

ಶಿಕ್ಷಣ ಕೊಡಲು ಎರಡು ಪದ್ಧತಿಗಳಿವೆ;- ಬ್ಯಾಕಿಂಗ್ ಪದ್ಧತಿಯಂತಿರುವ ಶಿಕ್ಷಣ ಮತ್ತು ಸಂವಾದ ಪದ್ಧತಿಯ ಶಿಕ್ಷಣ ಅಥವಾ ಸಂವಾದದ ಮೂಲಕ ಸಮಸ್ಯೆ ಬಗೆಹರಿಸುವ ಪದ್ಧತಿ.

ಬ್ಯಾಕಿಂಗ್ ಪದ್ಧತಿಯ ಶಿಕ್ಷಣದಲ್ಲಿ ಶಿಕ್ಷಕ ವಿದ್ಯಾರ್ಥಿಗೆ ಏನೇನು ಕಲಿಸಬೇಕೆಂದು ತಾನೇ ನಿಶ್ಚಯಿಸುತ್ತಾನೆ. ಬ್ಯಾಂಕಿನಲ್ಲಿ ಹಣ ತುಂಬಿದಂತೆ ವಿವಿಧ ವಿಷಯಗಳ ವಿವರ ವಿದ್ಯಾರ್ಥಿಗಳ ತಲೆಯಲ್ಲಿ ತುಂಬುತ್ತಾನೆ. ಈ ಪದ್ಧತಿ ಪ್ರಕಾರ ಆದರ್ಶ ಶಿಕ್ಷಕನೆಂದರೆ ಹೆಚ್ಚು ಹೆಚ್ಚು ವಿಷಯಗಳನ್ನು ತುಂಬಿಸಲು ಶಕ್ಯನಾಗಿರುವವನಾಗ ಬೇಕು. ಹೆಚ್ಚು ಹೆಚ್ಚು ವಿವರಗಳನ್ನು ತಲೆಯಲ್ಲಿ ತುಂಬಿಸಿ ಪರೀಕ್ಷೆಯಲ್ಲಿ ಹೊರ ಗೆಡಹಿದರೇನೇ ಒಬ್ಬನು ಆದರ್ಶ ವಿದ್ಯಾರ್ಥಿಯಾಗಲು ಯೋಗ್ಯನು. ಅಂದರೆ ಕೇವಲ

ಶಿಕ್ಷಕ ಕರ್ತೃವಾಗಿದ್ದು, ವಿದ್ಯಾರ್ಥಿ ಕ್ರಿಯಾಶೂನ್ಯ ಅಕರ್ತೃ, ಒಂದು ಸಾಮಗ್ರಿ. ಜ್ಞಾನವೆಲ್ಲಾ ಶಿಕ್ಷಕನಲ್ಲಿದ್ದು ವಿದ್ಯಾರ್ಥಿಗಳು ಅದೆಲ್ಲವನ್ನೂ ಶಿಕ್ಷಕನಿಂದ ಪಡೆಯಬೇಕು. ಏನನ್ನು ಕಲಿಯಬೇಕೆಂಬುದನ್ನು ಶಿಕ್ಷಕನೇ ನಿಶ್ಚಯಿಸುತ್ತಾನೆ.

ಈ ಪದ್ಧತಿಯಿಂದ ಜ್ಞಾನದ ನಿರ್ಮಾಣ ಇಲ್ಲ. ನಿಜವಾದ ಜ್ಞಾನವೆಂದರೆ ಸುತ್ತುಮುತ್ತಲಿನ ಪರಿಸ್ಥಿತಿಯನ್ನು ಬದಲಿಸಿ ಹೊಸ ಜಗತ್ತನ್ನು ನಿರ್ಮಿಸುವ ವಿಚಾರ ಮತ್ತು ಕೃತಿಯಾಗಿದೆ. ಬ್ಯಾಂಕಿಂಗ್ ಪದ್ಧತಿಯ ಶಿಕ್ಷಣದಲ್ಲಿ ಸ್ವತಂತ್ರ ವಿಚಾರ ಶಕ್ತಿಗೆ ಪ್ರೋತ್ಸಾಹ ಇಲ್ಲದ್ದರಿಂದ ಅದು ಶೋಷಕ ವರ್ಗಕ್ಕೆ ಲಾಭದಾಯಕ. ಶೋಷಿತರಲ್ಲಿ ಅನ್ಯಾಯದ ವಿರುದ್ಧ ಸಂತಾಪ ನಿರ್ಮಾಣವಾಗುವ ಶಕ್ಯತೆ ಇಲ್ಲ. ಮನುಷ್ಯನನ್ನು ಎಚ್ಚರಿಸುವ ಪ್ರಯತ್ನವಿಲ್ಲ.

ಕ್ರಿಯೆಯ ಅಪೇಕ್ಷೆ ಇದ್ದು ಒಂದು ಸಮಸ್ಯೆಯ ಬಗ್ಗೆ ನೇರ ಮತ್ತು ಟೀಕಾತ್ಮಕ ಸಂವಾದವೇ ಸಂವಾದ ಪದ್ಧತಿಯ ಶಿಕ್ಷಣ ಎನಿಸುತ್ತದೆ. ಸಮಸ್ಯೆಗಳ ಕುರಿತು ಅರಿವನ್ನು ಮತ್ತು ಅವನನ್ನು ಹೋಗಲಾಡಿಸುವ ಕಾರ್ಯಕ್ರಮವನ್ನು ಘೋಷಣೆ, ಭಾಷಣ ಹಾಗೂ ಪ್ರಚಾರ ಪತ್ರಿಕೆಗಳ ಮೂಲಕವೂ ನೀಡಬಹುದು. ಆದರೆ ಈ ಸಾಧನಗಳು ಅಷ್ಟು ಪರಿಣಾಮಕಾರಿಯಲ್ಲ. ಏಕೆಂದರೆ ಈ ಸಾಧನಗಳಲ್ಲಿ ಕೇವಲ ಶೋಷಿತರ ಬಗ್ಗೆ ವಿಚಾರ ಮೂಡಿರುತ್ತದೆ ವಿನಾ ಅವರ ಜೊತೆ ಅಲ್ಲ. ಕ್ರಿಯೆ ಇದ್ದರೂ ವಿಚಾರವಿಲ್ಲದಿರುವುದರಿಂದ ಕೃತಿಯು ನಿರ್ಮಾಣವಾಗುವುದಿಲ್ಲ. ವಿಶಿಷ್ಟ ಪರಿಣಾಮದ ವಿಚಾರ ಮಾಡಿದ ನಂತರ ಕೈಗೊಂಡ ಕ್ರಿಯೆಯೇ ಕೃತಿ ಎನಿಸುತ್ತದೆ. ಇದು ದಲಿತರ ಜೊತೆ ನಡೆಸಿದ ಸತ್ಯ ಸಂವಾದದಿಂದಲೇ ಮೂಡಿಬರಬೇಕು.

ಸಂವಾದ ಯಾವ ವಿಷಯದ ಮೇಲೆ ಆಗಬೇಕು ಎಂಬುದು ಆಯಾ ಸ್ಥಳದ ಪರಿಸ್ಥಿತಿ ಮೇಲೆ ಹಾಗೂ ದಲಿತರ ಮನದಲ್ಲಿರುವ ಶೋಷಣೆಯ ತಿಳುವಳಿಕೆಯ ಮೇಲೆ ಹೊಂದಿಕೊಂಡಿದೆ. ಸಂವಾದದಿಂದ ಶೋಷಣೆಯ ಆಧಾರದ ಮೇಲಿರುವ ಸಮಾಜದ ವ್ಯವಸ್ಥೆಯ ವಾಸ್ತವಿಕ ಅರಿವು ಆಗುವುದು. ಈ ಅರಿವಿನಿಂದ ಸಂವಾದದ ಮೂಲಕವೇ ಶೋಷಣೆಯಿಂದ ಮುಕ್ತರಾಗುವಂತೆ ಮಾಡುವ ಕೃತಿಯು ಉದ್ಭವವಾಗುವುದು. ಈ ರೀತಿ ಸಂವಾದವು ಪೂರ್ತಿಯಾಗಿ ಫಲಪ್ರದವಾಗಬೇಕಾದರೆ ಸಂವಾದ ನಡೆಸುವವರಿಗೆ ಶೋಷಿತರ ಮೇಲೆ, ಅವರ ವಿಚಾರ ಶಕ್ತಿಯ ಮೇಲೆ ವಿಶ್ವಾಸವಿರಬೇಕು. ದಲಿತರ ಸಲುವಾಗಿ ಅವರ ಬಗ್ಗೆ ವಿಚಾರ ಮಾಡದೇ ಅವರ ಜೊತೆ ವಿಚಾರ ಮಾಡಬೇಕು.

ದಲಿತರ ಜೊತೆ ನಡೆಸುವ ಸಂವಾದದ ಲಕ್ಷಣ ಹೀಗಿದೆ : ವಾಸ್ತವ ಸಂಗತಿ ಅಥವಾ ಸಮಸ್ಯೆಯನ್ನು ಒಂದು ಸೂತ್ರದ ಮೂಲಕ ಜನರ ಮುಂದಿಡಬೇಕು.

(ಸೂತ್ರೀಕರಣ). ಈ ಸೂತ್ರದ ಮೇಲೆ ಎಲ್ಲರೂ ವಿಚಾರ ವ್ಯಕ್ತಪಡಿಸಬೇಕು (ಸೂತ್ರ ವಿವರಣೆ). ಸಮಸ್ಯೆಯ ಬಗ್ಗೆ ತಟಸ್ಥ ಮತ್ತು ವಸ್ತುನಿಷ್ಠ ವಿಚಾರ ಹಾಗೂ ವಿನಿಮಯ ನಡೆದರೆ ಅರಿವಿನ ಜಾಗೃತಿಗೆ ಮೊದಲ ಹೆಜ್ಜೆ ಇಟ್ಟಂತೆ. ಸಂವಾದದ ಮೂಲಕ ದಲಿತರ ಸಮಸ್ಯೆಗಳ ಅರಿವಾಗುತ್ತದೆ. ಅವುಗಳ ವಸ್ತುನಿಷ್ಠ ವಿಚಾರ ಹಾಗೂ ಶಾಸ್ತ್ರೀಯ ವಿಶ್ಲೇಷಣೆ ನಡೆಯುತ್ತದೆ. ಇವುಗಳಿಂದಾಗಿ ಯಾವ ಸಮಸ್ಯೆಗಳನ್ನು ಬಗೆಹರಿಸಲು ಯಾವ ಕೃತಿ ಬೇಕು ಎಂಬ ಜ್ಞಾನವಮೂಡಿ ಯೋಗ್ಯವಾದ ಕೃತಿಯನ್ನು ಕೈಗೊಳ್ಳಲು ಅನುವಾಗುತ್ತದೆ.

ಸೂತ್ರೀಕರಣ, ಸೂತ್ರದ ವಿವರಣೆ ಮತ್ತು ಸಾಕ್ಷರತೆ :

ಒಂದು ಸೂತ್ರದ ಮೂಲಕ ಸಮಸ್ಯೆಯೊಂದನ್ನು ಜನರ ಮುಂದಿಡುವುದೇ ಸೂತ್ರೀಕರಣ (Codification). ಸೂತ್ರವು ದೃಶ್ಯ ರೂಪದ ಚಿತ್ರವಿರಬಹುದು ಅಥವಾ ಶ್ರಾವ್ಯ ರೂಪದ ಕಿರು ನಾಟಕವಿರಬಹುದು ಅಥವಾ ಎರಡನ್ನೂ ಒಳಗೊಂಡಿರಬಹುದು. ಉದಾಹರಣೆಗಾಗಿ ಗುಡಿಸಲಿನ ಚಿತ್ರ; ಸಾಹುಕಾರನು ಸಾಲಗಾರನಿಂದ ವಸ್ತುಗಳನ್ನು ತೆಗೆದುಕೊಂಡು ಹೋಗುವ ಚಿತ್ರ; ಜಮೀನ್ದಾರ ಮತ್ತು ಒಕ್ಕಲಿಗನ ಮಧ್ಯೆ ಸಂಭಾಷಣೆ, ಇತ್ಯಾದಿ.

ಸೂತ್ರದ ಮೇಲೆ ಎಲ್ಲರೂ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದೇ ಸೂತ್ರ ವಿವರಣೆ (Decodification). ವಿಚಾರ ವಿನಿಮಯದಲ್ಲಿ ಸೂತ್ರವು ಮೊದಲು ಕೇವಲ ಒಂದು ಸಮಸ್ಯೆಯಾಗಿದ್ದು, ಕ್ರಮೇಣ ಅದು ತಮ್ಮದೇ ಒಂದು ಸಮಸ್ಯೆ ಎಂಬ ಅರಿವಾಗುವುದು. ಇಲ್ಲಿಂದ ಮುಂದೆ ತಮ್ಮ ಸಮಸ್ಯೆಯನ್ನು ಬಗೆಹರಿಸುವ ವಸ್ತುನಿಷ್ಠ ವಿಚಾರ ವಿನಿಮಯವೂ ಅದರ ಶಾಸ್ತ್ರೀಯ ವಿಶ್ಲೇಶಣೆಯೂ ನಡೆಯುವುದು. ಸಮಸ್ಯೆಯನ್ನು ಬಗೆಹರಿಸಲು ಕೈಗೊಳ್ಳುವ ಕೃತಿಯಲ್ಲಿ ಸಾಕ್ಷರತೆಯ ಅಗತ್ಯವೂ ಮನದಟ್ಟಾಗುವುದು.

ಈ ಸಮಯದಲ್ಲಿ ಸೂತ್ರವನ್ನು ಶಬ್ದ ರೂಪದಲ್ಲಿ ಕಪ್ಪು ಹಲಗೆಯ ಮೇಲೆ ಬರೆದು ತೋರಿಸಿ ಅದನ್ನು ಮೊದಲು ಓದಿ ನಂತರ ಬರೆಯಲು ಕಲಿಯಬೇಕು. ಸಮಸ್ಯೆಯ ಬಗ್ಗೆ ಜನರ ಆಸಕ್ತಿ ಕೆರಳಿದ್ದರಿಂದ ಜನರು ಸಮಸ್ಯೆಯನ್ನು ತೋರಿಸಿಕೊಡುವ ಶಬ್ದವನ್ನು ಶೀಘ್ರವಾಗಿ ಓದಲು ಬರೆಯಲು ಶಕ್ಯರಾಗುವರು. ಕಲಿತ ಅಕ್ಷರಗಳು ಮನದಟ್ಟಾಗಲು ಆ ಅಕ್ಷರಗಳಿಂದ ಬೇರೆ ಜನ್ಯ ಶಬ್ದಗಳನ್ನು ಜನರಿಂದಲೇ ಹೇಳಿಸಿ ಬರೆಯಿಸಬೇಕು.

ಹೀಗೆ ಸೂತ್ರದಿಂದ ಒಂದು ವರ್ಗದ ಜನರ ಪರಿಸ್ಥಿತಿ ಪ್ರತಿಬಿಂಬಿತವಾಗಬೇಕು. ಜನರ ಪೂರ್ತಿ ಪರಿಸ್ಥಿತಿಯನ್ನು ಚಿತ್ರಿಸುವ ಒಂದು ಸೂತ್ರಮಾಲೆಯನ್ನೇ ಮೊದಲು

ತಯಾರಿಸಬೇಕು. ಈ ಎಲ್ಲಾ ಸೂತ್ರಗಳಿಂದ ಶೋಷಣೆಯ ಅರಿವಾಗಿ, ಅದಕ್ಕೆ ವಿರುದ್ಧವಾಗಿ ಮಾಡುವ ಕೃತಿಯ ಬಗ್ಗೆ ವಿವೇಚನೆ ಆಗಬೇಕು. ಸೂತ್ರಗಳಿಂದ ಆರಿಸಿದ ಜನಕ ಶಬ್ದಗಳಲ್ಲಿ ಭಾಷೆಯ ಎಲ್ಲಾ ಅಥವಾ ಬಹು ಮುಖ್ಯ ಅಕ್ಷರಗಳೆಲ್ಲಾ ಒಳಗೊಂಡಿರಬೇಕು.

ಸೂತ್ರಮಾಲೆಯನ್ನು ತಯಾರಿಸುವ ರೀತಿ :

ಸಮಸ್ಯೆಗಳನ್ನು ಚಿತ್ರಿಸುವ ಸೂತ್ರಮಾಲೆಯನ್ನು ತಯಾರಿಸಲು ಮತ್ತು ಅವುಗಳನ್ನು ತೋರಿಸುವ ಜನಕ ಶಬ್ದಗಳನ್ನು ಆರಿಸಲು ಅರಿವಿನ ಜಾಗೃತಿ ನಡೆಯಬೇಕಾದ ಸ್ಥಳದಲ್ಲಿ ಕಾರ್ಯಕರ್ತರು ತಿರುಗಾಡಿ ಪ್ರಶ್ನೆಗಳ ಮೂಲಕ ಜನರೊಡನೆ ನಡೆಸಿದ ಸಂಭಾಷಣೆಯ ಮೂಲಕ ಮತ್ತುತಮ್ಮ ವೀಕ್ಷಣೆಯ ಮೂಲಕ ಜನರ ಭಾಷೆ ಮತ್ತು ಅವರ ರೀತಿ ಪದ್ಧತಿಗಳನ್ನು ಅಭ್ಯಾಸ ಮಾಡಬೇಕು. ಜನರನ್ನು ಬೇರೆ ಬೇರೆ ವೇಳೆಗಳಲ್ಲೂ ಪ್ರಸಂಗಗಳಲ್ಲೂ ಭೇಟಿ ಮಾಡಿ ಅವರ ಜೀವನದ ನಿಜಸ್ಥಿತಿಯ ಅರಿವು ಮಾಡಿಕೊಳ್ಳಬೇಕು. ಬೇರೆ ಬೇರೆ ಸಂದರ್ಭಗಳಲ್ಲಿ ಅವರ ವರ್ತನೆ ಹೇಗಿದೆ? ಅವರ ಸಮಸ್ಯೆಗಳು ಯಾವುವು? ಎಂಬುದರ ಬಗ್ಗೆ ಒಳಗಿನ ಜ್ಞಾನವನ್ನು ಪಡೆಯಬೇಕು.

ಗೋಚರವಾದ ವಿವರಗಳನ್ನು ಕೂಡಿಸಿ ಅವುಗಳ ಮೇಲೆ ಚರ್ಚೆ ನಡೆಸಬೇಕು. ಚರ್ಚೆಯಿಂದ ಒಂದು ಸ್ಥಳದ ಮುಖ್ಯ ಸಮಸ್ಯೆಗಳ ಜ್ಞಾನ ಸಿಗುವುದು. ಸಮಸ್ಯೆಗಳ, ವಿಕಾಸ ವಿರೋಧಕ ಸಂಗತಿಗಳ ಹಾಗೂ ಸಮಾಜದ ಅಂತರ್ವಿರೋಧಗಳ ಪಟ್ಟಿಮಾಡಿ ಅವನ್ನು ಸ್ಪಷ್ಟಪಡಿಸುವ ಸೂತ್ರಗಳನ್ನು ಸಿದ್ಧಪಡಿಸಬೇಕು. ಈ ಸೂತ್ರಗಳ ರೂಪಚಿತ್ರ, ಕಥೆ, ನಾಟಕ, ಸ್ಥಿರ ಚಿತ್ರ, ಚಲನಚಿತ್ರ ಇಲ್ಲವೇ ವೃತ್ತಪತ್ರಿಕೆಗಳ ಟಿಪ್ಪಣಿ ಕೂಡ ಆಗಬಹುದು.

ಸೂತ್ರಗಳನ್ನು ಬೇರೆ ಬೇರೆ ಘಟಕಗಳಲ್ಲಿ ಕಲಿಯುವವರ ಮುಂದಿಟ್ಟು ಅವರಿಂದ ಸೂತ್ರದ ವಿವರಣೆಯನ್ನು ಸಂವಾದದ ಮೂಲಕ ಪಡೆಯಬೇಕು. ಜನರ ಪ್ರಗತಿ ಪ್ರತಿಬಂಧಿಸುವ ಸಂಗತಿಗಳ ಬಗ್ಗೆ ವಸ್ತುನಿಷ್ಠ ವಿಚಾರವು ನಡೆಯುವುದು. ಈ ವಿಚಾರ ಮಂಥನದಿಂದ ಸಮಸ್ಯೆಯನ್ನು ಹೋಗಲಾಡಿಸಲು ಒಂದು ಉಪಾಯದ ಯೋಜನೆ ನಡೆದು ತಕ್ಕ ಕೃತಿಯನ್ನು ಕೈಗೊಳ್ಳುವ ನಿರ್ಧಾರ ನಡೆಯುವುದು. ನಂತರ ಸೂತ್ರವನ್ನು ಶಬ್ದರೂಪವಲ್ಲಿ ತೋರಿಸಿ ಜನರು ಸಾಕ್ಷರತೆಯನ್ನು ಪಡೆಯುವಂತೆ ಮಾಡುವುದು. ಈ ರೀತಿಯಿಂದ ಶಿಕ್ಷಣ ಯಾಂತ್ರಿಕವಾಗಿರದೇ ಕಲಿಯುವುದರಲ್ಲಿ ಹುಮ್ಮಸ್ಸು ಬರುವುದು. ಹೀಗೆ ಸಂವಾದದಿಂದ ಶೋಷಣೆಯ ಅರಿವು, ತಾವು ಸಾಕ್ಷರರಾಗಬೇಕೆಂಬ ಹಂಬಲ, ಸಮಾಜ ಪರಿವರ್ತನೆ ಮಾಡಬೇಕೆಂಬ ಇಚ್ಛೆ ಹಾಗೂ ಅದಕ್ಕೆ ತಕ್ಕ ಕೃತಿ, ಅಕ್ಷರ ಜ್ಞಾನ ಇದೆಲ್ಲವೂ ಕೂಡಿರುವ ಸಂಪೂರ್ಣ ಅರಿವಿನ ಜಾಗೃತಿಯು ಉಂಟಾಗುವುದು.

ಫ್ರೇರೆ ಮಾಡಿದ ಪ್ರಯೋಗಗಳು :

ಫ್ರೇರೆ ಮತ್ತು ಅವರ ಸಂಗಡಿಗರು ತಾವು ಕಾರ್ಯ ಮಾಡಬೇಕಾಗಿರುವ ಜಾಗಕ್ಕೆ ಹೋಗಿ ಆ ಜನರ ಭಾಷೆಯಲ್ಲಿ ನಿಯಮಿತವಾಗಿ ಬಂದಿರುವ ಶಬ್ದಗಳ ಪಟ್ಟಿ ಮಾಡಿದರು. ಇದಕ್ಕೆ ಜನರೊಡನೆ ಬೆರೆತು ಜನರ ಜೀವನ ಹಾಗೂ ಪದ್ಧತಿಗಳ ಪರಿಚಯ ಮಾಡಿಕೊಂಡರು. ಈ ಪಟ್ಟಿಯಿಂದ ನಂತರ ಮಹತ್ವದ ೧೭ ಜನಕ ಶಬ್ದಗಳನ್ನು ಆರಿಸಿದರು. ಈ ಶಬ್ದಗಳು ಭಾಷೆಯ ವಿವಿಧ ಉಚ್ಚಾರಗಳನ್ನು ಲಿಪಿಯ ಎಲ್ಲಾ ಅಕ್ಷರಗಳನ್ನೂ ಒಳಗೊಂಡಿರುವಂತೆ ನೋಡಿಕೊಂಡರು. ಆ ಶಬ್ದಗಳು ಹೀಗಿವೆ : ಕೊಳಗೇರಿ (ಗುಡಿಸಲು), ಮಳೆ, ನೇಗಿಲು, ಭೂಮಿ, ಆಹಾರ, ಕುಣಿತ. ಬಾವಿ, ಸೈಕಲ್ಲು, ಕೆಲಸ, ವೇತನ, ಕೂಲಿ, ಕಸಬು, ಸರಕಾರ, ಕೊಳಚೆಗೇರಿ ವಾಸಿಗಳು, ಸಕ್ಕರೆ ಕಾರ್ಖಾನೆ, ಬ್ಯಾಂಕು, ಇಟ್ಟಿಗೆ ಮತ್ತು ಶ್ರೀಮಂತಿಕೆ.

ಈ ಶಬ್ದಗಳಿಗನುಸಾರವಾಗಿ ಚಿತ್ರ, ಚಿತ್ರಮಾಲಿಕೆ ಅಥವಾ ಸ್ಥಿರಚಿತ್ರಗಳು ಸೂತ್ರಗಳೆಂದು ರಚಿಸಲಾಯಿತು.

ಕಲಿಯುವವರ ಮುಂದೆ ಈ ಸೂತ್ರಗಳನ್ನು ಇಟ್ಟು ಚರ್ಚೆ, ಸಂವಾದದ ಮೂಲಕ ಜನರ ಸಮಸ್ಯೆಗಳ ವಾಸ್ತವ ಸ್ವರೂಪದ ವಿಶ್ಲೇಷಣೆ ನಡೆಯಿತು. ಉದಾಹರಣೆಗಾಗಿ ;–

ಕೊಳಚೆಗೇರಿ :– ಜನರು ಯಾವ ರೀತಿಯಲ್ಲಿ ಅಲ್ಲಿ ವಾಸಿಸುತ್ತಾರೆ ? ಜನರಿಗೆ ಬೇಕಾದ ಅತ್ಯವಶ್ಯಕತೆಗಳೇನು ?

ಮಳೆ :– ಬೇಸಾಯಕ್ಕೆ ಮಳೆಯ ಅವಶ್ಯಕತೆ–ರೈತರು ನಿಸರ್ಗದ ಮೇಲೆ ಎಷ್ಟು ಹೊಂದಿಕೊಂಡಿದ್ದಾರೆ ? ಇದನ್ನು ಬದಲಾಯಿಸಬಹುದೊ? ಹೇಗೆ ?

ನೇಗಿಲು ;– ಕೆಲಸದ ಪ್ರಾಮುಖ್ಯತೆ. ಬಂಡವಾಳ ಹೆಚ್ಚು ಮುಖ್ಯವೋ ? ಕೆಲಸ ಹೆಚ್ಚು ಮುಖ್ಯವೋ ? ಏಕೆ ?

ಭೂಮಿ ;–ಭೂ ಸುಧಾರಣೆಗಳು, ನೀರಾವರಿ, ದೇಶದ ಸಂಪನ್ಮೂಲಗಳ ಬಳಕೆ.

ಆಹಾರ ;– ಪೌಷ್ಟಿಕ ಆಹಾರದ ಅಭಾವ-ಹಸಿವು, ಬಾಲ್ಯಮರಣ, ರೋಗ.

ಕುಣಿತ :– ಜನ ಸಾಮಾನ್ಯರ ಸಂಸ್ಕೃತಿ–ಸುಶಿಕ್ಷಿತರ ಸಂಸ್ಕೃತಿ.

ಬಾವಿ ;- ಕುಡಿಯುವ ನೀರಿನ ಪೂರೈಕೆ. ನೀರಿನಿಂದ ಹಬ್ಬುವ ರೋಗಗಳು. ಶುಚಿತ್ವ.

ಸೈಕಲ್ಲು :– ಸಾರಿಗೆಯ ಕೊರತೆ, ಜನಸಾಮಾನ್ಯರಿಗೆ ಸಾರಿಗೆ ಅವಶ್ಯಕತೆ ಈಡೇರಿಸಲು ಏನು ಮಾಡಬೇಕು ?

ಕೆಲಸ :– ಕೈಕೆಲಸಕ್ಕೂ ಬುದ್ಧಿ ಕೆಲಸಕ್ಕೂ ಸಿಗುವ ಮನ್ನಣೆ. ಏಕೆ ಈ ವ್ಯತ್ಯಾಸ ?

ವೇತನ ಕೂಲಿ :– ಕನಿಷ್ಟ ವೇತನ / ಕೂಲಿ ಎಷ್ಟು ? ಇದು ಸಿಗುತ್ತದೊ ?

ಕಸಬು / ಉದ್ಯೋಗ:- ವರ್ಗಗಳು.

ಸರಕಾರ :– ಅಧಿಕಾರ ಯಾರ ಕೈಯಲ್ಲಿದೆ ? ಜನರು ಭಾಗವಹಿಸುತ್ತಾರೋ ?

ಕೊಳಚಗೇರಿ ವಾಸಿಗರು :- ಸಮಾಜ ಕಲ್ಯಾಣ ಧೋರಣೆಗಳು ಜನರಿಗೆ ಏನಾದರೂ ಉಪಯೋಗ ನೀಡುತ್ತವೆಯೋ ? ಏಕೆ ?

ಸಕ್ಕರೆ ಕಾರ್ಖಾನೆ:- ಸಣ್ಣ ಕೈಗಾರಿಕೆಗಳು, ಏಕೆ ಬ್ರೇಝಿಲ್‌ನಲ್ಲಿ ಒಂದೇ ಜಾತಿಯ ಉತ್ಪನ್ನ ?

ಬ್ಯಾಂಕು :- ಯಾರಿಗೆ ಹಣದ ಸವಲತ್ತು ಸಿಗುತ್ತದೆ ?

ಇಟ್ಟಿಗೆ :- ಪಟ್ಟಣದ ಸುಧಾರಣೆ.

ಶ್ರೀಮಂತಿಕೆ :- ಶ್ರೀಮಂತ ಹಾಗೂ ಬಡವರ ಮಧ್ಯದ ಸಂಬಂಧ. ಶ್ರೀಮಂತ ಹಾಗೂ ಬಡ ರಾಷ್ಟ್ರಗಳ ನಡುವಣ ಸಂಬಂಧ. ಯಾವ ರೀತಿಯಲ್ಲಿ ಈ ಪರಿಸ್ಥಿತಿಯನ್ನು ಬದಲಾಯಿಸಬಹುದು?

ಒಂದು ಸಮಸ್ಯೆಯ ಅರಿವಾದ ಮೇಲೆ ಸೂತ್ರವನ್ನು ಬದಿಗಿರಿಸಿ, ಸೂತ್ರ ವ್ಯಕ್ತಪಡಿಸುವ ಶಬ್ದವನ್ನು ಬರೆದು ತೋರಿಸಲಾಯಿತು. ಮೊದಲು ಇಡೀ ಶಬ್ದವನ್ನು ಓದಿಸಿ ನಂತರ ಅದರಲ್ಲಿಯ ಅಕ್ಷರಗಳಲ್ಲಿ ಜ್ಞಾನವನ್ನು ಕೊಡಲಾಯಿತು. ಮೂಲ ಶಬ್ದದಿಂದ ಮತ್ತು ಶಬ್ದದ ಅಕ್ಷರಗಳಿಂದ ಇತರ ಶಬ್ದಗಳನ್ನು ರಚಿಸಿ ಕಲಿತ ಅಕ್ಷರಗಳ ಸ್ಪಷ್ಟಜ್ಞಾನ ಬರುವಂತೆ ಮಾಡಲಾಯಿತು.

ಉದಾಹರಣೆಗಾಗಿ : ಪೌಲೊ-ಫ್ರೇರೆಯವರು ಸಿದ್ಧಪಡಿಸಿದ ಸೂತ್ರಮಾಲೆಯ ಮೊದಲಿನ ವಿಷಯ ಕೊಳಚೆಗೇರಿಗೆ ಸಂಬಂಧಪಟ್ಟಿದ್ದು. ಆ ವಿಷಯದ ಸೂತ್ರದಲ್ಲಿ ಬರುವ ಶಬ್ದ ಸ್ಪ್ಯಾನಿಶ್ ಭಾಷೆಯಲ್ಲಿ (FAVELA) ಎಂದಿರುತ್ತದೆ. ಸೂತ್ರವನ್ನು ತೋರಿಸಿದ ಮೇಲೆ ವಯಸ್ಕರು ಆ ಸೂತ್ರವನ್ನು ತೋರಿಸುವ ವಿಷಯದ ಮೇಲೆ ಚರ್ಚೆ ಮಾಡುವಂತೆ ಪ್ರೇರಕನು ನೋಡಿಕೊಂಡನು. ಕೊಳಚೆಗೇರಿ ಸಮಸ್ಯೆಯ

ಬಹುಮುಖ ಪರಿಚಯವಾದ ಮೇಲೆ ಪ್ರೇರಕನು ಕೇವಲ (FAVELA) ಎಂದು ಬರೆದಿರುವ ಸ್ಥಿರ ಚಿತ್ರವನ್ನು ತೋರಿಸಿ 'ನಾವು ಇದುವರೆಗೆ ಚರ್ಚೆ ಮಾಡುತ್ತಿದ್ದ ಕೊಳಚೆಗೇರಿಯ ಶಬ್ದರೂಪ ಅದು" ಎಂದು ಸ್ಪಷ್ಟಪಡಿಸಿದನು. ಮತ್ತೊಂದು ಸ್ಥಿರ ಚಿತ್ರದಲ್ಲಿ ಶಬ್ದವನ್ನು ಉಚ್ಚಾರಣೆ ಮಾಡುವ ಘಟಕ / ಚೂರುಗಳಿಗನುಸಾರ ವಾಗಿ ಬಿಡಿ ಬಿಡಿಯಾಗಿ ಬರೆದಿರುವದನ್ನು ತೋರಿಸಿದನು : **FA VE LA.**

ನಂತರ ಮೊದಲ ಘಟಕವನ್ನು ತೆಗೆದುಕೊಂಡು ಅದನ್ನು ವಯಸ್ಕರು ಓದು ವಂತೆಯೂ, ಬರೆಯುವಂತೆಯೂ, ನೋಡಿಕೊಂಡನು. ಇದಾದ ಮೇಲೆ ಅದೇ ಘಟಕದಲ್ಲಿ ಸ್ಪ್ಯಾನೀಶ್ ಭಾಷೆಯ ಉಳಿದ ಸ್ವರಗಳು ಸೇರುವಂತೆ ಸಿದ್ಧಪಡಿಸಿದ ಇನ್ನೊಂದು ಸ್ಥಿರ ಚಿತ್ರವನ್ನು ತೋರಿಸಿದನು. **FA, FE, FI, FO, FU.** ಈ ಘಟಕ ಗಳು ಒಂದರ ಕೆಳಗೆ ಒಂದರಂತೆ ಬರೆದಿದ್ದವು. ಈ ಹಂತದಲ್ಲಿ ಹೊಸ ಸ್ವರಗಳ ಜ್ಞಾನವನ್ನು ಒಂದು ಸಮಸ್ಯೆಯ ರೂಪದಲ್ಲಿ ಪ್ರೇರಕನು ವಯಸ್ಕರ ಮುಂದಿಟ್ಟನು ಅದಕ್ಕಾಗಿ ಎರಡು ಮಹತ್ವದ ಪ್ರಶ್ನೆಗಳನ್ನು ಅವನು ಕೇಳಿದನು. ಮೊದಲನೆಯ ಪ್ರಶ್ನೆ- 'ಈ ಚೂರು (ಘಟಕ)ಗಳಲ್ಲಿ ಒಂದೇ ರೀತಿಯಾಗಿರುವ ಮತ್ತು ಬೇರೆ ಬೇರೆ ರೀತಿಯಾಗಿರುವ ಯಾವುದಾದರೂ ಅಂಶಗಳು ಇವೆಯೋ? 'ವಯಸ್ಕರು ಕೆಲವು ಕಾಲದ ಸಂಶಯಾತ್ಮಕ ಮೌನದ ನಂತರ ಈ ರೀತಿ ಹೇಳಿದರು ; "ಈ ಎಲ್ಲಾ ಚೂರುಗಳು ಒಂದೇ ರೀತಿಯಲ್ಲಿ ಸುರು ಆಗುತ್ತವೆ. ಆದರೆ ಬೇರೆ ಬೇರೆ ರೀತಿಯಲ್ಲಿ ಅಂತ್ಯಗೊಳ್ಳುತ್ತವೆ." ನಂತರ ಪ್ರೇರಕನು ಕೇಳಿದ್ದೇನಂದರೆ – "ಈ ಚೂರುಗಳು ಒಂದೇ ರೀತಿಯಾಗಿ ಸುರುವಾಗಿ ಬೇರೆ ಬೇರೆ ರೀತಿಯಲ್ಲಿ ಕೊನೆಗೊಂಡರೆ ನಾವು ಅವನ್ನು FA ಎಂತಲೇ ಕರೆಯಬಹುದೋ ?" ವಯಸ್ಕರು ಪುನಃ ಕೆಲವು ನಿಮಿಷ ಮೌನ ತಾಳಿ ಪ್ರಯಾಸ ಪೂರ್ವಕವಾಗಿ "ಇಲ್ಲ" ಎಂದು ಉತ್ತರ ಕೊಟ್ಟರು. ಒಂದರ ಕೆಳಗೆ ಒಂದರಂತೆ ಬರೆದಿದ್ದ 'F' ಅಕ್ಷರದಿಂದ ಆರಂಭವಾಗಿ ಐದು ಸ್ವರಗಳಿಂದ ಅಂತ್ಯವಾಗುವ ಚೂರುಗಳನ್ನು ವಯಸ್ಕರು ಅಡ್ಡವಾಗಿಯೂ ನೇರವಾಗಿಯೂ ಓದು ವಂತೆ ಪ್ರೇರಕನು ನೋಡಿಕೊಂಡನು ಮತ್ತು ಐದು ಸ್ವರಗಳನ್ನು ಅವರು ಬರೆಯು ವಂತೆಯೂ ಮಾಡಿದನು. ಈ ರೀತಿ ಸ್ವರಗಳ ಜ್ಞಾನವನ್ನು ಒಂದು ಸಮಸ್ಯೆಯನ್ನು ಬಗೆಹರಿಸುವುದರ ಮೂಲಕ ವಯಸ್ಕರೇ ಕಂಡುಕೊಳ್ಳುವಂತೆ ಪ್ರೇರಕನು ಕಾರಣ ನಾದನು. ಇದೇ ಪ್ರಕಾರ ಉಳಿದ ಎರಡು ಚೂರುಗಳ (VE, LA) ಪರಿಚಯವೂ ಆಯಿತು.

ಮೂರು ಘಟಕಗಳ ಮತ್ತು ಐದು ಸ್ವರಗಳ ಪರಿಚಯ ಆದ ಮೇಲೆ ಪ್ರೇರಕನು ಇನ್ನೊಂದು ಪ್ರಶ್ನೆ ಕೇಳಿ ಭಾಷೆಯ ಬಗೆಗಿರುವ ಮತ್ತೊಂದು ಗುಟ್ಟನ್ನು ವಯಸ್ಕರೇ ಕಂಡುಹಿಡಿಯುವಂತೆ ಮಾಡಿದನು. ಆ ಪ್ರಶ್ನೆ ಹೀಗಿದೆ : "ಈ ಚೂರುಗಳಿಂದ ನಾವೇನಾದರೂ ಮಾಡಬಹುದೆಂದು ನಿಮಗನಿಸುತ್ತದೋ ?" ಇಲ್ಲಿಯೂ ಕೂಡಾ

ವಯಸ್ಕರು ಕೆಲವು ಹೊತ್ತು ಮೌನ ತಾಳಿ ನಿಧಾನವಾಗಿ ಆ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ಕೂಡಿಸಿ ಹೊಸ ಹೊಸ ಶಬ್ದಗಳನ್ನು ಕಂಡುಹಿಡಿದರು.

ಉದಾ :- FAVELA, FAVO, FIVEWA, LUVA. LI, VALE, VALA. VIVA, FALO, FALE, FE, FAVA, VILA, LAVA, VELE, VELA. VIVE, VIVO, FALAVA. ಇತ್ಯಾದಿ.

ಹೀಗೆ ನಾಲ್ಕೈದು ಜನಕ ಶಬ್ದಗಳನ್ನು ಕಲಿತ ಮೇಲೆ ಇಷ್ಟರವರೆಗೆ ಕಂಡು ಹಿಡಿದ ನೂರಾರು ಶಬ್ದಗಳಿಂದ ಕೆಲವು ಸಣ್ಣಪುಟ್ಟ ವಾಕ್ಯಗಳನ್ನು ಬಿಡಿ ಮಾತು ಗಳನ್ನು ರಚಿಸಲಿಕ್ಕೆ ವಯಸ್ಕರು ತೊಡಗಿದರು :

ಶಿಕ್ಷಣದ ಗುರಿ ಮನುಷ್ಯನಿಗೆ ಪರಿಸರವನ್ನು ಯೋಗ್ಯ ರೀತಿಯಲ್ಲಿ ಬದಲಾಯಿಸುವಲ್ಲಿ ನೆರವಾಗುವುದು. ಸಾಕ್ಷರತೆ ಪರಿಸ್ಥಿತಿಯನ್ನು ಬದಲಿಸುವ ಒಂದು ಸಾಧನ ಎಂದು ತೋರಿಸಿಕೊಡಲೂ ವಿವಿಧ ಸೂತ್ರಗಳನ್ನು ಫ್ರೇರೆಯು ಬಳಸಿದ್ದನು. ಉದಾಹರಣೆಗಾಗಿ ಒಂದು ಚಿತ್ರವಲ್ಲಿ ಮಾನವ ಹಾಗೂ ಪ್ರಾಣಿಗಳ ಅಂತರವನ್ನು ತೋರಿಸಿ ಮಾನವನು ಶಿಕ್ಷಣದಿಂದ ಏನನ್ನು ಸಾಧಿಸಬಹುದು ಎಂದು ತೋರಿಸಿಕೊಟ್ಟನು. ಚಿತ್ರವಲ್ಲಿ ಒಂದು ಮನೆ; ಅದರ ಪಕ್ಕದಲ್ಲಿ ಒಂದು ಬಾವಿ; ಅದರ ಹತ್ತಿರ ಒಬ್ಬ ಮನುಷ್ಯ: ಮನುಷ್ಯನ ಒಂದು ಕೈಯಲ್ಲಿ ಕೊಡಲಿ, ಇನ್ನೊಂದರಲ್ಲಿ ಪುಸ್ತಕ: ಮನೆಯ ಇನ್ನೊಂದು ಪಕ್ಕದಲ್ಲಿ ಗಿಡ: ಆಕಾಶದಲ್ಲಿ ಪಕ್ಷಿ: ಪಕ್ಕದ ತಿಪ್ಪೆಯಲ್ಲಿ ಹಂದಿ ಇದ್ದವು. ಚರ್ಚೆಯ ಮುಖಾಂತರ ಮನುಷ್ಯ-ಪ್ರಾಣಿಗಳ ಭೇದ ತೋರಿಸಿ. ಮನುಷ್ಯ ಶಿಕ್ಷಣ ದಿಂದ ತನ್ನ ಪರಿಸರವನ್ನು ತನ್ನ ಬೇಡಿಕೆಗಳಿಗೆ ತಕ್ಕಂತೆ ಅಳವಡಿಸಬಹುದು ಎಂದು ಖಚಿತಪಡಿಸಿದನು.

ಫ್ರೇರೆಯ ಶಿಕ್ಷಣ ಪದ್ಧತಿಯ ಇತಿಮಿತಿಗಳು :

ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಫ್ರೇರೆಯ ಶಿಕ್ಷಣ ಪದ್ಧತಿ ಅತ್ಯಂತ ಸಾರ್ಥಕವಾಗಿದೆ. ಯುನೆಸ್ಕೋವು ಚಿಲಿಯನ್ನು ಅನಕ್ಷರತೆಯನ್ನು ಅತ್ಯಂತ ಸಮರ್ಪಕ ರೀತಿಯಲ್ಲಿ ಎದುರಿಸುವ ಐದು ರಾಷ್ಟ್ರಗಳಲ್ಲಿ ಒಂದಾಗಿ ಪರಿಗಣಿಸಿತ್ತು.

ಫ್ರೇರೆಯ ಶಿಕ್ಷಣ ಪದ್ಧತಿಯ ಧ್ಯೇಯಗಳು ವ್ಯಾಪಕವೂ ಮಹತ್ತರವೂ ಆಗಿವೆ. ಸಾಕ್ಷರತೆಯ ಮೂಲಕ ಹತ್ತಿಕ್ಕಿದ ಜನರ ಮಾನವೀಕರಣ ಹಾಗೂ ದೇಶದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆ ಸಾಧಿಸುವ ಉದಾತ್ತ ಧ್ಯೇಯ ಈ ಪದ್ಧತಿ ಇಟ್ಟುಕೊಂಡಿದೆ. ಅದರ ವಿಧಾನಗಳು ವಯಸ್ಕರ ಮನೋಭಾವವನ್ನು ಗೌರವಿಸುತ್ತವೆ. ಉದಾಹರಣೆಗಾಗಿ ಸಂವಾದ, ಸೂತ್ರಗಳನ್ನು ಜನರ ಜೀವನ

ಸಮಸ್ಯೆಗಳಿಂದಲೇ ಆರಿಸುವುದು ಇತ್ಯಾದಿ. ಶಿಕ್ಷಣವು ಜನರ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ಕೇಂದ್ರೀಕರಿಸಿದ್ದು ಜನರ ಮನಸ್ಸನ್ನೂ ಆಸಕ್ತಿಯನ್ನೂ ಕೆರಳಿಸುವಂತಿದೆ. ವಯಸ್ಕರು ಶಿಕ್ಷಣದ ಪ್ರತಿ ಹಂತದಲ್ಲೂ ಭಾಗವಹಿಸುವಂತೆ ಮಾಡುತ್ತದೆ.

ಆದರೂ ಫ್ರೇರೆಯ ಶಿಕ್ಷಣ ಪದ್ಧತಿ ಅಷ್ಟೊಂದು ಸುಲಭವಾದುದಲ್ಲ.

ವಯಸ್ಕರ ಆಸಕ್ತಿಯನ್ನು ಕೆರಳಿಸಿ ಸಾಕ್ಷರತೆಯ ಬಗ್ಗೆ ಅದನ್ನು ಸದಾ ಒಂದು ಮಟ್ಟದಲ್ಲಿ ಇಡುವಂತೆ ಮಾಡುವುದು ತುಂಬಾ ಕಷ್ಟಕರ ಅಭಿಮಾನ್ಯ ಶೂನ್ಯ ಹಾಗೂ ಬೇರೆಯವರ ಆಜ್ಞೆಗಳನ್ನು ಪಾಲಿಸುವಲ್ಲಿ ಸದಾ ತಯಾರಿರುವ ಜನರು ಒಮ್ಮೆಲೆ ಸಮಾನತ್ವ ತತ್ವಗಳ ಮೇಲೆ ವರ್ತಿಸುವಂತೆ ಮಾಡುವುದು ಕಷ್ಟದ ಸಂಗತಿ.

ಫ್ರೇರೆಯ ಶಿಕ್ಷಣ ಪದ್ಧತಿಯನ್ನು ಅಳವಡಿಸಲು ಬಹಳಷ್ಟು ಪೂರ್ವ ಸಿದ್ಧತೆ ಬೇಕು. ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳ ಸಂಪೂರ್ಣ ಜ್ಞಾನ ವಿರಬೇಕು.

ವಯಸ್ಕರ ಶಿಕ್ಷಕ ಅಥವಾ ಸಂಘಟಕ (ಪ್ರೇರಕ) ಬಹಳ ಕುಶಲನಾಗಿರಬೇಕು. ಆವನು ಫ್ರೇರೆಯ ಶಿಕ್ಷಣ ಪದ್ಧತಿಯ ತತ್ವಜ್ಞಾನಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿರಬೇಕು. ಫ್ರೇರೆಯ ಶಿಕ್ಷಣ ಪದ್ಧತಿಯಲ್ಲಿ ತರಬೇತಿ ಪಡೆದಿದ್ದರೂ ಪ್ರಚಲಿತ ಶಿಕ್ಷಣ ಪದ್ಧತಿಯಂತೆ ಪಾಠ ನಡೆಸುವ ಆಕರ್ಷಣೆ ಹೆಚ್ಚು. ಸಂವಾದದ ಬದಲು, ಸುಲಭ ರೀತಿಯ ಪಾಠ ಹೇಳಿಕೊಡುವ ವ್ಯವಸ್ಥೆ ಬಹಳ ಸುಲಭ ಎಂದು ಪ್ರೇರಕನಿಗೆ ಅನಿಸಬಹುದು.

ಹೀಗಿದ್ದರೂ ವಯಸ್ಕರ ಶಿಕ್ಷಣದಲ್ಲಿ ಅರಿವಿನ ಜಾಗೃತಿಯ ಪದ್ಧತಿಯನ್ನು ಬಳಸುವುದು ಹೆಚ್ಚು ಸೂಕ್ತ. ಕೇವಲ ಸಾಕ್ಷರತೆಗೆ ಮಹತ್ವಕೊಡದೆ ಸಾಕ್ಷರತೆಯ ಮೂಲಕ ಭಾರತ ದೇಶದ ಬಡತನ ಹಾಗೂ ಇತರ ಸಾಮಾಜಿಕ ಸಮಸ್ಯೆಗಳನ್ನು (ಉದಾ : ಜಾತಿ, ಭೇದ, ಅಂಧಶ್ರದ್ಧೆ) ಹೋಗಲಾಡಿಸುವಲ್ಲಿ ತರುಣ ವಯಸ್ಕರನ್ನು ಅರಿವಿನ ಜಾಗೃತಿ ಉದ್ಯುಕ್ತರನ್ನಾಗಿ, ಮಾಡಬಲ್ಲದು.

ಗ್ರಂಥ ಋಣ

Cultural Action for Freedom-Penguin Book Ltd .Haimindeworth Middle sex 1975(1972). Originally Harward Educational Review, USA. (1970)

Paulo Freire-Pedagony of the oppressed. Penguin Book Ltd., Haiminder worth, Middle sex, England, 1982(1972)

Lioyd Arthur Sr-Paulo Freire and Adult Education.

ಶರದ ಕುಲಕರ್ಣಿ - ಅರಿವಿನ ಜಾಗೃತಿ.
(ಅನು : ಪ್ರಭಾಕರ ನಾನವಟಿ)
ಜನ ಜಾಗರಣ, ೨೦–ಮಿಲ್ಕ್‌ಮನ್ ಸ್ಟ್ರೀಟ್, ಕ್ಯಾಂಪ್ ಬೆಳಗಾವ ...

ನರೆಯಂಗಲ್ಲು - ಪನ್ನೆರಡು

● ಬಿ. ವ್ಹಿ. ಶಿರೂರ

ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಇಂದಿನ ನರೇಗಲ್ಲೇ ಹಿಂದಿನ ನರೆಯಂಗಲ್ಲು. ಇದು 'ಬಹುಧರ್ಮರ್ಥೇನುನಿವಹಕ್ಕಾಡುಂಬೊಲ'ವಾದ ಬೆಳ್ವೊಲವಲ್ಲಿ 'ಧರಾಂಗನಾತಿಳಕಮೆನಿಸಿ ಕರಮೊಪ್ಪಿ ತೋರುತ್ತಿದ್ದಿತಂತೆ'[1]. ಡಾ. ಶಂ· ಬಾ. ಜೋಶಿ ಅವರು 'ಪ್ರಾಣಿಗಳಿಂದ ಹೆಸರು ಬಂದವು' ಎಂದು ಹೇಳುವ ಊರುಗಳ ಅಡಿಯಲ್ಲಿ ಈ ನರೇಗಲ್ಲನ್ನು ಉಲ್ಲೇಖಿಸಿದ್ದಾರೆ.[2] ಆದರೆ ವಿವರಣೆಯನ್ನು ಕೊಟ್ಟಿಲ್ಲ. ಕ್ರಿ.ಶ. ೧೧೧೨ ರ ಇಟಗಿಯ ಒಂದು ಸಂಸ್ಕೃತ ಶಾಸನ ಕನ್ನಡದ ಊರುಗಳ ಹೆಸರನ್ನು ಅನ್ವರ್ಥಕವಾಗಿ ಸಂಸ್ಕೃತಕ್ಕೆ ಪರಿವರ್ತಿಸಿಕೊಂಡು ಈ ನರೇಗಲ್ಲನ್ನು 'ಪಲಿತ ಪಾಷಾಣ ನಾಮ ಗ್ರಾಮ' (ಪಲಿತ= ನೆರೆ. ಪಾಷಾಣ= ಕಲ್ಲು= ನರೇಗಲ್ಲು) ಎಂದು ಹೊಗಳಿದೆ.[3]

ಪ್ರಾಚೀನಕಾಲದಲ್ಲಿ ನರೇಗಲ್ಲು ಬೆಳ್ವೊಳ ಮೂನೂರಜಿಜ್ಜೊಳಗಣ ಹನ್ನೆರಡು ಗ್ರಾಮಗಳ ಆಡಳಿತ ಕೇಂದ್ರವಾಗಿತ್ತು.[4] ಆದ್ದರಿಂದ ಅದನ್ನು 'ನರೆಯಂಗಲ್ಲು ಪನ್ನೆರಡು' ಎಂದು ಕರೆಯುತ್ತಿದ್ದರು[5] ಈ ಹನ್ನೆರಡು ಗ್ರಾಮಗಳಲ್ಲಿ ರೋಣ ತಾಲೂಕಿನ ಜಕ್ಕಲಿ, ಸವಡಿ, ಅಬ್ಬಿಗೇರಿ, ಗದಗ ತಾಲೂಕಿನ ಕೋಟುಮಚಗಿ, ಯಲಬುರ್ಗಿ ತಾಲೂಕಿನ ಇಟ್ಟಿಗೆಗಳನ್ನು ಡಾ॥ ಶ್ರೀನಿವಾಸ ರಿತ್ತಿ ಅವರು ಗುರುತಿಸಿದ್ದಾರೆ.[6] ಡಾ. ಪಿ. ಬಿ. ದೇಸಾಯಿ ಅವರು ಇದರಲ್ಲಿ ಯಲಬುರ್ಗಿ ತಾಲೂಕಿನ

---

1) ಶಾಸನ ಸಾಹಿತ್ಯ ಸಂಚಯ, ಸಂ. ಮೇವುಂಡಿ ಮಲ್ಲಾರಿ, ಪು. ೮೭. 2) ಕನ್ನಡ ಕತೆ ಪು. ೧೮. 3) ಕ. ಸಾ. ಪ. ಪ. ೨೨-೩,ಪು.೧೪೧. 4) ಬೆಳ್ವೊಳಮೂನೂಱಱೊಳಗಣ ನರೆಯಂಗಲ್ಲು ಪನ್ನೆರಡು ಕ್ರಿ. ಶ. ೧೧೧೩ರ ಅಬ್ಬಿಗೇರಿ ಶಾಸನ. S. I.I. XI-ii-163. 5) ಕ್ರಿ.ಶ. ೧೧೧೨ರ ಇಟಗಿ ಶಾಸನ. ಶಾ.ಸಾ. ಸಂ. ಪು. ೮೭: ಕ್ರಿ. ಶ. ೧೧೨೧ರ ಕೋಡಿಕೊಪ್ಪದ ತ್ರಿಭುವನಮಲ್ಲನ ಶಾಸನ S. I.I. XI-ii. 170, ಕ್ರಿ. ಶ. ೧೧೨೫ರ ಅಬ್ಬಿಗೇರಿ ಶಾಸನ S.I.I. XI-ii-176. ಕ್ರಿ. ಶ. ೧೦೪೪ರ ನರೇಗಲ್ಲಿನ ಜಗದೇಕಮಲ್ಲನ ಶಾಸನ S. I.I. XI-ii, 119. ಇದೇ ಕಾಲದ ಕೋಡಿಕೊಪ್ಪದ ಶಾಸನ. S.I. I.XV-28. ಕ್ರಿ.ಶ. ೧೧೭೯ರ ಹಿರೇವಣಗೂರ ಶಾಸನ.S.I.I.XV.238 ಕ್ರಿ.ಶ.೧೧೮೪ರ ಸಂಕಮನಕಾಲದ ಕಟಗೇರಿ ಶಾಸನ S I.I. XV. 142; ಸಿಂದ ಅರಸರಕಾಲದ ಯಲಬುರ್ಗಿಯ ಬಸಪ್ಪ ಸ್ವಾಮಿಯವರ ಹೊಲದಲ್ಲಿ ಸಿಕ್ಕ ಶಾಸನ. ಸಧ್ಯ ಯಲಬುರ್ಗಿ ಪೋಲೀಸ ಸ್ಟೇಶನ್ನಿನಲ್ಲಿ ಇದೆ. ಮೊದಲಾದವು. 6) ಕರ್ನಾಟಕ ಭಾರತಿ ೧-೧ ಮತ್ತು ಮುಳಗುಂದ ನಾಡು (ಪುಟ ೧೦).

ಕಲ್ಲೂರ ಮತ್ತು ಸಂಕನೂರ ಗ್ರಾಮಗಳನ್ನು ಸೇರಿಸಬೇಕು' ಎಂದು ಶಾಸನ ಪರಿಚಯದಲ್ಲಿ ಹೇಳಿದ್ದಾರೆ.[7] ಇವಕ್ಕೆ ಕಲ್ಲೂರಿನ ಒಂದು ಶಾಸನ (ನಂ. ೩೬ ಕ್ರಿ.ಶ. ೧೧೮೫) 'ನರೇಗಲ್ಲ ೧೨ರ ಬಳಿಯ ಬಾಡ ಕಲ್ಲೂರು' ಎಂದಿರುವುದು ಆಧಾರ ವನ್ನೊದಗಿಸುತ್ತದೆಯಾದರೂ ಅಲ್ಲಿಯದೆ ಕ್ರಿ. ಶ. ೧೧೩೪ರ ಇನ್ನೊಂದು ಶಾಸನ (ನಂ. ೩೫) 'ಕುಕ್ಕನೂರ ಮೂವತ್ತರೊಳಗಣ ಕಲ್ಲೂರು' ಎಂದಿದೆ. ಹೀಗಾಗಿ ಕಲ್ಲೂರು ಯಾವ ಆಡಳಿತ ಕೇಂದ್ರಕ್ಕೆ ಒಳಪಟ್ಟಿತ್ತು ಎಂಬುದು ಸ್ಪಷ್ಟವಾಗುವದಿಲ್ಲ. ಅಲ್ಲದೆ ರೋಣ ತಾಲೂಕಿನ ನಿಡಗುಂದಿ, ರಾಜೂರ, ಕೊಡಗಾನೂರು. ಅಲಂಗಿರಿ (?), ಕಿಳ್ಳಮನಪಳ್ಳಿ (?) ಯಲಬುರ್ಗಿ ತಾಲೂಕಿನ ಮುಧೋಳ, ಕರಮುಡಿಗಳಲ್ಲಿ ಕೆಲವನ್ನಾದರೂ ಹೆಚ್ಚಿನ ಆಧಾರ ಸಿಕ್ಕಲ್ಲಿ ಈ ವಿಭಾಗಕ್ಕೆ ಸೇರಿಸುವ ಸಾಧ್ಯತೆಯಿದೆ. ಕ್ರಿ. ಶ. ೧೦೭೭ರ ಒಂದು ಶಾಸನ 'ನರೆಯಂಗಲ್ಲು ಪನ್ನಾಸು' ಎಂದಿದೆ. ಇದರಿಂದ ಈ ಗ್ರಾಮ ಈ ಶಾಸನ ರಚನೆಗೊಂಡ ಕಾಲದಲ್ಲಿ ೫೦ ಗ್ರಾಮಗಳ ಆಡಳಿತ ಹೊಂದಿತ್ತು ಎಂದು ಆ ಶಾಸನ ಸಂಪಾದಕರು ಹೇಳಿದ್ದಾರೆ. ಆದರೆ 'ಪನ್ನಾಸು' ಎಂಬುದು ಒಂದು ವಿಧದ 'ತೆರಿಗೆ'ಯಾಗಿರಬೇಕೆಂದು ಡಾ. ಕಲಬುರ್ಗಿ ಅವರ ಅಭಿಪ್ರಾಯ. ಕ್ರಿ.ಶ. ೧೧೦೫ರ ಹಿರೇಮುದ್ದನೂರ ಶಾಸನವು "ನರೇಗಲ್ಲ ಅಗ್ರಹಾರ"ವನ್ನು ಉಲ್ಲೇಖಿಸುತ್ತದೆ.[1] ಅಲ್ಲದೆ ಮೇಲೆ ಉಲ್ಲೇಖಿಸಿದ ಇಟಗಿ ಗ್ರಾಮದ ಶಾಸನವು 'ಕಿಸುಕ್ಕಾಡು ಸಪ್ತತಿ ಗ್ರಾಮಾಭ್ಯಾಂತರೇ' ಎಂದು ಕಿಸುಕಾಡನಾಡಿನೊಳಗಣ ಶ್ರೀ ನಿಡಗುನ್ದಿಗ್ರಾಮ ತಮ (?) ಗ್ರಾಮ ಸೀಮಾನ್ತರ ಶ್ರೀ ಕುಪ್ಪೇನಗ್ರಾಮ ......ಕೊಡಗನ ೯ರುನಾಮಗ್ರಾಮ......ವ್ರಿದ್ಧ ಪೊಳಲು (ಮುಧೋಳ) ಗ್ರಾಮ ನಾಮ...... ಕರಿಮಿಡಿನಾಮಗ್ರಾಮ......ಪಲತಿ ಪಾಷಾಣ (ನರೇಗಲ್ಲ) ನಾಮಗ್ರಾಮ......ಜಕ್ಕಿಲಿ......ಸಂಕನೂರ ನಾಮಗ್ರಾಮ ......ಗಳನ್ನು"ಹೆಸರಿಸಿದೆ.[2] ಇನ್ನು ಕೆಲವಡೆ ನರೆಯಂಗಲ್ಲು (ಲಕ್ಷ್ಮೇಶ್ವರ ೧೧೩೫[3] ನರೇಗಲ್ಲ ತ್ರಿಪುರಾಂತಕೇಶ್ವರ ದೇವಾಲಯದ ಮಗ್ಗುಲಿನ ವೀರಗಲ್ಲು-೧೧೯೭[4]), ನರೆಯಂಗಲ್ಲು ಪುರವರ (ನರೇಗಲ್ಲ ಹಿರೇಬಾವಿಶಾಸನ ೧೧೦೦)[5] ಎಂಬ ಉಲ್ಲೇಖವೂ ಬರುತ್ತವೆ.

ಈ ನಾಡು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೯೪೨ರ ರೋಣದ ಶಾಸನವೊಂದು ಕಾಲ ಶಕ ೮೬೪ ಶೋಭಕೃತ ವೈಶಾಖ ಶುದ್ಧ ಆದಿತ್ಯವಾರ (ಕ್ರಿ.ಶ.೯೪೨) ಬೆಳ್ವೊಲ

---

೭) ಶಾಸನ ಪರಿಚಯ-ಶಾಸನಗಳ ಸಂಕ್ಷಿಪ್ತ ಪರಿಚಯ ಪು. ೯: ೮, ೨, I.A.X. ೧೬೪.

1) B.G.Vol.I- ಸಂ. ಪು.448 2) ಕ. ಸಾ. ಪ. ಪ. 22-3 3) ಶಾ. ಸಾ. ಸಂ. ನಂ. ಮೇಪುಂಡಿಮಲ್ಲಾರಿ. ಪು. 112. 4) S.I.XV.೨೧೨ ಮತ್ತು E.I.I.P.162 5) S.I.I.XI-ii-149.

೩೦೦. ಪುಲಿಗೆರೆ ೩೦೦, ಗಂಗವಾಡಿ ೯೬೦೦೦ ಪ್ರಾಂತಗಳನ್ನು ಬೂತುಗನು ಆಳುತ್ತಿದ್ದಾಗ ಪಂಪಯ್ಯನೆಂಬ ವೀರನು ಕಾದಿಮಡಿದುದನ್ನು ಹೇಳಿದೆ. ಈ ಬೂತಗನು ರಾಷ್ಟ್ರಕೂಟ ೩ನೆಯ ಕೃಷ್ಣನ ಮಾಂಡಲಿಕನಾಗಿದ್ದನೆಂದು ತಿಳಿದು ಬರುತ್ತದೆ.[6] ನರೆಯಂಗಲ್ಲು ಪನ್ನೆರಡು ಬೆಳ್ವೊಲ ೩೦೦ರ ಭಾಗವಾಗಿದ್ದರಿಂದ ಈ ಭಾಗವೂ ಬೂತುಗನ ಆಡಳಿತಕ್ಕೆ ಒಳಪಟ್ಟಿರಬೇಕು. ಕ್ರಿ. ಶ. ೯೫೧ರ ನರೇಗಲ್ಲಿನ ಒಂದು ಶಾಸನವು ಶಕ ೮೭೩ ಸಾಧರಣ ಪುಷ್ಯ ಶುದ್ಧ ೧೦ ಆದಿತ್ಯವಾರದಂದು ಮೇಲೆ ಹೇಳಿದ ಬೂತಾರ್ಯನ ಮನೋನಯನವಲ್ಲಭೆಯಾದ ಪದ್ಮಬ್ಬರಸಿಯು ತಾನು ಕಟ್ಟಿಸಿದ ನರೇಗಲ್ಲಿನಲ್ಲಿಯ ಜಿನಾಲಯಕ್ಕೆ ಭೂದಾನವನ್ನು ಮಾಡಿದಳೆಂದೂ ಅದೇ ಬಸದಿಗೆ ಮಾರಸಿಂಘಯ್ಯನು, ಮಹೇಂದ್ರಪಂಡಿತನ ಶಿಷ್ಯ-ವೀರನಂದಿಪಂಡಿತನ ವರಶಿಷ್ಯ ಗುಣಚಂದ್ರಪಂಡಿತರ ಕಾಲಂಕರ್ಚಿ ದಾನಶಾಲೆಗೆ ಕೆರೆಯೊಂದನ್ನು ಬಿಟ್ಟು ದಾನವನ್ನಿತ್ತನೆಂದೂ ಹೇಳಿದೆ.[7] ಆ ದಾನವನ್ನು ಪದಿನೆಣ್ಬರುಂ ಪದಿನಜುವರುಂ ಕಾವರ್ ಎಂದೂ ಹೇಳಲಾಗಿದೆ.

ಅದೇ ರೀತಿ ಚಾಲುಕ್ಯ ಅರಸು ೨ನೆಯ ವಿಕ್ರಮಾದಿತ್ಯನ ಹೆಂಡತಿ ಲೋಕಮಹಾದೇವಿ, ಹಿಂದೆ ಅವಳ ಮಾವ ವಿಜಯಾದಿತ್ಯ ಗಾಂಧರ್ವರಿಗೆ ಹಾಕಿಕೊಟ್ಟ ಮರ್ಯಾದೆಯನ್ನು ದೃಢಪಡಿಸಿದಳಲ್ಲದೆ ನರೆಯಂಗಲ್ಲು ಪನ್ನಾಸುವನ್ನು ಮುಕುಟೇಶ್ವರ ದೇವರಿಗೆ ಸರ್ವಬಾಧಾಪರಿಹಾರವಾಗಿ ಬಿಟ್ಟು ಕೊಟ್ಟಳೆಂದು ತಿಳಿದು ಬರುತ್ತದೆ.[1] ಕ್ರಿ. ಶ. ೧೧೦೦ನೆಯ ೬ನೆಯ ವಿಕ್ರಮಾದಿತ್ಯನ ಕಾಲದ ನರೇಗಲ್ಲಿನ ಹಿರೇಬಾವಿ ಶಾಸನವು ಮಾರಸಿಂಹಗಾವುಂಡನಿಂದ ಬಾವಿಮಠದ ಕಲಿದೇವರ ಅಂಗಭೋಗಕ್ಕೆ ಭೂದಾನವಿತ್ತುದಾಗಿ ಹೇಳಿದೆ. ಮುಂದುವರಿದು ೬ನೆಯ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿ ಈ ನಾಡನ್ನು ಶ್ರೀಮನ್ಮಹಾಪ್ರಧಾನಂ ಬಾಣಸವೆರ್ಗ್ಗಡೆ ದಣ್ಡನಾಯಕನನ್ತಪಾಳಯ್ಯಗಳು ಬೆಳ್ವೊಲಮೂನ್ನೂಱು ಪುರಿಗೆಱೆಮೂನೂಱುಮ-ನಾಳುತ್ತಿರಲು ಧರೆಯೊ...ರಿಯ ವದನಕ್ಕಿರೆ ನೊ...ಲೆಸೆವ ಬೆಳ್ವೊಲ ತನ್ನಿಟಿಳಾನ್ತರವ ತಿಳಕದ...ವ ನರೆಯಂಗಲ್ ಪುರವರಂ ಕರಂ ಸೊಗಯಿಸುಗುಂ" ಎಂದೂ ಬಣ್ಣಿಸಿದೆ. ದಾನವಿತ್ತ ಮಾರಸಿಂಗಗೌಡನನ್ನು "ಕೀರ್ತಿನಿಧಾನನಖಿಳ ಗುಣನಿಧಿ ವಿನಯಾಂಬುಧಿ ಸುಜನವತ್ಸಳಂ ಕುಳತಿಳಕಂ" ಎಂದೂ ಹೊಗಳಿದೆ. "ಮುತ್ತರ್ಗಕುಳಾಬ್ಜಮಿತ್ರಂ ಮುತ್ತರ್ಗ ವಂಶಾಂಬುರಾಶಿವರ್ಧಿತ ಚಂದ್ರ ಮುತ್ತರ್ಗ ಧರಾನ್ವಯಾಂಬಕ ಮಾರ್ತ್ತಣ್ಡಂ" ಎಂದೂ ಬಣ್ಣಿಸಿದೆ. ಅವನಿತ್ತ ದಾನವನ್ನು ಅಲ್ಲಿಯ "ಪದಿನಜುವರುಂ ಪದಿನೆಣ್ಬರುಂ ಪಂಚಮಟಸ್ಥಾನಮುಂ ಮೂಱು ಮೊದಲುಮಿರ್ದಾ

6) ಕ. ಅ. ಮ. ಪು. ೧೯೪. 7) S.I.I.XI-ii-38

1) I-A-Vol. X. ಪು. 164.

ಚಂದ್ರಾರ್ಕಸ್ಥಾಯಿವರವಾ ಧರ್ಮಮನಿಂಬಾಗಿರೆ ಪ್ರತಿಪಾಲಿಸುಘರ್" ಎಂದು ಹೇಳಲಾಗಿದೆ. ಶಾಸನದ ಕೊನೆಯಲ್ಲಿ "ಈ ಸ್ಥಾನಮಪ್ಪಡೆ ಪೋರಖಣ್ಡಿಯ ಸ್ಥಾನಂ ಮೊದಲಾಗಿ ಮಹಾದೇವರ್ಗಂ ಮೊಲ್ಲಿಯರವರು ಬಿಟ್ಟ ತೋಂಟ"ವನ್ನು ಹೇಳಿದೆ.[2]

ಕ್ರಿ. ಶ. ೧೧೦೫-೬ ರ ಹಿರೇ ಮುದ್ದನೂರ ಶಾಸನದಿಂದ ೬ನೆಯ ವಿಕ್ರಮಾದಿತ್ಯನ ಹಲವಾರು ಹೆಂಡಂದಿರಲ್ಲಿ ಒಬ್ಬಳಾದ ಸಾವಳದೇವಿ ಕ್ರಿ. ಶ. ೧೦೭೭-೮ ರಲ್ಲಿ ನರೇಗಲ್ಲ ಅಗ್ರಹಾರದ ಮೇಲ್ವಿಚಾರಣೆ ಮಾಡುತ್ತಿದ್ದಳೆಂದು ತಿಳಿದುಬರುತ್ತದೆ. ಬೇರೆ ಬೇರೆ ಅರಸಿಯರ ಉಪಜೀವನಕ್ಕೆ ಬೇರೆ ಬೇರೆ ನಾಡಿನ ಅಧಿಕಾರವನ್ನು ಅವರಿಗೆ ವಹಿಸಿಕೊಡುತ್ತಿದ್ದಂತೆ, ಈ ಅಗ್ರಹಾರವನ್ನು ಅವಳ ಉಪಜೀವನಕ್ಕಾಗಿ ಕೊಡಲ್ಪಟ್ಟಿದ್ದಿತು. ಈ ಅರಸಿಯರು ಬ್ರಾಹ್ಮಣರಾಗಿದ್ದರೆ- ಒಳ್ಳೆಯ ಸಾತ್ವಿಕ ಬ್ರಾಹ್ಮಣರ, ಜೈನರಾಗಿದ್ದರೆ-ಜೈನಮುನಿಗಳ ಪಂಡಿತರ ಸಹವಾಸದಲ್ಲಿ ಪರಿಶುದ್ಧ ನಡತೆಯುಳ್ಳವರಾಗಿ ಅನೇಕ ವಿದ್ಯಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ, ತಾವು ಸ್ವತಃ ವಿದ್ಯೆ, ಸೂಕ್ಷ್ಮ ಕಲೆಗಳಲ್ಲಿ ನಿಪುಣರಾಗಿರುತ್ತಿದ್ದರು. ಇದರಂತೆ ಸಾವಳದೇವಿಯೂ ನರೆಯಂಗಲ್ಲಿನಲ್ಲಿ ಇದ್ದಳು."[1]

ಬೆಳ್ವೊಲನಾಡು ಅನೇಕ ಧರ್ಮಗಳೆಂಬ ಧೇನುಗಳ ವಿಹಾರಭೂಮಿ, ಅದರಲ್ಲಿ ಧರಾಂಗನಾತಿಳಕಮೆನಿಸಿ ಶೋಭಿಸುವದು ನರೆಯಂಗಲ್ಲು ಎಂದು ಬಣ್ಣಿಸುವ ಕ್ರಿ. ಶ. ೧೧೧೨ರ ಇಟಗಿ ಶಾಸನ, ಚಾಳುಕ್ಯ ವಿಕ್ರಮಾದಿತ್ಯನ ದಂಡಾಧೀಶ ಮಹಾದೇವನನ್ನು ರಾಜ 'ವಿದ್ಯಾಗುರು' ಎಂದು ಹೊಗಳಿದೆ. ಆ ಮಹಾದೇವ ದಂಡಾಧೀಶನು 'ದೇವಾಲಯ ಚಕ್ರವರ್ತಿ' ಯೆನಿಸಿದ ದೇವಾಲಯವನ್ನು ಇಟಗಿಯಲ್ಲಿ ಕಟ್ಟಿಸಿದ, 'ಪಂಪಾಸ್ಥಳ,ಮೊದೆಗನೂರ್, ಶ್ರೀರಾಯನಾರಾಯಣಪುರಿ, ನರೆಯಂಗಲ್ಗಗಳೆಂಬಲ್ಲಿ ಪುಣ್ಯಂ ನೆಗಳಲ್ ಧರ್ಮಂಗಳಂ ಮಾಡಿದ'ನೆಂದು ತಿಳಿದುಬರುತ್ತದೆ. ಇದರಿಂದ ಈ ನಾಡು ಮಹಾದೇವದಂಡಾಧೀಶನ ಆಡಳಿತದಲ್ಲಿದ್ದಿತೆಂದು ಹೇಳಬಹುದಾಗಿದೆ. ಕ್ರಿ. ಶ. ೧೧೨೧ ರ ಕೋಡಿಕೊಪ್ಪದ ಒಂದು ಶಾಸನ ಕುಶವಂಶದ ಮಹಾಮಂಡಲೇಶ್ವರ ಆಚರಸನು-ಹಿರಿಯ ನರೆಯಂಗಲ್ಲಿನ ಶೋಭನೇಶ್ವರ ದೇವರಿಗೆ ಸಂಬಂಧಿಸಿದ ಕಿರುನರೆಯಂಗಲ್ಲಿನ ಮಲ್ಲೇಶ್ವರದೇವರಿಗೆ ದಾನವಿತ್ತುದಾಗಿ ಹೇಳಿದೆ. ಇವನು ಕಿಸುಕಾಡ ೭೦ ನ್ನೂ ಮತ್ತು ಬೆಳ್ವೊಲ ೩೦೦ ರಲ್ಲಿಯ ಅಬ್ಬಿಗೇರಿ ಮೊದಲಾದವುಗಳನ್ನೊಳಗೊಂಡ ನರೆಯಂಗಲ್ಲು ೧೨ ನ್ನೂ ಆಳುತ್ತಿದ್ದನು ಎಂದಿದೆ.[2]

ಚಾಲುಕ್ಯರ ಚರಿತ್ರೆಯೊಂದಿಗೆ ಅವರ ಮಾಂಡಲಿಕರಾಗಿ ಮೆರೆದ ಯಲಬುರ್ಗಿಯ

---

2) S.I.I. Vol. XI-ii-149.

1) ಕರ್ನಾಟಕದಲ್ಲಿ ಸಂಸ್ಕೃತಿಯ ಸಂಶೋಧನೆ-ಕಪಟ್ರಾಳ್-ಕೃಷ್ಣರಾವ್ ಪು. 22

2) S.I.I. XI-ii-170.

ಸಿಂದರ ಚರಿತ್ರೆಯೂ ಈ ನಾಡಿನಲ್ಲಿ ಹಾಸುಹೊಕ್ಕಾಗಿದೆ. ನರೇಗಲ್ಲಿನಲ್ಲಿ ದೊರೆತ ಒಟ್ಟು ೧೦ ಶಾಸನಗಳಲ್ಲಿ ನಾಲ್ಕು ಶಾಸನಗಳು ಸಿಂದ ಅರಸರಿಗೆ ಸಂಬಂಧಿಸಿದವುಗಳಾಗಿವೆ. ಅವುಗಳಲ್ಲಿ ಕ್ರಿ. ಶ. ೧೧೦೬ ರ ನರೇಗಲ್ಲ ಚಾವಡಿಯ ಮುಂದಿರುವ ಶಾಸನವು [3] ಮಹಾಮಂಡಳೇಶ್ವರ ಬೊಮ್ಮರಸನು ನರೆಯುಂಗಲ್ಲಿನಲ್ಲಿ ಕಟ್ಟಿಸಿದ ಬೊಮ್ಮೇಶ್ವರ ದೇವಾಲಯಕ್ಕೆ ದಾನವಿತ್ತುದನ್ನು ವರ್ಣಿಸಿದೆ. ಸಿಂದವಂಶದ ಸೊಗಸಾದ ವಿವರಣೆಯೊಂದಿಗೆ ಆ ಕಾಲದ ನರೆಯುಂಗಲ್ಲನ್ನು ಶಾಸನಕಾರ ಈ ರೀತಿ ಬಣ್ಣಿಸಿದ್ದಾನೆ–"ಜಳನಿಧಿ ಪರಿವೃತವಸುಧಾತಳದೊಳು ಭರತೋರ್ವಿಗೆಸೆವ ಕುನ್ತಳದೇಶಂ ತಿಳಕಮೆನಿಸಿ– ರ್ದುದದಱೊಳ್ ಫಳಭರಿತ ನರೆಯುಂಗಲ್ಲು ಕರಂ ರಂಜಿಸುಗುಂ..ಅನ್ತುಸೊಗಯಿಸುವ ನರೆಯುಂಗಲ್ಲೆರಡುಂ ಬಳದೊಳಗಗಣ್ಯಪುಣ್ಯಮುದಿತೋದಿತಮಪ್ಪ ಪುಣ್ಯಪುರುಷರಿಂದೆ ಧರ್ಮಪ್ರತಿಪಾಳನಾಪರರಪ್ಪ ಪ್ರಭುಗಾವುಂಡುಗಳಿಂದಮೆಸೆದುದು." ಅದೇ ರೀತಿ ತ್ರಿಪುರಾಂತಕೇಶ್ವರ ದೇವಾಲಯದಲ್ಲಿರುವ ಶಾಸನವೂ[1] ಸಿಂದವಂಶಾವಳಿಯನ್ನು ವಿವರವಾಗಿ ಹೇಳುವುದರೊಂದಿಗೆ ಪೆರ್ಮಾಡಿದೇವನ ಕಾಲದಲ್ಲಿ ತಿಪ್ಪಣನಾಯಕನು ತಿಪ್ಪಣೇಶ್ವರ ದೇವರ್ಗೆ ದಾನವಿತ್ತುದನ್ನು ಹೇಳಿದೆ. ಆ ದಾನವನ್ನು 'ಪದಿನೆಣ್ಬರುಂ ಪಂಚ ಮಠಸ್ಥಾನ...ದವರು ಕಾಯ್ವರು' ಎಂದಿದೆ.

ನರೆಯುಂಗಲ್ಲಿನ ಕಲ್ಮೇಶ್ವರದೇವಾಲಯದ ಶಾಸನವು [2] (ಕ್ರಿ. ಶ. ೧೧೪೪) ೨ ನೆಯ ಜಗದೇಕಮಲ್ಲನ ಕಾಲದಲ್ಲಿ ಸಿಂದ ಅರಸು ಈ ಭಾಗವನ್ನು ಆಳುತ್ತಿದ್ದುದಾಗಿ ಹೇಳಿ, ಆ ಕಾಲದಲ್ಲಿ ನರೇಗಲ್ಲು "ಅದು ನಾನಾ ದಿವ್ಯ ಗಂಧಪ್ರಸರ ಕುಸುಮ ವಾಟಂಗಳಿಂ...ಜಗದ್ಭವ್ಯವತ್ಸಂತಸೇವ್ಯಂ ಅಂತೊಪ್ಪುವ ನರೆಯುಂಗಲ್ಲೆರಡುಂ ಬಳದೊಳಗಣ್ಯ ಪುಣ್ಯಮುದಿತೋದಿತಮಪ್ಪ ಪುಣ್ಯಪುರುಷರಿಂದೆ ಧರ್ಮ ಪ್ರತಿಪಾಳನಾ ಪರರಪ್ಪ ಪ್ರಭುಗಾವುಂಡುಗಳಿಂದೆ" ಎಸೆದುದು ಎಂದು ಬಣ್ಣಿಸಿದೆ. ಮುಂದುವರಿದು ಮುಂಡೆಯುರ ಶ್ರೀವನ್ತಗಾವುಂಡನು ಶ್ರೀ ಮೂಲಸ್ಥಾನದೇವರ ದೇಗುಲವ ಮಾಡಿಸಿ ನೀಲಕಂಠ ಪಣ್ಡಿತ ದೇವರ್ಗೆ ಕೊಟ್ಟನೆಂದು ಹೇಳಿದೆ. ಇದೇ ಕಾಲದ (೧೧೪೪) ಕೋಡಿಕೊಪ್ಪದ ಒಂದು ಶಾಸನವು[3] ಸಿಂದ ಅರಸರ ವಂಶಾವಳಿಯೊಂದಿಗೆ ಮೊಲ್ಲೆ ಬೊಮ್ಮಯ್ಯನು ಕಿಱುನರೆಯುಂಗಲ್ಲಿನ ಶ್ರೀ ಮೂಲಸ್ಥಾನ ಬ್ರಹ್ಮೇಶ್ವರ ದೇವರಂಗ ಭೋಗಕ್ಕೆ ದಾನವಿತ್ತನೆಂದು ಹೇಳಿದೆ. ಈ ಮೊಲ್ಲೆ ಬೊಮ್ಮಯ್ಯನೇ ಕ್ರಿ.ಶ.೧೧೬೮ ರಲ್ಲಿ ಬಿಜ್ಜಳನನ್ನು ಕೊಂದ ವ್ಯಕ್ತಿ ಎಂಬುದು ಇತ್ತೀಚಿಗೆ ಸ್ಪಷ್ಟವಾಗಿದೆ. ಸಿಂದ ವಂಶಾವಳಿಯನ್ನು ಉಲ್ಲೇಖಿಸುವ ನರೇಗಲ್ಲಿನ ಇನ್ನೊಂದು ಶಾಸನ [4] ಜೈನವತ್ತಿಯನ್ನು ಹೇಳುತ್ತಿದೆ.

---

3) S.I.I. XI-ii-155.

1) S,I.I. XV. 42. 2) S.I I. XI. ii. 119. 3) S.I.I. XV. 28
4) S.I.I. XV. 41

ಕ್ರಿ. ಶ. ೧೧೮೬ ರ ಒಂದು ಶಾಸನದಿಂದ ಪಶ್ಚಿಮ ಚಾಲುಕ್ಯ ವಂಶದ ೪ನೆಯ ಸೋಮೇಶ್ವರನ ಕಾಲದಲ್ಲಿ ಬೆಳ್ವೊಲವನ್ನು ಮಹಾಪ್ರಧಾನ ಕೇಶವಭಟ್ಟನೆಂಬುವನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಕೋಡಿಕೊಪ್ಪದ ಮೂಲಬ್ರಹ್ಮೇಶ್ವರ ದೇವಾಲಯದ ಗೋಡೆಯ ಹೊರಭಾಗದ ಶಾಸನವು ೪ನೆಯ ಸೋಮೇಶ್ವರನೊಂದಿಗೆ ಸಿಂದ ಅರಸರನ್ನೂ ಉಲ್ಲೇಖಿಸುತ್ತದೆ.[5]

ಹಾನಗಲ್ಲಿನಲ್ಲಿ ಮಹಾಮಂಡಲೇಶ್ವರನಾಗಿದ್ದ ಕದಂಬ ತೈಲಪನ ಮೊಮ್ಮಗ ಕದಂಬ ೩ ನೆಯ ತೈಲಪನನ್ನು ಲಕ್ಷ್ಮೇಶ್ವರದ ಒಂದು ಶಾಸನವು (ಕ್ರಿ. ಶ. ೧೧೫೨) 'ನರೆಯಂಗಲ್' ನೆಲೆವೀಡೆನೆ ಪರಿಗ್ರಹ ಪ್ರಜೆಗಳಾಪ್ತವರ್ಗಂ ಪಳೆಯರ್ಪಿನರಿಯ ಶ್ರೀ'ಕಿರಣವರ್ಣರಮಂತ್ರಿಗಳೆಂದು ಪೊಯ್ಸಳುದ್ಯತನಾದಂ' ಎಂದು ಬಣ್ಣಿಸಿದೆ.[6]

ಕ್ರಿ. ಶ. ೧೧೮೦ ನರೇಗಲ್ಲಿನ ಕಲಚೂರ್ಯ ವಂಶದ ಸಂಕಮನ ಕಾಲದ ಒಂದು ಶಾಸನ ಶ್ರೀ ಕೇದಾರ ದೇವರ ನೈವೇದ್ಯಕ್ಕೆ ದಾನಕೊಟ್ಟುದನ್ನು ಹೇಳುವುದರೊಂದಿಗೆ "ಮನ್ಮಹಾಪ್ರಧಾನ ಹೇರಿಲಾಳ ಕನ್ನಡ ಸಂಧಿ ವಿಗ್ರಹಿ [ಬಾ] ಪತ್ತರ ನಿಯೋಗಾಧಿಪತಿ... ಶ್ರೀಮನ್ಮಹಾವಡ್ಡಬ್ಯವ ಹಾರಿ...ಕೇಶವಯ್ಯ"ನನ್ನು ಹೊಗಳಿದೆ.[1] ಇದೇ ಅರಸನಿಗೆ ಸಂಬಂಧಿಸಿದ ಕ್ರಿ. ಶ. ೧೧೮೩ರ ಇನ್ನೊಂದು ಶಾಸನ ನರೇಗಲ್ಲಿನಲ್ಲಿ ರೇವಣಸಿದ್ಧೇಶ್ವರ ದೇವರ ದೇವಾಲಯ ಮಾಡಿಸಿ ದಾನವಿತ್ತುದಾಗಿ ಹೇಳಿದೆ.[2]

೨ನೆಯ ಬಲ್ಲಾಳನ ಕಾಲದ (೧೧೯೭) ನರೇಗಲ್ಲಿನ ತ್ರಿಪುರಾಂತಕೇಶ್ವರ ದೇವರಗುಡಿಯ ಬಳಿಯ ವೀರಗಲ್ಲಿನಲ್ಲಿ, ನರೇಗಲ್ಲಿನ 'ಗವುಡ......ಭುಜಬಳ...... ಧಿಪಸ್ಸರ್ವತ್ಯಾಶ್ವಿತ ತತ್ವಾ...ಗಾಯಕರುಂ ತಾನೆನಲು ದೊರೆವೆತ್ತ ಕಲಿ ಬಮ್ಮಯ್ಯ ಶುಭಟಚೂಡಾರತ್ನಂ' ಎಂದು ಹೊಗಳಲಾಗಿದೆ.[3] ಇವನೂ ಈ ಹಿಂದೆ ಉಲ್ಲೇಖಿಸಿದ ಮೊಲ್ಲೆ ಬೊಮ್ಮಯ್ಯನೂ ಒಬ್ಬನೊ. ಭಿನ್ನರೊ ತಿಳಿಯದು. ಮೊಲ್ಲೆ ಬೊಮ್ಮಯ್ಯ ಒಳ್ಳೆಯ ವೀಣಾವಾದಕನಾಗಿದ್ದನೆಂದು ಅವನನ್ನು ಕುರಿತ ಕಾವ್ಯವೊಂದು ಹೇಳುತ್ತಿದೆ.[4]

ಆ ತರುವಾಯ ಈ ಭಾಗದಲ್ಲಿ ಆಳಿದ ಅರಸು ಮನೆತನಗಳ ಉಲ್ಲೇಖವೂ ದೊರೆಯುವದಿಲ್ಲ.

ಮೇಲಿನ ಶಾಸನಗಳು ನರೇಗಲ್ಲಿನ ಆಡಳಿತಕ್ಕೆ ಒಳಪಟ್ಟ ಇಟಗಿಯ ದೇವಾಲಯ ಚಕ್ರವರ್ತಿ ಮಹಾದೇವ ದೇವಾಲಯವನ್ನು, ಚಿಕ್ಕನರೆಯಂಗಲ್ಲಿನ ಶ್ರೀ

---

5) S. i. i. XV 75, 6) ಶಾ. ಸಾ. ಸಂ, ಪು. 112

1) S i. i XV. 138, 2) S i i. XV 139, 3) S.i i. XV. 212

4) ಧೂಪದ ರಾಜೇಶ ಕೃತ (ಸು ೧೬೫೦, ಮೊಲ್ಲೆ ಬೊಮ್ಮಯ್ಯಗಳ ಕಾವ್ಯ

ಮೂಲಸ್ಥಾನ ಬ್ರಹ್ಮೇಶ್ವರ, ಮಲ್ಲೇಶ್ವರ ದೇವರ ದೇವಾಲಯಗಳನ್ನು ಉಲ್ಲೇಖಿಸು ವವರೊಂದಿಗೆ ನರೇಗಲ್ಲಿನ-ಸೋಬನೇಶ್ವರ ದೇವಾಲಯ, ಬ್ರಹ್ಮೇಶ್ವರ ದೇವಾಲಯ, ಕೇದಾರದೇವಾಲಯ, ರೇವಣೇಶ್ವರ ದೇವಾಲಯ, ಮೂಲಸ್ಥಾನದ ದೇವಾಲಯ, ಬಾವಿಯಮಠದ ಕಲಿದೇವರು, ತಿಪ್ಪಣೇಶ್ವರ ದೇವಾಲಯಗಳನ್ನೂ ಉಲ್ಲೇಖಿ ಸುತ್ತಿವೆ. ಅವುಗಳಲ್ಲಿ ಸಧ್ಯ ತ್ರಿಪುರಾಂತಕೇಶ್ವರ ದೇವಾಲಯ ಎಂದು ಕರೆಯುತ್ತಿರುವ ತಿಪ್ಪಣೇಶ್ವರ ದೇವಾಲಯ, ಕಲ್ಮೇಶ್ವರದೇವಾಲಯ ಎಂದು ಕರೆಯುತ್ತಿರುವ ಮೂಲ ಸ್ಥಾನ ದೇವಾಲಯಗಳು ತಮ್ಮ ಪ್ರಾಚೀನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಗೋಪುರವನ್ನು ಬಿಟ್ಟರೆ ಇವುಗಳಲ್ಲಿ ಶಿಲ್ಪಕಲೆಯ ವೈಶಿಷ್ಟ್ಯ ಅಷ್ಟಾಗಿ ಕಾಣದು. ಕಲ್ಮೇಶ್ವರ ದೇವಾಲಯದ ಹೊರಾಂಗಣದ ಕಟ್ಟೆಯಲ್ಲಿ ಉಬ್ಬು ಶಿಲ್ಪದ ದ್ವಿಬಾಹು ಮಹಿಷ ಮೂರ್ತಿಯೊಂದಿದ್ದು ಇದು ವಿಶೇಷವಾದುದೆಂದು ಡಾ॥ ಗುರುರಾಜ ಭಟ್ ಅಭಿಪ್ರಾಯಪಟ್ಟಿದ್ದಾರೆ. ಸಧ್ಯ ನಾರಾಯಣ ದೇವರ ಗುಡಿಯೆಂದು ಪೂಜಿಸಲ್ಪಡುವ ಗುಡಿಮಾತ್ರ ಹಿಂದೆ ಜಿನಾಲಯವಾಗಿದ್ದು ರಾಷ್ಟ್ರಕೂಟರ ಕಾಲದ ಶಿಲ್ಪ-ವೈಭವವನ್ನು ಪ್ರತಿನಿಧಿಸುತ್ತಿದೆ. ಕ್ರಿ. ಶ. ೯೫೧ ರಲ್ಲಿ ಪದ್ಮಬ್ಬರಸಿ ಕಟ್ಟಿಸಿದ ಜಿನಾಲಯ ಇದೇ ಆಗಿರಬೇಕು.

ವಿಶ್ವೇಶ್ವರ ಪಂಡಿತ, ತ್ರಿಲೋಚನ ಪಂಡಿತ, ವಾಮಶಕ್ತಿ ಪಂಡಿತ ದೇವರು ಮೊದಲಾದವರು ಈ ಭಾಗದಲ್ಲಿ ಪ್ರಸಿದ್ಧಿಪಡೆದ ಗರುಗಳಾಗಿದ್ದರೆಂಬುದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತಿದೆ.

ಹೀಗೆ ನರೆಯಂಗಲ್ಲು ಪನ್ನೆರಡು ಪೂರ್ವಕಾಲದಲ್ಲಿ ೧೨ ಗ್ರಾಮಗಳ ಆಡಳಿತದ ಕ್ಷೇಂದ್ರವಾಗಿದ್ದು ಅಂದಿನ ರಾಜಕೀಯ, ಸಾಮಾಜಿಕ ಜೀವನದ ವಿವಿಧ ಚಟುವಟಿಕೆ ಗಳಿಂದ ಕೂಡಿದ್ದಿತು ಎಂಬುದು ಸ್ಪಷ್ಟವಾಗುತ್ತದೆ.

*ತ್ರಿಭುವನತಾತನ ಪಗಲ್ಪೋಳ ರಗಳೆ

● (ಸಂ.) ಎಸ್. ಶಿವಣ್ಣ

ತ್ರಿಭುವನತಾತ ಕೆರೆಯ ಪದ್ಮರಸನ ಶಿಷ್ಯ. ಕೆರೆಯ ಪದ್ಮರಸನ ಅಂಕಿತ 'ವಿಶ್ವೇಶ' ತ್ರಿಭುವನತಾತನ ಅಂಕಿತ 'ಗುರು ವಿಶ್ವೇಶ.' ಈತನ ಕಾಲ ಸು. ೧೨೦೦.

ಈಗ ತಿಳಿದುಬಂದಿರುವಂತೆ ತ್ರಿಭುವನತಾತನ ಈ ಮುಂದಿನ ೭ ರಗಳೆಗಳು ಉಪಲಬ್ಧವಿವೆ –

೧) ಅಮ್ಮವ್ವೆಯ ರಗಳೆ[1]

೨) ಗುರು ರಗಳೆ[2]

೩) ಚೋಳಿಯಕ್ಕನ ರಗಳೆ[3]

೪) ಜೇಡರ ದಾಸಿಮಯ್ಯನ ರಗಳೆ[4]

೫) ಪಗಲ್ಪೋಳನ ರಗಳೆ

೬) ಮಹಾದೇವ ರಗಳೆ[5]

೭) ಸಿರಿಯಾಳ ಸೆಟ್ಟಿಯ ರಗಳೆ

ಕ್ರಿ. ಶ. ೧೯೩೬ ರಷ್ಟು ಹಿಂದೆಯೇ ಪ್ರೊ. ಡಿ.ಎಲ್; ನರಸಿಂಹಾಚಾರ್ಯರು ಅಮ್ಮವ್ವೆ, ಪಗಲ್ಪೋಳ ಹಾಗೂ ಚೋಳಿಯಕ್ಕನ ರಗಳೆಗಳ ಬಗೆಗೆ ಪ್ರಸ್ತಾಪಿಸಿದ್ದಾರೆ.[6]

---

* ನೋಡಿ : ತಾರಾನಾಥ ಎನ್. ಎಸ್. 1) 'ತ್ರಿಭುವನತಾತ', ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, (ನಾಲ್ಕನೆಯ ಸಂಪುಟ) ** (ಸಂ) ಟಿ. ವಿ. ವೆಂಕಟಾಚಲ ಶಾಸ್ತ್ರೀ. ಮೈಸೂರ, 1977ಪು. 1388-1393.

1. ಪ್ರ.ಕ. 17.4, 1936, 5-7. 2. (ಸಂ) ಸದಾಶಿವ ಶಿವಾಚಾರ್ಯ ಗಿರಿಯಾಪುರ, 1940 3. ಈ ರಗಳೆ 'ಶ್ರೀ ವಿರೂಪಾಕ್ಷ' ಅಂಕಿತದಲ್ಲಿ ಪ್ರಕಟವಾಗಿದೆ. (ಸಂ) ಮಲ್ಲಾಬಾದಿ ವೀರಭದ್ರಪ್ಪ, "ಹಂಪೆಯ ಹರಿಹರ ದೇವಕೃತ ಪುರಾತನ ಮಾತೆಯರ ಕಥೆಗಳು" ದಾವಣಗೆರೆ, 1952, 73-80. 4. (ಸಂ) ಜ.ಚ.ನಿ., 'ದೇವರ ದಾಸಿಮಯ್ಯ ಪ್ರಶಸ್ತಿ ಬೆಂಗಳೂರು, 1953, 156-64 5. (ಸಂ) ಉಮಾಪತಿ ಶಾಸ್ತ್ರೀ, ಗೌ. ಮ., ಹೇಮಕೂಟ. 4-6, 1978, 23-7. 6. ಕೆಲವು ರಗಳೆಯ ಕವಿಗಳು, ಪ್ರಬುದ್ಧ ಕರ್ಣಾಟಕ. 17.4. 1936, 5-9.

ಇವುಗಳಲ್ಲಿ ಪ್ರಸ್ತುತ ಪಗಲ್ಚೋಳ ರಗಳೆಯನ್ನು ಪರಿಷ್ಕರಿಸಿ ಪ್ರಕಟಣೆಗೆ ಸಿದ್ಧಪಡಿಸಲಾಗಿದೆ. ಇದಕ್ಕಾಗಿ 'ಕನ್ನಡ ಅಧ್ಯಯನ ಕೇಂದ್ರ'ದ ಸಂಗ್ರಹದಲ್ಲಿನ ಕ್ರಮಾಂಕ ಬಿ. ೧೧೭೭ (ಹಾಳೆ ೪೫-೫೨) ರ ಕಾಗದ ಪ್ರತಿಯನ್ನು ಆಧರಿಸಲಾಗಿದೆ. ಈ ಪ್ರತಿಯ ಬಳಕೆಗೆ ಅನುಮತಿಸಿದ ಅಧಿಕಾರಿಗಳಿಗೆ ವಂದನೆಗಳು.

ಪಗಲ್ಚೋಳನ ರಗಳೆ

॥ ಕಂದ ॥ ಪೊಡವಿಪತಿ ಚೋಳ ಕಾಳಗ
ದೆಡೆಯೊಳು ಜೆಡೆವಲೆಯ ತರಲು ಕಾಣುತ ತನ್ನಯ
ಮುಡಿವೆಲೆಯ ಕೊಟ್ಟ ನಿಷ್ಠೆಗೆ
ಉಮಾಪತಿಧರ ಮೆಚ್ಚಿದ ನಮ್ಮ ಗುರುವಿಶ್ವೇಶಂ

॥ ರಗಳೆ ॥ ಶ್ರೀಧರಣಿ ದಿಗುವಳೆಯದೊಳಗೆ ಲೇಸಿನ ದೇಶ ಮೇದಿನಿಗೆ ಸುರಧೇನು ಎನಿಪ ಚೋಳುಂದೇಶ ಆದೇಶಕೊಲಿವ ಕಾವೇರಿ ಬಂದಳು ಪರಿದು ಆದರಿಸಿ ಜಿ ವರ್ಗೆ ಭಕ್ತ್ಯಾಮೃತವನೆಱೆದು ವರ ಕಾಮಧೇನುವೆಂದೆನಿಪ ಗಾಂಭೀರದೊಳು ಪಿರಿದಾಗಿ ಕಾವೇರಿ ಮೆಱೆದಳಾದೇಶದೊಳು ವಿಭವವುಳ್ಳ ವರ[1] [ವರ]1 ಸ್ಥಾನ ಪೊನ್ನಾಂಬಲಂ ಅಭಿನವದ ಕೈಲಾಸವೆನಿಪ ಪೊನ್ನಾಂಬಲಂ ಉರಗೇಂದ್ರ[2][ರ]2ದಿ ವಂದಿಸುವ ಪೊನ್ನಾಂಬಲಂ ವರ ಹೇಮಕೂಟದಿಂ ಮೆಱೆವ ಪೊನ್ನಾಂಬಲಂ ಶುದ್ಧಶೈವಾಗಮಾಚಾರ ಸಂಪದವಲ್ಲಿ ಸಿದ್ಧರಸವಲ್ಲಿ ಶಿವಭಕ್ತಿ ನಿಷ್ಠೆಯು ಅಲ್ಲಿ ಸತಿ ಸಿರಿಯು ನೆಲೆಯಲ್ಲಿ ಚೆಲುವಲ್ಲಿ ದಯವಲ್ಲಿ ಸುಲಭಂಗಳಲ್ಲಿ ಸುಖವಲ್ಲಿ ದಯ ಘನವಲ್ಲಿ ಒಪ್ಪುವ ಸುದೇಶದೊಳು ದೇವಾಲಯಂ ಪಿರಿದು ಪ್ರಸ್ಥಾನನಂ ತೋಪು ಮಾಮರಂಗಳು ಪಿರಿದು ನೆಳಲ ತಂಪುಂ ಕೊಣಂ ನಳಿನ ಕುಮುದಗಳಲ್ಲಿ ಬೆಳವುದೆಲ್ಲ[ೆ] ಶಾಲಿ ಸುಫಲಂಗಳಲ್ಲಲ್ಲಿ ಶಿವಧರ್ಮ ವಿಲ್ಲದೂರಿಲ್ಲ ನಗರಿಗಳಿಲ್ಲ ಶಿವಸ್ತು[3][ತಿ]3 ಶಿವ ಪುರಾಣಂಗಳುಳ್ಳವರೆಲ್ಲ ದುರ್ಜನರು ದುರ್ನೀತಿ ದುಷ್ಕೃತಿಗಳಿಲ್ಲಲ್ಲಿ ಸಜ್ಜನರು ಸತ್ಯ ಸಾತ್ವಿಕರುಂ ಪಿರಿದಲ್ಲಿ ದಾರಿದ್ರರಿಲ್ಲ [4][ಕಳ]4 ದಿಲ್ಲ ಹಸಿವವರಿಲ್ಲ ನಾರ ಹೃದಯರು ಸಕಲ ಶಾಸ್ತ್ರವುಳ್ಳವರೆಲ್ಲ ಬಜಿಸಿಲ್ಲ ರುಜೆಯಿಲ್ಲ ಭಯವಿಲ್ಲ ಕಾಕಿಲ್ಲ ನಿಜ ಶಾಂತಜೀವಿಗಳು ಧೂರ್ತವಯರುಗಳಿಲ್ಲ ಪಾಪವಿಲ್ಲನ್ಯಾಯವಿಲ್ಲ ಕುಜನರುಯಿಲ್ಲ ರೂಪುಳ್ಳ ಶಿವಭಕ್ತಿಯುಳ್ಳ ಸಜ್ಜನರೆಲ್ಲ ಕರ್ಮಿಗಳು ಕಪಟಿಗಳು ಪಿಸುಣರುಗಳಿಲ್ಲಲ್ಲಿ ಧರ್ಮಿಗಳು ದಾನ ಉಪಕಾರವುಳ್ಳವರೆಲ್ಲ ಹರಸಮಯಮೇ

1. ವಳ 2. ವಾ 3. ತಿಯ 4. ಕಳ.

ಘನಂ ಪರಸಮಯವಿಲ್ಲಲ್ಲಿ ಗುರುಮಂತ್ರ ಉಪದೇಶವಿಲ್ಲದವರಿಲ್ಲಲ್ಲಿ ಮನ ವಚನ ಕಾಯಂಗಳೆಲ್ಲವುಂ ಶಿವಸೊಮ್ಮು ತನು ಧನಂ ಪ್ರಾಣ ಅಭಿಮಾನವುಂ ಶಿವಸೊಮ್ಮು ಸತಿಜನಂಗಳೊಳೆಲ್ಲ ಮಾನ್ಯರತಿ ಮುಗ್ಧೆಯರು ಪತಿವ್ರತೆಯರುಂ ಪುಣ್ಯವತಿಯರತಿ ಚೆಲುವೆಯರು ಇಂತಪ್ಪ ದೇಶಾಧಿಪತಿ ಚೋಳನಿಹಬೀಡು ಸಂತತಂ ಕುರು ಊರು ಅಮರಪುರಕೆಣೆ ನೋಡು ಅಡಿಯೊಳು ಭೂತಿಲಕ ವೆನಿಪ್ಪುದಾ ಕರುವೂರು ನೋಡುವರೆ ನೋಟಕಾಶ್ಚರಿಯಾದ ಕರುವೂರು ಧರೆಯೊಳಳಕಾಪುರಿಗೆ ಸರಿಯೆನಿಪ ಕರುವೂರು ಸರಧಿಯಿಂದಂ ಪಡುವ-ಲಿಪ್ಪುದಾ ಕರುವೂರು ನವರತ್ನ ಚಿತ್ರಕೂಟಂ ಮೆಱೆವ ಬೀದಿಗಳು ಶಿವನಿಳಯವೆಲ್ಲವುಂ ಶಿಖರ ಹೊಂಗಳಸಗಳು ಈ ತೆಱದ ನಾಡು ಬೀಡಿಂ-ಗೊಡೆಯ ಪಗಲ್ಚೋಳ ಭೂತಳದೊಳರಿರಾಯದಲ್ಲಣಂ ಪಗಲ್ಚೋಳ ವಿಷಮರಾಯರ್ಗೆ ವೇಶ್ಯಾಭುಜಂಗಂ ಚೋಳ ವಸುಧೆಯೊಳಗುಳ್ಳ ರಾಯರ ರಾಯ ಪಗಲ್ಚೋಳ ರಥ ಹಲವು ಕರಿ ತುರಗ ನರರ ಪರ್ಬಲ[5] [ಕಧಿಪ][5] ಚತು ರಂಗ ಬಲವನಾಳುವ ಚೋಳ ಕುಲದೀಪ ಕಳತಂತ್ರಮಂ ಪೇಳ್ವೊಡಾ ಲೆಕ್ಕಿಗ [೦] ಬಲ್ಲ ಇಳೆಯೊಳಗೆ ಚೋಳರಾಯಂಗಾರು ಸರಿಯಿಲ್ಲ ಹಿಮಸೇತುವೊಳ ಗಾದ ರಾಯರೆನಿಸಿಪ್ಪವರು ರವಿಕುಲದ ಚೋಳಂಗೆ ಕಪ್ಪವಂ ತೆಱುತಿಹರು ಸತ್ಯಧರ್ಮಜ್ಞ ಶಾಸ್ತ್ರಜ್ಞ ದಯಗುಣ ಭರಿತ ಉತ್ತಮನುದಾರ ಮಹಿಪತಿ ದಾನಗುಣಭರಿತ ಧರೆಪಣೆಯೆ ಮಾಡಿಸುವ ದೇವಾಲ್ಯ ಕೆಱೆಗಳಂ ಹರನಭಕ್ತರ್ಗೊ-ಲಿದು ಕೊಡುತಿಪ್ಪ ಪುರಗಳಂ ಮೃಡಭಕ್ತಿಯಲ್ಲಿ ವಿಶ್ವಾಸಿ ಸಮ್ಯಕ ಶರಣ ಎಡೆವರಿ ಯದರ್ಚಿಸುವ ಸನ್ನಿಹಿತ ಸಲೆ ಶರಣ ಭಾಳಾಕ್ಷನಲ್ಲದುಳಿದನ್ಯದೈವವನೊಲ್ಲ ಚೋಳಂಗೆ ಶಿವಪೂಜೆಯುಂದತಃ ಪರವಿಲ್ಲ ಶ್ರೀ ವಿಭೂತಿಯ ಧರಿಸಿಕೊಳುತಿಪ್ಪನಡಿಗಡಿಗೆ ಭಾವಿಸುತ ಲಿಂಗಮಂ ಪೂಜಿಸುವನಡಿಗಡಿಗೆ ಹಾಡುತವೆ ಪೂಜೆಯಂ ಮಾಡುತಿಹ ನಲಿನಲಿದು ನೋಡುತವೆ ಧ್ಯಾನಮಂ ಮಾಡುತಿಹ ನಲಿನಲಿದು ಗಂಗಾಜಲಂಗಳಂ ಮಜ್ಜನಕೆ ನೀಡುತಂ ಭೃಂಗ ಮುಟ್ಟದ ಪುಷ್ಪದಿಂ ಪೂಜೆಮಾಡುವಂ ಭಾವಕವ ಲಿಂಗತತಿ ಗಂಧಲೇಪನ ಶಿವಗೆ ಸಾವಿರೆಸಳಿನ ಕಮಲಪೂಜೆ ನೇಮವು ತನಗೆ ಕಂಪ ಬೀರುವ ಜಾಜಿ ಸುರಗಿ ಸೇವಂತಿಗೆಯು ಸಂಪಗೆಯು ರತ್ನಪದ್ಮಳಿ[6] (ಯುಇ)[6] ರ ವಂತಿಗೆಯು ದಶಕೋಟಿ ಧೂಪ ಪರಿಮಳವು ಶಿವಲಿಂಗಕ್ಕೆ ಎಸೆವ ದೀಪದ ಬೆಳಪ ಬೆಳಗು ಶಿವಲಿಂಗಕ್ಕೆ ನವರತ್ನದಾರತಿಯ ಬೆಳಗಿನಿಂ ನೋಡುವಂ ಶಿವನ ಸಧ್ಯಾನವಂ ಮನದೊಳಗೆ ಕೊಡುವಂ ಉಲಿವ ವೇದವು ನಾದ ಗೀತ ಲಿಂಗವಸರಕೆ ಪಲವು ವಾದ್ಯವು ಪಾತ್ರ ಭೋಗ ಲಿಂಗವಸರಕೆ ತನುವ ನಿಗುರಿಸಿ ದಂಡ ಪ್ರಣಮದಿಂ ವಂದಿ ಸುವ ಮನಮುಟ್ಟಿ ಪುಳಕದಿಂ ಕುಣಿಕುಣಿದು ವಂದಿಸುವ ಶೈವಸಂಪದ ಭಕ್ತಿ ಲಂಪಟ

5. ವೆಲ್ಲನಿವ
6. ಯ

ದೊಳಿರಲಂದು ನೈವೇದ್ಯ (ದ) ವಸರಂ ಬಂದುದೀಶ್ವರಗೆಂದು ಶಿವಗೆ ನೈವೇದ್ಯಮಂ
ಸಲಿಸಿ ತಾಂಬೂಲವಂ ಭವಹರನೆ ಚಿತ್ತೈಸುವೆನುತ ಉತ್ಸಾಹಮುಂ ಹೊತ್ತು ಹರಿ
ನಯನ ಚರಣಂಗೆ ಪುಷ್ಪಾಂಜಲಿಯು ನಿತ್ಯನಭವಂಗೆ ಸತ್ಯಂಗೆತನುಮನದಣಿಯೆ.
ಶಿವನ ಪ್ರಸಾದನಲ್ಲದೆ ಕೊಳ್ಳನಾ ಚೋಳ ಶಿವನ ಬೀಳುಡೆಯನಲ್ಲದೆ ಪೊಲ್ಲನಾ ಚೋಳ
ಶಿವಭಜನೆಗಲ್ಲದೆಳಸದ ಶುದ್ಧ ಶೋತ್ರಗಳು ಶಿವನ ಮಹಿಮೆಯ ನೋಡಿ ತಣಿವುತಿಹ
ನೇತ್ರಗಳು ಭಸಿತ ರುದ್ರಾಕ್ಷೆಯುಂ ಧರಿಸುವರ್ಗತಿ ಮೋಹಿ ಪಶುಪತಿಯ ಗೀತಮಂ
ಪಾಡುವರ್ಗತಿ ಮೋಹಿ ಮೃಡಭಕ್ತನುದಯದೊಳು ದೇಹಾರಮಂಮಾಡಿ ಮುಡಿಯ
ಶೃಂಗಾರಮಾಡಿ ಮುಖರಸವ ನೆಱೆನೋಡಿ ದಂಡನಾಯಕರು ಸಾವಂತರವಧಾರೆ
ನಲು ಮಂಡಳಿಕ ಮನ್ನೆಯರು ಜೀಯ್ಯ ಅವಧಾರೆನಲು ಆನ್ವೇತದರಸನೋಲಗ
ಶಾಲೆಗೈತಂದು (?) ಹೊಸ್ನ ಸಿಂಹಾಸನದ ಮೇಲೊಪ್ಪುತಿರಲಂದು ತುಱುಗಿ
ಕುಳಿತಿಹ ಮಕುಟವರ್ಧನರ ಸಂದಣಿಯ ಮಱೆದುದೋಲಗವು ಬಲುನಾಯಕರ
ತಿಂಥಿಣಿಯ ಎಪ್ಪ[7](ತ್ತೆ)[7]ರಡು ನಿಯೋಗವೇವಟ್ಟು ಕುಳ್ಳಿರಲು ಒಪ್ಪುವ ವಿಲಾಸಿನಿ
ಯರೋಲಗಂಗೊಟ್ಟಿರಲು ಸಿರಿಯ ಸರಧಿಯನಾಳ್ವ ಚೋಳನೋಲಗದೊಳಗೆ ಇರೆ
ಮೊನೆಯನಾಯಕರು ಬಂದು ಅಡಿಗಳಿಗೆಱಗಿ ಬಾಳ ಗವುಡರ ಕಡೆಯ ಕಪ್ಪವಿದೆ
ಚಿತ್ತೈಸು ಈಳೆ ಜನರ ಕಡೆಯ ಕಪ್ಪವಿದೆ ಚಿತ್ತೈಸು (?) ಎಂದೆಂಬ ಬಿನ್ನಹವ
ನಾಯಕರು ಬರಲಂದು ಹಿಂದರಸು ಕಳುಹಿದಾ ಶಿಷ್ಟರುಗಳೆಯಿತಂದು ಪಾಂಡ್ಯರುಂ
ಕಪ್ಪಮಂ ಕೊಡದೆಕಳೆದರು ಜೀಯ್ಯ ಮಾಡುವುದ ಮಾಡೆಂದು ನೂಕಿಕಳೆದರುಜೀಯ್ಯ
ಎನೆ ಮುನಿದು ಚೋಳನಾ ನಾಡಕಡೆಯುಂ ನೋಡೆ ಮೊನೆಯ ನಾಯಕರುಗಳು
ನೀಳೆಯುಮುಂಮುಂನೊಡೆ ಬೆಸಸಿದಂ ಸಾವಂತ ಮಂಡಳಿಕರಂ ಕರೆಯೆ ಬೆಸವಡೆದುನತಿ
ಬೇಗ ಸೇನೆ ಸಮ್ಮನೆ ನೆಱೆಯೆ ಧರಣಿ ಬೆಸಲಾದಂತೆ ನಡೆಯಿತ್ತು ಪಾಯಿದಳ
ಕರಿತುರಗರಥನಡೆಯೆ ನಡುಗಿತ್ತು ಭೂಮಿತಳ ಹೆಳಹಿ ನಿಸ್ಸಾಳ ಸೂಳೈ
ಲಿಂಬುಧಿ ನಡುಗೆ ದಳನಡೆನುದೆಶಿಬೇಗ ಮಲೆತವೇಶನ ಕಡೆಗೆ ಜಲದುರ್ಗ
ಗಿರಿದುರ್ಗ ವನದುರ್ಗವಂ ಕೆಡಿಸಿ ಮಲೆತ ಸರಬಲರಾಯರೆಲ್ಲದುಗಳಂಕಡಿಸಿ
ಯಱಿನೆದು ತಲೆಗಱಿದು ತಲೆಗಳ ತಂದು ಹಾಕುತಿವೆ ಉಱಿವರಸು ಪಲ್ಲೋಳ
ತಾ ನಿಂದು ನೋಡುತಿರೆ ಒಂದು ತಲೆ ನಿ[8](ಡು)[8]ಗೇಶದೊಳಗೆ ಜೆಡೆಯಿರಲಂದು
ನೊಂದು ಪವ್ವನೆ ಹಾರಿ ಮಱುಗಿ ಮನ ಎರಡುಕರದಿಂದೆತ್ತಿ ನೋಡುತಿರ್ದಂ ಶಿರವ
ಸರಿಸ ಮುಂಟಕಂ ನೆಗಪಿ ನೋಡುತಿರ್ದಂ ಶಿರವ ಜೆಡೆದಲೆಯೆಂದಹುದೆನ್ನ ಪ್ರಾಣೆಯ
ರಾಯನದಹುದು ಎಡೆಮಾ(ತ್ರಿ)ದೇಕೆ ಮೃಡ ಭಕ್ತ(ನಾ ಶಿರವಹುದು ನೋಸಲೊಳೊ-
ಪ್ಪುವ ಭಸಿತವೇಕೆ ಪಾಸಿತು ತಂದೆ ಅಸಮದಳವಟ್ಟರಕೆ ಬಂದೇಕೆ ನೀ ನೊಂದೆ
ವೇಶದೊಳು ಕೆಂಜೆಡೆಯ ಮಱಿಸಿಕೊಂಡಿಪ್ಪರೇ ಈಶ್ವರಾರ್ಚಕರು ನೀವೀಸಲಿಸಂಬಳಿ–

7. ತ್ತೈ 8. ಡದೆ

ವರೇ ನಟ್ಟಾಲಿ ಪರಬ್ರಹ್ಮವಂ ನೋಡುವೆಂದವೇ ಬಿಟ್ಟಬಾಯ್ ಶಿವಶಿವಾಯೆಂದೆಂಬ ಛಂದವೇ ಪಂಚಾಕ್ಷರಿಯ ಜಪಿಸುವನರ ಜಿಹ್ವೆಂಗಳಿವು ತಪರಾಜನೊಡಲಲ್ಲಿ ತಲೆಯುಲ್ಲಿ ಬಂದುದೋ ತ್ರಿಪುರಹರನಿದ್ದೆಡೆಗ ಹರಣಮುಂ ಸಂದುದೋ ಪುಷ್ಪಮಂ ತರಬಂದು ಸಿಕ್ಕಿದೈಯ್ಯಾ ನೀನು ಒಪ್ಪುವ ಶಿವಾರ್ಚನೆಯ ತೋಱದಿಪ್ಪದೆ ನೀನು ನಾನುಪೇಕ್ಷಿಸಿ ದಾಳಿಯಿಟ್ಟು ಕೊಲಿಸಿದೆನಯ್ಯ ಹೀನಮನದವಗೆ ಶಿವಭಕ್ತಿ ಏಕಹುದೆಯ್ಯ ದಾತಾರ ಕರ್ಮವಶ ಕರ್ಮವಿನ್ನಾರವಳ ಪಾತಕವು ಸೇರಿತಿನ್ನತಿಗ[ಳೆ]ವಷಾರವಶ ಕೊಡುವೆ ಜೆಡೆವೆಲೆಗೆ ಮುಡಿದಲೆಯುನೆಂದಂಚೋಳ ಕೊಡುವಡಿನ್ನಿದಕೆ ಪ್ರತಿಯಿಲ್ಲ(ವೆಂ)ವಂ ಚೋಳ ಸರಸಿ(ಜ)ಭವನ ನಾಲ್ಕು ಮುಖದಿಂದಲಿದು ಮಿಗಿಲು ಧರಣಿಧರ[ನಾ] ಪಲವು ಶಿರದಿಂದಲಿದು ಮಿಗಿಲು ಈ ಶಿರಕೆ ಪರಬ್ರಹ್ಮವಲ್ಲದಿನ್ನೇನು ಸರಿ ಈ ಶಿರಕೆ ಶಿವನ ಪಂಚಾನನಂನೋಡುಸರಿ ಆದಡೆ ನಗುಳ್ಳದಂ ಕೊಡುವೆನಾ ವಂಚಿಸದೆ ಈ ದಿಸಂ ಶರಣರಂ ಮಾಡುವೆಂ ಸಂಕಿಸದೆ ಎನುತಂ ದಣಾಯಕರು ಮಂತ್ರಿಗಳ ಕರೆದಾಗ ತನಯುಗಂ ಪಟ್ಟವಂ ಕಟ್ಟಿ ಎಂದಂ ಬೇಗ ವೀರ ಚೋಳಂಗೆ [ವೀ]ಳಿಗೆಯ ಮುಡಿಯಂಕೊಟ್ಟು ಧಾರುಣಿಯನಾಳೆಂದು ಹೊಂಗದ್ದುಗೆಯ ಕೊಟ್ಟು ದೇಶ ದೊಳು ಧರ್ಮಂಗಳಂ ಪಾಲಿಸೂದೆಂದು ಈಶ್ವರಾರ್ಚನೆಯ ನೀವೆಲ್ಲರುಂ ಮಾಡೆಂದು ಎದ್ದು ಜಪರಾಯಗೆ ಸರ್ವ[ದ]ಳವೆಲ್ಲರುಂ ಬಿದ್ದು ಬಿನ್ನಹಮಾಡಿದರು ಶಿಷ್ಯರೆಲ್ಲರು ಇದರ ದೋಷಕ್ಕೆ ಬಹುನಾಡ ಧಾರೆಯನೇಜಿನ ಇದರ ದೋಷಕ್ಕೆ ಬಹುನಾಡ ಧಾರೆಯನೆಜಿವ ಇದರ ದೋಷ[ಕ್ಕೆ] ಬಹು ಸುವರ್ಣ ಧಾರೆಯ ನೆಜಿವ ಎಂದಲ್ಲಿ ಬಿನ್ನೈ[ಸೆ] ಸೊಗಯಿಸದೆ ತಾ ಕೇಳ ಒಂದು ಮಾತಂ ಕೇಳಿ ಎಂದಂ ಪಗಲ್ಚೋಳ ಶರಣರ ಶರೀರಕ್ಕೆ ತ್ರೈಲೋಕ್ಯ ಸರಿಯಿಲ್ಲ ವರತಪಸಿ ಯೊಡಲಿಂಗೆ ಸುರರ ತನುಸರಿಯಿಲ್ಲ ನಾಮುನ್ನ ಸರಿಯಿಲ್ಲ ಇನ್ನು ಸರಿಯಾದಪೆಂ ಸೋಮಧರ ಹರಭಕ್ತರೊಡನೆ ಸಲೆ ಸಂದಸೆಂ ಇನ್ನಿದರ ಮೇಲುತ್ತರವನಾಹ ಬೇಡೆಂದು ತನ್ನಾಣೆಯಿಟ್ಟು ಇನ್ನೆನ್ನಾಸೆ ಬೇಡೆಂದು ತನ್ನ ಮೆಚ್ಚಿನ ಶಂಕರಾ ಲಯಕೆ ನಡೆತಂದು ಹೊನ್ನಕಳಶದ ಪೌಳಿಯೊಳಗೆ ಮೆಜಿದಿತಲಂದು ಹೊಂಬಟ್ಟೆ ಯಂ ಹಾಸಿ ಜೆಡೆದಲೆಯ ತಂದಿರಿಸಿ ಅಂಬಿಕಾಪತಿಯ ಸಮ್ಮುಖದೊಳನುವಾಗಿ ರಿಸಿ ಶ್ರೀಗಂಧ ಕಸ್ತೂರಿಯ ಸಾದ ಲೇಸಂಮಾಡಿ ಪರಿಮಳದ ಪುಷ್ಪಂಗಳಿಂದ ಪೂಜೆಯಮಾಡಿ ಹೊಸ ಭಸಿತವಂ ರಾಯನುದ್ದೂಳನಂಮಾಡಿ ಯ[ಸೆದ ಲಗನನು] ವಾಗಿ ಹಿಡಿದು ಶಿರವಂ ನೋಡಿ ಚಿತ್ತೈಸಿ ನೋಡು ಶಿವ ನಿನ್ನ ಮುಕ್ಕ[ಣ್] ದಣಿಯೆ ಇತ್ತ ನೋಡೆನ್ನ ಲಿಂಗವೇ ನಿನ್ನ ಮನದಣಿಯೆ ಪುರಹರನೆ ಶಿರಹರನೆ ಇತ್ತಿತ್ತ ನೋಡೆನ್ನ ಸ್ಮರಹರನೆ ದುರಿತಹರ ಇತ್ತಿತ್ತ ನೋಡೆನ್ನ ಕಾಲಹರ ಕರ್ಮಹರ ಇತ್ತಿತ್ತ ನೋಡೆನ್ನ ಶೂಲಧರನಭಯುಕರ

---

9. ಡ 10. ನಂ ಒಂದುಪಂಕ್ತಿ ಇಲ್ಲ, 11. ಳ 12. ನಂ, 13 ಜಿನ 14 ನಂ

ಇತ್ತಿತ್ತ ನೋಡೆನ್ನ ಸನ್ನಗಾಧರ ಹರನೆ ಚೆನ್ನಾಗಿ ನೋಡೆನುತ ನಿನ್ನೈದು ಮುಖದೆ ಯಲೆನ್ನ ನೋಡೆಂದೆನುತ ಎತ್ತಿದಂ ಹೊಳವಲಗನೊತ್ತಿಕೊಂಡಂ ಕೊರಳ ಎತ್ತಿದಂ ಕಿತ್ತು ಮತ್ತೊತ್ತಿಕೊಂಡಂ ಕೊರಳ ಭೋಗರ್ಘುವ[ಘುವ] ಘುರಲು ಘುರಲೆಂಬ ಧನಿಯಾಗೆ ಪೆಗ್ಗೊರಳು ಹರಿದು ಗೋನಾಳಿಯಿಬ್ಬಗೆಯಾಗೆ ರುಧಿರಮುಯುವಾಗೆ ಪರಿಜನವೆಲ್ಲ ಬೆಱಗಾಗೆ ಮದನಹರ ನೋಡುತಿರೆ ಗಿರಿಜೆಕಣ್ಮುಚ್ಚುತಿರೆ ಸುರರಂಜೆ ಶಿವ ಕರುಣಿ ನಿ : ಕರುಣಿಯೆನುತಮಿರೆ ಶರಣರುಂ ಸಂತೋಷದಿಂದ ನಲಿದಾಡುತಿರೆ ಪರಮೇಶ್ವರಂ ಮೆಚ್ಚಿ ಕರಣಮುಂ ಬೀಱುತಿರೆ ಇನ್ನು ಸರಿಯಿಲ್ಲ ಚೋಳನನಿಪ್ಪೆಗೆಂದೆನುತ ಇನ್ನು ಬೇಡಿತ ಕೊಡುವೆನೆಂದನೀಶ್ವರ ನಗುತ ಧಾರುಣಿಗೆ ಚೋಳನಾ ಶಿರಬೀಳ ಬೇಡೆಂದು ವೀರಭದ್ರಂ ಬಂದು ಪಿಡಿದುಕೊಂಡಂ ನಿಂದು ಶಿವನ ನಿಜಮೆಚ್ಚು ಚೋಳನಮೇಲೆ ಸುರಿವುತಿರೆ ಭವನದೊಳು ಭಕ್ತಿ ಸಂಪದಗಳಿಂದೆಸವುತಿರೆ ಈಪರಿಯುನೋಡುತಿರಬೇಕೆಂದು ಶಿವನಲಿದು ರೂಪುದೋಱಿದನಂದು ಚೋಳ[ಗೀ]ಶ್ವರನೊಲಿದು ಬೇಡು ಬೇಗಂ ಬೇಡು ಚೋಳ ನಿನಗೆನ್ನಾಣೆ ಬೇಡು ಸಾರೂಪ್ಯಮುಂ ಕೊಡುವೆ ಪಾರ್ವತಿಯಾಣೆ ಎಂದಡೀ ಜೆಡೆದಲೆಯ ಮುಂಡವನು ಪ್ರಾಣಮುಂ ಒಂದುಮಾಡೊಲಿದೆಯಾದಡೀ ತಪಸೀಯನಂ ಎನಲಲ್ಲಿ ಬಿದ್ದ ತಪಸಿಯ ಮುಂಡ[ವುಂ] ಬೇಗ ಅನುನಯದಿ ಬೇಚರತ್ವದಿ ಬರುತ್ತಿರಲಾಗ ಹೋಗಿ ಜೆಡೆದಲೆ ಬೇಗ ಹತ್ತಿತಾ ಮುಂಡಮುಂ ಆಗಂ ಪಗಲ್ಚೋಳ ಪ್ರೋಲ್ತುರದತ್ತ್ವಮುಂ[?] ಸಧ್ಯ ಫಲ ಶುದ್ಧತನುವಾಯಿತಾ ಚೋಳಂಗೆ ರುದ್ರಪದವಾಯಿತು ಭಕ್ತ ಪಗಲ್ಚೋಳಂಗೆ ನರಲೋಕವೆಲ್ಲಱಿಯೆ ಸುರರು ಹೂಮಳೆಗಱಿಯೆ ವರಪುಷ್ಪಕದಮೇಲೆ ಪರಮೇಶ ಕೊಂಡೊಯ್ಯೆ ಜೆಡೆವಲೆಯ ತಪಸಿ ಸಹಿತಂ ಚೋಳ ಹೋಗುತಿರೆನ್ನುಡನಪುರಮುಂ ಚೋಳ ರಾಗದಿಂ ಪುಗುತಮಿರೆ ದೇವದುಂದುಭಿ ಶಂಖನಾದ ಪೂರೈಸುತಿರೆ ಉಮೆಯಪತಿ ಅಮರಪತಿ ನೋಡುನೋಡೆಂದೆನುತ ಕಮಲಭವಶಿ[ರ]ಕರನೆ ನೋಡುನೋಡೆಂದೆನುತ ಸಲೆ ಭಕ್ತ ಜನಕೆ ಬಾಂಧವ[ನ]ನೋಡೆಂದೆನುತ ಎಲೆಲೆ ತ್ರೈಜಗಕೆ ರತ್ನಾವಳಿನೋಡೆನುತ ದೇವಗಣಿಕೆಯರು ಜಯರವವನಿಯು ಪೂರೈಸೆ ಮರ್ತ್ಯದೊಳು ಶಿವಭಕ್ತಿ ಪಲ್ಲವಿಸುತಿರಲಂದು ನಿತ್ಯತ್ವ ಪದವಿಯಲಿ ಪಗಲ್ಚೋಳ ಸಲೆಸಂದು ರುದ್ರರಿಗೆ ದೇವದಾನವರಿಗಂ ತೋಱಿದಂ ಪೊದ್ದಿ ಕುಳಿತಿರ್ದ ಪ್ರಮಥರಿಗೆಲ್ಲ ತೋಱಿದಂ ಭಾಳಾಕ್ಷ ಚೋಳನಂ ತೋಱಿದಂ ಪ್ರಮಥರಿಗೆ ಹೇಳಿದಂ ತನ್ನನೊಲಿಸಿದ ಶರಣರೆಲ್ಲರಿಗೆ ಭೂತಳವನಾಳ್ದ ಸಿರಿಯುಂ ಬಿಟ್ಟರಿಂತುಂಟೆ ಈ ತೆಱದಿ ತನ್ನ ತಲೆಗೊಟ್ಟ ನಿ[ಷ್ಠಿತ]ರುಂಟೆ ಎನ್ನ ಶರಣರಿಗಾಗಿ ತನ್ನ ಶಿರಮಂ ಕೊಟ್ಟ ಎನ್ನ ಜೆಡೆವಲೆಗಾಗಿ ತನ್ನ ಮುಡಿವಲೆಗೊಟ್ಟ ಎಂದು ಪರನಾಲೋಕದೊಳಗೆ ಚೋಳನನಿರಿಸಿ ಚಂದ್ರಶೇಖರ ತನ್ನ ಶರಣರೊಳು ಸಲೆ ಬೆರಸಿ

---

15. ಸೇ 16ರ 17ಕ್ಕೆ 1. ಸಲುಂ 19 ಸದಗಲನು
20. ಬ್ಬು 21. ನೀ

ಸಸಿಮುವುಳಿ ನೊಸಲಕ್ಷಿಯು ಭವನಿಂತೊಪ್ಪಿದಂ ವಿಷಕಂಠ ದಶಭುಜದ ಶೃಂಗಾರನೊಪ್ಪಿದಂ ತನ್ನನರ್ಚಿಸುವ ಭಕ್ತರ ಭಾಗ್ಯನೊಪ್ಪಿದಂ ಸನ್ನಿಹಿತ ಶರಣರಂ ಮೆಚ್ಚಿವ ಶಿವನೊಪ್ಪಿದಂ ಶಿವ ಕವಿಗಳಾಗಮಿಕಿಗಳ ಪ್ರಿಯನೊಪ್ಪಿದಂ ಶಿವಪೂಜೆಯುಳ್ಳ ಭಕ್ತ[ರ] ಭಾಗ್ಯನೊಪ್ಪಿದಂ ಶರಣರೊಳು ಸನ್ನಿಹಿತನಾಗಿರ್ಪನೊಪ್ಪಿದಂ ಗುರು ವಿಶ್ವನಾಥ ದೇವರ ದೇವನೊಪ್ಪಿದಂ

* [illegible]ಂದ ಧಾರುಣಿಯೊಳು ಪಗಲ್ಬೋಳಂ
ಧೈರ್ಯದಿ ಜೆಡೆದಲೆಗೆ ತನ್ನ ಮುಡಿದಲೆಗೊಟ್ಟು
ವೀರಕ್ಕೆ ಮೆಚ್ಚಿ ಶಿವನೊ
ಲ್ಧೋರಂತಿರೆ ಭಕ್ತಿಗೊಲಿದು ಪುರರಾಗೊಯ್ದಂ

* ಕಂದವ ಪಾತವನ್ನು D.L.N. ಅವರ ಲೇಖನದಿಂದ ಸ್ವೀಕರಿಸಿದೆ. (ಪ್ರಭುದ್ಧ ಕರ್ನಾಟಕ, 17-4, 1936, [ಪುಟ 7]

---

22. ಮಾಂ 23. ನ 24. ಪ್ಪ

ಮಧುರೈ ಕನ್ನಡದಲ್ಲಿ ಗಾದೆಗಳು-ಒಂದು ಅಭ್ಯಾಸ

● ಪ್ರ. ವಿ. ಕುಲಕರ್ಣಿ

ಪೀಠಿಕೆ :

ಗಾದೆಗಳು ವೇದಕ್ಕೆ ಸಮಾನ, ಗಾದೆಯು ಹರಹು ಒಂದು ಜನಾಂಗದ ಪಕ್ವತೆಯ ಕುರುಹು, ಗಾದೆ ಮಾತುಗಳು ಅನಕ್ಷರಸ್ಥರ ಪಾಂಡಿತ್ಯದ ಪೊಕ್ಕಸ- ಎಂಬ ಮಾತುಗಳ ಸಹಜತೆಯನ್ನು ಕಾಲದಿಂದ ಕಾಲಕ್ಕೆ ಬದಲಾಗದೆ ಉಳಿದಿರುವ ಅವರ ಗುಣ ವಿಶೇಷತೆಯಿಂದ ತಿಳಿಯಬಹುದು. ಒಂದು ದೃಷ್ಟಿಯಲ್ಲಿ ಗಾದೆ ಮಾತುಗಳು ವಿಶಾಲ ಅನುಭವದ, ಪಾರಂಪಾರಿಕ ಸತ್ಯಘಟನೆಯ, ನೈಜ ನಿರೂಪಣೆಯ ಸಂಕೀರ್ಣತೆಯ ಸ್ಫೋಟರೂಪಗಳು ಎನ್ನಬಹುದು. ಪುಸ್ತಕ ಸಾಹಿತ್ಯದಿಂದ ಒಬ್ಬನ ಜ್ಞಾನದ ಆಳವನ್ನು ಅರಿಯಲು ಸಾಧ್ಯವಾಗದೇ ಹೋಗಬಹುದು. ಆದರೆ ಗಾದೆ ಮಾತಿನ ನಿರರ್ಗಳವಾದ ಬಳಕೆಯಿಂದ, ಉಚ್ಚಾರಣೆಯಿಂದ, ಒಬ್ಬನ ವಿಷಯಗ್ರಹಣ ಶಕ್ತಿಯ, ಅಂತಃಸತ್ವದ ಅರಿವಿನ ಇರುವಿಕೆಯನ್ನು ಊಹಿಸಬಹುದು. ಎಲ್ಲ ಜನಾಂಗದ,ದೇಶದ, ಭಾಷೆಯ, ಸಂಸ್ಕೃತಿಯ, ಬೆಳವಣಿಗೆಯನ್ನು ಗಾದೆಯಲ್ಲಿ ಕಾಣುತ್ತೇವೆ. ಈ ದೃಷ್ಟಿಯಿಂದ ಗಾದೆಗಳು ಯಾವುದೇ ಒಬ್ಬ ವ್ಯಕ್ತಿಯ, ಒಂದು ಪ್ರಜ್ಞೆಯ ಹುಟ್ಟಾಗಿರದೆ ಅನೇಕ ತಲೆಮಾರುಗಳ ಸಂಗ್ರಹಿತ ಚಿಂತನೆಯ ಸಂಕೀರ್ಣವಾದ ರೂಪಗಳೆನ್ನಬಹುದು, ಇನ್ನು ಗಾದೆಗಳ ಬಗೆಗಿನ ಹೆಚ್ಚಿನ ವಿವರಣೆ ಈ ಲೇಖನದ ಉದ್ದೇಶವಲ್ಲ. ಮೂಲತಃ ಮಧುರೆಯ ಆಸುಪಾಸಿನಲ್ಲಿರುವ ಕಂಬಂ ಚಿನ್ನಾಲಪಟ್ಟಿ, ಗುಡಲೂರು. ಅರುಪ್ಪುಕೋಟ್ಟೈ,ಚಿನ್ನಮಣಲೂರು, ಉತ್ತಮ ಪಾಳೆಯಂ, ಬೋಡಿನಾಯಕನೂರು, ಮುಂತಾದ ಊರಿನಲ್ಲಿರುವ ಕನ್ನಡಿಗರ ಗಾದೆಗಳ ಒಂದು ಸೂಕ್ಷ್ಮವಾದ ಕಿರುಪರಿಚಯವನ್ನು ನೀಡುವುದಷ್ಟೆ ಈ ಲೇಖನದ ಉದ್ದೇಶ.

ಮಧುರೆಯ ಕನ್ನಡ :

ತಮಿಳು ನಾಡಿನ ತಮಿಳುಭಾಷೆ, ಸಾಹಿತ್ಯಕೇಂದ್ರ ಎನ್ನಿಸಿಕೊಂಡಿರುವ ಮಧುರೆಯಲ್ಲಿ ಕನ್ನಡದ ಮಾತುಗಳು: ಆಡುನುಡಿಗಳು ಮುಂತಾದವು ಇಂದಿಗೂ ಕೆಲವು ಜನಾಂಗದವರ [ದೇವಾಂಗ. ಕುರುಬ, ಲಿಂಗಾಯತ, ಮಾಧ್ವ ಬ್ರಾಹ್ಮಣ. ಗೌಂಡರ್ ಇತ್ಯಾದಿ] ಮಾತುಗಳಲ್ಲಿ ಉಳಿದು ಉಪಯೋಗಕ್ಕೊಳಗಾಗುತ್ತಾ ಬಂದಿರುವುದನ್ನು ಕಾಣುತ್ತೇವೆ. ಇಲ್ಲಿನ ಕನ್ನಡಿಗರು ಮೈಸೂರು ಕನ್ನಡಿಗರ ಸಂಪರ್ಕಕ್ಕೆ ಬಂದಾಗ

ತಮ್ಮ ಕನ್ನಡವನ್ನು ಆಡಿತೋರಿಸಲು ಸಂಕೋಚಗೊಳ್ಳುತ್ತಾರೆ. ಇದಕ್ಕೆ ಬಹುಶಃ ತಮ್ಮ ಕನ್ನಡ ಮಾತಿನಲ್ಲಿ ಭಾಷಾಶುದ್ಧಿ ಇಲ್ಲವೆಂಬುದೇ ಅವರ ಸಂಕೋಚ ಹಾಗೂ ನಾಚಿಕೆಯ ಪ್ರವೃತ್ತಿಗೆ ಕಾರಣವಿರಬಹುದು.

ವೈಶಿಷ್ಟ್ಯ :

ಯಾವುದೇ ಭಾಷಗೆ ತನ್ನದೇ ಆದ ಭಾಷೆಯ ಬೆಳವಣಿಗೆಯ ಸಂಪರ್ಕ ಕಡಿದು ಹೋದಾಗ ಅವರಲ್ಲಿ ಗತಕಾಲೀನ ಅಂಶಗಳನ್ನು ಮಾತ್ರ ಗುರುತಿಸಲು ಸಾಧ್ಯ. ಅಲ್ಲದೆ ಅಂತಹ ಒಂದು ಭಾಷೆ ಅನ್ಯ ಭಾಷಾ ಪರಿಸರದಲ್ಲಿ ಬದುಕಲೇ ಬೇಕಾದ ಪರಿಸ್ಥಿತಿ ಒದಗಿದಾಗ ಅದಕ್ಕುಂಟಾಗುವ, ಆಘಾತವೂ ಗಣನೀಯ ವಾದ ಅಂಶವಾಗಿರುತ್ತದೆ. ಈ ಕಾರಣಗಳಿಂದ ಸಮಕಾಲೀನ ಸಂಪರ್ಕ ಕಳೆದು ಕೊಂಡ ಭಾಷಾ ಗುಂಪಿನವರಲ್ಲಿ ಅವರವರ ಸ್ವಂತ ಪ್ರಜ್ಞೆ ಹಾಗೂ ಭಾಷೆ ಯನ್ನು ಉಳಿಸಿಕೊಳ್ಳುವ ಪ್ರವೃತ್ತಿಯಿಂದಾಗಿ ಹಳೆಯ ಪದಗಳನ್ನು, ಅಂದಿನ ವಿಧಿ. ವಿಧಾನಗಳನ್ನು ಇಂದಿಗೂ ಕಾಣಬಹುದು. ಈ ದೃಷ್ಟಿಯಿಂದ ಒಂದು ಭಾಷೆಯ ವಿಶಿಷ್ಟತೆಯನ್ನು ಗುರುತಿಸುತ್ತೇವೆ.

ಪ್ರಸ್ತುತ ಮಧುರೆ ಕನ್ನಡದವರಲ್ಲಿ ಕೆಲವು ಹಳಗನ್ನಡ ರೂಪಗಳನ್ನು, ಆದಿಯಲ್ಲಿದ್ದ "ಪ" ಕಾರದ ಉಳಿವನ್ನೂ ಇಂದಿಗೂ ನೋಡಬಹುದು. ಪ್ರಕೃತ ಗಾದೆಗಳನ್ನು ಅಭ್ಯಾಸ ದೃಷ್ಟಿಯಿಂದ ಹೀಗೆ ವಿಂಗಡಿಸಲಾಗಿದೆ.

೧. ಶುದ್ಧ ಕನ್ನಡ ಗಾದೆಗಳೊಂದಿಗೆ (ಶು.ಕ.ಗಾ) ಮಧುರೈ ಕನ್ನಡ ಗಾದೆಗಳ (ಮ.ಕ.ಗಾ) ಹೋಲಿಕೆ
೨. ಗಾದೆಗಳಲ್ಲಿನ ಪದಗಳ ಪ್ರಯೋಗ
೩. ಗಾದೆ ಮಾತುಗಳಲ್ಲಿ ತಮಿಳಿನ ಪ್ರಭಾವ
೪. ಗಾದೆ ಮಾತುಗಳಲ್ಲಿ ದೊರಕುವ ಹಳಗನ್ನಡ ರೂಪ.
೫, ಗಾದೆಗಳಲ್ಲಿ ವಸ್ತು ವೈವಿಧ್ಯತೆ
೬. ಇತರ ವಿಚಾರಗಳು

೧. ಸಂಗ್ರಹಿಸಲ್ಪಟ್ಟಿರುವ ಮ, ಕ. ಗಾ ಗಳೊಂದಿಗೆ ಕರ್ನಾಟಕದಲ್ಲಿ ರೂಢಿ ಯಲ್ಲಿರುವ ಕೆಲವು ಗಾದೆ ಮಾತುಗಳನ್ನು ಹೋಲಿಸಿ ನೋಡಬಹುದು.

ಅ) ಮ.ಕ.ಗಾ : **ಕೂಳಿಯನು** ಆಸೆ **ವಿೂಸೆ** ಮೇಲೆ ಆಸೆ
ಶು.ಕ,ಗಾ : **ಅಕ್ಕಿ** ಮೇಲೆ ಆಸೆ **ನೆಂಟರ** ಮೇಲೆ ಪ್ರೀತಿ
ಆ) ಮ.ಕ.ಗಾ : ಸಾವಿರ **ಪೊಮ್** ಏಳಾಚಿ ಒಂದು ಮದುವೆ ಮಾಡಬೇಕು.
ಶು,ಕ.ಗಾ : ಸಾಪಿರ **ಸುಳ್ಳು ಹೇಳಿ** ಒಂದು ಮದುವೆ ಮಾಡು

ಇ) ಮ.ಕ.ಗಾ : ಒಂದು ಮದುವೆನ ಮುಡಿಚಿ ನೋಡು
ಒಂದು ಮನೆನ ಕಟ್ಟಿ ನೋಡು
ಶು.ಕ.ಗಾ ; ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು

ಈ) ಮ.ಕ.ಗಾ : ಇರುತ ಕಾರಿಗೆ ಒಂದು ಮನೆ;ಇಲ್ಲಾದಾರಿಗೆ ಊರೆಲ್ಲಾ ಮನೆ
ಶು.ಕ.ಗಾ ; ಇರುವವರಿಗೆ ಒಂದು ಮನೆ ಇಲ್ಲದವರಿಗೆ ಊರೆಲ್ಲಾ ಮನೆ

ಉ) ಮ.ಕ.ಗಾ : ಬಟಳಕ್ಕೆ ಬಂದುದು ಬಾಯಿಗೆ ಬಲ್ಲ
ಶು.ಕ.ಗಾ ; ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ

ಊ) ಮ.ಕ,ಗಾ : ಕೊರಂಗು ಕೈಲಿ ಸಿಕ್ಕಿದ ಊವಿನ ಮಾಲೆ ಲಿಕ್ಕಲಿ
ಶು.ಕ.ಗಾ : ಕೋತಿ ಕೈಯಲ್ಲಿನ ಮಾಣಿಕ್ಯದಂತೆ

ಋ) ಮ.ಕ.ಗಾ ; ಕಂಡ ಒತ್ತಿಗೆ ಒಂದು ಮಾತು, ಕಾಣದಾ ಒತ್ತಿಗೆ ಒಂದು ಮಾತು
ಶು.ಕ.ಗಾ : ಕಂಡರೊಂದು ಕಾಣದಿದ್ದರೊಂದು

ೠ) ಮ.ಕ,ಗಾ : ಉಂಡ ಮನೆಗೆ ದ್ರೋಗ ನೆನೆಸ ಕೂಡದು
ಶು.ಕ.ಗಾ : ಉಂಡ ಮನೆಗೆ ಎರಡು ಬಗೆಯು ಕೂಡದು

ಎ) ಮ.ಕ,ಗಾ : ಅಣವಿದ್ದರೆ ಎಣ ಕೂಡ ಬಾಯಿನ ತೆರಾದು
ಶು.ಕ.ಗಾ : ಹಣವಿದ್ದರೆ ಹೆಣ ಕೂಡ ಬಾಯಿ ಬಿಡತ್ತೆ

ಏ) ಮ.ಕ.ಗಾ : ಮಾತುಲೇನು ಮನಿ ಆಕಿ. ತೂಂತು ಗಡಿಯಲಿ ಎಸರು ಮಡಗುತಾಳೆ.

ಶು.ಕ.ಗಾ : ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು.

ಮೇಲಿನ ಹತ್ತು ಗಾದೆಗಳಲ್ಲಿ ಹೋಲಿಕೆಯಿಂದ ಕಂಡುಬಂದಿರುವ ವ್ಯತ್ಯಾಸಗಳನ್ನು ಗುರುತಿಸಬಹುದು. ಮೇಲ್ನೋಟಕ್ಕೆ ಗಾದೆಗಳ ರಚನಾಕ್ರಮ ಒಂದೇರೀತಿ ಇದ್ದರೂ. ಬಳಸಿರುವ ಪದಗಳು, ವಾಕ್ಯಗಳ ಸ್ವರೂಪ, ಇದರಲ್ಲಿ ವ್ಯತ್ಯಾಸವಿದೆ.

೨) ಗಾದೆಗಳಲ್ಲಿನ ಪದಗಳ ಪ್ರಯೋಗ :

ಮೊದಲನೇ ಗಾದೆಯಲ್ಲಿ ಬಂದಿರುವ ಕೂಳಿಯನು ಎಂಬುದು ಕೂಳಿನ ಮೇಲೆ ಎಂಬುದರ ಸಂಕೀರ್ಣ ರೂಪ.

i) ಏಳಾಚಿ ಏಳು + ಆಚಿ
ಹೇಳು > ಹೇಳಿ + ಆಯಿತು

'ಆಚಿ' ಎಂಬುದು ವಂದಾಚಿ → ವಂದು + ಆಚಿ, ಬಂದು ಆಯಿತು
ಪೋಯಾಚಿ→ಪೊಯಿ + ಆಚಿ, ಹೋಗಿ ಆಯಿತು ಎಂಬುವದರಲ್ಲಿ ಬರುವ ಕ್ರಿಯಾ ಪದದಲ್ಲಿನ ಪ್ರತ್ಯಯ ರೂಪ.

ತಮಿಳಿನಲ್ಲಿ 'ಆಯಿತು' ಎಂಬರ್ಥವನ್ನು ಸೂಚಿಸುವ ಪ್ರತ್ಯಯು ಅದರ ಪ್ರಭಾವ ಕನ್ನಡ ಪದಗಳಲ್ಲಿ ಸೇರಿ 'ತಮಿಳ್ಗನ್ನಡ' ರೂಪವಾಗಿ ಬಂದಿರುವುದನ್ನು ಗಮನಿಸ ಬಹುದು.

ii) ಮನೆನ→ಎಂಬುದು ಮನೆಯನ್ನು ಎಂಬ ಅರ್ಥದಲ್ಲಿ ಬಳಕೆಯಾಗಿರುವ ಪದ. ಪದವೂ ಕೂಡ ತಮಿಳು ಪದಗಳ ರಚನೆಗನುಗುಣವಾಗಿ ರೂಪಿತಗೊಂಡಂತೆ ಕಂಡುಬಂದಿದೆ.

iii) ಇರುತಕಾರಿಗೆ, ಇಲ್ಲಾದಾರಿಗೆ, ಎಂಬುದು ಕ್ರಮವಾಗಿ ಇರುವವರಿಗೆ, ಇಲ್ಲದವರಿಗೆ ಎಂಬ ಅರ್ಥದಲ್ಲಿ ಬಳಕೆಯಾಗಿ 'ತಮಿಳು ಪದರಚನಾ ರೀತಿಯನ್ನು, ಪ್ರಭಾವವನ್ನು ತಿಳಿಯಪಡಿಸುವುದು.

iv) ಹಾಗೆಯೇ ಬಟಳ= ಬಟ್ಟಲು. ಬಲ್ಲ= ಬರಲಿಲ್ಲ. ಮಾಲೆಲಿಕ್ಕಿಲಿ= ಮಾಲೆ ಮಂತೆ. (ಅಕ್ಕಿಲಿ= ಅಂತೆ) ತೆರಾದು= ತೆರೆಯುವುದು - ಮುಂತಾದ ಪದಗಳು ತಮಿಳು ಪದರಚನೆಯಿಂದ ಪ್ರಭಾವಿತಗೊಂಡು ಮಧುರೈ ಕನ್ನಡಿಗರ ಕನ್ನಡ ವಾಕ್ಯ ರಚನಾಕ್ರಮದಲ್ಲಿ ಸಹಜವೆಂಬಂತೆ ಸೇರಿಕೊಂಡು ಬಂದಿರುವುದನ್ನು ಕಾಣುತ್ತೇವೆ.

೩. **ಗಾದೆಮಾತುಗಳಲ್ಲಿ ತಮಿಳಿನ ಪ್ರಭಾವ :**

ಸಂಗ್ರಹಿತವಾದ ಮಧುರೈ ಕನ್ನಡ ಗಾದೆಗಳಲ್ಲಿ ಅನೇಕ ತಮಿಳು ಪದಗಳ ಮೂಲ ರೂಪಗಳು ಕಂಡುಬಂದಿವೆ. ಇಲ್ಲಿ ಮೇಲಿನ ಗಾದೆಗಳಲ್ಲಿ ಕಂಡುಬಂದಿರುವ ರೂಪಗಳನ್ನಷ್ಟೇ ಕೊಡಲಾಗಿದೆ, ಉಳಿದ ಪದಗಳಿಗೆ ಅನುಬಂಧದಲ್ಲಿ ಕೊಟ್ಟಿರುವ ಗಾದೆಗಳನ್ನು ಅವಲೋಕಿಸಬಹುದು. ಇಲ್ಲಿನ ಗಾದೆಗಳಲ್ಲಿ ಕಂಡುಬಂದಿರುವ ತಮಿಳು ಪದಗಳು ಹೀಗಿವೆ.

ಪೋಮ್= ಸುಳ್ಳು; ಮುಡಿಚಿ= ಮುಗಿಸಿ
ಕೊರಂಗು= ಕೋತಿ; ದ್ರೋಗ= ದ್ರೋಹ

೪) **ಗಾದೆ ಮಾತುಗಳಲ್ಲಿ ದೊರಕುವ ಹಳಗನ್ನಡ ರೂಪ :**

ಹೊತ್ತು (ಒತ್ತು), ಕೂಳು ಮುಂತಾದ ನಾಮಪದ ರೂಪಗಳನ್ನು, ಉಂಡ= ತಿಂದನು ಮುಂತಾದ ಕ್ರಿಯಾಪದ ರೂಪಗಳನ್ನು ಕೆಲವಾರು ಗಾದೆಗಳಲ್ಲಿ ಗಮನಿಸಬಹುದು.

೫. **ಗಾದೆ ಮಾತುಗಳಲ್ಲಿ ವಸ್ತು ವೈವಿಧ್ಯತೆ :**

ಇಲ್ಲಿನ ಗಾದೆಗಳಲ್ಲಿ ಎಲ್ಲಾ ದೇಶದ ಗಾದೆಗಳಲ್ಲಿರುವಂತೆ, ನಿರ್ದಿಷ್ಟವಸ್ತುವನ್ನು ಕುರಿತಂತೆ ಗಾದೆ ಮಾತುಗಳಿರದೆ ಪ್ರಕೃತಿ, ಪ್ರಾಣಿ, ವ್ಯವಹಾರಿಕ, ಸಂಸಾರ, ರಾಜ

ಕೀಯ, ಮುಂತಾದ ಕ್ಷೇತ್ರಗಳಿಂದಲೂ ವಸ್ತುವು ಉಪಯೋಗಕ್ಕೊಳಪಟ್ಟಿರುವು ದನ್ನು ಕಾಣಬಹುದು. (ವಸ್ತು ವೈವಿಧ್ಯತೆಗೆ ಅನುಭವದಲ್ಲಿ ಕೊಟ್ಟಿರುವ ಗಾದೆಗಳನ್ನು ನೋಡಿ) ಆಡು ಮುಟ್ಟದ ಸೊಪ್ಪು ಇಲ್ಲ ಎಂದ ಹಾಗೆ ಗಾದೆಗಳ ಗಾಳಕ್ಕೆ ಸಿಕ್ಕದೇ ಇರುವ ವಸ್ತುವೇ ಇಲ್ಲ ಎನ್ನಬಹುದು.

೬. ಇತರ ವಿಚಾರಗಳು :

೧.೧ ಕೆಲವು ಗಾದೆಗಳಲ್ಲಿ ಹೊಸ ರೀತಿಯ ಪದಗಳ ಸೃಷ್ಟಿಯನ್ನು ಕಾಣುತ್ತೇವೆ.

ಉದಾಹರಣೆಗೆ ಇಲ್ಲಿ ಉಲ್ಲೇಖಗೊಂಡಿರುವ [ಏ]ಗಾದೆಯಲ್ಲಿ ವ್ಯಕ್ತವಾಗಿರುವ 'ಮಾತುಲೇನು' ಎಂಬ ಪದ ಅರ್ಥ ದೃಷಿಯಿಂದ ಮಾತಿನಲ್ಲಿಯೇ ಏನನ್ನಾದರೂ ಹೇಳಬಲ್ಲಂತಹ, ವಾಚಾಳಿ, ಮಾತುಗಾತಿ ಎಂಬುದನ್ನು ಸೂಚಿಸುತ್ತದೆ.

೧.೨ ಭಾಷಾ ವ್ಯಾಸಂಗ ದೃಷ್ಟಿಯಿಂದ ಮಧುರೆಯ ಕನ್ನಡದಲ್ಲಿ ಹೆಚ್ಚಿನ ವಿಚಾರಗಳು ಬೆಳಕಿಗೆ ಬಂದಿವೆ, ಪರಂಪರೆಯಿಂದ ಬಳಕೆಯಲ್ಲಿ ಬಂದ ಮಾತುಗಳ ರೀತ್ಯಾನುಸಾರವೋ ಅಥವಾ ತಮಿಳುಭಾಷೆಯ ಪ್ರಭಾವದಿಂದಲೋ ಇಲ್ಲಿನ ಕನ್ನಡದಲ್ಲಿ ಕೆಳಕಂಡ ಅಂಶಗಳನ್ನು ಗುರುತಿಸಬಹುದು.

ಉದಾ : ಊವು, ಒತ್ತಿಗೆ, ಅಣ, ಎಣ, –ಈ ಪದಗಳು ಕ್ರಮವಾಗಿ ಹೂವು, ಹೊತ್ತಿಗೆ, ಹಣ, ಹೆಣ, ಎಂಬ ರೀತಿಯಲ್ಲಿ ಬಳಕೆಯಲ್ಲಿದೆ. ಇದನ್ನು ಗಮನಿಸಿದಾಗ ಆರಂಭದ 'ಹ' ಕಾರವು 'ಅ' 'ಒ' ಮತ್ತು 'ಎ' ರೂಪಗಳಲ್ಲಿ ಬಳಕೆಯಾಗುತ್ತಿದ್ದುದು ಕಂಡುಬರುವುದು. ಆದ ಕಾರಣ ಸಂದರ್ಭಕ್ಕೆ ತಕ್ಕಂತೆ ಉಪಯೋಗಗೊಳ್ಳುದ ಪದಗಳಲ್ಲಿ ಈ ವ್ಯತ್ಯಾಸವನ್ನು ಕಾಣುತ್ತೇವೆ.

೧.೩ ಮನಿಆಕಿ ಎಂಬ ಪದ ಮನಿಯಾಕೆ ಎಂಬರ್ಥದಲ್ಲಿ ಬಳಕೆಯಾಗಿದೆ. ಇಲ್ಲಿ 'ಮನಿ' ಮತ್ತು 'ಆಕಿ' ಬೇರೆ ಬೇರೆ ಪದಗಳು ಸಂಧಿ ನಿಯಮಕ್ಕನುಗುಣವಾಗಿ ಮನಿ+ಆಕಿ→ಮನೆಯಾಕಿ ಎಂದಾಗದೆ 'ಮನಿಆಕಿ' ಎಂಬ ರೂಪವೇ ಉಳಿದು ಬಂದಿದೆ. ಸಾಧಾರಣವಾಗಿ ಉತ್ತರ ಕರ್ನಾಟಕದಲ್ಲಿ 'ಇ' ಕಾರಾಂತ ಪದಗಳ ಬಳಕೆ ಹೆಚ್ಚು. ಆ ದೃಷ್ಟಿಯಿಂದ ಇಲ್ಲಿ ಬಂದಿರುವ ಈ ಪದ ಉತ್ತರ ಕರ್ನಾಟಕದ ಬಳಕೆಯ ಮಾದರಿಯನ್ನು ಪ್ರತಿಬಿಂಬಿಸುವಂತಿದೆ. ಈ ಕಾರಣದಿಂದ ಇಲ್ಲಿಯ ಕನ್ನಡದವರನ್ನು ಯಾವುದೇ ಒಂದು ನಿರ್ದಿಷ್ಟವರ್ಗದಿಂದ ವಲಸೆ ಬಂದು ಇಲ್ಲಿ ನೆಲಸಿರುವ ಕನ್ನಡಿಗರು ಎಂದು ಹೇಳುವಂತಿಲ್ಲ. ಒಟ್ಟಿನಲ್ಲಿ ಇಲ್ಲಿರುವವರು ಹೆಚ್ಚಾಗಿ ವ್ಯವಸಾಯ ಹಾಗೂ ಪಶು ಸಂಗೋಪನೆಯನ್ನು ಮುಖ್ಯವಾಗಿ ಉಳ್ಳಂತವರ ಒಂದು ವರ್ಗಕ್ಕೆ ಸೇರಿದವರು ಎಂದು ಹೇಳಬಹುದು.

ಮೇಲೆ ವಿವರಿಸಲ್ಪಟ್ಟಿರುವ ಗಾದೆಗಳ ವಿವಿಧ ಕೋನಗಳ ಅಭ್ಯಾಸದಿಂದ. ಆದರಿಂದ ಸ್ಫುರಿಸುವ ಅರ್ಥ-ಮೇಲ್ನೋಟಕ್ಕೆ ಒಂದೇ ಆಗಿದ್ದರೂ ಅವರು ಬಳಸಿರುವ ವಸ್ತುಗಳಲ್ಲಿ ಉಪಮೆಯಲ್ಲಿ ವ್ಯತ್ಯಾಸವಿರುವುದನ್ನು ತೋರಿಸಲಾಗಿದೆ. ಒಟ್ಟಿನಲ್ಲಿ ಗಾದೆಯಲ್ಲಿ ಮೂಡಿಬಂದಿರುವ ಮಾತಿನ ಅರ್ಥ. ಒಂದಕ್ಕೊಂದಕ್ಕಿರುವ ಸಂಬಂಧ ಅದರಿಂದುಂಟಾಗುವ ಪರಿಣಾಮವನ್ನು ಸ್ಪಷ್ಟವಾಗಿ ನಿರೂಪಿಸುವುದಷ್ಟೆ, ಉಳಿವ ಗಾದೆಗಳಲ್ಲಿನ ಹೋಲಿಕೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬತುವುದಿಲ್ಲ.

ಅನುಬಂಧ

೧. ಗೋಡೆಯುನ್ನು ಕಿವಿಯಿದೆ
೨. ಅವಾಸೆ ಕೂಳು ಆರು ತಿಂಗಳಿಗೆ
೩. ಆವತ್ತಿಗೆ ಪಾವಿಲ್ಲ
೪, ಅಳಾ ಮೊಗಿಗೆ ತಾ ಆಲು ಸಿಕ್ಕಾದು
೫. ರಾಜು ನಿಂತು ಕೊಲ್ಲಾಸು ಅಂದರೆ ದೈವ ನಿಂತು ಕೇಳಾದು
೬. ಮನಸ್ಸಿಲೆ ಇರಾದು ತಾ ಮೂತಿಲೆ ತುಳ್ಯಾದು
೭. ಅತ್ರೆನೂ ಅವಳ್ತನೆ ಮೊಗು ಎರಬೇಕು
೮. ಅಳವಿಯ ಮಿಂಚಿರೆ ಅಮೊದನು ನಂಜುತಾನ
೯. ಆಳ ನೋಡ್ದಾಂಗೆ ಕಾಲು ಬುಡಬ್ಯಾಡ
೧೦. ಆನೆಯುನು ಅಡಿ ಜರ್ಕಾದು
೧೧. ಆನೆ ಬರಾದಕೆ ಮುಂದೆ ಗಂಟೆಸದ್ದು ಕೇಳಾದು
ಕೇಡು ಬರಾದಕು ಮುಂದೆ ಮದಿ ಕೆಟ್ಟು ಓವಾದು

೧೨. ಆಸೆಯೇ ಸಿಗ್ಗು ಏನು
೧೩. ಉರಾ ಕಿಚ್ಚಿಲಿ ಎಣ್ಣೆ ಬುಡಾದು ಮಾದಿರಿ
೧೪. ಎಮ್ಮೆದನ ತೆವಾಕ ಮುಂದೆ ತುಪ್ಪಬೆಲೆ ಮಾತಾಡ್ಬೇಡ
ಮೊಗು ಬಟ್ಟೇಲಿ ಇರುವಾಗ ಎಸರು ಮಡುಗ್ಬೇಡ

೧೫. ಅಯ್ಯರು ಬರಾವರಿಯೇ ಅವಾಸೆ ಕಾದುಕೊಂಡು ಇರಾದಾ
೧೬. ಕಾಲಕಾ ಏತ ಕೋಲ
೧೭. ಕೊರೆ ಕೊಡ ತದೂ ಬಾದು; ತುಂಬಾ ಇರಕೊಡ ತದುಂಬುದು
೧೮. ಕತ್ತೆಯೇ ತುಳ್ಯಾದ ಸೊಡಂದಾಳು ವಾಸನೆ
೧೯. ಕೂಳಿಯುನು ಆಸೆ ಮಿಸಿಯುನು ಆಸೆ
೨೦, ಕೈಯ್ಯೆ ಸಿಕ್ಕಿದು ಬಾಯಿಲೆ ಸಿಕ್ಕಲ
೨೧, ದಾನ ಕೊಟ್ಟ ದನದ ಅಲ್ಲು ಇಡುದು ನೋಡಬ್ಯಾಡ
೨೨, ತಾನು ಆಡಲಂದರನು ತನ್ನ ದೆಸೆ ಆಡಾದು
೨೩. ತಾನು ಒಂದು ನೆನೆಸಿರೆ ದೈವ ಒಂದು ನೆನಸಾದು
೨೪. ನೋಂಬಿ ಇಲ್ಲಾದ ಬದುಕು ತಾ ಅಳಿವಿಲ್ಲಾದ ಸೆಲ್ವ
೨೫. ಪಟ್ಟ ಕಾಲಿಲೆ ಅಂತ ಪಡಾದು ಕೆಟ್ಟ ಕುಡುಂಬ ವೇನು ಕೆಡಾದು

೨೬. ಪಳಗ ಪಳಗ ಆವಿನು ಉಳ್ಳ್ಯಗ ಓವಾದು ಅತ್ತರದ ಇದ್ದರೆ ಮುಟ್ಟಿ ಪಗೆ
೨೭. ಪೂರ್ವಾರು ಬೂಮಿನ ಆಳಾರು
೨೮. ಎಲ್ಲಾ ಉಸುರುನನು ತನ್ ಉಸಿರು ಮಾದಿರಿ ನೆನೆಸಬೇಕು
೨೯. ಮಳೆ ಇಲ್ಲೆಂದರೆ ಒಂದು ಕಾರ್ಯನೂ ಆವುದು
೩೦. ಮೊಡವ ಜೇನಿಯೆ ಆಸೆ ಪಡಿವುಂದಾ
೩೧. ಬೆಳುತದೆಲ್ಲಾನು ಆಲೆಂದು ನೆನೆಸು ತಾನೆ
೩೨. ಬರೆ ಕೈಯಿ ಮೊಳ ಆಕಾದ
೩೩. ಕೊಡುದಾರಿಗೆ ಒಂದು ಮಾತು ಕೊಟ್ಟಾರಿಗೆ ಪಲ ಮಾತು
೩೪. ನಾಯಿ ಕಚ್ಚಿ ಸಾವಾದುಕಿ ಮೇಲೆ ಆವು ಕಚ್ಚಿ ಸಾವಾದು ಮೇಲು
೩೫. ಒಳ್ಳಾರಿಗೆ ಒಂದು ಮಾತು
೩೬, ಇರುತ ಕಾರಿಗೆ ಒಂದು ಮನೆ ಇಲ್ಲಾದರಿಗೆ ಊರೆಲ್ಲಾಮನೆ
೩೭. ಹಲ್ಲಿಲ್ಲದಾರು ಆವುಂಡು ಕಚ್ಚಿ ಏನು ಮಾಡಕೆ
೩೮. ಕಣ್ಣು ಇಲ್ಲದಾರು ಮೆಂಡ್ರಿಸಿ ನೋಡಿ ಏನು ಮಾಡಕ
೩೯. ಪೇವಾ ಮನೆಯೆನು ಕಡಾ ಬಾವಿಯನು ಸರಿಪ್ಪಡಾದಾ
೪೦. ಮುಂಚ್ಚುಮನೆ ಬೆಳೆ ಇದೇ ಕಾಸ ಮನಿಯನು ಬೆಳಗಾದು
೪೧. ಬಟಳಕ್ಕೆ ಬಂದುದು ಬಾಯಿಗೆ ಬಲ್ಲ
೪೨. ತನ್ನ ಬೆಟ್ಟುಂದರನು ಕಣ್ಣುಲಿ ಕುಚ್ಚಿರೆ ನೋವಾಕತ ನೋಡಾದು
೪೩. ಎಲಿ ಊರಿಗೆ ಅಂಜಿ ಪುಲಿ ಊರಿಗೆ ಓವಾದ
೪೪. ನಂಬಿದಾರಿಗೆ ನಡರಾಜು ನಂಬದಾರಿಗೆ ಯಮರಾಜು
೪೫. ಅತ್ತು ತಾಯಿ ಇಪ್ಪರೇನು ಎತ್ತ ತಾಯಿಗೆ ಈಡಾವಾದಾ
೪೬. ಅರಸ ಅಂದೇ ಕೇಳಾದು ; ದೈವ ನಿಂತು ತಾ ಕೇಳಾದು
೪೭. ಊರಿಗೆ ಉಪದೇಸ ಉಳ್ಳೊಳಿಯೆ ಪರದೇಸ
೪೮. ಪಳುತಾಕಾರರು ಏಳಿರೆ ಕೇಳುತಾಕಾರರಿಗೆ ಮದಿ ಎಲ್ಲಿ ಓಲೆ
೪೯. ಕೆಟ್ಟಾರಿಗೆ ಸೊತ್ತುನೂ ಇಲ್ಲ ಸೊಂತನೂ ಇಲ್ಲ
೫೦, ನೀರುಲಿ ಇರುವಾಗ ವೇನು ನೀಂಜಿಕಿ ಪಳಗಿನ್ ಬೇಕು
೫೧. ಕಾಮನ ಗುದ್ದಿ ಅಣ್ಣು ಮಾಡುವಾದಾ
೫೨. ಸಾವಕಿ ಓಕಕ ಒತ್ತುಲೇನು ಸಂಗ್ರ ಸಂಗ್ರ ಎಂದು ಏಳಿ ಏನು ಮಾಡಕ
೫೩. ಚಿಟ್ಟಲಿ ಇದ್ದರ ತಾನ ಅವಿಕೆಲಿ ಬರಾದು
೫೪. ತತ್ತಿ ಇಕ್ಕಾ ಕೋಳಿಯತಾ ಪುಕ್ಕಿನೋವಾದು
೫೫. ಎಮ್ಮೆದನ ಮೇಲೆ ಮಳೆ ಒಯ್ದುದುಲಿಕ್ಕಲಿ
೫೬. ಅತ್ತೆ ಸತ್ತು ಆರುತಿಂಗಳಿ ಅಪ್ಪರಸೇಪಡಿ ತಟ್ಟಿ ಕಣ್ಣೀರು ಬಂದುದು ಲಿಕ್ಕಲಿ
೫೭. ಬಿದ್ದರೇನು ತನ್ನ ಮೂಸೇಲಿ ಮಣ್ಣು ಒಟ್ಟಲ ಎಂದು ಏಳಿದಾಂಗೆ ಇದ್ದೆ

೫೪. ಊರಿಗೆ ರಾಜು ಆಂದರುನೂ ತನಿಯೆ ಮಗ ತಾನ
೫೯. ಮನಸುಲು ಇರಾದು ತಾ ಬಯಿಲು ಬರಾದು
೬೦. ಏಳೆ ಮಾತುನ ಯಾರು ಕೇಳಕ್ಕೆ ಓವಾರು
೬೧. ಒಟ್ಟೆ ತುಂಬಿಟ್ರ ಒಲಿದಾರು ಮದ್ದಳೆ
೬೨. ಪಟ್ಟೆ ಕಾಲಲೇನು ಪಡಾದು
೬೩. ಒಂದೂನೂ ಇಲ್ಲದಾರಿಗೆ ದೈವ ತಾ ತೋಣೆ
೬೪. ತಾಯಿಲಿಕ್ಕಿಲಿ ತಾ ಮಗಳೂನು
೬೫. ಏಳ್ಳೆ ಮಾತು ಚೆಂಡು ಏರದು
೬೬. ಸಾನಕಿ ನೆನಸುತ ಕಾರ್ಯ ಸಮುದ್ರ ಮೊಣಕಾಲು ಉದ್ದ
೬೭. ಕೊರಂಗು ಕೈಲಿ ಸಿಕ್ಕಿದ ಊವಿನ ಮಾಲೆ ಲಿಕ್ಕಿಲಿ
೬೮. ಕುರುಡ ತಿನ್ನಾದು ತಾ ಗಸವರಿಗೆ ತುಳಸಾದು
೬೯. ವೇಳೆ ಬಂದರೆ ತಾ ಏದುನೂ ನೆಡಾದು
೭೦. ಏನು ಏಳಿರೆನು ಕುರುತಿಯೇ ಏರುದು
೭೧. ಉಂಡ ಮನೆಯೇ ದ್ರೋಗ ನೆನೆಸುಕುಡುಸುದು
೭೨. ಕೇಡು ಬರಕ ಮುಂದೆ ಮದಿ ಕೆಟ್ಟು ಓವಾದು
೭೩. ಕಂಡ ಒತ್ತಿಗೆ ಒಂದು ಮಾತು ಕಾಣದಾ ಒತ್ತಿಗೆ ಒಂದು ಮಾತು
೭೪. ಊರೆಲ್ಲಾ ಸುತ್ತಿ ಎಮ್ಮೇಲೇ ಮುಕ್ತಿ
೭೫. ಕೆಟ್ಟಾರೂ ಸಹವಾಸ ಒಳ್ಳೇದಕ್ಕೆ ಇಲ್ಲ
೭೬. ಸೇರುತ ಕಾರರು ಕೂಡ ಸೇರಿರತ್ತ ಒಳ್ಳೆ ಬುತ್ತಿ ಬರಾದು
೭೭. ಎಲ್ಲಾ ಅವುನವುನು ತಲೆವಿದಿ ಪಡಿಯುತಾ ನಡಾದು
೭೮. ಅವ ಇಲ್ಲಂದರೆ ಒಂದು ನಡಾದು
೭೯. ಆಸೆಯುನು ಅಳವು ಬೇಕು
೮೦. ಆಡಾದು ಅಡಕೋತು ಲೇನು ನಾಲಗೆ ಬೆಂದು ಓವಾದಾ.
೮೧. ಎವುನಿಯೆ ತಪ್ಪಿದೋರು ಯಾರು
೮೨. ಒಳ್ಳೆದು ಮಾಡಲಂದೆರನು ಉಬತ್ತಿರ ಕುಡುಸುದು
೮೩. ಉಳುತ್ತ ಉರುಳಿಲಿ ನೀರು ತೂರಿದಲಿಕ್ಕಿಲಿ
೮೪. ಒಂದು ದಿನ ಕೊತ್ತಿಗೆ ಮೊಗ ಬೋಳಿಸಿವಲಿಕ್ಕಿಲಿ
೮೫. ಕೆರೆ ಕಡಕಿ ಮುಂದೆ ಕಪ್ಪೆ ಕೂಂಗಿದಾಂಗೆ
೮೬. ಎಲಿ ಕುಚ್ಚಿಲಿಂದರನು ತನಿ ಕುಚ್ಚಿದಂಗೆ ಇರಬೇಕು
೮೭. ಕುರುಡನಿಗೆ ಒಂದೇ ಮದಿ
೮೮. ಆನೆ ಬಾಯಿಲಿ ಓಗದು ಬರುದು
೮೯. ಆಸೆ ಪಟ್ರೆ ಕಷ್ಟನೂ ಪಡಬೇಕು

೯೦. ಉತ್ತುರಕ ಎಡಕೊಟ್ಟರೆ ಕಾಲು ನೀಚಿಕನು ಎಡಕೇಳಿದಲಿಕ್ಕಲಿ
೯೧. ಊರು ಕೂಡ ಒತ್ತು ಓಗಬೇಕು
೯೨. ಬರೇ ಕೈಯಿ ಮೊಳ ಆಕಾದ
೯೩. ಕೈಲಾವುದಾರಿಗೆ ಕೈಲಾಸ ಮೂರುಗೇಣು.
೯೪. ಸೂರಿಯುನ್ನ ನೋಡಿ ನಾಯಿ ಬಗುಳಿರೆ ಏನು
೯೫. ಉಣ್ಣಾ ಕೂಳಿಲಿ ಮಣ್ಣಾಕಿಲಿಕ್ಕಲಿ
೯೬. ಎಲುವು ಇಲ್ಲದಾದ ನಾಲಿಕೆ ಏದಿಕೆನು ತಿರುಗಾದು
೯೭. ಸಾವಿರ ಪೊಯ್ ಏಳಾಚಿ ಒಂದು ಮದುವೆನ ಮಾಡಬೇಕು
೯೮. ಬಾಚಿ ಕೊಟ್ಟರೆ ಸಿಮ್ಮಿಯೆ ; ಅಳೆದು ಕೊಟ್ಟರೆ ಸಾಲ
೯೯. ಬಾವಿಲಿ ಹಾಕಿದ ಕಲ್ಲುಲಿಕ್ಕಲಿ
೧೦೦. ಒರುವಲೆ ನೋದಿಯೆ ಒರುಸುನ ತಿರಿಸಿ ಅಕಿದಲಿಕ್ಕಲಿ
೧೦೧ ಒಂದು ಮದುವೆನ ಮುಡಿಚಿ ನೋಡು; ಒಂದು ಮನೆನ ಕಟ್ಟಿನೋಡು
೧೦೨ ಅಣವಿದ್ದರೆ ಎಣಕೂಡ ಬಾಯಿನ ತೆರಾದು
೧೦೩ ಜೀದಿಲಿ ಓಗೋ ಸನಿಯುನ್ನ ಜೆಲೆಕೊಟ್ಟು ತೇಯುದ
೧೦೪ ನಾಯೀನ ಕೊಮ್ಮಂದು ನಡುಮನೇಲಿ ಮಡಿಗಿರೆ ಅದು ಕಚ್ಚತಾ ಬರಾದು
೧೦೫ ತನ್ನ ಬೆನ್ನುನ ತಿರುಸಿ ನೋಡಿರೆ ತುಳುಸಾದು
೧೦೬ ಏರಬಿಟ್ಟು ಏಣಿ ತೆಯಿದಲಿಕ್ಕಲಿ
೧೦೭ ಮಾತುಲೇನು ಮನಿ ಆಕಿ ತೂಂತುಗಡಿಯುಲಿ ಎಸುರುಮಡುಗತಾಳೆ
೧೦೮ ದೇವರು ಬಂದ ವೇಳೇಲಿ ವರ ತೆಗೀಬೇಕು
೧೦೯ ಮೂಂಗು ಇರಾವರಿಗೆ ಸಳಿ ಇರಾದು
೧೧೦ ಜೆಲ್ಲನ ತೊಟ್ಟುಟು ಬೆಟ್ಟುನ ಸಪ್ಪುರಿಸಿದಾಂಗೆ ಇರಾದ

ಕಠಿಣ ಪದಗಳ ಅರ್ಥ ಕೋಶ

ಅ

ಅಳವಿ– ಅಳತೆ
ಅವಾಸೆ– ಅಮಾವಾಸ್ಯೆ
ಅಳಾ- ಅಳುವ
ಅಮುದನು– ಅಮೃತ
ಅಯ್ಯರು– ಬ್ರಾಹ್ಮಣರು
ಅಲ್ಲು- ಹಲ್ಲು
ಅಳಿವು– ನಾಶ
ಅತ್ತರಕ- ಹತ್ತಿರ
ಅಪ್ಪುಂಡು– ಅಪ್ಪುದು। ಒಸಡು
ಅತ್ತು– ಹತ್ತು
ಅಣ್ಣು– ಹಣ್ಣು

ಅಪ್ಪರನೇ-> ಅಪೊರೊ(ತಮಿಳು):ನಂತರ
ಅಣ- ಹಣ
ಅವಿಕೆ-ಮರದ।ಸೌಟು ಲೋಹದ

ಆ

ಆವತ್ತಿಗೆ- ಆಪತ್ತಿಗೆ
ಆಡಲಾದುರು- ಮಾಡಬೇಕು
ಆಕಿದ- ಹಾಕಿದ
ಆಲು- ಹಾಲು
ಆಳಾರು- ಆಳುವರು
ಆವುದು- ಆಗದು
ಆಕಾದ- ಹಾಕುವುದ
ಆಕಿದ- ಹಾಕಿದ

ಇ

ಇಕ್ಕಾ- ಇಡುವ
ಇರಾವರಿಗೆ- ಇರುವವರಿಗೆ
ಇರುತಕಾರಿಗೆ- ಇರುವವರಿಗೆ
ಇರಾದು- ಇರುವುದು

ಈ

ಈಡು- ಸಮಾನ / ಸರಿಹೊಂದು

ಉ

ಉಳ್ಕೊಳಿ- ಮನೆಯುವರಿಗೆ
ಉತ್ತುರಕ->ಉಕ್ಕಾರು(ತ)ಕುಳಿತುಕೊ
ಉರಾ- ಉರಿಯುುವ

ಊ

ಊಪಿನ- ಹೂವಿನ

ಎ

ಎವನಿ- ಯಮನಿಗೆ
ಎರಬೇಕು- ಹೆರು, ಹೆಡೆ
ಎಲುವು- ಎಲುಬು, ಮೂಳೆ
ಎಸರು- ಹೆಸರು
ಎಣ- ಹೆಣ
ಎಲಿ (ತ)- ಇಲಿ
ಎತ್ತ- ಹೆತ್ತ
ಎದುನೂ- ಯಾವುದೂ

ಏ

ಏತ- ಏತಕ್ಕೆ
ಏಳೆ (ತ)- ಬಡವ
ಏಳಾಚಿ- ಹೇಳಿ
ಏದಿಕೆನು- ಯಾವ ದಿಕ್ಕಿಗೂ
ಏಳುತಾಕಾರ- ಹೇಳುವವರು

ಒ

ಒರಸು- ಮಂಚ / ಹಾಸಿಗೆ
ಒಟ್ಟೇಲಿ- ಹೊಟ್ಟೆಯಲ್ಲಿ
ಒರುದಲೆ- ಅರೆತಲೆ
ಒಳ್ಳಾರಿಗೆ- ಒಳ್ಳೆಯುವರಿಗೆ
ಒಯ್ದುದು- ಹೊಯ್ದ, ಬಿದ್ದ
ಒತ್ತು- ಹೊತ್ತು, ಹೊಂದಿಕೊಂಡು
ಒಟ್ಟಲ- ಅಂಟಿಕೊಳ್ಳಲಿಲ್ಲ
ಒಟ್ಟೆ- ಹೊಟ್ಟೆ

ಓ

ಓವಾದು- ಹೋಗುವುದು
ಓತಿ- ಹೋಯಿತು
ಓಕಾಕ- ಹೋಗುವ

ಓವಾರು- ಹೋಗುತ್ತಾರೆ

ಕ

ಕಡಾ- ತೋಡು
ಕಡಕ- ಕಟ್ಟುವುದಕ್ಕೆ
ಕಾಲಿಲೆ- ಕಾಲಿನ
ಕಾಲಕಾ- ಕಾಲಕ್ಕೆ, ಹೊತ್ತಿಗೆ
ಕಾಸಮನಿ- ಅಡಿಗೆ ಮನೆ
ಕಾಯು- ದೇಹ
ಕಿಚ್ಚಲಿ- ಬೆಂಕಿಯಲ್ಲಿ
ಕುಡುಂಬ- ಕುಟುಂಬ
ಕುಚ್ಚಿರೆ- ಚುಚ್ಚಿದರೆ
ಕುರುತಿ- ಕಿವಿಗೆ
ಕುಡುಸು- ಉಂಟಾಗು
ಕುಚ್ಚಲಿ- ಗೂಡು, ಬಿಲ
ಕೂಳಿ- ಕೂಳು, ಅನ್ನ
ಕೇಳುತಾಕಾರ- ಕೇಳುವವರಿಗೆ
ಕೈಯೆ- ಕೈಗೆ
ಕೊರೆ- ಕಮ್ಮಿ, ಕಡಿಮೆ
ಕೊರಂಗು- ಕೋತಿ
ಕೊತ್ತಿಗೆ- ಮೋಜಿಗೆ
ಕೊಮ್ಮಂದು- ತೆಗೆದುಕೊಂಡು ಬಂದು
ಕೂಂಗಿದಾಂಗೆ- ಕೊಗಿದ ಹಾಗೆ
ಕೋಲು- ಅಡ್ಡಿ। ಅಂಕೆ
ಕೊಡದಾರಿಗೆ- ಕೊಡದವರಿಗೆ

ಗ

ಗನವ- ಗಮನಿಸುವವರಿಗೆ
ಗಡಿಯು- ಗಡಿಗೆ

ಚ

ಚಟ್ಟಲಿ- ಬಟ್ಟಲಲ್ಲಿ। ಪಾತ್ರೆ

ಜ

ಜರ್ಕ್ಯಾದು- ತಪ್ಪುವುದು
ಜೇನಿಯೆ- ಜೇನಿಗೆ

ತ

ತತ್ತಿ- ಮೊಟ್ಟೆ
ತನಿಯೆ- ತನಗೆ
ತೋಣೆ(ತ)- ಸಹಾಯ, ಜೊತೆ
ತಿರಿಸಿ- ತಿರುಗಿಸಿ
ತೆರಾದು- ತೆರೆ। ತೆಗೆ
ತೇಯುದ- ತೆಗೆದುಕೊ
ತಿರುಸಿ- ತಿರುಗಿಸಿ, ಮುಂದೆಮಾಡಿ
ತುಳ್ಳಾದು- ತಿಳಿಯುವುದು
ತೆಯುಕ- ಕೊಂಡುಕೊಳ್ಳುವುದಕ್ಕೆ ತೆಗೆಯುವುದಕ್ಕೆ।
ತದುಂಬು- ತುಳುಕು
ತೂಂತು- ತೂತು
ತಟ್ಟಿ- ಹೊಸ್ತಿಲು

ದ

ದೆಸೆ- ಅದೃಷ್ಟ। ವಿಧಿ
ದ್ರೋಗ- ದ್ರೋಹ

ನ

ನೋಯಿ- ನೋವು
ನೀರುಲಿ- ನೀರಿನಲ್ಲಿ
ನೀಂಜಿಕಿ- ಈಜಲು
ನೆಡಾದು- ನಡೆಯುವುದು

ನಡಾದು- ನಡೆಯುವುದು
ನೀಚಕ- ನೀಟುವುದು
ನಾಲಿಕೆ- ನಾಲಿಗೆ

ಪ

ಪಡಾದು- ಬೀಳುವುದು
ಪಟ್ಟಿ (ತ)- ಬಿದ್ದ
ಪಾವಿಲ್ಲ- ಪಾಪವಿಲ್ಲ
ಪಳಗ (ತ)- ಹಳೆಯದಾಗು
ಪಗೆ- ಹಗೆ, ವೈರಿ
ಪೊರ್ಲ್ತಾರು- ಧೈರ್ಯವಂತರು। ತಾಕತ್ತಿದ್ದವರು
ಪೇವಾ- ಉರಿಯುತ್ತಿರುವ
ಪುಲಿ (ತ)- ಹುಲಿ
ಪುಕ್ಕ- ಪೃಷ್ಠ। ಹಿಂಭಾಗ
ಪಳಗು- ಅಭ್ಯಾಸ, ರೂಢಿ

ಬ

ಬರಾವರಿ- ಬರುವುದಕ್ಕೆ
ಬಾಯಿಲೆ- ಬಾಯಿಗೆ
ಭೂಮಿನ- ಭೂಮಿಯನ್ನ
ಬೆಳುತ- ಬೆಳ್ಳಗಿರುವುದು
ಬೆಳಗಾದು- ಶೋಭಿಸು/ ಪೂರ್ಣವಾಗು
ಬಟಿಳಕ್ಕೆ- ಬಟ್ಟಲು, ತಟ್ಟೆ
ಬಲ್ಲ- ಬರಲಿಲ್ಲ
ಬೆಟ್ಟುಂದಾರು- ಬೆಟ್ಟಾದರೂ
ಬಯಿಲು- ಹೊರಗೆ
ಬೆಟ್ಟುನ- ಬೆಟ್ಟನ್ನು
ಬಳ- ತುಂಬಿರದೆ. ಸರಿಯಾಗಿರದೆ

ಮ

ಮದಿ (ತ)- ಮತಿ, ಬುದ್ಧಿ
ಮನೆಯೆ- ಮನೆಗೆ
ಮುಂದೆ- ಸಮಯಕ್ಕೆ, ಮುಂಚೆ
ಮಚ್ಚುಮನೆ- ಉಗ್ರಾಣ
ಮುಡಿಚಿ- ಮುಗಿಸಿ
ಮಿಂಚಿರೆ- ಮೀರಿದರೆ
ಮೆಂಡ್ರಿಸಿ (ತ)- ಮೆಳ್ಳಗಣ್ಣು. ಕಾಕದೃಷ್ಟಿ
ಮೊಡವ- ಅಂಗವಿಕಲ

ಲ

ಲಿಕ್ಕಿಲ- ಅಂತೆ

ಸ

ಸಪುರಿಸು- ಚಪ್ಪರಿಸು
ಸಿಗ್ಗು- ನಾಚಿಕೆ
ಸನಿ- ಶನಿ
ಸೂಡಂ (ತ)- ಕರ್ಪೂರ
ಸೆಲ್ವ (ತ)- ನಿಧಿ
ಸಾವಾದು- ಸಾಯುವುದು
ಸಿಮ್ಮ- ಸುಮ್ಮನೆ
ಸಳಿ- ನೆಗಡಿ
ಸರಿಪ್ಪಡ- ಸರಿಯಾಗು
ಸಂಗ್ರ- ಶಂಕರ
ಸಮುದ್ರ- ಸಮುದ್ರ
ಸೀರುತಕಾರರು- ಒಳ್ಳೆಯ ಸುವಾಸ. ಸತ್ವವಂತರು

ಕನ್ನಡ ಸಂಖ್ಯಾಪುಂಜ- ಒಂದು ಆಕೃತಿಮಾತ್ಮಕ ಅಧ್ಯಯನ

● ಎ. ಮುರಿಗೆಪ್ಪ

೧. ಸಂಖ್ಯಾವಾಚಿಗಳನ್ನು ನಾಮಪದದ ಒಂದು ಪ್ರಕಾರವೆಂದು ಗುರುತಿಸಲಾಗಿದೆ. ನಾಮಪದಗಳಂತೆ ಸಂಖ್ಯಾವಾಚಿಗಳು ಕರ್ತೃಪದಸ್ಥಾನದಲ್ಲಿ ನಿಂತು ವಿಭಕ್ತಿ ಪ್ರತ್ಯಯಗಳನ್ನು ಸ್ವೀಕರಿಸುತ್ತವೆ. ಉದಾಹರಣೆಗಾಗಿ:- ಆರಕ್ಕೆ ಮೂರನ್ನು ಸೇರಿಸು. ಎಂಟರಲ್ಲಿ ಮೂರನ್ನು ಕಳೆ, ಒಂಬತ್ತನ್ನು ಮೂರರಿಂದ ಭಾಗಿಸು ಮುಂತಾದ ರಚನೆಗಳನ್ನು ಗಮನಿಸಬಹುದು.

ಸಂಖ್ಯಾವಾಚಿಗಳಲ್ಲಿ ಒಂದು ಎರಡು......ಒಂಬತ್ತು, ಹತ್ತು, ನೂರು, ಸಾವಿರದಂತಹ ಕೆಲವೊಂದು ಸಂಖ್ಯೆಗಳು ಮೂಲತಃ ಸಂಖ್ಯಾವಾಚಿಗಳು. ಹದಿನೈದು, ನಲವತ್ತಾರು, ಒಂದೂವರೆಯಂತಹ ಇನ್ನು ಕೆಲವು ಸಂಖ್ಯೆಗಳು ಸಾಧಿತ ಸಂಖ್ಯಾವಾಚಿಗಳು. ಸಾಧಿತಸಂಖ್ಯಾವಾಚಿಗಳನ್ನು ಸಂಖ್ಯಾವಾಚಿಗಳನ್ನು ಸಂಖ್ಯಾಪುಂಜಗಳೆಂದು ಕರೆಯಬಹುದು. ಈ ಸಂಖ್ಯಾಪುಂಜಗಳಲ್ಲಿ ಬರುವ ಹದಿನಾರು, ನೂರಿಪ್ಪತ್ತು ಮೊದಲಾದ ಸಂಖ್ಯಾಪುಂಜಗಳನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

ಈ ಸಂಖ್ಯಾಪುಂಜಗಳಿಗೆ ಸಂಬಂಧಿಸಿದಂತೆ ಈವರೆಗಿನ ಅಧ್ಯಯನಗಳು, ಗುಣಕ, ವ್ಯವಕಲನ ಮತ್ತು ಸಂಕಲನಾ ರೀತಿಯ ಗಣಿತಾತ್ಮಕ ಸಂಬಂಧಗಳನ್ನು ಗುರುತಿಸಿವೆ. ಉದಾಹರಣೆಗೆ, ಇಪ್ಪತ್ತು, ನಲವತ್ತು, ಇನ್ನೂರು ರಂತಹ ದಶ, ಶತ ರಚನೆಗಳಲ್ಲಿಯ ಆಕೃತಿಮಾಗಳಲ್ಲಿ ಪರಸ್ಪರ ಗುಣಾತ್ಮಕ ಸಂಬಂಧವನ್ನು ಗುರುತಿಸಲಾಗಿದೆ. ಅಂದರೆ ಎರಡು × ಹತ್ತು = ಇಪ್ಪತ್ತು, ನಾಲ್ಕು × ಹತ್ತು = ನಲವತ್ತು ಎರಡು × ನೂರು = ಇನ್ನೂರು, ಇತ್ಯಾದಿ 'ಒಂಬತ್ತು' ಎಂಬ ಸಂಖ್ಯಾವಾಚಿಯಲ್ಲಿ 'ಹತ್ತರಲ್ಲಿ ಒಂದನ್ನು ಕಳೆ' ಎಂಬ ವ್ಯವಕಲನಾತ್ಮಕ ಗಣಿತ ಸಂಬಂಧವನ್ನು ಒಂಬತ್ತು ಪದದ ಇತಿಹಾಸದಲ್ಲಿ ಗುರುತಿಸಲಾಗಿದೆ, ಇನ್ನು ಹದಿನಾಲ್ಕು, ಮೂವತ್ತೊಂದು ಒಂದೂವರೆ, ಎಂಬ ರಚನೆಗಳಲ್ಲಿ ಹತ್ತು + ನಾಲ್ಕು = ಹದಿನಾಲ್ಕು, ಮೂವತ್ತು + ಒಂದು = ಮೂವತ್ತೊಂದು, ಒಂದು + ಅರ್ಧ = ಒಂದೂವರೆ ಎಂಬ ಸಂಕಲನ ಸಂಬಂಧವಿದೆ ಎಂದು ಗುರುತಿಸಲಾಗಿದೆ.

೦.1 ಪ್ರಸ್ತುತ ಲೇಖನದಲ್ಲಿ ಸಂಕಲನವೆಂದು ಗುರುತಿಸಲಾದ ದಶೋತ್ತರ, ಶತೋತ್ತರ ಮತ್ತು ಸಾವಿರೋತ್ತರ ರಚನೆಗಳನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಬ್ಯೂಲಾ (1977) ಅವರು ಸಂಖ್ಯಾಪುಂಜಗಳನ್ನು ಕುರಿತು ಚರ್ಚಿಸುತ್ತ ಮೇಲ್ಕಂಡ ಸಂಕಲನಾತ್ಮಕ ಸಂಖ್ಯಾಪುಂಜಗಳನ್ನು ಸಂಯೋಜಕ ಸಮಾಸಗಳೆಂದು ತಿಳಿಸಿ ಪದಿನೊನ್ರು, ಪದಿನೆಟ್ಟು ಮೊದಲಾದ ತಮಿಳು ಉದಾಹರಣೆಗಳನ್ನು ನೀಡಿ ಕೆಳಗಿನ ಸೂತ್ರವನ್ನು ಮಂಡಿಸಿದ್ದಾರೆ.

ಸಂಖ್ಯೆ + [ಸಂಖ್ಯೆ / ನಾಮ / ಪುರುಷ ಪ್ರತ್ಯಯ] < ಸಂಖ್ಯೆ + ಇನ್ + [ಸಂಖ್ಯೆ / ನಾಮ / ಪುರುಷ ಪ್ರತ್ಯಯ]

ಮೇಲಿನ ಸೂತ್ರವನ್ನು ಗಮನಿಸಿದಾಗ ಸಂಖ್ಯೆಯ ನಂತರ ಸಂಖ್ಯೆ, ನಾಮ ಅಥವ ಪುರುಷ ಪ್ರತ್ಯಯ ಬಂದಾಗ ಇವೆರಡರ ನಡುವೆ–ಇನ್- ಎಂಬ ಪ್ರತ್ಯಯ ವೊಂದರ ಆಗಮವನ್ನು ಗುರುತಿಸಿರುವುದು ಗೋಚರಿಸುತ್ತದೆ. ಹಾಗಾದರೆ ಈ -ಇನ್- ಪ್ರತ್ಯಯ ಯಾವುದು ? ಇದರ ಕ್ರಿಯೆ ಏನು ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಬ್ಯೂಲಾ ಅವರ ಅಧ್ಯಯನವು ಈ ಪ್ರತ್ಯಯವು ಸಂಯೋಜಕ ಪ್ರತ್ಯಯ ಎಂಬ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಹಾಗಾದರೆ ತಮಿಳು/ಕನ್ನಡದಲ್ಲಿ -ಇನ್- ಸಂಯೋಜಕ ಪ್ರತ್ಯಯವೆ. ಅಲ್ಲದೆ ಕನ್ನಡ ಮತ್ತು ದಶ. ಶತ. ಸಾವಿರೋತ್ತರ ರಚನೆಗಳಲ್ಲಿ ಸಂಯೋಜಕ ಪ್ರತ್ಯಯವು ನಿಯುವಾಗಿದೆಯೇ? ಇದೂವರೆಗಿನ ಅಧ್ಯಯನಗಳು ಈ ಪ್ರತ್ಯಯವನ್ನು ಸಂಯೋಜಕ ಪ್ರತ್ಯಯ (Link morph) ಎಂದು ಕರೆದಿವೆ. ಅಂದರೆ ಎರಡು ಆಕೃತಿಮಾಗಳನ್ನು ಸೇರಿಸುವ ಸ್ವತಃ ಕೋಶಾರ್ಥವನ್ನಾಗಲಿ, ವ್ಯಾಕರಣಾರ್ಥವನ್ನಾಗಲಿ ಹೊಂದಿರದ, ಮರ + ಅ = ಮರ + ದ್ + ಅ ಎಂಬಲ್ಲಿ ಕಂಡುಬರುವ -ದ- ನಂತಹ ರಚನಾ ಅವಶ್ಯಕ ಘಟಕ.

ಬ್ಯೂಲಾ ಅವರು ತಿಳಿಸುವಂತೆ ಮೇಲಿನ ರಚನೆಗಳನ್ನು ಸಂಯೋಜಕ ರಚನೆಗಳೆಂದು ಒಪ್ಪಿಕೊಂಡರೆ. ಅವುಗಳಲ್ಲಿರಡು ಘಟಕಗಳ ನಡುವೆ ಸಂಯೋಜಕ ಪ್ರತ್ಯಯವೊಂದರ ಅವಶ್ಯಕತೆ ಕಂಡುಬರುತ್ತದೆ. ಕನ್ನಡವ ಸಂಖ್ಯಾಪುಂಜಗಳಲ್ಲಿ ಸಂಯೋ ಪ್ರತ್ಯಯವನ್ನು ಒಂದೂಕಾಲು, ಮೂರುವರೆ ಯಂತಹ ಸಂಖ್ಯಾಪುಂಜ ರಚನೆಗಳಲ್ಲಿ ಕಾಣಬಹುದು. ಇವುಗಳಲ್ಲಿರುವ ಘಟಕಗಳೆರೆಡರ ನಡುವೆ ಬರುವ -ಉ- ಸಂಯೋಜಕ ಪ್ರತ್ಯಯವಾಗಿದ್ದು. 'ರಾಮನೂ ಕೃಷ್ಣನೂ' ಎಂಬ ರಚನೆಯುಲ್ಲಿ ಕಾಣಬರುವ ಸಂಯೋಜಕಾರ್ಥವನ್ನು ನೀಡುತ್ತದೆ. ತಮಿಳು ಭಾಷೆಯುಲ್ಲಿಯೂ 'ಒಣ್ಣೇಕಾಲ್, ಮೂಣೇ ಮುಕ್ಕಾಲ್' ಎಂಬ ರಚನೆಗಳಲ್ಲಿ -ಏ-ಎಂಬುದು ಸಂಯೋಜಕ ಪ್ರತ್ಯಯ.

ಈ ರೀತಿಯ ಸಂಯೋಜಕಾರ್ಥ ಪ್ರತ್ಯಯ -ಉ, ಕನ್ನಡದ ದಶ, ಶತ, ಸಾವಿರೋತ್ತರ ರಚನೆಗಳಲ್ಲಿ ಇಲ್ಲದೆ ಇರುವುದರಿಂದ ದಶೋತ್ತರಾದಿ ರಚನೆಗಳು ಸಂಯೋಜಕ ರಚನೆಗಳೆ? ಎಂಬ ಅನುಮಾನ ಬರುತ್ತದೆ. ಷಣ್ಮುಗಂ (1966), ಪಣಿಕ್ಕರ್ (1968), ಕಾಲ್ಡ್‌ವೆಲ್ (1974), ಶೆಟ್ಟಿ (1981), ವೇಲುರುಗನ್ (1982), ಮುಂತಾದವರು ಸಹ ಈ ರಚನೆಗಳನ್ನು ಸಂಕಲನ ರಚನೆಗಳೆಂದೇ ಪರಿಗಣಿಸಿದ್ದು ಕಂಡುಬರುತ್ತದೆ. ಮೇಲಿನ ವಿದ್ವಾಂಸರು -ಇ(ನ್)- ಪ್ರತ್ಯಯವನ್ನು ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸದೆ ಅದನ್ನು ಆಖ್ಯಾತ ಹೆಚ್ಚುವರಿ (Inflectional Increment) ಎಂದು ಭಾವಿಸಿದಂತೆ ಕಾಣುತ್ತದೆ.

೦. 2. ಈ ಘಟ್ಟದಲ್ಲಿ ಕನ್ನಡದ ಇಪ್ಪತ್ತೊಂದು, ನಲವತ್ತೆರಡು ಎಂಬ ಸಂಗತಿಗಳನ್ನು ಇಪ್ಪತ್ತರ ಒಂದು, ನಲವತ್ತರ ಎರಡು, ಎಂಬ ಷಷ್ಠೀ ವಿಭಕ್ತಿ ರಚನೆಗಳಾಗಿ ಪರಿಗಣಿಸಿ ನೋಡಬಹುದು. ಈ ಎಲ್ಲ ರಚನೆಗಳು ಗ್ರಾಂಥಿಕ ಭಾಷೆಯಲ್ಲಾಗಲಿ, ಆಡುನುಡಿಯಲ್ಲಾಗಲಿ ಕಾಣಸಿಗದು. ಆದರೆ ಈ ರೀತಿಯ ರಚನೆಗಳಿಗೆ ಸುಳುಹಾಗಿ ಉತ್ತರ ಕರ್ನಾಟಕದ ಆಡುನುಡಿಯಲ್ಲಿ ಇಪ್ಪತ್ತೊಂಬತ್ತು ಎಂಬ ರೂಪ ಸಿಗುತ್ತದೆ. ಈ ರೂಪವನ್ನು ಇಪ್ಪತ್ತರ ಒಂಬತ್ತು ಎಂಬ ರಚನೆಯ ಸಂಕ್ಷೇಪ ರೂಪವೆಂದು ಪರಿಗಣಿಸಬಹುದು. ಒಂದು ವೇಳೆ ಇಪ್ಪತ್ತೊಂಬತ್ತು ರೂಪವು, ಇಪ್ಪತ್ತರ ಒಂಬತ್ತು ರಚನೆಯ ಸಂಕ್ಷೇಪ ರೂಪವೆಂದು ಒಪ್ಪಿಕೊಂಡರೆ ಇಲ್ಲಿರುವ ಪ್ರತ್ಯಯ -ಅರ್-ನ ವಿಶ್ಲೇಷಣೆಯ ಅಗತ್ಯ ಕಂಡುಬರುತ್ತದೆ. ಕನ್ನಡ ಭಾಷೆಯಲ್ಲಿ ಒಂದು ಸಂಖ್ಯಾವಾಚಿಯ ಮುಂದೆ ಸ್ವರದಿಂದ ಆರಂಭಿಸುವ ವಿಭಕ್ತಿ ಪ್ರತ್ಯಯ ಬಂದಾಗ ಅವೆರಡರ ನಡುವೆ -ಅರ್-ಆಗಮವಾಗುತ್ತದೆ. ಇದು ನಿಯಮ. ಈ ನಿಯಮವನ್ನು ಗಮನದಲ್ಲಿರಿಸಿ ವಿಶ್ಲೇಷಿಸಿದಾಗ ಮೇಲಿನ ರಚನೆಯಲ್ಲಿ ಷಷ್ಠಿ ವಿಭಕ್ತಿ ಪ್ರತ್ಯಯ –ಅ– ಮತ್ತು ಅದಕ್ಕೆ ಪೂರ್ವಭಾವಿಯಾಗಿ ಆಖ್ಯಾತ ಹೆಚ್ಚುವರಿ -ಅರ್- ಬಂದಿರುವುದು ಗೋಚರಕ್ಕೆ ಬರುತ್ತದೆ. ಈ ರಚನೆಯನ್ನು ಆಧರಿಸಿ ಹನ್ನೊಂದು, ಹದಿನಾಲ್ಕು, ಮೂವತ್ತೆರಡು ರಂತಹ ದಶೋತ್ತರ ರಚನೆಗಳನ್ನು ಷಷ್ಠಿ ವಿಭಕ್ತಿ ರಚನೆಗಳೆಂದು ಕರೆಯಬಹುದು.

ಈ ಪ್ರಮೇಯ ಪೂರ್ವಕ್ಕೆ (hypolhenin) ಪೂರಕವಾಗಿ ಕನ್ನಡದ ಗ್ರಾಂಥಿಕ ಮತ್ತು ಆಡುಭಾಷೆಯಲ್ಲಿಯ ಸಾವಿರೋತ್ತರ ರಚನೆಗಳನ್ನು ಗಮನಿಸಬಹುದು. ಸಾವಿರದೊಂದು, ಸಾವಿರದೆಂಟುನೂರಾ, ಇತ್ಯಾದಿ ರಚನೆಗಳಲ್ಲಿ ಆಖ್ಯಾತ ಹೆಚ್ಚುವರಿ -ದ್- ಹಾಗೂ ಷಷ್ಠಿ ವಿಭಕ್ತಿ ಪ್ರತ್ಯಯ -ಅ ಇರುವುದು ಕಂಡುಬರುತ್ತದೆ. ಸಾವಿರ ಸಂಖ್ಯಾವಾಚಿಯು ಅದನೂ ಅಕಾರಾಂತ ಮಾನವೇತರ ವರ್ಗಕ್ಕೆ ಸೇರುವುದೇ ಕಾರಣವಾಗಿ ಆಖ್ಯಾತ ಹೆಚ್ಚುವರಿಯಾಗಿ -ಅರು ಗೆ ಬದಲು –ದ್–

ಬರುತ್ತದೆ. ಇದು ಕನ್ನಡದಲ್ಲಿ ನಿಯತಕ್ರಿಯೆ ಸಾವಿರದ ಐದು ಕಂತುಗಳು, ಅಥವ ಐದು ಸಾವಿರದ ಕಂತುಗಳು ಹಾಗೂ ಸಾವಿರದ ಘಟಕ ಎಂಬ ರಚನೆಗಳಲ್ಲಿ ಇದನ್ನು ಕಾಣಬಹುದು.

೦. 3. ಕನ್ನಡದ ಶತೋತ್ತರ ರಚನೆಗಳಲ್ಲಿ ಆಖ್ಯಾತ ಹೆಚ್ಚುವರಿ (-ಅರ-/ -ರ-) ಇಲ್ಲದೇ ನೇರವಾಗಿ ಷಷ್ಠಿ ವಿಭಕ್ತಿ ಪ್ರತ್ಯಯ -ಅ- ಸೇರಿ ನೂರಾ ಒಂದು, ಮುನ್ನೂರಾ ನಲವತ್ತೆಂಟು ಎಂಬ ರಚನೆಗಳು ಸಿದ್ಧಿಸುತ್ತವೆ. ಈ ರಚನೆಗಳಲ್ಲಿ ಆಖ್ಯಾತ ಹೆಚ್ಚುವರಿ ಇಲ್ಲದಿರುವುದು ಐತಿಹಾಸಿಕ ಘಟನೆಯಾಗಿರಲು ಸಾಕು. ಒಂದು ಘಟ್ಟದವರೆಗೆ ಆಖ್ಯಾತ ಹೆಚ್ಚುವರಿ -ಅರ್- ಈ ರಚನೆಗಳಲ್ಲಿದ್ದು. ಸತತವಾಗಿ ಎರಡು ರಕಾರಗಳು ಕಂಡುಬಂದವು. ಮುಂದೆ ಭಾಷೆಯ ಸರಳೀಕರಣವೇ ಕಾರಣವಾಗಿ ಅಂದರೆ -ರ- ಕಾರದ ಸತತ ಉಚ್ಚಾರವು ಒಂದು ರಕಾರವನ್ನು ಬಿಟ್ಟುಕೊಡುವುದರ ಮೂಲಕ ಈಗಿನ ನೂರಾ ಎಂಟು. ನೂರಾ ಇಪ್ಪತ್ತು ರೂಪಗಳು ಸಿದ್ಧಿಸಿರಲು ಸಾಕು. ಅಥವ ಈ ಷಷ್ಠಿ ವಿಭಕ್ತಿ ರಚನೆಯೂ ಒಂದಕ್ಕಿಂತ ಹೆಚ್ಚು ಅರ್ಥವನ್ನು ನೀಡುತ್ತಿದ್ದಿರಬಹುದು. ಮುಂದೆ ಅರ್ಥ ಸಂದಿಗ್ಧತೆಯನ್ನು ನಿವಾರಿಸಲು ಮತ್ತು ಅವೆರೆಡರ ನಡುವಿನ ಅರ್ಥವ್ಯತ್ಯಾಸವನ್ನು ವಿಶದ ಪಡಿಸಲು ಒಂದು ಕಡೆ ಷಷ್ಠಿವಿಭಕ್ತಿ ರಚನೆಯನ್ನು ಪೂರ್ತಿಯಾಗಿ ಉಳಿಸಿಕೊಂಡರೆ ಇನ್ನೊಂದು ಕಡೆ ಷಷ್ಠಿ ವಿಭಕ್ತಿಯನ್ನು ನೇರವಾಗಿ ಸೇರಿಸಿ ನೂರಾ-ಎಂಬ ರಚನೆಗಳನ್ನು ಬೆಳೆಸಿಕೊಂಡಿರಬಹುದು.

ಅದರಂತೆಯೇ ದಶೋತ್ತರ ರಚನೆಗಳಲ್ಲಿಯೂ ಸಹ ಅರ್ಥ ವ್ಯತ್ಯಾಸವನ್ನು ಕಾಣಿಸಲು ಷಷ್ಠಿ ವಿಭಕ್ತಿ ಪೂರ್ವ, ಅಖ್ಯಾತ ಹೆಚ್ಚುವರಿ ಲೋಪವಾಗಿ ಷಷ್ಠಿ ವಿಭಕ್ತಿ ಪ್ರತ್ಯಯ, -ಅ- ನೇರವಾಗಿ ಸೇರಿರುವ ಸಾಧ್ಯತೆ ಇದೆ. ಉದಾಹರಣೆಗೆ 'ಇಪ್ಪತ್ತರ ಒಂಬು ಕಟ್ಟು' ಎಂಬಲ್ಲಿ ಸಂಖ್ಯಾವಾಚಿ + ಅಖ್ಯಾತ ಹೆಚ್ಚುವರಿ + ಷಷ್ಠಿ ವಿಭಕ್ತಿ ಪ್ರತ್ಯಯ ಇದ್ದು 'ಇಪ್ಪತ್ತರ ಘಟಕಕ್ಕೆ ಸೇರಿದ ಒಂದು' ಎಂಬರ್ಥದಲ್ಲಿ ಬರುವ 'ಇಪ್ಪತ್ತ ಒಂದು' ಎಂಬಲ್ಲಿ ಅದೇ ರೀತಿ 'ಮೂವತ್ತ ಒಂದು, ನಲವತ್ತ ಒಂದು' ಎಂಬ ರಚನೆಗಳಲ್ಲಿ ಸಂಖ್ಯಾವಾಚಿ + ವಿಭಕ್ತಿ ಪ್ರತ್ಯಯ ಇರುವುದನ್ನು ಗಮನಿಸಬಹುದು.

ಕನ್ನಡದ ಹನ್ನೊಂದು. ಹನ್ನೆರಡು......ಹದಿನೆಂಟು. ರಚನೆಗಳಲ್ಲಿಯ-ಇನ್-ಪ್ರತ್ಯಯವು, ವಿಭಕ್ತಿ ಪೂರ್ವ, ಆಖ್ಯಾತ ಹೆಚ್ಚುವರಿ ಘಟಕವಾಗಿದ್ದು ಮುಂದೆ ವಿಭಕ್ತಿ ಪ್ರತ್ಯಯದ ಸಾಧ್ಯತೆಯನ್ನು ಕಾಣಿಸುತ್ತವೆ. ಮೇಲಿನ ವಾದಕ್ಕೆ ಈ ಉದಾಹರಣೆಗಳು ಪುಷ್ಟಿಯನ್ನು ನೀಡುತ್ತವೆ.

೦. 4. ಸಂಖ್ಯಾವಾಚಿಯ ಮುಂದೆ ಸ್ವರ ಅಥವ ಸ್ವರಾದಿ ವಿಭಕ್ತಿ ಪ್ರತ್ಯಯ ಪರವಾದಾಗ ಸಂದರ್ಭಕ್ಕೆ ತಕ್ಕಂತೆ -ಅರ್ ಅಥವ -ದ್ ಆಗಮವಾಗುತ್ತದೆ, ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ ಹನ್ನೊಂದು, ಹನ್ನೆರಡು...ಹದಿನೆಂಟು ಎಂಬ ಸಂಖ್ಯಾ ಪುಂಜಗಳಲ್ಲಿ -(ಇ)ನ್ ಆಗಮವಾದುದರ ಬಗ್ಗೆ ವಿವರಣೆ ಬೇಕಾಗುತ್ತದೆ, ತಮಿಳು, ಮಲೆಯಾಳಂ ಭಾಷೆಗಳಲ್ಲಿಯೂ ಪದಿನೊನ್ರು, ಪದಿರೆಂಡು ಮುಂತಾದ ರಚನೆಗಳು ಬಳಕೆಯಲ್ಲಿವೆ. ಈ ರಚನೆಗಳಲ್ಲಿ -ಇನ್ / -ಇ ಆಗಮವಾಗಿ ಬಂದಿದೆ. ಇವೆ ಸಂಖ್ಯಾ ಪುಂಜಗಳು ಹಳಗನ್ನಡದಲ್ಲಿಯೂ ಲಭ್ಯವಿದ್ದು ಮುಂದೆ ಆದಿ ಪಕಾರವು ಹಕಾರವಾಗಿ ಮಾರ್ಪಟ್ಟು ಪ್ರಸ್ತುತ ಕನ್ನಡದಲ್ಲಿ ಬಳಕೆಯಲ್ಲಿರುವ ಕಾರಣ -ಅ ಕಾಗೆ ಬದಲಾಗಿ ಪೂರ್ವದ್ರಾವಿಡ ಎನ್ನಬಹುದಾದ -ಇನ್ ಆಖ್ಯಾತ ಪೆಚ್ಚುವರಿಯಾಗಿ ಉಳಿದುಕೊಂಡು ಬಂದಿದೆ ಎಂದು ವಿವರಿಸಬಹುದು.

೦. 5. ಸಂಖ್ಯಾವಾಚಿಗಳೆರಡರ ಆಕೃತಿಮಾತ್ಮಕ ರಚನೆಗಳಲ್ಲಿ ಕಾಣಬರುವ ಘಟಕವು ಕನ್ನಡ. ತಮಿಳುಗಳೆರಡರಲ್ಲಿಯೂ ಷಷ್ಠಿ ವಿಭಕ್ತಿ ಪ್ರತ್ಯಯ ಹಾಗೂ ಪ್ರತ್ಯಯೀಕರಣ ಕ್ರಿಯೆಯನ್ನು ಪ್ರತಿನಿಧಿಸುತ್ತದೆ. ಒಂದುವೇಳೆ ಬ್ಲೂಲಾ ಅವರು ಹೇಳುವಂತೆ ಎರಡರ ನಡುವಿನ ಘಟಕ ಕೇವಲ ಸಂಯೋಜಕವಾಗಿದ್ದರೆ ಅದು ತಮಿಳು ಕನ್ನಡಗಳೆರಡರಲ್ಲಿಯೂ ಷಷ್ಠಿ ವಿಭಕ್ತ ಪ್ರತ್ಯಯವೇ ಏಕೆ? ಇದು ಕೇವಲ ಕಾಕತಾಳೀಯ ಇರಲಾರದು.

೦. 6. ಮೇಲಿನ ವಿಶ್ಲೇಷಣೆಯಿಂದ ದಶೋತ್ತರ. ಶತೋತ್ತರ, ಸಾವಿರೋತ್ತರ ರಚನೆಗಳಲ್ಲಿ. ರಚನೆಯು ಷಷ್ಠಿ ವಿಭಕ್ತಿ ವಾಕ್ಯರಚನೆಯಾಗಿ ಆರಂಭಿಸಿ ಮುಂದೆ ಕೆಲವೆಡೆ ಆಖ್ಯಾತ ಪೆಚ್ಚುವರಿಯನ್ನುಳಿದ ಆಕೃತಿಮಾತ್ಮಕ ರಚನೆಗಳಾದವು ಎಂದು ಹೇಳಬಹುದು. ಈ ರಚನೆಗಳಲ್ಲಿ ಸಂಖ್ಯೆಗಳೆರಡರ ನಡುವೆ ಷಷ್ಠಿ ವಿಭಕ್ತಿ ಸಂಬಂಧವಿದೆಯೇ ವಿನಹ ಈ ವರೆಗೆ ತಿಳಿದುಕೊಂಡಂತೆ ಸಂಕಲನಾತ್ಮಕ ಗಣಿತ ಸಂಬಂಧವಲ್ಲ. ಈ ಘಟ್ಟದಲ್ಲಿ ಈ ರಚನೆಗಳಲ್ಲಿ ಕಂಡುಬರುವ ಫಲಿತಾರ್ಥವನ್ನು ಗಮನದಲ್ಲಿರಿಸಿ ಷಷ್ಠಿ ವಿಭಕ್ತಿಯಲ್ಲಿ ಸಂಕಲನಾತ್ಮಕ ಅರ್ಥವನ್ನು ಸಹ ನಾವು ಕಾಣಬಹುದು.

೦. 7. ಲೇಖನ ಮುಕ್ತಾಯಕ್ಕೆ ಮೊದಲು ಈ ಸಂಖ್ಯೆಗಳೆರಡರ ನಡುವೆ ಷಷ್ಠಿ ವಿಭಕ್ತಿ ಪ್ರತ್ಯಯವೇ ಏಕೆ ಬರುತ್ತದೆ? ಎಂಬುದನ್ನು ಚರ್ಚಿಸಬಹುದು. ಷಷ್ಠಿಯನ್ನುಳಿದ ವಿಭಕ್ತಿಗಳು ನಾಮಪದ ಮತ್ತು ಕ್ರಿಯಾಪದಗಳ ನಡುವಿನ ಸಂಬಂಧವನ್ನು ಸೂಚಿಸುತ್ತವೆ. ನಾಮವಾಚಿಗಳೆರಡರ ನಡುವಿನ ಸಂಬಂಧವನ್ನು ಕೇವಲ ಷಷ್ಠಿ ವಿಭಕ್ತಿ ಮಾತ್ರ ಕಾಣಿಸಬಲ್ಲುದು. ಈ ಕಾರಣದಿಂದಾಗಿ, ಕ್ರಿಯೆಯಿಲ್ಲದ, ನಾಮಪದಕ್ಕೆ ಸಮನಾದ ಸಂಖ್ಯೆಗಳೆರಡರ ನಡುವೆ ಕೇವಲ ಷಷ್ಠಿ ವಿಭಕ್ತಿ ಮಾತ್ರ ಬರಬಲ್ಲದು.

ಸಹಾಯಕ ಗ್ರಂಥಗಳು :

1. ಬ್ಯೂಲ ಜಾನ್ಸಿ 1977. 'Numerals, changes from old Tamil to Modern Tamil' Seminar on Historical linguistics, Annamalainagar.

2. ಕಾಲ್ಡ್‌ವೆಲ್ ರಾಬರ್ಟ 1974. A Comparative Grammar of the Dravian or South Indian languages, Oriental Books reprint Corpora_ion New Delhi.

3. ಪಣಿಕ್ಕರ್ ಜಿ. ಕೆ. 1968. 'The structure of Dravidian Numerals' Seminar on comaprative Dravidian Annamalainagar.

4. ಶೆಟ್ಟಿ ರಾಮಕೃಷ್ಣ ಟಿ. 1981. Numerals in Bunts tulu and spoken tamil AIUTTA Annamalainagar.

೮. ರಾಷ್ಟ್ರೀಯವಾದಿ ಡಾ ಬಿ. ಆರ್. ಅಂಬೇಡ್ಕರರು

● ಎನ್. ಎ. ಪಾಟೀಲ

ಡಾ. ಅಂಬೇಡ್ಕರರು ಈ ಶತಮಾನದ ಒಬ್ಬ ಮಾನವತಾವಾದಿ, ಅರ್ವಾಚೀನದ ಮನು, ಹುಟ್ಟುಹೋರಾಟಗಾರ, ಅಗಾಧ ಪಾಂಡಿತ್ಯ ಸಂಪನ್ನ, ಶಿಕ್ಷಣ ತಜ್ಞ, ಕಾಯದೆಯಲ್ಲಿ ನಿಷ್ಣಾತ, ಪತ್ರಿಕೋದ್ಯಮಿ, ಸಂವಿಧಾನಿ. ಸೃಜನಶೀಲ ಬರಹಗಾರ ಮೂಕರ ತುಳಿದವರ ಹತ್ತಿಕ್ಕಲ್ಪಟ್ಟವರ ಹಕ್ಕು ಮತ್ತು ಸ್ವಾತಂತ್ರ್ಯಗಳ ಪ್ರವಾದಿ, ಅಲ್ಪಸಂಖ್ಯಾಕರ ಹಕ್ಕುಗಳ ಸಂರಕ್ಷಕ ಮುಂತಾದ ಉಪನಾಮಗಳನ್ನು (Epithets) ಅವರಿಗೆ ಕೊಡಬಹುದು. ಗಾಂಧೀಜಿ ಮತ್ತು ಡಾ. ಅಂಬೇಡ್ಕರರಲ್ಲಿ ಪರಸ್ಪರ ತೀಕ್ಷ್ಣ ರಾಜಕೀಯ ಮತಭೇದವಿದ್ದರೂ ಗಾಂಧೀಜಿಯವರು ಅವರ ವ್ಯಕ್ತಿತ್ವದ ಬಗ್ಗೆ ಗೌರವ ಭಾವನೆಯನ್ನು ತಳೆದಿದ್ದಾರೆ. ಅವರ ಅಭಿಪ್ರಾಯ ಹೀಗಿದೆ-ಸ್ವಾರ್ಥಸಾಧನೆಗಾಗಿ ಡಾ. ಅಂಬೇಡ್ಕರರು ಯಾವ ಒತ್ತಾಯ ಮತ್ತು ಒತ್ತಡಕ್ಕೆ ಮಣಿಯಲಾರರು. ಸ್ವಂತ ಶ್ರೇಯೋಭಿವೃದ್ಧಿಗಾಗಿ ಅವರು ತಾವು ನಂಬಿದ ತತ್ವಗಳಿಗೆ ಎಂದೂ ತಿಲಾಂಜಲಿಯನ್ನು ಕೊಡಲಾರರು. ಈ ಮಾತನ್ನು ನಾವು ಲಾಹೋರಿನ ಜಾತ್ ಪಾತ್ ತೋಡಕ ಮಂಡಳದ ವ್ಯವಸ್ಥಾಪಕರಿಗೆ ಬರೆದ ಅಧ್ಯಕ್ಷೀಯ ಭಾಷಣದ ಸಾರಾಂಶವನ್ನು ಮಂಡಳಕ್ಕೆ ಅನುಕೂಲವಾಗುವ ರೀತಿಯಲ್ಲಿ ತಿದ್ದಲು ಹೇಳಿದಾಗ ಡಾ. ಅಂಬೇಡ್ಕರರು ಹೀಗೆ ಉತ್ತರಿಸಿದರು-ನೀವು ಕರೆದ ಈ ಮಹಾಸಭೆಯನ್ನು ನೀವು ರದ್ದುಪಡಿಸಿದರೂ ಅಡ್ಡಿ ಇಲ್ಲ; ಆದರೆ ನಾನು ನನ್ನ ಭಾಷಣವನ್ನು ಸಂದಿಗ್ಧ ಶಬ್ದಗಳಲ್ಲಿ ಬರೆಯಲಾರೆ. ನಾನು ಈ ಸಭೆಗೆ ಅಧ್ಯಕ್ಷನಾಗುವದರ ಸಲುವಾಗಿ ನಾನು ನಂಬಿದ ಮತ್ತು ಮನವರಿಕೆಯಾದ ತತ್ವಗಳನ್ನು ಬಿಟ್ಟುಕೊಡಲಾರೆ. ಹೀಗೆ ಡಾ. ಅಂಬೇಡ್ಕರರು ತಮ್ಮ ಸುಮಾರು ೩೦ ವರ್ಷಗಳ ಸಾರ್ವಜನಿಕ ಜೀವನದಲ್ಲಿ ನಂಬಿದ ತತ್ವಗಳ ಆಚರಣೆಗಾಗಿ ಅಗಾಧವಾದ ಧೈರ್ಯ ಮತ್ತು ಮನೋಸ್ಥೈರ್ಯ ತೋರಿಸಿದ್ದಾರೆ. ಡಾ. ಅಂಬೇಡ್ಕರರನ್ನು ಸರಿಯಾಗಿ ತಿಳಿದುಕೊಂಡವರಿಗಿಂತಲೂ ಅವರನ್ನು ಅಪಾರ್ಥದಲ್ಲಿ ಭಾವಿಸಿದವರೇ ಹೆಚ್ಚು ಮಂದಿ. ದಲಿತೋದ್ಧಾರಕ್ಕಾಗಿ, ಸಾಮಾಜಿಕ ನ್ಯಾಯಕ್ಕಾಗಿ ಅವರು ಹಿಂದೂ ಧರ್ಮ ಬಿಡಲಿಕ್ಕೂ ಹಿಂದುಮುಂದು ನೋಡದವರಾದ್ದರಿಂದ ಇಂಥ ಜನರು ಯಾವಾಗಲೂ ಮತ್ತು ಎಲ್ಲ ಕಡೆಗೂ ಹುಟ್ಟುವದು ಅತಿ ವಿರಳ.

ಡಾ. ಅಂಬೇಡ್ಕರರು ಭಾರತೀಯ ಹಾಗೂ ಪಾಶ್ಚಿಮಾತ್ಯ ಬೌದ್ಧಿಕ ಮತ್ತು ನೈತಿಕ ಪ್ರಭಾವಗಳಿಂದ ರೂಪುಗೊಂಡವರಾಗಿದ್ದರು. ಅವರು ಪಾಶ್ಚಿಮಾತ್ಯ ರಾಜ-

ಕೀಯ ಪರಂಪರೆಯ ಬಗ್ಗೆ ವಿಶೇಷವಾಗಿ ಪಾಶ್ಚಿಮಾತ್ಯ ಸ್ವಾತಂತ್ರ್ಯದ ವಿಚಾರಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿದ್ದರು. ಧಾರ್ಮಿಕ ವಿಚಾರಗಳನ್ನು ಬರ್ಕನಿಂದ ಸರಕಾರದ ತಾತ್ವಿಕ ಹಿನ್ನೆಲೆಯನ್ನು ಜೆ. ಎಸ್. ಮಿಲ್ ಮತ್ತು ಜೆಫರಸನ್‌ರಿಂದ ಸಾಮಾಜಿಕ ವಿಮೋಚನೆಯ ವಿಚಾರವನ್ನು ಬೂಕರ ಟಿ. ವಾಸಿಂಗಟನ್‌ರಿಂದ ಪಡೆದಿದ್ದರು. ಅವರ ರಾಜಕೀಯ ತತ್ವಜ್ಞಾನವು ಬುದ್ಧನ ತತ್ವಗಳಿಂದ ಪ್ರಚೋದಿತವಾಗಿದೆಯೆಂದು ಹೇಳುತ್ತಿದ್ದರೂ ಫ್ರಾನ್ಸ ರಾಜ್ಯಕ್ರಾಂತಿ, ಅಮೆರಿಕೆಯ ಸ್ವಾತಂತ್ರ್ಯ ಮತ್ತು ಅಮೆರಿಕೆಯ ಸಂವಿಧಾನ ಘೋಷಣೆಯ ಆದರ್ಶಗಳ ಆಧಾರದ ಮೇಲೆ ನಿಂತಿದೆಯೆಂದು ಹೇಳಬಹುದು.

ಅಂಬೆಡ್ಕರರ ರಾಜಕೀಯ ವಿಚಾರಗಳು ಯಾವಾಗಲೂ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಗಳಿಂದ ಬೆಂಬಲಿತವಾಗಿವೆ. ಜರ್ಮನಿಯಲ್ಲಿ ಮಾರ್ಟಿನ್ ಲೂಥರನಿಂದ ಪ್ರಾರಂಭವಾದ ಧಾರ್ಮಿಕ ಕ್ರಾಂತಿ ಯುರೋಪದ ರಾಜಕೀಯದ ಮೇಲೆ ದೂರಗಾಮೀ ಪರಿಣಾಮಬೀರಿತು. ಇದೇ ಮಾತನ್ನು ಮುಸಲ್ಮಾನ ಸಾಮ್ರಾಜ್ಯಕ್ಕೂ ಅನ್ವಯಿಸಬಹುದು. ಭಾರತದ ಇತಿಹಾಸವೂ ಇದೇ ಮಾತನ್ನು ಪುಷ್ಟೀಕರಿಸುತ್ತದೆ. ಜಾತೀಯತೆಯ ರಾಕ್ಷಸನನ್ನು ಸಂಹರಿಸದೆ ರಾಜಕೀಯ ಹಾಗೂ ಆರ್ಥಿಕ ಸುಧಾರಣೆ ಆಗದೆಂದು ಡಾ. ಅಂಬೆಡ್ಕರರು ಹೇಳಿದರು. ಜವಾಹರಲಾಲ ನೆಹ್ರುರವರು ಭಾರತಕ್ಕೆ ಸಮಾಜವಾದಿ ಸಮಾಜದ ಅಗತ್ಯತೆಯನ್ನು ಒತ್ತಿ ಹೇಳುವಾಗ ಈ ಸತ್ಯ ಸಂಗತಿಯ ಕಡೆಗೆ ಜಾಗೃತರಾಗಿದ್ದರು. ಜಾತ್ಯಾತೀತ ಭಾರತವು ಜಾತೀಯತೆಯ ಸಮಾಧಿಯ ಮೇಲೆ ನಿರ್ಮಾಣವಾಗಬೇಕು. ಅಂಥ ಭಾರತವು ಮಾತ್ರ ಸಮಾನತೆ ಮತ್ತು ನ್ಯಾಯಗಳ ತಳಹದಿಯ ಮೇಲೆ ಸಮಾಜವಾದಿಯಾಗಬಲ್ಲದು ಎಂಬುದರ ಬಗ್ಗೆ ಅವರು ಖಚಿತ ಅಭಿಪ್ರಾಯ ತಳೆದವರಾಗಿದ್ದರು.

ಅಸ್ಪೃಶ್ಯರ ಮುಖಂಡರು ಮತ್ತು ಅಲ್ಪಸಂಖ್ಯಾಕರ ಹಿತರಕ್ಷಕರಾಗಿ ಅಸ್ಪೃಶ್ಯರ ಸಮಸ್ಯೆ ಯಾವಾಗಲಾದರೂ ಉದ್ಭವವಾದೊಡನೆ ಅವರಿಗಾಗಿ ಅಂಬೇಡ್ಕರರ ಹೃದಯ ಕರಗಿ ನೀರಾಗುತ್ತಿತ್ತು. ಅವರಿಗಾಗುವ ತೊಂದರೆಗಳನ್ನು ನಿವಾರಿಸಲು, ನಿರ್ಮೂಲನ ಮಾಡಲು ಯಾವ ಹಂತಕ್ಕಾದರೂ ಹೋಗಿ ಅವರನ್ನು ಸುರಕ್ಷತೆಯ ದಂಡೆಗೆ ಮುಟ್ಟಿಸುತ್ತಿದ್ದರು. ಅವರ ಹಿತರಕ್ಷಣೆ ಮಾಡಲೆಂದೇ ಡಾ. ಅಂಬೇಡ್ಕರರು ಘಟನಾಸಮಿತಿಯನ್ನು ಸೇರಿದರು. ಸಂವಿಧಾನ ಸ್ವೀಕರಿಸುವದಕ್ಕಿಂತ ಸ್ವಲ್ಪ ಮುಂಚೆ ಅವರು ಹೇಳಿದ್ದೇನೆಂದರೆ ಜನವರಿ ೨೬. ೧೯೫೦ ರಂದು ನಾವು ರಾಜಕೀಯ ಸ್ವಾತಂತ್ರ್ಯ ಪಡೆಯುತ್ತೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಅಸಮಾನತೆ ಮುಂದುವರೆಯುತ್ತದೆ. ಈ ಅಂತರವನ್ನು ಬೇಗನೆ ಕೊನೆಗಾಣಿಸಬೇಕು. ಇಲ್ಲದಿದ್ದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಕಠಿಣ ಪರಿಶ್ರಮದಿಂದ ದೊರಕಿಸಿದ ರಾಜಕೀಯ ಸ್ವಾತಂತ್ರ್ಯವನ್ನು ಅಳಿಸಿಹಾಕುತ್ತದೆ.

ಭಾರತ ಅನೇಕ ಸಲ ಸ್ವಾತಂತ್ರ್ಯ ಕಳೆದುಕೊಂಡಿದೆ. ಭಾರತಕ್ಕೆ ಗುಲಾಮಗಿರಿ ಬಂದದ್ದು ನಮ್ಮ ಜನತೆಯ ವಿಶ್ವಾಸದ್ರೋಹದಿಂದಾಗಿಯೇ? ರಕ್ತದ ಕೊನೆ ಹನಿ ಇರುವವರೆಗೂ ಸ್ವಾತಂತ್ರ್ಯ ರಕ್ಷಣೆಗಾಗಿ ಭಾರತೀಯರು ಅಚಲ ನಿರ್ಧಾರ ತಳೆಯಬೇಕೆಂದು ತಿಳಿಸಿದರು. ಸಾವಿರಾರು ಜಾತಿ ಉಪಜಾತಿಗಳಿಂದ ಈ ದೇಶದ ಶಕ್ತಿ ಹ್ರಾಸವಾಗಿದೆ. ಸಂವಿಧಾನದ ಅಂಗವಾಗಿ ಅಲ್ಪ ಸಂಖ್ಯಾತರಿಗೆ ಸಾಕಷ್ಟು ರಕ್ಷಣೆ ದೊರೆಯದಿದ್ದಲ್ಲಿ ಸ್ವಯಂ ಆಡಳಿತದ ಸಮಗ್ರತೆಯನ್ನು ಈ ದೇಶ ಪಡೆಯದು. ಜಾತಿ ಮತಗಳಿಂದಾಗಿ ನಮ್ಮಲ್ಲಿ ಒಡಕಿದ್ದರೂ ಸಂಯುಕ್ತ ಭಾರತವೇ ನಮ್ಮ ಗುರಿ ಎಂಬುದನ್ನು ೧೯೩೦ರಲ್ಲಿಯೇ ಅಲ್ಪಸಂಖ್ಯಾಕರಿಗೆ ಈ ಮಾತನ್ನು ಗಮನದಲ್ಲಿಟ್ಟುಕೊಳ್ಳಲು ಪ್ರೇರೇಪಿಸಿದ್ದಾರೆ. ಹೀಗೆ ಜನರು ರಾಷ್ಟ್ರೀಯ ಭಾವೈಕ್ಯತೆಯ ಭಾವನೆಯನ್ನು ಬೆಳೆಸಿಕೊಳ್ಳುವದು ಅವರಿಗೆ ಬೇಕಾಗಿತ್ತು. ಅವರು ಭಾರತೀಯರನ್ನು ಭಾರತದ ಜನರೆಂದು ಕರೆದರೇ ವಿನಃ ಭಾರತ ರಾಷ್ಟ್ರದ ಸದಸ್ಯರೆಂದು ಕರೆಯಲಿಲ್ಲ. ಯಾಕೆಂದರೆ ಅದೆಷ್ಟೋ ಸಾವಿರ ಜಾತಿಗಳಲ್ಲಿ ವಿಭಜಿಸಲ್ಪಟ್ಟವರು ಅದು ಹೇಗೆ ರಾಷ್ಟ್ರವಾದಾರು ? ಎಂದು ಪ್ರಶ್ನಿಸಿದರು. ನಾವು ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ರಾಷ್ಟ್ರವಾಗಿದ್ದೇವೆಂಬುದನ್ನು ಎಷ್ಟು ತೀವ್ರವಾಗಿ ಗ್ರಹಿಸುತ್ತೇವೆಯೋ ಅಷ್ಟು ತೀವ್ರ ನಮಗೆ ಒಳ್ಳೆಯದಾಗುವದು. ಆಗ ಮಾತ್ರ ನಾವು ರಾಷ್ಟ್ರವಾಗುವದರ ಅವಶ್ಯಕತೆಯನ್ನು ಅನುಭವಿಸುತ್ತೇವೆ. ರಾಜಕಾರಣದಲ್ಲಿ ಜಾತಿಯನ್ನು ಬಳಸುವದರಿಂದ ಇಡೀ ರಾಜಕೀಯ ವಾತಾವರಣವು ಮತ್ತು ಪ್ರಜಾತಾಂತ್ರಿಕ ಸಂಸ್ಥೆಗಳು ಭ್ರಷ್ಟವಾದಂತೆನಿಸುತ್ತದೆ.

ಭಾರತ ರಾಷ್ಟ್ರ ಮತ್ತು ರಾಷ್ಟ್ರೀಯತ್ವದ ತತ್ವವು ಅವರ ರಾಜಕೀಯ ವಿಚಾರದ ಪ್ರಧಾನ ಅಂಗವಾಗಿದೆ. ಅವರ ಪ್ರಕಾರ ರಾಷ್ಟ್ರೀಯತ್ವವು ಸಾಮಾಜಿಕ ಭಾವನೆಯಾಗಿದೆ. ಅದು ಏಕತೆಯ ಸಾಮೂದಾಯಿಕ ಭಾವನೆಯ ಅನಿಸುವಿಕೆಯಾಗಿದೆ. ಈ ಭಾವನೆಯನ್ನು ತುಂಬಿಕೊಂಡವರು ತಾವು ಬಂಧು ಬಳಗವೆಂದು ತಿಳಿದುಕೊಳ್ಳುತ್ತಾರೆ. ಈ ರಾಷ್ಟ್ರೀಯ ಭಾವನೆಯ ದ್ವಿಧಾರಾಭಾವನೆಯಾಗಿದೆ. ಇದು ಏಕಕಾಲಕ್ಕೆ ತಮ್ಮ ಬಂಧುಬಳಗದ ವಿಷಯವಾಗಿ ಸಹಭಾವನೆಯನ್ನು ಮತ್ತು ಬಂಧುಬಳಗವಲ್ಲದವರ ವಿಷಯದಲ್ಲಿ ವಿರೋಧಭಾವನೆಯನ್ನು ಹೊಂದಿದಂತಾಗಿರುತ್ತದೆ. ಇದು ತಮ್ಮವರ ವಿಷಯದಲ್ಲಿಯ ಜಾಗೃತಾಭಾವನೆಯಾಗಿದೆ. ಒಂದು ಕಡೆಗೆ ಅಂಥ ಭಾವನೆ ಹೊಂದಿದವರನ್ನು ಬಂಧಿಸುತ್ತದೆ. ಆ ಬಂಧನ ಆರ್ಥಿಕ ಸಂಘರ್ಷಣೆ ಅಥವಾ ಸಾಮಾಜಿಕ ಏರುಪೇರುಗಳಿಂದ ಉದ್ಭವವಾಗುವ ಎಲ್ಲ ಭಿನ್ನಾಭಿಪ್ರಾಯವನ್ನು ಮೀರಿನಿಲ್ಲುತ್ತದೆ. ಮತ್ತೊಂದು ಕಡೆಗೆ ತಮ್ಮವರಲ್ಲದವರನ್ನು ಅವರಿಂದ ಬೇರ್ಪಡಿಸುತ್ತದೆ. ಫ್ರಾನ್ಸದ ಆಲೋಚನಾವಾದಿಯಾದ ರೇನನ್‌ರೊಡನೆ ಅಂಬೇಡ್ಕರರ ವಿಚಾರ ಸಾಮ್ಯತೆ ಇದೆ. ಅದೆಂದರೆ ರಾಷ್ಟ್ರವು ಜೀವಂತ ಆತ್ಮ ಮತ್ತು ಆಧ್ಯಾತ್ಮಿಕ

ತತ್ವ–ಒಂದು ಆತ್ಮ ಇನ್ನೊಂದು ಆಧ್ಯಾತ್ಮ ತತ್ವ; ದೇಶಭಕ್ತಿಯು ಅವಶ್ಯವಾಗಿ ರಾಷ್ಟ್ರೀಯತ್ವವನ್ನು ಒಳಗೊಂಡಿರುತ್ತದೆ. ಆದರೆ ಇದರ ತಿರುವು ಮುರುವು ಯಾವಾಗಲೂ ಸತ್ಯವಲ್ಲ.

ಮುಸ್ಲೀಮರು ದೇಶಭಕ್ತಿ ಮತ್ತು ರಾಷ್ಟ್ರೀಯತ್ವದ ಭಾವನೆಗಳನ್ನು ಹೊಂದಿರುವದರಿಂದ ಅವರು ಒಂದು ರಾಷ್ಟ್ರವಾಗಿದ್ದಾರೆ. ಹಿಂದುಗಳೊಡನೆ ವೈರಭಾವನೆಯು ಕಾರಣದಿಂದ ಅವರು ಬೇರ್ಪಡಲು ಇಚ್ಚಿಸಿದರು. ತಮ್ಮ ಜನ್ಮಭೂಮಿಯು ಸಲುವಾಗಿ ಅವರಲ್ಲಿ ಯಾವನೇ ಸಹಾನುಭೂತಿ ಇರಲಿಲ್ಲ. ಅಂಬೇಡ್ಕರರು ಕಾಲ್ಪನಿಕವಾಗಿ ಕೇಳಿದರು.

ಅಫಘಾನಿಗಳು ಒಬ್ಬಂಟಿಗರಾಗಿಯಾಗಲೀ, ಅಥವಾ ಇತರ ಮುಸ್ಲಿಂ ರಾಷ್ಟ್ರಗಳನ್ನು ಕೂಡಿಕೊಂಡಾಗಲೀ ಭಾರತದ ಮೇಲೆ ದಾಳಿಮಾಡಿದರೆ, ಈ ದ್ವಾರಪಾಲಕರು ದಾಳಿಗಾರರನ್ನು ತಡೆಯುವರೋ? ಅಥವಾ ಬಾಗಿಲುಗಳನ್ನು ತೆರೆದು ಒಳಗೆ ಬಿಡುವರೋ? ಡಾ. ಅಂಬೇಡ್ಕರರು ಆ ಪ್ರಶ್ನೆಗೆ ತಾವೇ ಉತ್ತರಿಸುತ್ತಾರೆ; ಅದು ಏನೆಂದರೆ, ದ್ವಾರಪಾಲಕರು ಅವರನ್ನು ಒಳಗೆ ಬಿಡುವರು. ಯಾಕೆಂದರೆ ಮುಸಲ್ಮಾನರು ಹಿಂದುಗಳನ್ನು ಕಾಫಿರರೆಂದೂ, ತಮಗಿಂತಲೂ ಕಡಿಮೆಯವರೆಂದೂ. ನಿರ್ಮೂಲಮಾಡಲು ಯೋಗ್ಯರಾಗಿದ್ದಾರೆಂದೂ ನಂಬಿದ್ದಾರೆ. ಹಿಂದುಗಳ ಮುಂದೆ ಮುಸ್ಲೀಮರು ಹೊರಗಿದ್ದು ವೈರಿಗಳಾಗಬೇಕೋ ಅಥವಾ ಒಳಗಿದ್ದು ವಿರೋಧಿಗಳಾಗಿರಬೇಕೋ ಎಂಬುದನ್ನು ಆರಿಸಿಕೊಳ್ಳುವ ಪ್ರಶ್ನೆ ಇತ್ತು.

ಭಾರತೀಯ ಮುಸಲ್ಮಾನರು ರಾಜಕಾರಣದಲ್ಲಿ ಹಾಗೇನೂ ಆಸ್ಥೆಯುಳ್ಳವರೇನೂ ಅಲ್ಲ; ಅವರ ಪ್ರಮುಖವಾದ ಆಸ್ಥೆಯೆಂದರೆ ಧರ್ಮ. ಅವರ ರಾಜಕಾರಣಕ್ಕಿಂತ ಧರ್ಮ ಪ್ರಾಧಾನ್ಯತೆಯನ್ನು ಪಡೆದಿದೆ ಮತ್ತು ಹಿಂದುಗಳೊಡನೆ ತಮ್ಮ ಭಿನ್ನಾಭಿಪ್ರಾಯದ ಕಾರಣದಿಂದ ಅವರಿಗೆ ಸತತ ಪೀಡನೆಯನ್ನು ಕೊಡುವ ಭಾವನೆಯನ್ನು ಹೊಂದಿದ್ದಾರೆ. ಎಲ್ಲ ಆರ್ಥಿಕ ನೈಜತೆಗಳನ್ನು ಮರೆತು ಹಿಂದೂ ಮುಸಲ್ಮಾನರ ವೈರತ್ವದ ಮೇಲೆಯೇ ತಮ್ಮ ಮನಸ್ಸನ್ನು ಕೇಂದ್ರೀಕರಿಸಿದರು. ಹಿಂದುಗಳ ಅಸಕ್ತತೆಯನ್ನು ಸಾವಕಾಶವಾಗಿ ಹೀರುತ್ತ ರಾಜಕಾರಣದಲ್ಲಿ ಪುಂಡಾಟಿಕೆಯ ಪದ್ಧತಿಯನ್ನು ಅನುಸರಿಸಿದರು. ಆದ್ದರಿಂದ ದೇಶದ ವಿಭಜನೆಯಾಗಬೇಕು: ಏಕೆಂದರೆ ಅಖಂಡ ಭಾರತವು ಸ್ವತಂತ್ರ ಭಾರತಕ್ಕೆ ವಿಸಂಗತವಾಗಿದೆ. ಅಥವಾ ವಸಾಹತು ಭಾರತಕ್ಕೂ ಅಸಂಗತವಾಗಿದೆಯೆಂದೂ ಡಾ. ಅಂಬೇಡ್ಕರರು ಸೂಚಿಸಿದರು. ಪಾಕಿಸ್ತಾನವು ಅನಿವಾರ್ಯವಾಗಿದೆ: ಏಕೆಂದರೆ ಭಾರತವು ಅಖಂಡವಾಗಿ ಉಳಿದರೂ ವ್ಯವಸ್ಥಿತವಾದ ಅಸ್ತಿತ್ವ ಅದಕ್ಕೆ ಎಂದೂ ಉಳಿಯಲಾರದೆಂದು ಅವರು ವಾದಿಸಿದರು. ಮುಸಲ್ಮಾನ ಎಂಬ ಒಂದೇ ವಿಷಯವು ಪಾಕಿಸ್ತಾನ ನಿರ್ಮಾಣಕ್ಕೆ ಪೋಷ

ರಹಿತ ಸಿದ್ಧಾಂತವೆಂದು ಹೇಳಬಹುದೇ? ಅದಕ್ಕೆ ಅವರ ಉತ್ತರ ನಿಶ್ಚಿತಾರ್ಥದಲ್ಲಿದೆ. ಹಿಂದೂಗಳ ಹಾಗೂ ಮುಸಲ್ಮಾನರ ಅನೈಕ್ಯತೆಯ ಮೂಲಗಳು ಬಹಳಷ್ಟಾಗಿವೆಯೆಂದು ಅವರು ನಂಬಿದ್ದರು. ಕಾಂಗ್ರೆಸ್ಸು ಹಿಂದೂಗಳ ಸಂಸ್ಥೆಯಾಗಿತ್ತು; ಬ್ರಿಟಿಶರು ಜನರನ್ನು ವಿಭಜಿಸಲಿಲ್ಲ-ಭಾರತೀಯ ಸಮಾಜದಲ್ಲಿ ಈಗಾಗಲೇ ವಿಭಜನೆಗಳು ಇದ್ದೇ ಇವೆ: ಜಿನ್ನಾರು ಬ್ರಿಟಿಶರ ಕೈಗೊಂಬೆಯಾಗಿದ್ದರೆಂದು ಹೇಳುವದು ತಪ್ಪು ಎಂದೂ ಅವರ ನಂಬುಗೆಯಾಗಿತ್ತು. ಡಾ. ಅಂಬೇಡ್ಕರರ ನಿರ್ಣಯ ಸುಸ್ಪಷ್ಟವಾಗಿತ್ತು: ಮುಸಲ್ಮಾನರು ರಾಷ್ಟ್ರವಾಗಿ ಪರಿಣಮಿಸಿದ್ದಾರೆ; ಅವರ ಪಾಕಿಸ್ತಾನದ ಬೇಡಿಕೆಯನ್ನು ಒಪ್ಪಿಕೊಳ್ಳಬೇಕು. ದೇಶದಲ್ಲಿ ೧೯೩೦ ರಿಂದ ೧೯೪೦ರ ದಶಕದಲ್ಲಿ ಪಾಕಿಸ್ತಾನದ ಬೇಡಿಕೆಯ ವಿಷಯವಾಗಿ ಚರ್ಚಿಸುವದು ಸಾರ್ವತ್ರಿಕವಾಗಿತ್ತು. ತೀಕ್ಷ್ಣವಾದ ವಾದ ವಿವಾದಗಳು ಈ ವಿಷಯದ ಮೇಲೆ ನಡೆಯುತ್ತಿದ್ದವು. ಡಾ. ಅಂಬೇಡ್ಕರರು ಈ ವಿಷಯವನ್ನು ಭಾವನಾರಹಿತರಾಗಿ ಕಂಡರು. ಅವರು ಪರಸ್ಪರ ವಿರುದ್ಧವಾದ ಪರಸ್ಪರರ ಅಭಿಪ್ರಾಯಗಳನ್ನು ಪರೀಕ್ಷಿಸಿದರು. ಪಾಕಿಸ್ತಾನದ ನಿರ್ಮಾಣವು ದೇಶದ ಸುರಕ್ಷತೆಯನ್ನು ಬಲಹೀನವಾಗಿಸುವದಿಲ್ಲೆಂದೂ ಅದರ ಬದಲಾಗಿ ಒಳ್ಳೆಯಗಡಿಗಳನ್ನೂ ಮತ್ತು ನಂಬಲರ್ಹವಾದ ಸೇನಾಪಡೆಗಳನ್ನು ಪಡೆಯಲು ಅನುಕೂಲವಾಗುವದೆಂದು. ಅಲ್ಲದೆ ಉತ್ಪಾದನೆಯ ಮೂಲಗಳ ದೃಷ್ಟಿಯಿಂದ ಪಾಕಿಸ್ತಾನಕ್ಕಿಂತಲೂ, ಭಾರತವು ಹೆಚ್ಚು ಉತ್ತಮ ಸ್ಥಿತಿಯಲ್ಲಿರುವದೆಂದು ಅಭಿಪ್ರಾಯಪಟ್ಟರು. ಹೀಗೆ ಡಾ. ಅಂಬೇಡ್ಕರರ ರಾಷ್ಟ್ರೀಯತೆಯು ಪಾಕಿಸ್ತಾನ ಬೇಕೋ ಅಥವಾ ಬೇಡವೊ ಎಂಬ ವಿಷಯದಲ್ಲಿ ಮುಸ್ಲಿಂ ರಾಷ್ಟ್ರೀಯತ್ವವನ್ನು ಬೆಂಬಲಿಸುವವರಲ್ಲಾಗಲೀ ಅಥವಾ ಭಾರತೀಯ ರಾಷ್ಟ್ರೀಯತ್ವವನ್ನು ಬೆಂಬಲಿಸುವದರಲ್ಲಾಗಲೀ ಇರಲಿಲ್ಲ.

ಡಾ. ಅಂಬೇಡ್ಕರರ ರಾಷ್ಟ್ರೀಯತೆಯ ಮತ್ತೊಂದು ಮಹತ್ವವಾದ ಅಂಶವೆಂದರೆ "ನಾಯಕ ಪೂಜೆಯ ಖಂಡನೆ" ಇದು ಒಂದು ಇಂದಿನ ನಮ್ಮ ದೇಶದ ರಾಜಕಾರಣದ ವೈಶಿಷ್ಟ್ಯವೆಂದೇ ಹೇಳಬೇಕಾಗುತ್ತದೆ. ಈ ನಾಯಕನ ಪೂಜೆ ಭಾರತದಲ್ಲಿದ್ದಷ್ಟು ಮತ್ತಾವ ದೇಶದಲ್ಲಿ ಇಲ್ಲವೆಂದು ವಿಶದಪಡಿಸಲು ಯಾವ ಜ್ಯೋತಿಷಿಯೂ ಬೇಕಾಗಿಲ್ಲ. ಧರ್ಮದಲ್ಲಿಯ ಭಕ್ತಿ ಆವನ ಆತ್ಮದ ಬಿಡುಗಡೆಗೆ ಸಾಧನವಾಗಬಹುದು; ಆದರೆ ರಾಜಕಾರಣದಲ್ಲಿಯ ಭಕ್ತಿ ಅದು ಅವನ ಅವನತಿಗೆ ದಾರಿಮಾಡಿಕೊಡುತ್ತದೆ ಅಥವಾ ಸರ್ವಾಧಿಕಾರಕ್ಕೆ ನಾಂದಿ ಹಾಕುತ್ತದೆ, ಅದು ಅವಲಂಬನದ ಚಟ ಬೆಳೆಯುತ್ತದೆ, ಕರ್ತವ್ಯಹೀನರನ್ನಾಗಿ ಮಾಡುತ್ತದೆ. ಅಂಥವರ ಪಣೆಯ ಬರೆಹ ಗೆದ್ದಲಿ ಹತ್ತಿದ ಕಟ್ಟಿಗೆಯ ತುಂಡಿನಂತಾಗುತ್ತದೆ. ಅವರ ಹೋರಾಟ ನಿಂತುಹೋಗುತ್ತದೆ. ಅದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕದಿದ್ದರೆ ದೇಶದ ಪ್ರಗತಿಗೆ ಅಡ್ಡಗಲ್ಲಾಗುವದೆಂದು ಡಾ. ಅಂಬೇಡ್ಕರರು ಭಾರತೀಯರನ್ನು ಎಚ್ಚರಿಸಿದರು.

ಬ್ರಿಟಿಶ್‌ರ ಆಳ್ವಿಕೆಯನ್ನು ಅವರು ಮೆಚ್ಚಲಿಲ್ಲ. ಕನಿಷ್ಟ ಪಕ್ಷಕ್ಕಾದರೂ ಬ್ರಿಟಿಶ್‌ರು ಅಸ್ಪೃಶ್ಯತೆಯ ನಿವಾರಣೆಗೆ ಏನೂ ಕ್ರಮಕೈಕೊಳ್ಳಲಿಲ್ಲ. ಭಾವಿಯಲ್ಲಿ

ನೀರನ್ನು ತರುವ ಹಕ್ಕನ್ನಾದರೂ ಕೊಡಲಿಲ್ಲ. ಗುಡಿಯ ಪ್ರವೇಶಕ್ಕೆ ಏನೂ ಕ್ರಮ ಕೈಕೊಂಡಿಲ್ಲ. ಪೋಲೀಸ ಸೇವೆಯ ಹಕ್ಕನ್ನಾದರೂ ಕೊಡಲಿಲ್ಲ. ಇಷ್ಟನ್ನಾದರೂ ನಾವು ಸ್ವತಂತ್ರ ಭಾರತದಲ್ಲಿ ಪಡೆಯಬಹುದು. ಅವರು ೨೦-೨೫ ವರ್ಷ ವಿಚಾರ ಮಾಡಿ ಅಕ್ಟೋಬರ ೧೪, ೧೯೫೬ ರಂದು ತಮ್ಮ ಸುಮಾರು ೧೦ ಲಕ್ಷ ಅನು ಯಾಯಿಗಳೊಡನೆ ಬೌದ್ಧ ಧರ್ಮಕ್ಕೆ ಮತಾಂತರವನ್ನು ಹೊಂದಿದಾಗ್ಯೂ ಅವರು ಭಾವೀ ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡೇ ಹಿಂದೂ ಧರ್ಮವನ್ನು ಬಿಟ್ಟರು ಎಂಬುದರಲ್ಲಿ ಸಂಶಯವಿಲ್ಲ. ಈ ಅವರ ಪ್ರಕ್ರಿಯೆ ಡಾ. ಅಂಬೇಡ್ಕರರ ರಾಷ್ಟ್ರೀಯ ವಾದಿ ಆದರ್ಶ ತತ್ವಕ್ಕೆ ಆದಿ ಮತ್ತು ಅಂತ್ಯದ ಮುಕುಟವೆಂದು ಹೇಳಬಹುದು.

ಗ್ರಂಥ ಋಣ

1. Dr. B. R. Ambedkar — Pakistan or Partition

2. ,, — States and Minorities What are their rights and how to Secure them in the Constitution of Free India, 1947.

3. ,, — Thoughts on Linguistic States-1955.

4. Dr. Jawaregouda — Krantikari Dr. Ambedkar (in Kannada) 1978.

5. Dr. R. T. Jangam — Dr. Ambedkar as a Constitutionalist, 1963.

6. Dr. A.M. Rajasekharaih— B. R. Ambedkar, the Politics of emancipation. Sindhu Publication Bombay, 1971.

ಭಾರತೀಯರ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯರ ತಂತ್ರ ವಿಧಾನ (ಪ್ರತಿಕ್ರಿಯೆ)

● ಸಿ. ಯಂ. ವೀರಭದ್ರಯ್ಯ

ಶ್ರೀ ಬಸವರಾಜ ನಾಯ್ಕರ್ "ತಂತ್ರದ ಮೂಲಕ ಅನುಭವ ಶೋಧನೆ"ಎಂಬ ಶೀರ್ಷಿಕೆಯ ಲೇಖನವಂದನ್ನು ಬರೆದು, (ಕರ್ನಾಟಕ ಭಾರತಿ ಸಂಪುಟ ೧೭, ಸಂ. ೧) ಮಾರ್ಕ್‌ಶ್ರೋರರ್ ಅವರ ತಂತ್ರದ ವಿಚಾರಗಳನ್ನು ಕನ್ನಡಿಸಿದ್ದಾರೆ.

ಮಾರ್ಕ್‌ಶ್ರೋರರ್ ಆಂಗ್ಲ ಸಾಹಿತ್ಯಲೋಕದ ಅತ್ಯಂತ ಜನಪ್ರಿಯರೆಂದೂ ಇಂಗ್ಲೀಷ್ ಭಾಷೆಯ ಜ್ಞಾನವಿಲ್ಲದಂಥ ಕನ್ನಡ ಪಂಡಿತರು ಮತ್ತು ಅವರ ವಿದ್ಯಾ-ರ್ಥಿಗಳು ನವ್ಯವಿಮರ್ಶಕರ ವಿಚಾರಗಳನ್ನು ತಿಳಿಯಲು ಅಸಮರ್ಥರೆಂದೂ, ಹಾಸ್ಯ-ಮಾಡಿ, ತಮ್ಮ ಇಂಗ್ಲೀಷ್ ಜ್ಞಾನವನ್ನು ಪ್ರಚಾರ ಮಾಡಿದ್ದಾರೆ. ಶ್ರೀ ಬಸವರಾಜ ನಾಯ್ಕರ್ ತಾವು ತಿಳಿದಿರುವ ಆಂಗ್ಲ ಭಾಷಾ ವಿಚಾರಗಳನ್ನು ಬೇರೆ ಕನ್ನಡ ವಿದ್ವಾಂಸರು (ಕೆ. ವಿ. ಪುಟ್ಟಪ್ಪ, ಜಿ. ಯಸ್. ಶಿವರುದ್ರಪ್ಪ, ತೀನಂಶ್ರೀ, ಸಿ. ಪಿ. ಕೃಷ್ಣಕುಮಾರ್, ಡಿ. ಎಲ್. ಎನ್. ಮುಂತಾದವರು) ಪರಿಣಾಮಕಾರಿಯಾಗಿ ಸೊಗಸಾಗಿ ಹೇಳಿದಂತೆ ಹೇಳಿದ್ದರೆ; ಕನ್ನಡಕ್ಕೆ ಉಪಕಾರ ಮಾಡುವುದರ ಜೊತೆಗೆ, ತಮ್ಮದೇ ಆದ ಒಂದು ಸಂಶೋಧನಾ ವಿಚಾರವನ್ನು ಪ್ರಚಾರಮಾಡಿದಂತಾಗುತ್ತಿತ್ತು. ಅದನ್ನು ಬಿಟ್ಟು ಕನ್ನಡ ವಿದ್ವಾಂಸರನ್ನು ಅಪಹಾಸ್ಯ ಮಾಡಿದ್ದಾರೆ.

ಶ್ರೀಯುತರು ತಮ್ಮ ಲೇಖನವಲ್ಲಿ ಹೇಳಿರುವ ವಿಷಯ ಹೊಸತೇನಲ್ಲ. ಮಾರ್ಕ್‌ಶ್ರೋರರ್ ಅವರ ಅಭಿಪ್ರಾಯಗಳ ಅಭಿವ್ಯಕ್ತಿ ಬೇರೆ ವಿಧಾನವಾಗಿದೆ ಅಷ್ಟೇ. ಇದರ ಜೊತೆಗೆ ಕೆಲವು ಆಂಗ್ಲ ಭಾಷಾ ಕಾದಂಬರಿಕಾರರ ಕಾದಂಬರಿಗಳ ವಸ್ತು, ಶೈಲಿ, ಪಾತ್ರನಿರೂಪಣೆ ಮೊದಲಾದವುಗಳನ್ನು ವಕ್ಕಣಿಸಿದ್ದಾರೆ. ನವ್ಯವಿಮರ್ಶಕರು ಮಾಡುವ ಕೆಲಸವೇ ಇದು.

ಕನ್ನಡ ಸಾಹಿತ್ಯದಲ್ಲಿ ವಿಪುಲ ಗ್ರಂಥರಾಶಿಯಿದ್ದರೂ ಅದರ ಬಗ್ಗೆ ಯೋಚಿಸಿದ, ಓದದ,-ನಮ್ಮವರು ಬೇರೆ ಭಾಷೆಯ ಗುಲಾಮರಾಗಿ ಬೇರೆಯವರ ಭಾಷೆಯನ್ನೇ ತಲೆಮೇಲೆ ಹೊತ್ತು ಕುಣಿದಾಡುವ ರೀತಿಯನ್ನು ನೋಡಿದರೆ-ಅದು ನಮ್ಮ ದೌರ್ಬಲ್ಯವೆನ್ನಿಸುತ್ತದೆ.

ಶ್ರೀ ಬಸವರಾಜ ನಾಯಕರು, ಮಾರ್ಕ್‌ಶ್ರೋರರ್, ಅವರ ತಂತ್ರದ ವಿಚಾರ ಹೇಳುತ್ತಾ "ಸಾಹಿತ್ಯ ಕೃತಿಯಲ್ಲಿ ಸಾಧಿಸಿದ ಅನುಭವ ಅಥವಾ ವಸ್ತುವಿನ-ಮಧ್ಯದಲ್ಲಿರುವ ಅಂತರವನ್ನೆ ಮಾರ್ಕ್‌ಶ್ರೋರರ್ ಅವರು ತಂತ್ರವೆಂದು ಪರಿಗಣಿಸುತ್ತಾರೆ." "ತಂತ್ರದ ಬಗೆಗೆ ಚರ್ಚಿಸುವುದೆಂದರೆ ಸರ್ವಸ್ವವನ್ನು ಚರ್ಚಿಸಿದಂತೆಯೇ." "ಏಕೆಂದರೆ ಸಾಹಿತಿಯು ತನ್ನ ಜೀವನಾನುಭವವನ್ನು ಸಾಹಿತ್ಯವನ್ನಾಗಿ ಮಾರ್ಪಡಿಸುವುದು ಅಥವಾ ಕಥಾವಸ್ತುವನ್ನಾಗಿ ಮಾಡಿಕೊಳ್ಳುವುದು ಮೂಲತಃ ತಂತ್ರದಿಂದಲೇ ಎಂದು ಹೇಳಬಹುದು. ಆತ ತಂತ್ರದ ಮೂಲಕವೇ ತನ್ನ ಅನುಭವವನ್ನು ಶೋಧಿಸಿಕೊಂಡು, ಬಹಿರಂಗಗೊಳಿಸಿಕೊಂಡು ಮತ್ತು ವರ್ಧಿಸಿಕೊಂಡು ಸಾಹಿತ್ಯ ಕೃತಿಯನ್ನು ರಚಿಸಬೇಕಾಗುತ್ತದೆ. ತಂತ್ರದ ಮೂಲಕವೇ ಆತ ಅರ್ಥಸಂವಹನವನ್ನು ಸಾಧಿಸಿ ಕೊನೆಗೆ ಅದರ ಮೌಲ್ಯಮಾಪನವನ್ನು ಮಾಡಬೇಕಾಗುತ್ತದೆ. ಅಂದರೆ ಸಾಹಿತಿ ತನ್ನ ಸಾಹಿತ್ಯ ಕೃತಿಯಲ್ಲಿ ಏನೆಲ್ಲಾ ಸಾಧಿಸುವುದು–ತಂತ್ರದ ಮಾಧ್ಯಮದ ಮೂಲಕವೆ-ಎಂಬುದು ಸ್ಪಷ್ಟ"–ಎನ್ನುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿರುವ ಮಾರ್ಕ್‌ಶ್ರೋರರ್ ಅವರ ವಿಚಾರಗಳನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಅಧ್ಯಾಪಕರಾದ ಶ್ರೀ ಬಸವರಾಜ ನಾಯಕರು ಕೊಂಡಾಡಿದ್ದಾರೆ. ಈ ವಿಚಾರಗಳ ಸಾರವನ್ನು ಹೀಗೆ ಹೇಳಬಹುದು; ಕವಿ ತನ್ನ ಅನುಭವವನ್ನು ತನ್ನ ಪರಿಸರದಿಂದಲೇ ಪಡೆದು ಕಾವ್ಯರೂಪದಲ್ಲಿ ಆತ ಅಭಿವ್ಯಕ್ತಗೊಳಿಸುವ ವಿಧಾನವೇ ತಂತ್ರವೆಂದಂತಾಯ್ತು. ("ಮೂಲಬೀಜ ಸೂತ್ರವೆಲ್ಲ ಮಂತ್ರವಾಗಿದೆ. ಕಂಡುಹಿಡಿದ ಯಂತ್ರವೆಲ್ಲ ತಂತ್ರವಾಗಿದೆ") ಇಂಥ ವಿಚಾರಗಳನ್ನು ನಮ್ಮ ಭಾರತೀಯ ಅಲಂಕಾರಿಕರು ಎಂದೋ ಹೇಳಿರುತ್ತಾರೆ. ಯಾವನೇ ಕವಿ. ವಿಮರ್ಶಕ ಸ್ವತಂತ್ರನಲ್ಲ. "ಒಬ್ಬನ ಕೈ ಮತ್ತೊಬ್ಬನ ಜೇಬಿನಲ್ಲಿ" ಎನ್ನುವ ಮಾತು ಸಹೃದಯರೆಲ್ಲರೂ ಒಪ್ಪಿಕೊಂಡು ಬಂದಿದ್ದಾರೆ.

ಮಾರ್ಕ್‌ಶ್ರೋರರ್ ಹೇಳಿರುವ ತಂತ್ರವಿಧಾನ ನಮಗೆ ಹೊಸದೇನಲ್ಲ. ಅದನ್ನು ಎಷ್ಟೋ ಸಾವಿರ ವರ್ಷಗಳ ಹಿಂದೆ ನಮ್ಮ ಅಲಂಕಾರಿಕರು "ಅರ್ಥವಾಗುವಂತೆ) ಹೃದ್ಯವಾಗಿ" ಹೇಳಿರುತ್ತಾರೆ. ಉದಾಹರಣೆಗೆ ನಮ್ಮ ಭಾರತೀಯ ಮೀಮಾಂಸಕರ ಅಭಿಪ್ರಾಯಗಳನ್ನು ಕೆಳಕಂಡಂತೆ ಸಂಗ್ರಹಿಸಿದ್ದೇನೆ ಪರಾಮರ್ಶಿಸಿರಿ :

ತೀನಂಶ್ರೀಯವರ ಅಭಿಪ್ರಾಯ : "ಲೇಖನ ಭಾಷಣಾದಿಗಳ ರೂಪರಚನೆಗಳನ್ನು, ಉಕ್ತಿಚಮತ್ಕಾರಗಳನ್ನು ವಿಭಜನೆಮಾಡುವ ಅಲಂಕಾರ ಶಾಸ್ತ್ರ(Rhetoric· ಕಾವ್ಯದ ತಿರುಳನ್ನು ಅದರ ನಿರ್ಮಾಣ ಕ್ರಮವೇ ಮೊದಲಾದವನ್ನು ನಿರೂಪಿಸುವ ಕಾವ್ಯಮೀಮಾಂಸೆ (Poetics) ಎಲ್ಲಾ ಲಲಿತ ಕಲೆಗಳಿಗೂ ಸಮಾನ ವಿಷಯವಾಗಿರುವುದು ಮಾತ್ರವಲ್ಲದೆ ಬ್ರಹ್ಮ ಸೃಷ್ಟಿಯಲ್ಲೂ ಕಾಣಬರುವ ಸೌಂದರ್ಯದ ಸ್ವರೂಪವನ್ನು ವಿಚಾರಮಾಡುವ ಸೌಂದರ್ಯ ಮೀಮಾಂಸೆ (Aesthetics) ಹೀಗೆ ೩ ಶಾಸ್ತ್ರ

ಗಳು ಪಾಶ್ಚಾತ್ಯರಲ್ಲಿ ಬಲುಮಟ್ಟಿಗೆ ಪ್ರತ್ಯೇಕವಾಗಿ ಬೆಳೆದಿದೆ. ನಮ್ಮ ದೇಶದಲ್ಲಿ ಅಲಂಕಾರ ವಿಭಜನೆ ಕಾವ್ಯಮೀಮಾಂಸೆ, ಸೌಂದರ್ಯ ದರ್ಶನ ಈ ಕಿರನ್ನು ಬೇರೆಬೇರೆ ಶಾಸ್ತ್ರಗಳೆಂದು ಭಾವಿಸಿ ವಿಂಗಡಿಸದೆ "ಅಲಂಕಾರ ಶಾಸ್ತ್ರ, ಕಾವ್ಯಮೀಮಾಂಸೆ ಈ ಎರಡೂ ಸಮಾನಾರ್ಥಕ ಶಬ್ದಗಳಾಗಿ ಪರಿಗಣಿಸಿದರು. ಕಾರಣ ಅಲಂಕಾರ ಶಬ್ದಕೆ ಸೌಂದರ್ಯವೆಂಬ ಅದರ ಹಿಂದಿನ ವಿಶಾಲಾರ್ಥ ಮರೆಗೊಳ್ಳದೆ ಇದ್ದುದರಿಂದ"

ಕಾವ್ಯ ಸೃಜನಾ ತಂತ್ರಗಳನ್ನು ಹೇಳಿದ ಅದೆಷ್ಟೋ ಭಾರತೀಯ ಅಲಂಕಾರಿಕರು ಇದ್ದಾರೆ. ಅವರಲ್ಲಿ ಕೆಲವರ ಹೆಸರು, ಮತ್ತು ಅವರ ಕೃತಿಗಳು ಗಣಪ್ರಾಯವಾಗಿವೆ. ಉದಾಹರಣೆಗೆ "ಭರತ ನಾಟ್ಯಶಾಸ್ತ್ರ." "ಭಾಮಹನ ಕಾವ್ಯಾಲಂಕಾರ." "ದಂಡಿಯ ಕಾವ್ಯಾದರ್ಶ," "ಉದ್ಭಟನ ಕಾವ್ಯಾಲಂಕಾರಸಾರ ಸಂಗ್ರಹ," ವಾಮನನ "ಕಾವ್ಯಾ-ಲಂಕಾರಸೂತ್ರ" ರುದ್ರಟನ "ಕಾವ್ಯಾಲಂಕಾರ" ರುದ್ರ ಭಟ್ಟನ "ಶೃಂಗಾರತಿಲಕ" ರಾಜಶೇಖರನ "ಕಾವ್ಯಮೀಮಾಂಸೆ" ಆನಂದವರ್ಧನನ ಧ್ವನ್ಯಾಲೋಕ ಅಲ್ಲದೆ ಇತ್ತೀ-ಚಿನ ನವ್ಯವಿಮರ್ಶಕರಾದ ಶ್ರೀ ಪುಟ್ಟಪ್ಪನವರ ದ್ರೌಪದಿಯ ಶ್ರೀಯುದ, ಪಕ್ಷಿಕಾಶಿ' ತೀನಂಶ್ರೀಯವರ ಕಾವ್ಯ ಮೀಮಾಂಸೆ. ಬಿ. ಯಂ. ಶ್ರೀ ಹಾಗೂ ಕುವೆಂಪು ಸಾಪಾ-ದಿತ ಕನ್ನಡ ಕೈಪಿಡಿ ಪ್ರೊ ಜಿ. ಎಸ್. ಶಿವರುದ್ರಪ್ಪನವರ 'ಪೂರ್ವ ಪಶ್ಚಿಮ ವಿಮರ್ಶೆಯ ತತ್ವಗಳು' ಡಾ॥ ಶಂಕರ ಮೊಕಾಶಿ ಪುಣೇಕರ್ ಹಾಗೂ ಡಾ॥ ಸಿ. ಪಿ. ಕೃಷ್ಣಕುಮಾರ್ ಇವರು ಬರೆದಿರುವ 'ಕನ್ನಡ ವಿಮರ್ಶೆ' ಆದ್ಯರಂಗಾಚಾರ್ಯರು ಬರೆದಿರುವ 'ಭರತ ನಾಟ್ಯ ಶಾಸ್ತ್ರ' ಡಾ॥ ಕೆ. ಕೃಷ್ಣಮೂರ್ತಿ ಬರೆದಿರುವ 'ಭಾರ-ತೀಯ ಕಾವ್ಯ ಮೀಮಾಂಸೆ ತತ್ವ ಮತ್ತು ಪ್ರಯೋಗ.' ಶ್ರೀ ಕೆ. ಡಿ. ಕುರ್ತಕೋಟಿ ಬರೆದಿರುವ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ' ಮೊದಲಾದ ಗ್ರಂಥಗಳು ವಿಮರ್ಶಾತಂತ್ರ ಹಾಗೂ 'ಕಾವ್ಯತಂತ್ರ'ವನ್ನು ಚನ್ನಾಗಿ ಬೋಧಿಸುತ್ತವೆ.

ಇವೆಲ್ಲಕ್ಕಿಂತ ಹೆಚ್ಚಾಗಿ ನಾಗವರ್ಮನ ಕಾವ್ಯಾವಲೋಕ ಮತ್ತು ನೃಪತುಂಗನ ಕವಿರಾಜ ಮಾರ್ಗ ಮೊದಲಾದ ಕನ್ನಡ ಗ್ರಂಥಗಳು ಅಲಂಕಾರಿಕ ಗ್ರಂಥಗಳಲ್ಲದೆ, ಇವುಗಳಲ್ಲೆಲ್ಲಾ 'ಕಾವ್ಯತಂತ್ರ',ಕವಿ, 'ಸಹೃದಯ','ಗುಣ-ದೋಷ','ರಸ','ಧ್ವನಿ', 'ಭಾವ' ಮೊದಲಾದವುಗಳ ವಿಚಾರಗಳನ್ನು ಪ್ರತಿಪಾದಿಸುತ್ತವೆ.

ಡಾ॥ ಕುರ್ತಕೋಟಿಯವರು ಹೇಳುವಹಾಗೆ "ಪಾಶ್ಚಾತ್ಯ ವಿಮರ್ಶೆಯ ಪ್ರಭಾವ ಆಂಗ್ಲ ಕಾವ್ಯದ ಹೊಸ ವಿಚಾರಗಳನ್ನು ನಾವು ಜಾಗೃತಿಯ ಸಲುವಾಗಿ ಮಾತ್ರ ಸ್ವೀಕರಿಸಿದ್ದೆವು. ಜೀವನ್ಮೃತಾವಸ್ಥೆಯಲ್ಲಿ ಬಿದ್ದಿದ್ದ ಕಾವ್ಯ ಆಗ ಚೇತರಿಸಿ ಕೊಳ್ಳಲು ಅನುವಾಯಿತು, ಈಗ ಅವುಗಳ ಅವಶ್ಯಕತೆ ಅಷ್ಟೊಂದಿಲ್ಲ. ಬೇನೆ ಗುಣವಾದಮೇಲೂ ಔಷಧಕ್ಕೆ ಅಂಟಿಕೊಂಡಿರುವುದು ಮಾನಸಿಕ ರೋಗದ ಲಕ್ಷಣ"- ಎನ್ನುವ ಮಾತನ್ನು ನಾವು ಒಪ್ಪಿಕೊಂಡು ಅನ್ಯಭಾಷಾ ಗುಲಾಮರಾಗಿ, 'ಇಂಗ್ಲೀಷ್

ಸಾಹಿತ್ಯ ಹಾಗೆ ಹೀಗೆ' ಎಂದು ಹೊಗಳಿ ಬಹಳಷ್ಟು ಕನ್ನಡಿಗರಿಗೆ ನಿಲುಕದ ಇಂಗ್ಲೀಷ್ ಕಥೆ, ಕವನ, ಕಾದಂಬರಿ, ಗ್ರಂಥಗಳನ್ನೋದಿದ 'ಕನ್ನಡ ಪಂಡಿತರು'–ಕನ್ನಡಿಗರನ್ನು 'ಕೂಪ ಮಂಡೂಕ'ಗಳಿಗೆ ಹೋಲಿಸಿ 'ಪಡಪೋಶಿ' ವ್ಯಾಪಾರಿಗಳಾಗದಿರಲಿ.–ಎಂದು ಹಾರೈಸುತ್ತೇವೆ.

ನಮ್ಮ ಅಲಂಕಾರಿಕರು ಆಗಾಗಲೇ ಕಾವ್ಯವಿಮರ್ಶೆಯಲ್ಲಿ ಕಾವ್ಯಕಲೆಯ ಬಾಹ್ಯಾಂಗ ಅಥವಾ ತಾಂತ್ರಿಕ ಅಂಶಗಳನ್ನು ಗುರ್ತಿಸಿದ್ದಾರೆ, ವ್ಯಾಖ್ಯಾಸಿದ್ದಾರೆ. ಇವೆರಡೂ ಒಂದೇ ಹಕ್ಕಿಯ ಪುಕ್ಕಗಳೆಂದೂ ಕರೆದಿದ್ದಾರೆ. 'ಅಲಂಕಾರ' ಹಾಗೂ 'ಗುಣ-ರೀತಿ' ಪ್ರಕ್ರಿಯೆಗಳು ಕಾವ್ಯದ ಬಾಹ್ಯಾಂಗದ ವಿವರಣೆಗೂ 'ರಸ-ಧ್ವನಿ' ತತ್ವವು ಅಂತರಂಗದ 'ಉನ್ಮೀಲನಕ್ಕೂ' ಅತ್ಯಂತ ಪ್ರಯೋಜಕಗಳೆಂದು ಸ್ಥೂಲವಾಗಿ ಹೇಳಿದ್ದಾರೆ.

"ಕಾವ್ಯಾನುಭವ ಲೋಕಾನುಭವಕ್ಕಿಂತ ವಿಲಕ್ಷಣವೆಂದೂ ಸೌಂದರ್ಯಶಾಸ್ತ್ರ ತೀರ್ಮಾನಿಸಿದ್ದರೂ ಕೃತಿಗಳ ಬೆಲೆಕಟ್ಟುವಾಗ ಬರುವ ಕಾವ್ಯಮೀಮಾಂಸೆಯಲ್ಲಿ ಅರ್ಥಾತ್ ಗುಣದೋಷ ವಿಮರ್ಶೆಯಲ್ಲಿ ನೈತಿಕ ಬೆಲೆಗಳೂ ತಾಂತ್ರಿಕ ಅಂಶಗಳ ಜತೆಗೆ ಹೇಗೆ ಸೇರ್ಪಡೆಯಾಗುತ್ತವೆಂದೂ"–ನಿರ್ದೇಶಿಸಿದ್ದಾರೆ.

ಇನ್ನ ಪಾಶ್ಚಾತ್ಯರ ತಾಂತ್ರಿಕ ಅಂಶಗಳ ವಿವರಣೆಯನ್ನು ಭಾರತೀಯ ಕಾವ್ಯ ಮೀಮಾಂಸೆಯಿಂದ ತಿಳಿಯಬಹುದು. "ಅಲಂಕಾರ ರಹಿತಾ ವಿಧವೇನ ಸರಸ್ವತೀ" ಅಗ್ನಿಪುರಾಣ. ಅ. ೩೪೪. "ಸೌಂದರ್ಯ ರಹಸ್ಯವು ರಸಿಕನ ಆಸ್ವಾದವ ದೃಷ್ಟಿಯಿಂದ ರಸವೆನಿಸುವುದೋ ಅದೇ ಸೃಜನ ಕ್ರಿಯೆಯಲ್ಲಿ ನಿರತನಾದ ಕವಿಯ ಕಲಾದೃಷ್ಟಿಯಿಂದ ಅಲಂಕಾರವೆನಿಸುವುದು." "ರಸವು ಅನುಭವೈಕವೇದ್ಯ. ಮಾನವೀಯ ಚಿತ್ತ ವೃತ್ತಿಗಳ ವಸ್ತುನಿಷ್ಠ ಪ್ರತಿಪಾದನೆ ರಸಗಳ ಅವಿರ್ಭಾವಕ್ಕೆ ಅಗತ್ಯ. ಇವನ್ನು ವಸ್ತು ನಿಷ್ಠ ಪ್ರತಿಪಾದನೆ ರಸಗಳ ಆವಿರ್ಭಾವಕ್ಕೆ ಅಗತ್ಯ. ಇವನ್ನು ವಸ್ತುರಸಗಳೆಂದೂ ಕರೆಯಬಹುದು. ವಿಮರ್ಶೆಗೆ ವಿಶ್ರಾಂತಿ ಸ್ಥಾನವೆಂದರೆ ಶರೀರ ಸೌಂದರ್ಯ ಪುಷ್ಟಿ ಗೊಳಿಸುತ್ತಿರುವ ರಸಾದಿ ಧ್ವನಿಯೇ ಸರಿ.

"ಲೋಕಸ್ಥಿತಿಗೆ ಅನುಗುಣವಾಗಿ ವಸ್ತುವಿನ ಸೂಕ್ಷ್ಮ ವರ್ಣನೆಯಲ್ಲ. 'ಸ್ವಭಾವೋಕ್ತಿ' ಯೆಂಬ ಅಲಂಕಾರವೆನಿಸುತ್ತದೆ. "ವಕ್ರೋಕ್ತಿ" ಎಂಬುದು ಅಲಂಕಾರಗಳ ಸಾಮಾನ್ಯ ತತ್ವ. ದಿನಬಳಕೆಯ ಭಾಷೆಯಲ್ಲಿಲ್ಲದ "ಅತಿಶಯವನ್ನು ಸಾಧಿಸಲು ಕವಿನಿರ್ಮಿಸುವ ನೂತನ ಭಾಷೆಯೇ ವಕ್ರೋಕ್ತಿ" ಯೆಂನರೂ ಸಲ್ಲುತ್ತದೆ. ಇಲ್ಲಿ ಆವನು ಒಮ್ಮೆ ರೂಪಕ ವಿಧಾನವನ್ನು ಅನುಸರಿಸಬಹುದು. ಇಲ್ಲವೇ ಬರಿಯ ಪ್ರತಿ ಮೆಗಳನ್ನು ಮಾತ್ರ ಬಳಸಿ ಅತಿಶಯೋಕ್ತಿಯನ್ನು ಸಾಧಿಸಬಹುದು. ಅಥವಾ ಹತ್ತಾರು ಹೋಲಿಕೆಗಳನ್ನು ತಾನೇ ಕಲ್ಪನೆಯಿಂದ ಸೃಷ್ಟಿಸಿ ಉತ್ಪ್ರೇಕ್ಷಿಸಬಹುದು. ತನ್ನ ಜೀವಾ

ನಾನುಭವದಿಂದಲೇ ಹೋಲಿಕೆಗಳನ್ನು ಕೊಟ್ಟು ಓದುಗನನ್ನು ಮೆಚ್ಚಿಸಬಹುದು. ತನ್ನ ಚಿತ್ತ ಭಿತ್ತಿಯಲ್ಲಿ ಸ್ಪಂದಿಸಿದ ಸೂಕ್ಷ್ಮ ಸಂವೇದನೆಗಳನ್ನು ಕವಿರಸಿಕನಿಗೆ ಅನುಭವವೇದ್ಯವಾಗಿಸಲು **"ಅಲಂಕಾರತಂತ್ರ"** ವೊಂದೇ ಅವನಿಗಿರುವ ಮಾಧ್ಯಮ."

"ಸಕಲ ಅಲಂಕಾರಗಳಿಗೂ ಬೀಜರೂಪವಾದ ಸೌಂದರ್ಯ ತತ್ವವನ್ನು ಚಮತ್ಕಾರವೆನ್ನಬಹುದು". ಇದನ್ನು ಭಾಮಹಾದಿಗಳು 'ವಕ್ರೋಕ್ತಿ ಎಂದರು. ಭರತನು 'ಲಕ್ಷಣ'ವೆಂದು ಕರೆದನು. ಇತರರು 'ಬಂದ ಚಾಪ್ಪಯೆ' ಎಂದರು. ಅಭಿನವ ಗುಪ್ತ ಇವೆಲ್ಲಾ ಒಂದು ಬಗೆಯ ಪರ್ಯಾಯಪದಗಳೇ, 'ಕವಿವ್ಯಾಪಾರ' ಎಂದು ಕರೆದ.

'ನಮ್ಮ ಮೊದಲ ಲಕ್ಷಣ ಗ್ರಂಥವಾದ ಕವಿರಾಜಮಾರ್ಗ (ಕ್ರಿ. ಶ: ೮೫೦)ದಲ್ಲಿ ಕಾವ್ಯದ 'ಗುಣದೋಷ.' ಉತ್ತರ ದಕ್ಷಿಣ ಕಾವ್ಯ ಮಾರ್ಗಗಳ ವಿವೇಚನೆಯನ್ನು ಮಾಡಲಾಗಿದೆ. ಆದರಂತೆ ರನ್ನಮಹಾಕವಿ ಕಾವ್ಯದ ತಂತ್ರವಿಧಾನವನ್ನು ಹೇಳುವಾಗ, 'ಗುಣಮಂ ಬಯ್ಸಿಡಬೇಡ ನಿಲ್ಕೊಡೆ ಗುಣಂ ನಿಲ್ಗುಂ ಧನಂನಿಲ್ಗುಮೇ?' ಎಂದು ಕವಿಮನೋಧರ್ಮಗಲ್ಲಿಯೇ ನೆಲೆಯೂರಿ ಅವನ ಶಬ್ದಾರ್ಥ ಸೃಷ್ಟಿಯ ಸಕಲಾವಸ್ಥೆಗಳಲ್ಲಿಯೂ ತನ್ನ ವರ್ಚಸ್ಸನ್ನೂ ಬೀರುವ ಸೂಕ್ಷ್ಮತರ ತತ್ವವೇ ವಿಭಿನ್ನ 'ರೀತಿ' ಅಥವಾ 'ಮಾರ್ಗ'ಗಳಿಗೆ ಪ್ರೇರಕವಾಗಿರುವ ಗುಣತತ್ವವೆಂಬುದನ್ನು ಸಾರಿದ್ದಾನೆ.

ಕಾಳಿದಾಸನ ಶೈಲಿಯಗುಣ, 'ವೇಣೀಸಂಹಾರ' ಬರೆದ ಭಟ್ಟನಾರಾಯಣನ ಕಾವ್ಯಗುಣ ಬೇರೆಬೇರೆ ಮೊದಲನೆಯದು 'ಮಾಧುರ್ಯ' ಎರಡನೆಯದು 'ಓಜಸ್ಸು.' ಲಲನೆಯರ ಶೃಂಗಾರ ಲೀಲಾವರ್ಣನೆಗೆ ಮಾಧುರ್ಯ ಉಚಿತವಾದರೆ ಉದ್ದಾಮ ಭೀಮನ ರಣೋಪ್ಪಟ ಆರ್ಭಟಕ್ಕೆ 'ಓಜಸ್ಸು' ವಿಹಿತವಾಗುತ್ತದೆ.

ನಮ್ಮ ಅಲಂಕಾರಿಕರು ಸತ್ಕಾವ್ಯ ಹಾಗೂ ಕುಕಾವ್ಯಗಳನ್ನು ವಿಭೇದಿಸುವುದಕ್ಕಾಗಿಯೇ 'ನಾವೃಷಿಃಕುರುತೇ ಕಾವ್ಯಂ' 'ಕಾವ್ಯಾಲಾಂಪಾಂಶ್ಚ ವರ್ಜಯೇತ್' ಎಂದು ಗರ್ಜಿಸಿದ್ದಾರೆ.

ನಮ್ಮ ಅಲಂಕಾರಿಕ 'ರಸಧ್ವನಿತತ್ವ' ಪಾಶ್ಚಾತ್ಯ ವಿಮರ್ಶಕರ ತಂತ್ರದ ಚರ್ಚೆಗಿಂತ ಮಿಗಿಲಾಗಿದೆ. ಸಂಕೇತವೆಂಬ ವ್ಯಾಖ್ಯೆಯಲ್ಲಿ ಸೋಮೇಶ್ವರನು ಹೀಗೆ ಹೇಳುತ್ತಾನೆ. 'ಯೇಷಾಂತಾಂಡವಮಾಧತ್ತೇ ಚಿತ್ತಾಧ್ವನಿ ರಸಧ್ವನಿಃ' 'ತವಾಸ್ಯ ಸುವರ್ಣಸ್ಯ ಪರೀಕ್ಷಾಕಷಪಟ್ಟಿಕಾಃ' ಅಂದರೆ ಕಾವ್ಯವೆಂಬ ಬಂಗಾರವನ್ನು ಉಜ್ಜಿನೋಡಿ ಪರೀಕ್ಷೆ ಮಾಡಲು ಒರೆಗಲ್ಲುಗಳಿವೆಯೆ ಎಂದು ಯಾರಾದರೂ ಕೇಳಿದರೆ, ಯಾವ ಸಹೃದಯರ ಹೃದಯ ಮಂದಿರದಲ್ಲಿ ರಸಧ್ವನಿಯ ತತ್ವ ಸದಾತಾಂಡವವಾಡುತ್ತಿರುವುದೋ ಆ ಸಹೃದಯರೇ ಒರೆಗಲ್ಲುಗಳು ಎಂದು ಕಾವ್ಯದಲ್ಲಿ ಸೌಂದರ್ಯ ತತ್ವವನ್ನು ಮೊದಲನೆ ಬಾರಿಗೆ ಮನಗಂಡವನೇ ಆನಂದವರ್ಧನನೆಂದು ನಮ್ಮವರ ಅಭಿಪ್ರಾಯ.

ಕಾವ್ಯಾನುಭವವೇ 'ರಸ' ರಸವೇ 'ಅಲಂಕಾರ್ಯ' ಆದರ ಪ್ರಕಟನ ಪ್ರಣಾಲಿಯೇ 'ಧ್ವನಿ' ಎಂಬುದು ನಮ್ಮ ಧ್ವನಿವಾದಿಗಳ ಮಹತ್ತರ ಕೊಡುಗೆ.

ಕವಿಯು ಸಂಯೋಜಿತ ಭಾವಗಳು ಗುಣಾಲಂಕಾರಗಳು ಸೌಂದರ್ಯ ಬಂಧುರ-ವಾದ ಶಬ್ದಾರ್ಥಗಳ ಮೂಲಕ ಮೂರ್ತಿಭವಿಸಿದಾಗಲೇ ಸಾಹಿತ್ಯ ಸೃಷ್ಟಿಯಾಗುತ್ತದೆ. ಕಾವ್ಯದಲ್ಲಿ ರಸಿಕರಿಗೆ ಮೆಚ್ಚುಗೆಯಾಗುವ ಲೌಕಿಕಾಂಶವನ್ನು ವಸ್ತುಧ್ವನಿಯೆಂದೂ, ಅಲೌಕಿಕಾಂಶಗಳನ್ನು 'ರಸಧ್ವನಿ'ಯೆಂದೂ ತಿಳಿಯಬಹುದು.

ಕೇವಲ ಪಾಶ್ಚಾತ್ಯರ ಕಾದಂಬರಿಗಳನ್ನು ಓದಿ ಅವುಗಳು 'ಹಾಗಿವೆ' 'ಹೀಗಿವೆ' ಎಂದು ಅಬ್ಬರಿಸುವುದಕ್ಕಿಂತ, ಕನ್ನಡ ಸಾಹಿತ್ಯದಲ್ಲಿ ಕಾದಂಬರಿಕಾರರು ಬಳಸಿದ ವಸ್ತು, ತಂತ್ರ. ಅಭಿರುಚಿ, ಪಾತ್ರಸೃಷ್ಟಿ, ಕಥಾಸಂವಿಧಾನ, ಸಮಕಾಲಿನ ಪ್ರಜ್ಞೆ, ಸಂಘರ್ಷ, ಶೈಲಿ, ಕೌಟುಂಬಿಕ, ಧಾರ್ಮಿಕ ವೈಶಿಷ್ಟ್ಯ, ಅನುಭವ ವೈವಿಧ್ಯ ದರ್ಶನ-ಶುದ್ಧಿ, ಮೊದಲಾದವುಗಳನ್ನು 'ಇಂಗ್ಲೀಷ್ ಕಲಿತ ಕನ್ನಡ ಪಂಡಿತರು'-ಪರಾಮರ್ಶಿಸಲಿ ತಾವು ತಮ್ಮ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿಯೂ ಬೃಹತ್. ಮಹತ್ ಕಾದಂಬರಿಗಳಿವೆ ಅವುಗಳನ್ನು ಕೆಳಕಂಡಂತೆ ತಿಳಿದು ಓದಿರಣ್ಣಾ ಎಂದು ಹೇಳಲಿ. ಗಳಗನಾಥರ 'ಕುಮುದಿನಿ' 'ಮರಾಠರ ಅಭ್ಯುದಯ' 'ಕನ್ನಡಿಗರ ಕರ್ಮಕಥೆ' 'ಕಮಲ ಕುಮಾರಿ' 'ಮಾಧವ ಕರುಣ ವಿಲಾಸ' ಎಮ್. ಎಸ್. ಪುಟ್ಟಣ್ಣನವರ 'ಮಾಡಿದುಣ್ಣೋ ಮಹಾರಾಯ' ಕೆರೂರ್ ವಾಸುದೇವಾಚಾರ್ಯರ 'ಇಂದಿರೆ' ತೂರಮರಿಯವರ 'ಬಾಣಕಾದಂಬರಿ' ಪಂಜೆಯವರ. ಕೋಟಿಚೆನ್ನಯ' ಅ.ನ.ಕೃ.ರವರ 'ಸಂಧ್ಯಾರಾಗ' 'ಮಂಗಳ ಸೂತ್ರ' 'ನನ್ನ ಸತ್ಯ' 'ಶನಿ ಸಂತಾನ' "ಸಂಜೆಗತ್ತಲು" "ಅಪರಂಜಿ" ತ. ರ. ಸು. ಅವರ "ಮಸಣದ ಹೂ" "ಬಿಡುಗಡೆಯ ಬೇಡಿ" "ಜೀವನದ ಗೊಂಬೆ" "ಹಂಸಗೀತೆ" ನಿರಂಜನರ "ಅಭಯಾಶ್ರಮ "ಚಿರಸ್ಮರಣೆ" "ದೂರದ ನಕ್ಷತ್ರ" "ರಂಗಮ್ಮನ ವಠಾರ" ಕಾರಂತರ "ಕನ್ಯಾಬಲಿ" "ಸರಸಮ್ಮನ ಸಮಾಧಿ" "ದೇವ ದೂತರು" "ಚೋಮನ ದುಡಿ" "ಮರಳಿ ಮಣ್ಣಿಗೆ" "ಬೆಟ್ಟದ ಜೀವ" "ಮೂಕಜ್ಜಿಯ ಕನಸು" ಮುಗಳಿಯವರ "ಬಾಳುರಿ" "ಕಾರಣ ಪುರುಷ" "ಅನ್ನ" ಆನಂದ ಕಂದರ "ಸುದರ್ಶನ" "ಮಗಳ ಮದುವೆ" 'ಜಡಭರತ'

'ಧರ್ಮಸೆರೆ' ,ದೇವುಡು ನರಸಿಂಹಶಾಸ್ತ್ರಿಗಳ 'ಅಂತರಂಗ' 'ಮಲ್ಲಿ' 'ಎರಡನೇ ಜನ್ಮ'. ಡಾ. ವೀಣಾ. ಶ್ರೀ ರಂಗರ 'ವಿಶ್ವಮಿತ್ರ ಸೃಷ್ಟಿ'. ಕುವೆಂಪು ರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ'. ವಿನಾಯಕರ 'ಸಮರಸವೇ ಜೀವನ' ಮಿರ್ಜಿ ಅಣ್ಣಾರಾಯರ 'ನಿಸರ್ಗ' S. ಅನಂತ ನಾರಾಯಣರ 'ಅತ್ತಿಗೆ' ಗೋರೂ ರವರ 'ನಮ್ಮೂರಿನ ರಸಿಕರು' ಶ್ರೀ ದೇವುಡು ಅವರ 'ಮಯೂರ'. ಕೆ. ವಿ. ಅಯ್ಯರರ ಶಾಂತಲಾ, ಮಾಸ್ತಿಯವರ 'ಚಿಕವೀರ ರಾಜೇಂದ್ರ' 'ಚನ್ನಬಸವ ನಾಯ್ಕ'

ರಾವಬಹದ್ದೂರರ 'ಗ್ರಾಮಾಯಣ'-ಹೀಗೆ ಎಲ್ಲಾ ಸಾಹಿತ್ಯ ವಿಮರ್ಶೆಗೂ ಭಾರತೀಯ ಕಾವ್ಯ ಮೀಮಾಂಸೆ ತನ್ನ ಅಲಂಕಾರ, ಗುಣ ದೋಷ, ರಸಧ್ವನಿ ಪ್ರಸ್ಥಾನಗಳ ಮೂಲಕ ವಿಶ್ವಮಾನ್ಯವಾಗುವಂತೆ, ಬುದ್ಧಿ ವೇದ್ಯವಾಗುವಂತೆ ಹೃದಯ ರಂಜನೆಯಾಗುವಂತೆ- ಮಂಡಿಸಿದೆ. ಪಾಶ್ಚಾತ್ಯರು ಇದನ್ನು ಓದಿಯೇ-ಅವರ ಭಾಷೆಯಲ್ಲಿ ಅನುವಾದಿಸಿಕೊಂಡಿರುವ ಉದಾಹರಣೆಗಳೂ ಸಾಕಷ್ಟಿವೆ.

ಆದ್ದರಿಂದ ಕನ್ನಡ ನವ್ಯ ವಿಮರ್ಶೆ ಕೇವಲ ಪಾಶ್ಚತ್ಯರ ವಿಮರ್ಶೆಯ ವಿಚಾರಗಳಿಂದಷ್ಟೇ ತುಂಬಿಲ್ಲ, ತನ್ನದೇ ಆದ ಸ್ವಾತಿಕೆಯಿಂದ ವಿಶ್ವಕ್ಕೇ ಕಡಕೊಡುವಷ್ಟು ಅಲಂಕಾರಿಕ ತಂತ್ರಗಳನ್ನು ಹೊಂದಿದೆ. ಅವನ್ನು ಇಂಗ್ಲೀಷ ಸಾಹಿತ್ಯ ಓದಿದ ವಿದ್ವಾಂಸರು ತಾಳಿನೋಡಿ ಬರೆಯಲಿ–ಎಂದು ಹಾರೈಸುವೆ,

ಅಡಿ ಟಿಪ್ಪಣಿಗಳು

1. ಭಾರತೀಯ ಕಾವ್ಯಮೀಮಾಂಸೆ- ತೀ. ನಂ. ಶ್ರೀ.
2. ಭಾರತೀಯ ಕಾವ್ಯಮೀಮಾಂಸೆ, ತತ್ವ ಮತ್ತು ಪ್ರಯೋಗ - ಡಾ. ಕೆ. ಕೃಷ್ಣಮೂರ್ತಿ
3. ಯುಗಧರ್ಮ ಹಾಗೂ ಸಾಹಿತ್ಯದರ್ಶನ - ಕೆ. ಡಿ. ಕುರ್ತಕೋಟಿ
4. ಕನ್ನಡ ವಿಮರ್ಶೆ - ಡಾ. ಶಂಕರ ಮೊಕಾಶಿ ಪುಣೇಕರ್, ಡಾ. ಸಿ. ಪಿ. ಕೃ,
5. ಭರತನಾಟ್ಯ ಶಾಸ್ತ್ರ - ಆದ್ಯ ರಂಗಾಚಾರ್ಯ
6. ಕಾವ್ಯಪ್ರಸಂಗ - ಪ್ರೊ. ಎಲ್. ಆರ್. ಹೆಗಡೆ
7. ಕನ್ನಡ ಕೈಪಿಡಿ ಭಾಗ 1
8. ಕನ್ನಡ ಸಾಹಿತ್ಯ ಚರಿತ್ರೆ - ರಂ. ಶ್ರೀ ಮುಗಳಿ
9. ಸಾಹಸ ಭೀಮವಿಜಯ - ರನ್ನ
10. Nature & Scope of Indian Aesthetics etc. University of Mysore 1968
11. ಆನಂದವರ್ಧನನ ಕಾವ್ಯ ಮೀಮಾಂಸೆ - ಮೈಸೂರು 1969
12. Sanskrist criticim & Alankara pp 20-37 Essays in Sanskrit criticism Karnatak University, 1969

ಹಸ್ತಪ್ರತಿಗಳು, ಪ್ರತಿಕಾರರು, ಓದುಗರು-
ಒಂದು ಸ್ಥೂಲ ಪರಿಚಯ

● ಸದಾನಂದ ಪಾಟೀಲ

ಹಸ್ತಪ್ರತಿಗಳದು ದೊಡ್ಡ ಸಂಸಾರ. ಜವಾಬ್ದಾರಿ ಹೊತ್ತು ಮನೆತನ ನೋಡುವ ಸಂದರ್ಭ ಬಂದಾಗ ಸಸಾರ ಇಲ್ಲ ಸಂಸಾರ ಎನ್ನುವಂತೆ ಹಸ್ತಪ್ರತಿಗಳ ಅಧ್ಯಯನ ಕಠಿಣವೆನಿಸುತ್ತದೆ. ಮೊದಲ ನೋಟಕ್ಕೆ ಸರಳವಾಗಿ ಕಂಡರೂ ಕೈ ಮುಟ್ಟಿ ಮನಸ್ಸನ್ನು ಹರಿಬಿಟ್ಟಾಗ ಅಲ್ಲಿಯ ಭಾಷೆ, ಲಿಪಿ ಕೆಲವು ಸಲ ಅರ್ಥವಾಗುತ್ತದೆ; ಕೆಲವು ಸಲ ಗಲಿಬಿಲಿ ಗೊಳಿಸುತ್ತವೆ.

ಹಸ್ತಪ್ರತಿಗಳು–ಪ್ರತಿಕಾರರು : ಹಸ್ತಪ್ರತಿಗಳಿಗೆ ಹೊಸಬರಾಗಿ ಪರಿಶೀಲನೆ ಮಾಡುವಾಗ ನಮ್ಮ ಭಾಷೆ ನಮಗೇ ಅಪರಿಚಿತವಾಗಿ ಸಹನೆಯನ್ನು ಕಳೆದುಕೊಳ್ಳು ವಂತಾಗುತ್ತದೆ. ಲಿಪಿ. ವ್ಯಾಕರಣದ ಬಗ್ಗೆ ಮಾಹಿತಿಯುಳ್ಳವರಿದ್ದರೆ ಆ ಅನು ಭವದಲ್ಲಿ ತಾಳೆಗರಿಯನ್ನಾಗಲಿ ಕಾಗದ ಪ್ರತಿಗಳನ್ನಾಗಲಿ ಓದಲು ಸಾಧ್ಯ. ಅವು ಗಳ ತಿಳುವಳಿಕೆಯ ಅಗತ್ಯತೆಯ ಬಗ್ಗೆ ಕಾಳಜಿ ವಹಿಸದೆ ಪರಿಶೀಲನೆ ಮಾಡುತ್ತ. ಅಲ್ಲಿ ಇದ್ದ ಲಿಪಿ ಭಾಷೆಯನ್ನು ಇದ್ದಕ್ಕಿದ್ದಂತೆ ಬರೆದಿಟ್ಟರೆ ಅದು ಯಾವ ಭಾಷೆಗೂ ಛಂದಸ್ಸಿಗೂ ಸೇರದ ಹಾಗಿರುತ್ತದೆ. ಬಾಲಕರು ಅಂಕಿಮಗ್ಗಿಗಳನ್ನು ಕಲಿತು ಓದು ವಾಗ, ಅಕ್ಷರ ಬಳ್ಳಿಗಳನ್ನು ಕಲಿತು ಒಮ್ಮೆಲೆ ಬರೆಯೆಂದಾಗ ತಪ್ಪುವಂತಹ ರೀತಿಯಲ್ಲಿ ಭಾಷಾ ಬಳಕೆ ಹಸ್ತಪ್ರತಿಗಳಲ್ಲಿ ಕಾಣದೊರೆಯುತ್ತದೆ. ಈ ತಪ್ಪುಗಳು ಬಾಲಿಶ ಭಾವನೆಯಿಂದಾಗಲಿ. ಅಜ್ಞಾನದಿಂದಾಗಲಿ ಉಂಟಾದುವಲ್ಲ: ಅಧ್ಯಾಹಾರದ ಅವಶ್ಯ ಕತೆಯೋ ಶಬ್ದದ ಸಾಂಕ್ಷೇಪಿಕತೆಯೋ ಅಥವಾ ಹಸ್ತಪ್ರತಿಗಳು ನಕಲುಗೊಳ್ಳುವಾಗ ನಕಲುಗಾರ (ಪ್ರತಿಕಾರ)ನ ಅನನುಭವಿಕ ಭಾಷಾ ಬರವಣಿಗೆಯೋ ಕಾರಣವಾಗಿರು ತ್ತದೆಯೆನ್ನಬೇಕು.

ಮೂಲ ಕೃತಿಕಾರರ ಬರಹವುಳ್ಳ ಹಸ್ತಪ್ರತಿಗಳು ನಮಗೆ ದೊರೆಯುವುದೇ ಕಡಿಮೆ. ಮತಧರ್ಮದ ಪ್ರಚಾರಾಸಕ್ತಿಯ ಹಾಗೂ ಸ್ವಾಸಕ್ತಿಯ ಜನರು ಕವಿ ಕೃತಿಗಳ ನಕಲು ಪ್ರತಿ ಮಾಡಿ- ಮಾಡಿಸುತ್ತಿದ್ದರು. ಹೀಗೆ ಮಾಡುವವರ ಕೈ ತಪ್ಪುಗಳೇ ಮೂಲ ಕೃತಿಯಿಂದ ಭಿನ್ನವೆನ್ನುವಷ್ಟು ಕಂಡುಬರುತ್ತದೆ. ಸರ್ವಜ್ಞ ಎಂಬ ಅಂಕಿತವನ್ನು ಹಾಕದೆ 'ಪರಮಾರ್ಥ' ಎಂಬ ಮುದ್ರಿಕೆ ಹಾಕಿ ನಕಲುಗೊಳಿಸಿದ

ಸರ್ವಜ್ಞನ ವಚನಗಳು ಸಮಸ್ಯೆಯಾಗಿ ನಿಂತು ಸರ್ವಜ್ಞ ಕವಿಯ ವಿಷಯಕ್ಕೆ ಬಿಸಿಬಿಸಿ ಚರ್ಚೆಯಾಗುವಂತಾಯಿತು. ಪ್ರತಿಕಾರನ ಅವ್ಯಕ್ತ ಮನೋಭಾವದಿಂದಾಗಿ ಈ ರೀತಿಯ ಪ್ರಮಾದಗಳಾಗುತ್ತವೆ. ಇತಿಹಾಸದ ಗರ್ಭದಲ್ಲಿ ತನ್ನದೇನೂ ಇಲ್ಲವೆಂದು ಅನುಚಿತವಾಗಿ ವರ್ತಿಸುವವರ ಸಾಲಿನಲ್ಲಿ ಆ ಪ್ರತಿಕಾರ ಬಂದರೆ ತಪ್ಪಿನ ವಿಚಾರವಲ್ಲ. ಕೆಲವು ಸಾರೆ ಈ ಪ್ರತಿಕಾರರು ಪ್ರತಿಭಾವಂತರಿದ್ದರೆ ಪ್ರತಿ ಮಾಡುವ ಸಮಯದಲ್ಲಿ ತಮ್ಮದಷ್ಟನ್ನು ಸೇರಿಸುತ್ತ ಹೋಗುವರು. ಇದರಿಂದಾಗಿ ಉಂಟಾಗುವ ಪ್ರಮಾದ ಗಳಿಗೆ ಕನ್ನಡ ಸಾಹಿತ್ಯದಲ್ಲಿ ಲೆಕ್ಕವಿಲ್ಲ, ಪ್ರತಿಕಾರನಿಗೆ ಅದು ಹೆಮ್ಮೆಯ ವಿಷಯ ವಾಗಿರುತ್ತದೆ. ಆದರೆ ಸತ್ಯಕ್ಕೆ ಪೆಟ್ಟು ತಾಗಿರುತ್ತವೆ. ಸರ್ವಜ್ಞ ರಚಿಸಿದ, ಶರಣರು ರಚಿಸಿದ ನಿಜವಾದ ವಚನಗಳೆಷ್ಟು? ದಾಸರ ಉಗಾಭೋಗಗಳಲ್ಲಿ ಶರಣರ ಮುದ್ರಿಕೆಯ ಅದಲು-ಬದಲು ನಡೆದಿರುವುದು ಕಂಡುಬರುವುದರಿಂದ ದಾಸರ ನಿಜವಾದ ಸಾಹಿತ್ಯವೆಷ್ಟು? ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಕೊನೆಕೊನೆಯಲ್ಲಿಯ ಪದ್ಯಗಳು ಕೇಶಿರಾಜನನ್ನು ಹೊಗಳಿ ಯಾರೋ ಬರೆದದ್ದು ಎಂದೆನಿಸುತ್ತದೆ. ಇಂತಹ ಅನುಮಾನಗಳು ಸಹಜವಾಗಿ ಹುಟ್ಟಿಕೊಳ್ಳುತ್ತವೆ.

ಹಸ್ತಪ್ರತಿಗಳನ್ನು ಸಂರಕ್ಷಿಸುವುದು ಆದ್ಯ ಕರ್ತವ್ಯವೆಂಬ ಭಾವನೆ ನಮ್ಮವರಲ್ಲಿ ಬಲವಾಗಿದೆ. ಆ ಕಾರಣದಿಂದಲೆ ಅವುಗಳ ಪ್ರತೀಕರಣ ನಡೆಯುತ್ತಿದ್ದರೆ ಅದೆಷ್ಟು ಪ್ರಾಮಾಣಿಕತೆಯಿಂದ ಕೂಡಿತ್ತೆಂಬುದು ಗಮನಿಸಬೇಕಾದ್ದೇ. ಒಂದು ವ್ಯವಸ್ಥಿತ ಕ್ರಮವಿಲ್ಲದಾಗ ಪ್ರತಿಕಾರರು ತಮ್ಮ ಚಿತ್ತ ಬಂದಂತೆ ಕೆಲವು ಸಲ ಪ್ರತಿಗಳನ್ನು ಮಾಡಿದ್ದಾರೆ. ಛಂದೋಬಂಧದಲ್ಲಿ ಕಟ್ಟಿದ ಕಾವ್ಯಗಳ ಚೌಕಟ್ಟಿನಲ್ಲಿ ಕೂಡ ಪ್ರತಿಕಾರರು ತಮ್ಮ ಸಾಹಸ ವ್ಯಕ್ತಪಡಿಸಿದ್ದಾರೆ. ಆದರೆ ಅದರ ಕ್ಲಿಷ್ಟತೆಯ ಕಾರಣದಿಂದ ಯಾಂತ್ರಿಕವಾಗಿ ಪ್ರತಿ ಮಾಡಿದ್ದರಿಂದ ಆ ಪ್ರತಿಗಳಲ್ಲಿ ಕಲಬೆರಕೆ ದೋಷಗಳು ಕಡಿಮೆ ಇವೆ.

ಸಂಸ್ಕೃತ ಕನ್ನಡ : ಸಂಸ್ಕೃತ ಭಾಷೆಯನ್ನು ಕನ್ನಡದಲ್ಲಿ ಹಿಡಿದಿಟ್ಟ ಅನೇಕ ಹಸ್ತ ಪ್ರತಿಗಳು ದೊರೆಯುತ್ತವೆ. ಸಂಸ್ಕೃತವು ತನ್ನ ಒಡೆತನವನ್ನು ನಡೆಸಿಕೊಂಡು ಬಂದ ಕಾಲದಲ್ಲಿ ಕನ್ನಡವೂ ಪ್ರಾದೇಶಿಕವಾಗಿ ಸ್ಥಾನಮಾನ ಗಳಿಸತೊಡಗಿತು. [ಅದರ ಫಲದಿಂದಲೇ ಸಂಸ್ಕೃತದ ಬಹಳಷ್ಟು ಕೃತಿಗಳು ಅನುವಾದಗೊಂಡವು. ಈ ಸಂದರ್ಭದಲ್ಲಿ ಕನ್ನಡದ ಪ್ರಭಾವವನ್ನು ಗುರುತಿಸುವ ಇನ್ನಾವುದೋ ಒತ್ತಡದಿಂದ ಕನ್ನಡ ಕಲಿಕೆಯನ್ನು ಅವಶ್ಯವಾಗಿ ಮಾಡುವ ಗುರುತರ ಹೊಣೆಗಾರಿಕೆಯಲ್ಲಿ ಬಿದ್ದಿರಬೇಕು] ಸಂಸ್ಕೃತ ಲಿಪಿ ಪ್ರಿಯರು [ಕನ್ನಡ ಭಾಷೆಯ ಮೇಲೆ ಪ್ರೀತಿಯುಳ್ಳವರಾಗಿ] ಸಂಸ್ಕೃತ ಲಿಪಿಯಲ್ಲಿ ಕನ್ನಡವನ್ನು ಅಭ್ಯಾಸಮಾಡತೊಡಗಿದರು. [ಬಾಯಿಪಾಠ ಮಾಡುವ ಸಾಂಪ್ರದಾಯಿಕ ಪದ್ಧತಿಗೆ ನಡೆಯಿಸುವ ಶಾಲೆಯ ಪಾಠಗಳಿಗೆ ಸರಿಯಾಗಿ

ಹೇಳಿಕೊಡಲು] ಕನ್ನಡ ಭಾಷೆಯ ಮೇಲೆ ಅಭಿಮಾನವುಳ್ಳ, ಸಂಸ್ಕೃತವನ್ನು ಮೈಮನಸಿನಲ್ಲಿ ತುಂಬಿಕೊಂಡವರು ಅದೇ ರೀತಿ ಕನ್ನಡ ಲಿಪಿಯಲ್ಲಿ ಸಂಸ್ಕೃತವನ್ನು ಹಿಡಿದಿಡತೊಡಗಿದರು. ಕನ್ನಡದಲ್ಲಿ ಮಾಡಿದಂತೆ ಲಿಪಿಕಾರರ ಅಧ್ಯಾಪರ ಆರೋಪ ಕ್ರಿಯೆ ಸಂಸ್ಕೃತದಲ್ಲಿ ಆಗಿದ್ದರೆ ಅದು ಇನ್ನೂ ವಿಷಾದನೀಯ. 'ಬ್ರಿಟಿಷರು ತಮ್ಮ ಭಾಷೆಯ ಕೊಲೆಯನ್ನು ನೋಡಲಾರದೆ ಓಡಿಹೋದರು' ಎಂದಂತಾಗುತ್ತದೆ. ಸಂಸ್ಕೃತದ ಸ್ಥಿತಿ.

ಹಸ್ತಪ್ರತಿ ಕಟ್ಟುಗಳು : ಪ್ರತಿಕಾರ ತನ್ನ ಜ್ಞಾನಕ್ಕೆ ಸೀಮಿತವಾಗಿ ತನಗೆ ಬೇಕಾದಷ್ಟು ಕೃತಿಗಳನ್ನು, ಕೃತಿಯ ಭಾಗಗಳನ್ನು ಆರಿಸಿಕೊಂಡು ಪ್ರತಿಗೊಳಿಸುತ್ತಿದ್ದ. ಆ ಪ್ರತಿಗಳು ಒಂದೊಂದು ಕಟ್ಟಿನಲ್ಲಿ ತುಂಬಾ ದೊರೆಯುತ್ತವೆ. ಕಾಗದ ಕಟ್ಟುಗಳಿಗಿಂತ ತಾಳೆಗರಿ ಕಟ್ಟುಗಳಲ್ಲಿ ಈ ಪ್ರಮಾಣ ಹೆಚ್ಚಾಗಿರುತ್ತವೆ. ಇವು ಪ್ರತಿಕಾರನ ಅಭಿರುಚಿಯನ್ನು ಅಥವಾ ಪ್ರತಿಮಾಡಿಸುವವರ ಅಭಿರುಚಿಯನ್ನು ವ್ಯಕ್ತಪಡಿಸುತ್ತವೆ.

ಅಕ್ಷರಗಳ ಸೌಂದರ್ಯಕ್ಕೆ ಬಂದರೆ ಕಾಗದ ಪ್ರತಿಗಳಿಗಿಂತ ತಾಳೆಗರಿಗಳಲ್ಲಿನ ಅಕ್ಷರಗಳು ಹೆಚ್ಚು ಪ್ರಮಾಣ ದುಂಡಗಿರುತ್ತವೆ. ದುಂಡಗೆಂದರೆ ತಿಳಿಯುತ್ತವೆಂದಲ್ಲ, ಕಣ್ಣಿನ ನೋಟಕ್ಕೆ ದುಂಡು. ತಿಣುಕಾಡಿ ಓದಿದಾಗ ಅವು ಇನ್ನಷ್ಟು ದುಂಡು. ತಪ್ಪಾಗಿ ಓದಿದುದನ್ನು ಮತ್ತೊಮ್ಮೆ ಓದಿ ಸರಿಪಡಿಸಿಕೊಂಡಾಗ ಅವು ಎಲ್ಲಕ್ಕೂ ದುಂಡಾಗಿ ಕಾಣಿಸುತ್ತವೆ. ಬಹುಶಃ ದುಂಡಾಗಿ ಬರೆಯಬಲ್ಲ ಪ್ರತಿಕಾರರನ್ನೇ ಆರಿಸುತ್ತಿದ್ದಿರಬೇಕು. [ಮುದ್ರಣ ಸೌಲಭ್ಯವಿಲ್ಲದಾಗ ಸಾವಿರಾರು ಪ್ರತಿಗಳನ್ನು ಬರೆಯಿಸಿ ನಾಡಿನ ತುಂಬ ಪ್ರಚಾರ ಮಾಡಿಸಿದ ದಾನ ಚಿಂತಾಮಣಿ ಅತ್ತಿಮಬ್ಬೆಯಂಥವರು ನಮ್ಮಲ್ಲಿ ಆಗಿಹೋಗಿದ್ದಾರೆ.] ಮುದ್ರಣ ಯಂತ್ರಗಳಲ್ಲಿ ಅಕ್ಷರಗಳನ್ನು ಜೋಡಿಸುವ ಅಚ್ಚುಕೂಟದ ಪ್ರಾಮಾಣಿಕ ಸಿಬ್ಬಂದಿವರ್ಗಕ್ಕೆ ಈ ಲಿಪಿಕಾರರು ಸೇರುತ್ತಾರೆ. ತಮ್ಮ ವೇಳೆ, ತಮ್ಮ ವಿದ್ವತ್ತು, ಶ್ರಮವನ್ನು ವ್ಯಯ ಮಾಡುವ ಇವರ ಕೆಲಸಗಳಿಗೆ ಅವರ ಸ್ವಂತದ ಅಭಿರುಚಿಯೂ ಕಾರಣವಾಗಿದೆ,

ಹಸ್ತಪ್ರತಿಗಳಲ್ಲಿ ಅಭಿರುಚಿಗಳ ಕುತೂಹಲಕಾರಿ ಅಂಶಗಳುಂಟು. ಒಂದೇ ಭಾವನೆಗನುಸರಿಸಿ ಅವಕ್ಕೆ ಸಂಬಂಧಪಟ್ಟಂತೆ ಕಾವ್ಯ ಭಾಗಗಳನ್ನು ಸಂಗ್ರಹಿಸುವುದು: ಇಡೀ ಕೃತಿಗಳನ್ನು ಒಂದೇ ಕಟ್ಟಿನಲ್ಲಿ ಕಲೆ ಹಾಕುವುದು: ಪ್ರಿಯವೆನಿಸಿದ ರುಚಿಕಟ್ಟಾದ ಕಾವ್ಯಗಳನ್ನು ಇಡಿಯಾಗಿ ಇಲ್ಲವೆ ಭಾಗಗಳನ್ನಾಗಿ ಸಂಗ್ರಹಿಸುವುದು. ಅಂದರೆ ಇಂದಿನ ಸಣ್ಣ ಕತೆಗಳಂತೆ ಹಿಂದೆ ಚಿಕ್ಕ ಚಿಕ್ಕ ಪೂರ್ಣ ಕಾವ್ಯಗಳು [ಶತಕ ಅಷ್ಟಕ, ರಗಳೆ, ಕಂದ, ತ್ರಿಪದಿ, ವಚನ] ಜನಪ್ರಿಯವಾಗಿದ್ದರಿಂದ ಅವುಗಳನ್ನು ಒಂದೇ ಕಟ್ಟಿನಲ್ಲಿ ಬರೆಯುತ್ತಿದ್ದರೆನ್ನಬೇಕಾಗಿದೆ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಇದು ಕೇವಲ ಅಭಿರುಚಿಗೆ ಸಂಬಂಧಿಸಿರದೆ ಗುರುವು ವಿದ್ಯಾರ್ಥಿಗೆ ಕಲಿಸುವ ಪಠ್ಯಗಳಾಗಿಯೂ ಪ್ರತಿ

ಗಳು ಸಿದ್ಧವಾಗುತ್ತಿದ್ದವು. ಎಷ್ಟೋ ತಾಳೆಗರಿ ಕಟ್ಟುಗಳ ಅಂಚುಗಳಲ್ಲಿ ಶಬ್ದಕ್ಕೆ ಅರ್ಥ ಬರೆದಿರುವುದನ್ನು, ಶಬ್ದ ವಿಗ್ರಹ ಮಾಡಿದ್ದನ್ನು ಕಾಣುತ್ತೇವೆ. ಹಾಗೆ ಬರೆಯುವುದು ಕಲಿಯುವಿಕೆಯ ಗುರುತೇ ಆಗಿದೆ. ಹೀಗೆ ಓದುವ, ಕಲಿಸುವ, ಸಾಮಾನ್ಯ ಜ್ಞಾನಾರ್ಜನೆಯ– ಈ ಮಟ್ಟಗಳಲ್ಲಿ ಪ್ರತಿಕಾರರು ಪ್ರತಿಗಳನ್ನು ತಯಾರಿಸುತ್ತಿದ್ದರು. ಶ್ರೀಮಂತಿಕೆಯನ್ನು ವೆಚ್ಚಮಾಡಿ ಅತ್ತಿಮಬ್ಬೆಯು ಪೊನ್ನನ ಶಾಂತಿನಾಥ ಪುರಾಣವನ್ನು ಸಾವಿರಾರು ಪ್ರತಿಗಳನ್ನಾಗಿಸುವಲ್ಲಿ ಧರ್ಮ, ಸಾಹಿತ್ಯ, ಕವಿಯ ಮೇಲಿನ ಅಭಿಮಾನವೇ ಕಾರಣವಾಗಿರಬೇಕು. ಅಂದರೆ ಹಸ್ತಪ್ರತಿಗಳ ಬರಹಕ್ಕೆ ಧರ್ಮ ಮತ ಪ್ರಚಾರ, ಜ್ಞಾನಾರ್ಜನೆ, ಪಾಠ-ಪ್ರವಚನೆ, ಗ್ರಂಥ (ಸಾಹಿತ್ಯ) ಸಂರಕ್ಷಣೆ ಕಾರಣಗಳಾಗಿವೆ. ಲಿಪಿಕಾರರು ಸಂಬಳದ ಮೇಲೂ, ಕೆಲವು ಸಲ ಸ್ವಾಸಕ್ತಿಯ ಮೇಲೂ, ಕೆಲವು ಸಲ ವಿದ್ಯಾರ್ಥಿಗಳಾಗಿಯೂ ಇರುತ್ತಿದ್ದರು.

ಹಸ್ತಪ್ರತಿ ಬರವಣಿಗೆ ಹಾಗೂ ಓದುಗ : ಕಾಲದಿಂದ ಕಾಲಕ್ಕೆ ಭಾಷಾ ಮಾಧ್ಯಮದಲ್ಲಿ ಲಿಪಿಯ ಬದಲಾವಣೆಯಾಗುತ್ತ ಹಲವು ದೋಷಕ್ಕೆ ಕಾರಣವಾಗಿರುವ ಬರವಣಿಗೆ ಕಂಡು ಬರುತ್ತದೆ. ಒಮ್ಮೊಮ್ಮೆ ಹಿಂದಿನ ಬರವಣಿಗೆಯೇ ಹಾಗಿದ್ದಿರಬೇಕೆಂಬ ಅನಿಸಿಕೆಯೂ ಬರುವುದು.

‘ ಶ್ರೀ ಗುರು ಬಸವಲಿಂಗಾಯ ನಮಃ’ [ಎಂಬ ವಾಕ್ಯವು ಇಂದು ನಾವು ಬರೆವ ರೀತಿ ಇದು.] ಹಸ್ತಪ್ರತಿಗಳಲ್ಲಿ ‘ಶ್ರೀ ಗುರು ಬಸವಲಿಂಗಯ ನಮಃ’ ‘ಶ್ರೀ ಗುರುಬಸವಲಿಂಗಯಂ ನಮಃ’ ‘ಶ್ರೀ ಗುರು ಬಸವಲಿಂಗಯನ್ನಮಃ’ ‘ಶ್ರೀ ಗುರುಬಸವಲಿಂಗಾಯಂ ನಮಃ’ ಎಂಬಿತ್ಯಾದಿ ಬಗೆಗಳಲ್ಲಿ ಬರೆದಿದ್ದು ದೊರೆಯುತ್ತವೆ.

ಎ, ಒ, ಇ, ಃ, ಉ, ೦ ಹಾಗೂ ಮಹಾಪ್ರಾಣ ಇವುಗಳ ಬಳಕೆಯಲ್ಲಂತೂ ಹಸ್ತಪ್ರತಿ ಓದುಗ ಮುಜುಗರ ಪಡುವಂತಾಗುತ್ತದೆ. ಬೋಧೆ-ಬೊಧೆ: ಎನಗೆ– ಯನಗೆ, ಯೆನಗೆ; ಇನ್ನು–ಯಿನ್ನು, ಯಿಂನ್ನು, ಯಿಂನು; ಒಲಿದಡೆ–ವೊಲಿದಡೆ, ವೊಲಿದೊಡೆ, ಉರಿ-ವುರಿ. ಉರಿ. ಬಸಪಣ್ಣ-ಬಸವಂಣ: ಚನ್ನ ಬಸವಣ್ಣ-ಚಂನ್ನ ಬಸವಣ್ಣ-ಚಂನಬಸವಂಣ ಇತ್ಯಾದಿ. ಮೇಲಣ ಇ, ಉ ಕಾರಗಳನ್ನು ಶಬ್ದಾರಂಭದಲ್ಲಿ ಉಪಯೋಗಿಸದೆ ಶಬ್ದಗರ್ಭದಲ್ಲಿ ಉಪಯೋಗಿಸಿದ್ದು ಕಂಡು ಬರುತ್ತದೆ. ಇದು ಹಸ್ತಪ್ರತಿಗಳ ಕಾಲ ಗುರುತಿಸಲಿಕ್ಕೆ ಸಹಾಯವಾಗಬಹುದು.

> ಯನಗೆ ಪ್ರಾಣಲಿಂಗಿ ಸ್ಥಲ ಸಾಧ್ಯವಾಇತ್ತು,
> ಗುರುವಿಲ್ಲದ ಮುಂನ್ನ ಆಇತ್ತೆನ್ನಬಹುದೆ.

ಅವರ್ಗೀಯ ‘ಯ’ ಕಾರಕ್ಕೆ ಸ್ವರ ‘ಇ’ ಪ್ರಯೋಗವಾದ ಕ್ರಿಯೆ ಇಲ್ಲಿದೆ. ಇವರಲ್ಲಿ ಭಾಷಾ ಪ್ರಕ್ರಿಯೆ, ಪ್ರತಿಕಾರರ ಲಿಪಿದೋಷ ಎರಡೂ ಇದೆಯೆನಬೇಕು. ಇಲ್ಲದಿದ್ದರೆ

ಇಂದಿನ ಬಗೆಯಲ್ಲಿ 'ಆ' ಹಾಗೂ 'ಇ'ಗಳನ್ನು ಪದಗಳಾರಂಭಗಳನ್ನಾಗಿ ಮಾಡಿ-ಕೊಂಡು ಇದ್ದುದನ್ನು ತಿರುವು-ಮುರವಾಗಿ ಮಾಡಬಹುದೇನೊ? 'ಯುಸಗೆ ಪ್ರಾಣಲಿಂಗಿ ಸ್ಥಲ ಸಾಧ್ಯವಾ? ಇತ್ತು.

'ಗುರುವಿಲ್ಲದ ಮುಂನ್ನ ಆ ಇತ್ತೆನ್ನಬಹುದೆ?' ಹೀಗೆ ಇಲ್ಲಿ ಮುಖ್ಯವಾಗಿ ೧] ಪ್ರತಿಕಾರರು ತಮ್ಮ ನೇರಕ್ಕೆ ಕಂಡ ವರ್ಣ ಬಳಸಿದ್ದು. ೨] ಹಳಗನ್ನಡ ಪೂರ್ವದ ಹಳಗನ್ನಡ ಬರವಣಿಗೆ ಮುನ್ನಿನಂತೆ ಸಾಗಿ ಬಂದಿದ್ದು ಹಾಗೂ ಯಾವುದೇ ವ್ಯಾಕರಣದ ಚೌಕಟ್ಟಿಗೆ ಸಿಗದೆ ಉಚ್ಚಾರಣ ಮಾತ್ರಕ್ಕೆ ಬಳಸಿದ್ದು ೩] ಕೆಲವೆಡೆಯಲ್ಲಿ ಪ್ರಾರಂಭವಾಗುವ ಸಂಧ್ಯಾಕ್ಷರ ಸ್ವರ ಎ, ಏ, ಐ. ಒ, ಓ, ಔ ಕಾರಗಳಿಗೆ ಅವರ್ಗೀಯ 'ಯ,' 'ವ' ಕಾರ ಹಾಗೂ 'ಅ' ಸ್ವರಗಳನ್ನು ಬಳಸಿದ್ದು ಕಂಡು ಬರುತ್ತದೆ. ಇದು ವರ್ಣವ್ಯತ್ಯಾಸದ ಬಗೆ.

ಮಹಾ ದಂಣ್ಣಾಯಕರು ಮಹಾ ದಂಣಾಯಕರು ಮಹಾ ದಂಣ್ಣಾಯಕರು ಎಂಬಲ್ಲಿ ಬಿಂದುವಿನ ಸ್ಥಾನವನ್ನು ಅವರು ತೆಳುವಾಗಿ ಗ್ರಹಿಸಿರಬೇಕು. ಈ ಕ್ರಿಯೆ ರೇಫೆಯುಲ್ಲೂ ಕಾಣಿಸು-ತ್ತದೆ. ಆದರೆ ರೇಫೆ ಸಹಿತವಾದ ರೇಫೆಯ ಮುಂದಿನ ವ್ಯಂಜನಗಳನ್ನು ದ್ವಿತ್ವವಾಗಿ ಬರೆಯುವ ಪದ್ಧತಿ ಕಂಡು ಬರುತ್ತದೆ.' ಸಂಕುಚಿತವಾಗಿ ಗರ್ಭೀಕರಿಸು' ಎಂಬಲ್ಲಿ 'ಗಬ್ಬ್ರೀಕರಿಸು' ಗಬ್ಬ್ರೀಕರ್ರಿಸು' ಎಂದಿದೆ. ಒತ್ತಕ್ಷರದ ಕ್ರಿಯೆ ನಡೆದರೂ ಮತ್ತೊಂದು ಒತ್ತು ಕೊಡುವುದು ಒಂದು ವಿಶೇಷ ಇಲ್ಲವೆ ತೇಲಿಸಿ ಉಚ್ಚರಿಸುವುದನ್ನು ಗಟ್ಟಿಗೊಳಿಸಲು ಒತ್ತುಕೊಟ್ಟಿರಬೇಕು. ಅನೇಕ ಶಾಸನಸ್ಥ ಪ್ರಯೋಗಗಳು ಇದಕ್ಕೆ ಉದಾಹರಣೆಗಳಿವೆ.

'ಭಟಗ್ಗಿರ್ಗೀ ಗಟ್ಟಿದ್ದ–ಹಲ್ಮಿಡಿ ಶಾಸನ ೪೫೦ ಕ್ರಿ. ಶ.

'ಸ್ವಸ್ತಿ ಶ್ರೀ ನಿರ್ವ್ವಿನೀತರಾ-'ಸಿರಿಗುಂದದ ಶಾಸನ ೪೮೦ ಕ್ರಿ. ಶ.

'ಮಾಲಾಕಾರಗ್ಗೆರ್ಗ ಅರ್ದ್ಧವೀಸದಿ ಇತ್ತೊದಾನ್-ಬಾದಾಮಿ ಶಾಸನ-೫೭೮ ಕ್ರಿ. ಶ. ಇತ್ಯಾದಿಯಾಗಿ ಸಿಗುತ್ತವೆ. ಬಿಂದುವಾಗಿ ಕೆಲವೆಡೆ ದ್ವಿತ್ವಕ್ಕಾಗಿ ಬಳಸಿದ ಅನುಸ್ವಾರ '೦' ಬಿಂದುವಿನ ಸ್ಥಾನದಲ್ಲಿದ್ದ ಣ, ಮ, ನ, ಕಾರವನ್ನು ಹಸ್ತಪ್ರತಿಗಳಲ್ಲಿ ಕಡಿಮೆ ಮಾಡಿಸಿದೆ.

ಪ್ರತಿಕಾರರ ಬರವಣಿಗೆಯಲ್ಲಿ ದಂಡವೊಂದನ್ನು ಬಿಟ್ಟರೆ ಸಾಲುಗಳಲ್ಲಿ ನಡುವೆ ಬಿಡುವೇ ಇಲ್ಲ. ಈ ಸಾಲುಕಟ್ಟುಗಳ ಅವರ ಬಗೆಯನ್ನು ಓದುಗರೇ ಅರ್ಥೈಸಿಕೊಂಡು ಓದಬೇಕು. ಓದುವಲ್ಲಿ ಮರೆವಿನ ತಪ್ಪಾದರೂ ಆಗಬಹುದು. ಒಮ್ಮೊಮ್ಮೆ ಓದಿದ ತಪ್ಪೇ ಸರಿಯೆಂಬ ರೀತಿಯಲ್ಲಿ ಪ್ರತಿಕಾರನ ಸಾಲುಗಳು ಅರ್ಥವೈಚಿತ್ರ್ಯಗಳನ್ನುಂಟು ಮಾಡುತ್ತವೆ. ಅಂದರೆ ಇದು ಓದುಗನ ದೋಷ.

'ನಾಗ ರವಿ ರಹಿತನನಾರೂ ಅಱಿಯರಲ್ಲಾ'-ನಾವು ಓದಿದ ಪಾಠ

'ಸಾಗರ ವಿರಹಿತನನಾರೂ ಅಱಿಯರಲ್ಲಾ'-ನಿಜವಾದ ಪಾಠ ಅಕ್ಷರಸಾಮ್ಯ ಒತ್ತೊತ್ತಾಗಿ ಕೂಡಿದ್ದರಿಂದುಂಟಾದ ವ್ಯತ್ಯಾಸವಿದು.

'ಸಂಸಾರದ ಸಾರಾಯು ದಂತ ನಿರಸವ' –ನಾವು ಓದಿದ ಪಾಠ.

'ಸಂಸಾರದ ಸಾರಾಯುದ ತನಿರಸವ' –ನಿಜವಾದ ಪಾಠ. ತಾಳೆಗರಿಗಳಲ್ಲಿ ಒಂದು ಚಿತ್ತಾಗಿದ್ದರೂ ಅದು ಓದುಗರನ್ನು ಕಂಗೆಡಿಸುತ್ತದೆ. ಅಥವಾ ಸಾಮಾನ್ಯ ಓದುಗ ತನ್ನ ಕಣ್ಣಿಗೆ ಬಿದ್ದ ಓದನ್ನೇ ಗಮನದಲ್ಲಿಟ್ಟು 'ಸಂಸಾರದ ಸಾರಾಯುದ....' ನಿಜಪಾಠ ಬಿಟ್ಟು ಓದಿದರೆ ಆಚ್ಚರಿಯಿಲ್ಲ. ಎರಡೂ ಅರ್ಥಕ್ಕೆ ಬಾಧೆ ಬರುದಂತಿರುವುದರಿಂದ ಅದೇ ಗಟ್ಟಿಗೊಳ್ಳಬಹುದು. ಕ್ರಮೇಣ ನೂರಾರು ಪ್ರತಿಗಳಲ್ಲಿ ಸಾಲು ಒಡೆದು ಹೋಗುವಾಗ ನಿಜವಾದ ಪಾಠ ಕೈ ಬಿಟ್ಟು ಓದುಗನ ತಪ್ಪೇ ಸತ್ಯ ಪಾಠವಾಗಿ ಅಭಾಸವಾಗುತ್ತದೆ; ಕವಿಕ್ರಿಯೆಗೆ ಧಕ್ಕೆ ತಗಲುತ್ತದೆ.

'ಯಿಂ ತಪ್ಪ ವೀರರುಂಟೆ' –ನಾವು ಓದಿದಪಾಠ

'ಯಿಂತಪ್ಪ ವೀರರುಂಟೆ' –ನಿಜವಾದ ಪಾಠ. ಈ ಎರಡನ್ನೂ ಗಮನಿಸಿದರೆ ಪರಸ್ಪರ ವಿರೋಧಾರ್ಥಗಳು ಹೊರಡುತ್ತವೆ. ಒಂದು ವ್ಯಕ್ತಿ ಮಹತ್ವದ ಘನವಂತಿಕೆ ತೋರಿಸಿದರೆ ಮತ್ತೊಂದು ಅಪರಾಧಿತನವನ್ನು ವ್ಯಕ್ತಪಡಿಸುತ್ತದೆ. ಎರಡಕ್ಕೂ ಅರ್ಥವಿಲ್ಲವೆನ್ನುವಂತಿಲ್ಲ.

ಕೆಲವು ಸಾರೆ ಗೊಂದಲಗೊಳಗಾಗಿ ಓದುಗ ನಿಜವಾದ ಪಾಠಗಳನ್ನು ಹೇಗೋ ಓದಿ ಬಿಡಬಹುದು.

'ಯಿಂತಪ್ಪ ಪಾರಸದ ಚರಿತನಾಗಿ'
'ಇಂತಪ್ಪಪಾ ರಸದ ಚರಿತನಾಗಿ' } ನಾವು ಓದಿದ ಪಾಠ

'ಯಿಂತಪ್ಪ ಪಾರ ಸದಚರಿತನಾಗಿ –ಇದು ನಿಜವಾದ ಪಾಠ. ಒಂದು ಒಳ್ಳೆಯ ಅರ್ಥವುಳ್ಳ ಸಾಲು ಓದುಗನ ತಪ್ಪಿನಿಂದ ಅರ್ಥ ಕೆಡುವ ಸಂಭವವಿರುತ್ತದೆ.

'ದಶಮುಖದ ಮಾಣಿಕ್ಯ ದೇಸಳ ತಂಗಳು ಪರ್ಬ್ಬಿ ಪಸರಿಸಿದ್ದುದನಾರೂ ಆಱಿಯರಲ್ಲ' –ಇದು ನಾವು ಓದಿದ ಪಾಠ.

'ದಶಮುಖದ ಮಾಣಿಕ್ಯದೆಸಳ ಕಂಗಳು ಪರ್ಬ್ಬಿ ಪಸರಿಸಿರ್ದುದನಾರೂ ಅಱಿಯರಲ್ಲ' –ನಿಜವಾದ ಪಾಠ'-ದೀರ್ಘವನ್ನು ಒಮ್ಮೊಮ್ಮೆ ಬಳಸದಿರುವ ಮತ್ತು ಬಳಸುವ ಬಗೆಯಿಂದ ಓದುಗ ದೀರ್ಘವನ್ನು ಕಟ್ಟಿಕೊಂಡಾಗ ಪ್ರತಿಕಾರನ ಲಿಪಿ

ಓದುಗನ ಕಣ್ಣಿಗೆ ಬೇರೊಂದು ರೀತಿಯಲ್ಲಿ ಕಂಡ ವ್ಯತ್ಯಾಸ ಇದು. 'ತಂಗಳು' 'ಕಂಗಳು' ಕೂಡ ಅದೇ ರೀತಿಯ ಚಾಕ್ಷುಕ್ಷ ದೋಷ. ಲಿಪಿಕಾರನನ್ನು ಅರ್ಥಮಾಡಿಕೊಳ್ಳದೆ ನಮ್ಮದನ್ನು ಬರೆದು ತಪ್ಪುಮಾಡುತ್ತೇವೆ; ಆತನ ಸರಿಯಾದ ಬರವಣಿಗೆಯನ್ನು ನಮ್ಮ ಅಜ್ಞಾನದಿಂದ ಕೆಡಿಸುತ್ತೇವೆ.

● ಮಹಾ ಗಣಂಗಳಿಗೆ ನಿರೂಪಿಸಿದ ಸಿದ್ದ ವಚನಂಗಳು ಸಮಾಪ್ತಂ ಮಂಗಳ ಮಹಾ ಶ್ರೀ ಶ್ರೀ ಶ್ರೀ –ಇದು ನಾವು ಓದಿ ಬರೆವ ಪಾಠವಾಗಿತ್ತು. ಆದರೆ "ಮಹಾಗಣಂಗಳಿಗೆ ನಿರೂಪಿಸಿದ್ಧ ವಚನಂಗಳು ಸಮಾಪ್ತಂ.

ಮಂಗಳಮಹಾ ಶ್ರೀ ಶ್ರೀ ಶ್ರೀ ಇದು ನಿಜವಾದ ಪಾಠವಾಗಿದೆ· ಓದುಗನ ಗಮನ ಅಕ್ಷರಗಳ ಕಡೆಗೆ ವಾಲಿದಾಗ ಪ್ರತಿಕಾರನ ಬಗೆಯನ್ನೇ ಪ್ರಶ್ನಿಸಿ ಸರಿಪಡಿಸಲು ತೊಡಗುವಾಗ ಈ ಬೆರಕೆ ಉಂಟಾಗುತ್ತದೆ. ಮೊದಲ ನೋಟಕ್ಕೆ 'ಮಹಾಗಣಂಗಳಿಗೆ ನಿರೂಪಿಸಿದ' ಎಂದು ಓದಿರುತ್ತಾನೆ. ಅದನ್ನು ಪ್ರತಿ ಮಾಡುವಾಗ ಅದಿಷ್ಟು ಬರೆದು ಮತ್ತೆ ನೋಡಿದಾಗ 'ದ' ಕ್ಕೆ ಒತ್ತು ಕೊಟ್ಟಿದ್ದು ಕಾಣಿಸುತ್ತದೆ. ಆ ಒತ್ತಿನ ದೃಶ್ಯ ತಕ್ಷಣ ಮಾಡಿ ಅದು ಭೂತಕಾಲದ ಕ್ರಿಯೆ ಅವಕ್ಕೇಕೆ ಒತ್ತಿರಬೇಕು? ಬಹುಶಃ 'ಸಿದ್ಧ' ಎಂಬ ಪದವಿರಬೇಕೆಂದು ಜಾಣತನದಿಂದ ಒಡೆದು 'ನಿರೂಪಿಸಿದ ಸಿದ್ಧ ವಚನಂಗಳು' ಎಂದು ಬರೆದು ನಿರಾಳ ಉಸಿರೆಳೆಯುತ್ತಾನೆ. ಇಂತಹ ಪುನರಪಿ ಬರೆಯುವ ಓದುವ ಹಾಗೂ ದೃಶ್ಯದಿಂದುಂಟಾದ ವೈಚಿತ್ರ್ಯಗಳು ಅನೇಕ ಬಗೆಯಲ್ಲಿವೆ. ಹಸ್ತಪ್ರತಿಗಳ ಮುಂದುದರೆದ ಸಾಲುಗಳನ್ನು ಕಣ್ಣಿಗೆ ಕಂಡಂತೆ ನಕಲುಗೊಳಿಸಿದರೆ ಅರ್ಥಕ್ಕೆ ಬಾಧೆ ಬರದಂತೆ ಬೇರೆ ಬೇರೆ ಪಾಠಗಳೇ ಉಂಟಾಗುತ್ತವೆ. ಅವು ದೃಶ್ಯದೋಷಕ್ಕೂ, ಸೀಮಿತ ಜ್ಞಾನಕ್ಕೂ ಸಂಬಂಧಪಟ್ಟಿವೆ.

'ಮಹಾಘನಲಿಂಗ ನಿಜಾನಂದ ಸುಖಪದದಲ್ಲಿ ನಿಶ್ಚಲಾನಂದದಲ್ಲಿ ಶ್ರೀ ಸೂದಿ ಮಹಾ ಸದ್ಗುರು ಬೋಧೆ'– ನಾವು ಓದಿದ ಪಾಠ.

'ಮಹಾಘನಲಿಂಗ ನಿಜಾನಂದ ಸುಖಪದದಲ್ಲಿ ನಿಶ್ಚಲಾನಂದದರ್ರಿಸೂದಿ ಮಹಾ ಸದ್ಗುರು ಬೋಧೆ'– ಇದು ನಿಜವಾದ ಪಾಠ.

'ನಿಶ್ಚಲಾನಂದದಲ್ಲಿ + ಇರ್ರಿಸೂದು + ಇ' (ನಿಶ್ಚಲಾನಂದದಲ್ಲಿ ಇರಿಸುವುದು ಈ) ಎಂಬುದು ಹೋಗಿ ಬೇರೆಬೇರೆ ರೀತಿಯಲ್ಲಿ ವಿಗ್ರಹವಾಗಿ ನಮ್ಮಿಂದ ಓದಲ್ಪಡುತ್ತದೆ. 'ನಿಶ್ಚಲಾನಂದದಲ್ಲಿರ್ರಿ ಸೂದಿ' 'ನಿಶ್ಚಲಾನಂದದಲ್ಲಿ ಶ್ರೀ ಸೂದಿ 'ನಿಶ್ಚಲಾನಂದಲ್ಲಿರ್ರಿ ಸನಾದಿ' ಈ ಮೂರುಬಗೆಯಲ್ಲಿ ಪದವಿಗ್ರಹದ ಸಮಸ್ಯೆ ಕಾಣತೊಡಗುತ್ತದೆ. 'ಮಹಾ ಸದ್ಗುರು' ವ್ಯಕ್ತಿಯಾಗಿ 'ಸೂದಿ. ಶ್ರೀಸೂದಿ' ಎಂಬುದು ಊರೋ ಮಠವೋ ಆಗಿ 'ದಲ್ಲಿರ್ರಿಸನಾದಿ' ತಾತ್ವಿಕ ಶಬ್ದದಂತೆ ಭಾಸವಾಗಿ ತಪ್ಪಾದ ಪಾಠ ನಡೆಯುತ್ತದೆ. ಅದನ್ನೇ ಬರೆಯುತ್ತೇವೆ. ಅದು ಮಾತ್ರ 'ನಿಶ್ಚಲಾನಂದದಲ್ಲಿರ್ರಿ

ಸೂದಿ' ಎಂದಷ್ಟೇ. ರಿ ಕಾರ ರಿಕಾರಕ್ಕೆ ಕೊಟ್ಟ ಒತ್ತು ಸ ಕಾರ ಸಕಾರದ ದೀರ್ಘ ಊ ಮತ್ತು ದ ಕಾರದ ಇ ಸ್ವರ ಇವೆಲ್ಲ ಸೇರಿಕೊಂಡು ಶ್ರೀ, ಸೂದಿ, 'ಸ-ಊ' ಸನಾ ಆಗಿ ಅರ್ಥಗರ್ಭಿತವಾದ ಪಾಠ ದೋಷವಾಗುತ್ತದೆ. ಇಂಥವು ಅನೇಕ ಸಲ ಹಾಸ್ಯಕ್ಕೆ ಉದಾಹರಣೆಯಾಗಬಲ್ಲುವೇನೋ? ಕನ್ನಡದಲ್ಲಿ ಐದಕ್ಷರದವರೆಗಿನ ಶಬ್ದ ಗಳಿರುವುದೇ ಇದಕ್ಕೆ ಕಾರಣವಾಗಿರಬೇಕು.

ದ್ವಿತ್ವಾಕ್ಷರದ ಒಂದು ಉದಾಹರಣೆ ನೋಡಿ.

ಇಂದು ಚಂದ್ರನ ಹಾಂಗೆ ಕುಂದ ಮೊಲೆಯು ಪುಪ್ಪುಸದ ಹಾಂಗೆ ಇದರಲ್ಲಿ 'ಮೊಲೆಯು ಪುಪ್ಪುಸದ ಹಾಂಗೆ' 'ಮೊಲೆಯು ಪುಷ್ಪದ ಹಾಂಗೆ' 'ಮೊಲೆಯು ಪುಷ್ಪದ ಹಾಂಗೆ' ಎಂದು ಮೂಬಗೆಯಲ್ಲಿ ಓದುತ್ತೇವೆ. 'ಆದರೆ ಇಂದು ಚಂದ್ರನ ಹಾಂಗೆ ಕುಂದ ಮೊಲ್ಲೆಯು ಪುಷ್ಪದ ಹಾಂಗೆ' ಎಂಬುದು ಅದರ ನಿಜವಾದ ಪಾಠ ವಾಗಿದೆ.

ಸ್ವರಗಳ ಪದವಿಗ್ರಹಗಳ ಅರ್ಥ ಕೊಡದ ನೂರಾರು ಉದಾಹರಣೆಗಳು ದೊರೆಯು ತ್ತವೆ.

'ಬಚ್ಚ ಬರಿಯ ಅರಹು ಬಯಲಾಗಿ ನಿಂದ ಮಹಾಮಹಿಮನು'
'ಬಚ್ಚ ಬರಿಯ ಆ ರೂಹು ಬಯಲಾಗಿ ನಿಂದ ಮಹಾ ಮಹಿಮನು'

ಪೂರ್ವಾಪರ ಗೊತ್ತಿಲ್ಲದವರು ಇದರಲ್ಲಿ ಯಾವುದು ಸರಿಯಾದ ಪಾಠ ಎಂಬುದನ್ನು ನಿರ್ಣಯಿಸುವುದು ಕಷ್ಟವಾಗುತ್ತದೆ.

ಅದೇನಿದ್ದರೂ ಹಸ್ತಪ್ರತಿಗಳು ಕಾಲಕ್ರಮದಲ್ಲಿ ಉಂಟಾದ ಭಾಷೆ, ಲಿಪಿ, ಸಾಹಿತ್ಯಿಕ ಚಟುವಟಿಕೆಗಳನ್ನು, ಪರಿಸರ, ಅದರ ಅಭಿರುಚಿಗಳನ್ನು, ಕೃತಿಕಾರ ಪ್ರತಿಕಾರರ ಬಾಹ್ಯಾಂತರಗಳನ್ನು ಹಸ್ತಪ್ರತಿ ಓದುಗನಿಗೆ, ಸಂಪಾದಕನಿಗೆ ಚನ್ನಾಗಿ ಪಡೆಮೂಡಿಸಿ ಅಧ್ಯಯನಕ್ಕೆ ಆಹ್ವಾನಿಸುತ್ತವೆಂಬುದು ಸತ್ಯವಾದುದು.

ಕವಿ-ಕಾವ್ಯ-ವಿಮರ್ಶೆಗಳ ಒರೆಗಲ್ಲು 'ಬೆಂಕಿ'

● ಚಂದ್ರಕಾಂತ ಪಡೇಸೂರ

'ಬೆಂಕಿ' ಡಾ : ಸೋಮಶೇಖರ ಇಮ್ರಾಪೂರ ಅವರ ಮೂರನೆಯ ಕವನ ಸಂಕಲನ. ಇದರಲ್ಲಿ ೩೬ ಕವನಗಳಿದ್ದು, ಈ ಎಲ್ಲ ಕವನಗಳ ಒಟ್ಟು ಆಶಯ ಮನುಷ್ಯ; ತನ್ನ ಜೀವನದ ಸರ್ವ ಆಯಾಮಗಳಲ್ಲಿಯೂ ಡಂಬಾಚಾರವನ್ನೇ ಅವಲಂಬಿಸಿ, ಮಿಥ್ಯವನ್ನೇ ಸತ್ಯವೆಂದು ತಿಳಿದು ಅಥವಾ ಮಿಥ್ಯವನ್ನೇ ಸತ್ಯವೆಂದು ಸಾಧಿಸಿ ಸ್ವಾರ್ಥತೆಯನ್ನು ಪ್ರತಿಷ್ಠಿಸುವ ಕೆಟ್ಟ ಪ್ರಯತ್ನಗಳನ್ನು ವಿಡಂಬಿಸುವುದೇ ಆಗಿದೆಯೆಂದರೆ ತಪ್ಪಾಗಲಾರದು. ಜೀವನದ ಆಯಾಮಗಳಾದ ಹುಟ್ಟು-ಸಾವು, ಬೆಳಕು-ಕತ್ತಲೆ, ದೈವ-ವಿಧಿ, ಮದುವೆ-ಮುಂಜಿ, ದೇಶಾಭಿಮಾನ, ಭಾಷಾಭಿಮಾನ, ಕವಿ–ಕಾವ್ಯ-ವಿಮರ್ಶೆ ಮುಂತಾದ ಎಲ್ಲವುಗಳನ್ನೂ ಪರಿಶೀಲಿಸಿ ಪರಾಮರ್ಶಿಸಿ, ಸತ್ಯದ ಒರೆಗಲ್ಲಿಗೆ ಹಚ್ಚಿ ತಿಕ್ಕಿ ಪರಿಷ್ಕರಿಸುವ ಉದಾತ್ತ ಉದ್ದೇಶ ಈ ಕವನಗಳ ಜೀವದುಸಿರು.

ಇಮ್ರಾಪೂರ ಅವರ 'ಬೆಂಕಿ' ಸಂಕಲನದ ಧೋರಣೆಗಳನ್ನು ಅರ್ಥೈಸಿಕೊಳ್ಳಬೇಕಾದಲ್ಲಿ ಅದಕ್ಕೆ ಪೂರ್ವಭಾವಿಯಾಗಿ ಅವರ ಇನ್ನೆರಡು ಕವನ ಸಂಕಲನಗಳಾದ 'ಬಿಸಿಲ ಹೂ,' 'ಬೆಳದಿಂಗಳು' ಕವನ ಸಂಕಲಗಳ ಧೋರಣೆಯನ್ನು ಸ್ಥೂಲವಾಗಿಯಾದರೂ ತಿಳಿಯುವುದು ಅವಶ್ಯಕ. 'ಬೆಂಕಿ' ಹೊತ್ತುವ ಪೂರ್ವದಲ್ಲಿ ಕವಿ ಜೀವನವನ್ನು ಕಂಡುಕೊಂಡ ಪರಿಯನ್ನು, ಜೀವನದಲ್ಲಿ ತನ್ನ ಬದುಕನ್ನು ನಿರ್ಧರಿಸಿಕೊಂಡ ಪರಿಯನ್ನು ಅವರ 'ಬೆಳದಿಂಗಳು' ಸಂಕಲನದ ಈ ಕೆಳಗಿನ ಪದ್ಯ ಭಾಗದಿಂದ ಅರಿಯಬಹುದು.

ಸಾವು ಬದುಕುಗಳ ಬೇಲಿಯ ಮೇಲೆ
ಕುಣಿಯುವುದೇ ಜೀವನ ಕ್ರಾಂತಿ
ಕಣ್ಣೀರಿನ ಬಿಸಿ ಬಿಂದುವಿನೊಳಗಿನ
ತಂಪಿನ ತಾಣವೆ ಸಂಕ್ರಾಂತಿ

ಬಿಸಿಬಿಂದುವಿನ ಒಡಲಲ್ಲಿಯೇ ತಂಪಿನ ತಾಣವನ್ನು ಕಂಡುಕೊಂಡು ಇಲ್ಲವೇ ಕಲ್ಪಿಸಿಕೊಂಡು ಆ ತಾಣದಲ್ಲಿ ನಿಂತು, ಯಾರನ್ನೂ ಲೆಕ್ಕಿಸದೇ ನಗುತ್ತಿರುವ ಹೂವನ್ನು ಕಂಡು ತನ್ನ ಜೀವನದ ಮಾರ್ಗವನ್ನು ಅರಿತುಕೊಳ್ಳುತ್ತಾನೆ. ಜೀವನದ ಜಂಜಾಟಕ್ಕೆ ರೋಸಿ ಪ್ರೀತಿಯನ್ನು ಹರಿದು ಹರಿಪಲ್ಲೆ ಮಾಡಿ ಹೆಂಡತಿಯೊಡನೆ ಜಗಳ ಕಾಯ್ದುರ್ತಾ

ಏನಾರ ಆಗಿ ಏನೇನೋ ಮಾಗಿ ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗಾಗಿ ಪ್ರೀತಿ ತಾನೇ ತಾನಾದಾಗ, ಜೀವನವೇ ಜೇನುಗೂಡವಾಗಿ ತುಪ್ಪವನ್ನು ನೆಕ್ಕುತ್ತಾನೆ. ಹೀಗಿದ್ದರೂ ಬೆಳದಿಂಗಳು ಸಂಕಲನದ ಒಟ್ಟಾರೆ ಧೋರಣೆಯನ್ನು ನೋಡಿದರೆ ಜೇನುತುಪ್ಪದ ಸಿಹಿಗಿಂತ ಹುಳುಗಳ ಕಡಿತದ ನೋವೆ ಹೆಚ್ಚಾಗಿದ್ದು ಒತ್ತಾಯಪೂರ್ವಕವಾಗಿ ಸಮಾಧಾನವನ್ನು ಜಗ್ಗಿ ಹಿಡಿದಂತಿದೆ. "ಬೆಳದಿಂಗಳ" ಹುಳುಗಳ ಕಡಿತದ ನೋವು ಬರುಬರುತ್ತಾ ಜಾಸ್ತಿಯಾಗಿ ಕವಿಯ ಹೊಟ್ಟೆಯಲ್ಲಿ "ಬೆಂಕಿ" ಬಿದ್ದು ಒದ್ದಾಡಿದಾಗ ತನ್ನ ನಂಬುಗೆಗಳಲ್ಲಿ ಬುಡಮೇಲಾದಾಗ ಕಂಗಾಲಾಗುತ್ತಾನೆ.

ನಾ ಜೋತು ಬಿದ್ದ ಟೊಂಗೆ ಮುರಿದು
ನಾ ನಂಬಿ ನಿಂತ ನೆಲ ಕುಸಿದು
ಹಸಿದ ಬಾಯಿಗೆ ಬಿದ್ದಿದೆ
ಕಳ್ಳಿ ಹಾಲು... (ಬೆಂಕಿ)

ಇಷ್ಟೊತ್ತಿಗಾಗಲೆ ಜಗತ್ತಿನ ಬಗೆಗಿರುವ ಕವಿಯ ನಂಬುಗೆಗಳೆಲ್ಲ ಬುಡಮೇಲಾಗಿ, ಬೆಳ್ಳಗಿರುವುದೆಲ್ಲಾ ಹಾಲಲ್ಲ ಎಂಬ ಪ್ರಜ್ಞೆ ಒಡಮೂಡಿದೆ. ಅಂತೆ-

ಈ ಬ್ರಹ್ಮಾಂಡದೊಳು ಬಿದ್ದಿದ್ದೇನೆ
ಬವಳಿ ಬಂದು... (ಸ್ವಗತ)

ಎಂದು ಹೇಳಿಕೊಳ್ಳುತ್ತಾನೆ. ತಾನು ಕಲ್ಪಿಸಿದ ಸುಖದ ಸ್ವರ್ಗದ ಖೂನಿ ತನ್ನ ಕಣ್ಣ ಮುಂದೆಯೇ ನಡೆಯುವುದನ್ನು ಕಂಡು ಪರಿತಪಿಸುತ್ತಾನೆ. ಈಗ ಕವಿಗೆ ಮದುವೆ ಪ್ರೇಮಸಮಾಗಮವಾಗಿ ಕಾಣುತ್ತಿಲ್ಲ.

ಗಂಡ ಹೆಂಡತಿ ಮಾಡಿ ಬಿಟ್ಟರು ಮಂದಿ
ಅವಳ ನಾ ನಾನವಳ ಕೂಡಿ
ಪಾಪ ಕರ್ಮದ ರಾಡಿ... (ಮದುವೆ)

ವರದಕ್ಷಿಣೆಗಾಗಿ, ಅಥವಾ ಇನ್ನಾವುದೇ ಆಸೆಗಾಗಿ ಒತ್ತಾಯದಿಂದ ಮದುವೆ ಮಾಡಿಕೊಂಡು ನಡೆಸಿದ ಸಂಸಾರ ಪಾಪಕರ್ಮದ ರಾಡಿಯಲ್ಲದೇ ಮತ್ತೇನು ? ಹೀಗಿದ್ದರೂ ಸಂಸಾರದ ತೇರನ್ನು ಪಾದ ಗಟ್ಟಿಯಿರುವವರೆಗೆ ಎಳೆಯು ತಂದ ಹೆಂಡತಿಯ ಸಾಹಸಕ್ಕೆ ಬೆರಗಾಗಿದ್ದಾನೆ.

ನೀ ಗಟ್ಟಿ
ನಾ ಕಟ್ಟಿದ ಕೊರಳ ಕರಿ ಹಾವ ಗುಳದಾಳಿ
ಕೆಂಡ ಕುಂಕುಮ ಬೊಟ್ಟು ಇಟ್ಟು

ಒಟ್ಟಾಗಿ ಗುಟ್ಟಾಗಿ
ಬಂದಿ ತಂದಿ
ಪಾದಗಟ್ಟಿಯುತನಕ ತೇರು (ಸಹಗಮನ)

ಇಂಥ ತ್ಯಾಗಮಯಿ ಸತಿಯೊಡನೆ ಸಹಗಮನ ಮಾಡಬಯಸುತ್ತಾನೆ. ಇದ-ರೊಂದಿಗೆ ಮದುವೆಯ ವಧು-ವರರ ಚಿತ್ರಣವನ್ನೂ ಕೊಡಬಯಸುತ್ತಾನೆ.

ಶತಮಾನ ಕಳೆವುದಕೆ ಇಪ್ಪತ್ತು ಬಾಕಿ
ಹೊಚ್ಚ ಹೊಸ ಹಲ್ಲು ಚೊಕ್ಕ ಮೂವತ್ತೆರಡು (ವರ)
ನಿಮ್ಮ ಅಮ್ಮನ ಮರಿ ಅಮ್ಮ ಆಕಿ
ಸಣ್ಣಾಕಿ
ವಯಸ್ಸಾಗಿಲ್ಲ ಇನ್ನೂ ಅಮ್ಮನಷ್ಟು (ವಧು)

ಎಂದು ಸಾಯುವ ಸನ್ನಿವೇಶದಲ್ಲೂ ಹುಟ್ಟುವ ಮದುವೆಯ ಚಲವನ್ನು ವಿಡಂಬಿಸುತ್ತಾನೆ.

ಇವರೊಡನೆ ಸಮಕಾಲೀನ ಜನತೆಯ ದೇಶಾಭಿಮಾನ. ಭಾಷಾಭಿಮಾನಗಳಿಗೂ ಕನ್ನಡಿ ಹಿಡಿಯಲು ಯತ್ನಿಸಿದ್ದಾನೆ. ಇಂದಿನ ನಯವಂಚನೆಯ ದೇಶದ್ರೋಹಿಗಳಿಗೆ ಗಾಂಧಿ ಹಾಕಿಕೊಟ್ಟ ಸತ್ಯ ಅಹಿಂಸೆ ಶಾಂತಿಯ ಮಾರ್ಗ ದುಳ್ಳು ಹಾಸಿಗೆಯಾಗಿದೆ. ನಡೆಯಲಾರದೆ, ಅದನ್ನು ಬಿಡಲಾರದೆ (ಬಿಟ್ಟಿದ್ದು ಗೊತ್ತಾದರೆ ಜನ ತಟ್ಟುತ್ತಾರೆ) ಒದ್ದಾಡಿ ಗಾಂಧಿಯನ್ನು ಶಪಿಸುತ್ತಾರೆ.

ಹುಟ್ಟಬಾರದಾಗಿತ್ತು ನಮಗಿಂತ ಮೊದಲು
ಈ ಗಾಂಧಿ
ಸತ್ಯ ಶಾಂತಿ ಅಹಿಂಸೆಯ ಕಂಡ
ಹೆಟ್ಟಿ ಹೋಗಿದ್ದಾನೆ ನಮ್ಮ ಎದೆ ಹುತ್ತದೊಳಗೆ
(ಹುಟ್ಟಬಾರದಾಗಿತ್ತು, ಗಾಂಧಿ)

ಹೆಟ್ಟಿಹೋದ ಕೆಂಡವನ್ನು ಸರಳವಾಗಿ ತೆಗೆದುಹಾಕಲಾಗುವದಿಲ್ಲ. ಆದರೆ ಆ ಕೆಂಡವ ಬೆಳಕಿನಲೆ ತಮ್ಮ ಬೇಳೆ ಬೇಯಿಸಿಕೊಳ್ಳುವ ಮಾರ್ಗವನ್ನೂ ಕಂಡುಕೊಂಡಿದ್ದಾರೆ. ಗಾಂಧಿಯ ಹೆಸರನ್ನು ಸ್ಮರಿಸುತ್ತಲೇ ಸ್ವಾತಂತ್ರ್ಯದಿನವನ್ನು ಆಚರಿಸಿ ಸ್ವೇಚ್ಛಾಚಾರವನ್ನು ಎಸಗುತ್ತಾರೆ. ಅದಕ್ಕೆ ಸ್ವಾತಂತ್ರ್ಯದ ಬಣ್ಣ ಲೇಪಿಸುತ್ತಾರೆ.

ನಿನ್ನ ಸ್ಮಾರಕಾ ಮಾಡ್ತೀವಿ
ಅದರ ಸುತ್ತು ರಾಮರಾಜ್ಯದ ಬೋರ್ಡು
ತೂಗು ಬಿಟ್ಟು

ಮೇಲೆ ಲೈಟು ಕೊಡ್ತೇವಿ
ನಿನ್ನ ಸತ್ಯ ಶಾಂತಿ. ಅಹಿಂಸಾ ತ್ಯಾಗ
............ಎಲ್ಲಾದಕೂ
ಒಂದೊಂದು ಕಂಬಾ ನಿಲ್ಲಸ್ತೇವಿ

ಹೀಗೆ ತೋರಿಕೆಯ ಆಚರಣೆಯನ್ನು ವಿಡಂಬಿಸುತ್ತಾನೆ. ಸದಾಚಾರವೇ ಜೀವವಾದ ಗಾಂಧಿಯ ಬದುಕನ್ನೂ ಸದಾಚಾರ ಲೇಪಿತವಾದ ಸಮಕಾಲೀನ ಜನರ ಬದುಕನ್ನು ಒಟ್ಟೊಟ್ಟಿಗೆ ಇಟ್ಟು ನೋಡುತ್ತಾನೆ.

ಹೂವಿನ ಪಕಳೆಯಂಥಾ ಮಾಲೆಯೊಳಗ
ಬಾಳಿನ ಬೆಳಕು ತುಂಬಿ
ಉರಿಯೂ ಮನಿ ಉಳಿಸಿದವ ನೀನು
ಕಳ್ಳಿ ವ್ಯಾಗಿನ ಶಾವಿಗಿ ಬಳ್ಳಿ
ನಾವು (ಬಾ ಅಜ್ಜ)

ಕೆಲಸಕ್ಕೆ ಬಾರದ, ವಿಷಪೂರ್ಣವಾದ, ಇನ್ನೊಬ್ಬರಿಗೆ ಮಾರಕವಾದ ಸಮಕಾಲೀನ ಜನರ ಬದುಕಿನ ನೀತಿಗೆ ತೀವ್ರವಾಗಿ ಚುಚ್ಚುತ್ತಾನೆ.

ಸ್ವಾರ್ಥ ಅಂದ್ರ ನಮಗ ಗೊತ್ತಿಲ್ಲ
ಸತ್ಯ ಶಾಂತಿ ಅಹಿಂಸೆ ತ್ಯಾಗ
ಇವು ನಮಗ ಅಂಗಿ ಇದ್ದಂಗ (ಬಾ ಅಜ್ಜ)

ಎಂದು ಒಳಗೊಳಗೆ ಹೊಲಸು ಭಾವನೆಗಳನ್ನು ಸ್ವಾರ್ಥಪರ ಆತ್ಮವನ್ನು ಇಟ್ಟು ಕೊಂಡು ಮೇಲೆ ಸದಾಚಾರದ ಅಂಗಿಯನ್ನು ತೊಟ್ಟವರನ್ನು (ಖಾದಿ, ಅಂಗಿ, ಗಾಂಧಿ ಟೋಪಿ ಧರಿಸಿ ವಿಜೃಂಭಿಸುವ ರಾಜಕಾರಣಿಗಳನ್ನು) ಮಾತಿನ ಈಟಿಯಿಂದ ಇರಿಯುತ್ತಾನೆ.

ನೀ ನಮಗ ಬೇಕು
"ನಿನ್ನ ನಾಮದ ಬಲವೊಂದಿದ್ದರೆ ಸಾಕು" (ಬಾ ಅಜ್ಜ)

ಗಾಂಧಿವಾದದ ಹೆಸರಿನಲ್ಲಿ ನಡೆಯುವ ಹಲವು ಹನ್ನೆರಡು ಹೊಲಸು ಕೃತ್ಯಗಳಿಗೆ ಕನ್ನಡಿ ಹಿಡಿಯುತ್ತಾನೆ.

ತಾಯಿ ಹೆಸರ್ಹೇಳದ ಸಂಸ್ಕೃತಿಯು
ಪೀಠಿಕೆಯು ಪಟ್ಟ ಕಟ್ಟಿಸಿಕೊಂಡು
ಅನ್ನ ನೀಡಿದ ಕೈಯ ಕಡಿದು
ಇಟ್ಟಿದ್ದಾನೆ (ಕನ್ನಡದ ತಿರುಕ)

ಎಂದು ಕನ್ನಡಿಗರ ಭಾಷಾಭಿಮಾನ ಶೂನ್ಯತೆಯನ್ನು ಕಟುವಾಗಿ ಟೀಕಿಸುತ್ತಾನೆ. ಇಂಥ ಟೀಕೆಗಳು ಬಂದಾಗ್ಯೂ ಎಚ್ಚೆತ್ತುಕೊಳ್ಳದ, ಸ್ವಭಾಷಾಭಿಮಾನ ತಾಳದೇ ಅನ್ಯ ಭಾಷೆಯ ಕುರುಡು ಮೋಹದಲ್ಲಿಯೇ ಮುಂದುವರಿಯುವ ಮಾತೃಭಾಷಾ ದ್ರೋಹಿಗಳನ್ನು ತಿದ್ದಲಾಗಿದೆ.

ಹೆತ್ತವರ ಹೆಸರ ಹೇಳದ ಅದ್ದೂರಿ ಮಗ
ಹುಟ್ಟಿದ್ದಾನೆ ಸುಬೆದಾರ
ಇಲ್ಲ ಇವನಿಗೆ ಸೊನ್ನೆ
ಸತ್ಕುಲದ ಮನೆಯಲ್ಲಿ
ಹೆತ್ತವರದೇ ಒಂದು ದೊಡ್ಡ ಗುನ್ನೆ

ಎಂಬ ವಿಷಾದದ ನಿರ್ಣಯಕ್ಕೆ ಬರುತ್ತಾನೆ. ಹೀಗೆ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ಕೆದಕುವದಲ್ಲದೇ ಕವಿ ಸಮಕಾಲೀನ ಸಾಹಿತ್ಯಿಕ ಸನ್ನಿವೇಶಗಳಿಗೂ ದಿಟ್ಟ ರೀತಿಯಲ್ಲಿ ಸ್ಪಂದಿಸುತ್ತಾನೆ.

'ನವ್ಯ ಕಾಲದ ಕಾವ್ಯ ಮತ್ತು ವಿಮರ್ಶಾ ಲೋಕದ ಗುಂಪುಗಾರಿಕೆಯನ್ನು ಕಂಡು ಕವಿ ಬೇಸತ್ತಿದ್ದಾನೆ. ಅದನ್ನು "ನವ್ಯಕವಿ" ಮತ್ತು "ವಿಮರ್ಶಕ" ಎಂಬ ಕವನಗಳ ಮುಖಾಂತರ ವಿಡಂಬಿಸುತ್ತಾನೆ. "ನಿನ್ನ ಮನೆಯ ಕತ್ತೆ ಇದ್ದರೂ ಹಿಡಿದು ತಾ, ಗೀಚಿ ಒಗೆವೆನು ಬೆಳಗುತ್ತಲೆ ಹತ್ತು ನವ್ಯ ಕವಿತೆ. ಅದೊ ನೋಡು ಕಸಬರಿಗೆ ಮುಗಿಲಲ್ಲಿ ಹೊಲಸನ್ನೆ ನೆಕ್ಕುತ್ತಾ ಬಿದ್ದಿಹುದು" ಎಂದು ಕಣ್ಣಿಗೆ ಕಂಡದ್ದೆಲ್ಲವೂ ಕಾವ್ಯವಸ್ತುಗಳಾದದ್ದನ್ನು ವಿಡಂಬಿಸುತ್ತಾನೆ.

ಯಾರಿಗೂ ಹೇಳಬೇಡ ನನ್ನ ಗುಟ್ಟು
ನಾ ನಿಮ್ಮವ ನೀ ನಮ್ಮವ
ಅಂತ ಹೇಳ್ತಿನಿ ಕೇಳು
ನಾನು ನವ್ಯ ಕವಿ
'ಹೂಂ' ಅನ್ನು
'ಹಾಂ' ಜಾಣ ಹೌದು
ನಾನು ನವ್ಯ ಕವಿ ದಿವ್ಯ ಕವಿ (ನವ್ಯ ಕವಿ)

ಹೀಗೆ ಒತ್ತಾಯಪೂರ್ವಕವಾಗಿ ಕವಿ ಪಟ್ಟ ಕಟ್ಟಿಸಿಕೊಂಡು ಹೆಮ್ಮೆ ಕೊಚ್ಚಿಕೊಳ್ಳುವ ಟೊಳ್ಳು ಕವಿಗಳನ್ನು ಕಂಡು ಕವಿ ಮರುಗಿದ್ದಾನೆ. ಈ ಕಾವ್ಯದ ಉದ್ದ-ಅಗಲ ಆಳದ ಸ್ವರೂಪವನ್ನು ತನಗೆ ತಿಳಿದಂತೆ ಅಳೆದುಕೊಂಡ ಕವಿಮನ ಇವಕ್ಕೆ "ಮಂಗ್ಯಾನ ಬಳ್ಳಿ" ಎಂಬ ಹೆಸರು ಕೊಡುವ ಸಾಹಸವನ್ನೂ ಮಾಡುತ್ತದೆ.

ನೀನು ವಿಮರ್ಶಕನೆಂದು
ನಾನು ಬೇಕಾದರೆ
ನಿನ್ನೊಡನೆ ಡೋಲು ಹೊಡೆಯುತ್ತೇನೆ
ನಮ್ಮ ಮೋರೆಯ ನೋಡಿ
ಮೊಳ ಹಾಕಬೇಕು ಹಾಕಲಿಕ್ಕೇಬೇಕು
ಮೊನ್ನೆ ನೀ ಓಡಾಡಿಸಿ ಕೊಂದ ಆ ಹೆಣ ಅ... ಹಾಂ (ವಿಮರ್ಶಕ)

ಹೀಗೆ ವಿಮರ್ಶಕನ ಯಾವುದೋ ಒಂದು ದೌರ್ಬಲ್ಯವನ್ನು ಹಿಡಿದು ಭಯ ಹುಟ್ಟಿಸಿ ಅವನಿಂದ ತಮ್ಮಂತೆ ಡೋಲು ಬಡಿಸಿಕೊಂಡು ಮೆರೆಯುವ ಕವಿಗಳನ್ನು ಹಾಗೆ ಡೋಲು ಬಡಿಯುವ ವಿಮರ್ಶಕರನ್ನು ಕಂಡು ಹೇಸಿದ್ದಾನೆ. ತನ್ನ ಕಾವ್ಯದ ಮುಖಾಂತರ ಅವರ ಟೊಳ್ಳು ವ್ಯಕ್ತಿತ್ವವನ್ನು ಬಯಲಿಗೆಳೆಯುವ ಪ್ರಯತ್ನವನ್ನೂ ಮಾಡುತ್ತಾನೆ.

ಇನ್ನು ಡಾ : ಇಮ್ರಾಪೂರ ಅವರ ಕಾವ್ಯಭಾಷೆಯ ಬಗೆಗೆ ಎರಡು ಮಾತು ಹೇಳುವುದು ಅವಶ್ಯ. "ಕವಿ ಗರ್ಭದಿಂದ ಕೃತಿ ಹುಟ್ಟಿದರೆ ಸಮಾಜದ ಗರ್ಭದಿಂದ ಕವಿ ಹುಟ್ಟಿರುತ್ತಾನೆ." ಅಂತೆ ಕವಿ ಹುಟ್ಟಿಬೆಳದ ಸಮಾಜದ ಗಂಧ ಗಾಳಿಗಳು ಆತನಿಗರಿವಿಲ್ಲದೇ ಆತನ ಕಾವ್ಯದಲ್ಲಿ ಸಹಜವಾಗಿ ಉಸಿರಾಡುತ್ತವೆ. ಈ ದಿಶೆಯಲ್ಲಿ ಜಾನಪದವನ್ನೇ ಉಂಡು ಬದುಕುತ್ತಿರುವ ಶ್ರೀ ಇಮ್ರಾಪೂರ ಅವರು ತಮ್ಮ ಕಾವ್ಯಾಭಿವ್ಯಕ್ತಿಗೆ ಜನಪದ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಅವರ ಗತ್ತು ಗಮ್ಮತ್ತು ಹಿಕ್ಮತ್ತುಗಳನ್ನೆಲ್ಲ ಅವರು ಅರಿತವರಾಗಿದ್ದಾರೆ. ಅಂತ ಅಭಿವ್ಯಕ್ತಿ ಉದ್ಯಮಗಳಾದ ಭಾಷೆ, ಸಂಕೇತ, ಪ್ರತಿಮೆಗಳು ಜನಪದೀಯವೇ ಆಗಿವೆ. 'ಬೆಂಕಿ' ಕವನ ಸಂಕಲನದ ಬಹಳಷ್ಟು ಕವನಗಳ ವಸ್ತು ಮತ್ತು ಧೋರಣೆ ಗಳು ಒಂದರ್ಥದಲ್ಲಿ ಶಿಷ್ಟದ ನಿಟ್ಟಿನಲ್ಲಿಯೇ ಬರುವಂತವುಗಳಾಗಿದ್ದರೂ ಅವವುಗಳ ಸಾಧನೆಗೆ ಜನಪದ ಭಾಷೆಯನ್ನು ಬಳಸಿರುವುದು ಕವಿಯ ಪ್ರತಿಭಾ ವೈಶಿಷ್ಟ್ಯವಾಗಿದೆ. ಶಿಷ್ಟ ಪದಗಳೂ ಸಹಿತ ಹಿಡಿದಿಡಲು ಹೆಣಗಾಡಬಹುದಾದಂತಹ ಭಾವನೆಗಳನ್ನು ಜನಪದರ ಆಡು ನುಡಿಯಲ್ಲಿ ಹಿಡಿದಿಟ್ಟಿರುವುದು ಡಾ. ಇಮ್ರಾಪೂರ ಅವರ ಭಾಷಾ ವೈಶಿಷ್ಟ್ಯ. ಉದಾಹರಣೆಗೆ :

ನೀನ್ನು ವಿಮರ್ಶಕನೆಂದು
ನಾನು ಬೇಕಾದರೆ
ನಿನ್ನೊಡನೆ ಡೋಲು ಹೊಡೆಯುತ್ತೇನೆ
ನೀ.........
ನಮ್ಮ ಮೋರೆಯ ನೋಡಿ
ಮೊಳ ಹಾಕಬೇಕು ಹಾಕಲಿಕ್ಕೇ ಬೇಕು.

ಹೆದರಿಕೆಯಿಂದಲೋ, ಒತ್ತಾಯದಿಂದಲೋ ಒಬ್ಬರಿಗೊಬ್ಬರು ತಮ್ಮಷ್ಟಕ್ಕೆ ತಾವೇ ಬೆನ್ನು ಚಪ್ಪರಿಸಿಕೊಳ್ಳುವ ಈ ಕ್ರಿಯೆಯನ್ನು "ಡೋಲು ಬಡಿ" ಮೋರೆ ನೋಡಿ ಮೊಳ ಹಾಕು" ಎನ್ನುವ ಜನಪದ ಆಡುನುಡಿಗಳು. ಸನ್ನಿವೇಶವನ್ನು ಕಣ್ಣಿಗೆ ಕಟ್ಟು ವಂತೆ ಚಿತ್ರಿಸುವಲ್ಲಿ ಸಮರ್ಥವಾಗಿ, ಕಾವ್ಯಕ್ಕೆ ಒಂದು ಶಕ್ತಿಯನ್ನು ತಂದುಕೊಟ್ಟಿವೆ.

ಬರೋಬ್ಬರಿ ಹನ್ನೆರಡು ತಿಂಗಳ ಡುಬ್ಬ ಚಪ್ಪರಿಸಿ
ಪಕ್ಕಡಿ ಎಲುವುಗಳ
ತಿಂದು
ದಿತ್ತೆಂದು ಬಂತು ಮತ್ತೆ
ಅದೆ ಯುಗಾದಿ

ಎಂಬಲ್ಲಿ ಜನಪದ ಭಾಷೆಯ ಸಹಜತೆ, ಸೊಗಡು, ಅರ್ಥವಂತಿಕೆ ಕಣ್ಣುಕಟ್ಟು ವಂತಹದ್ದು.

ಹೀಗೆ ಡಾ. ಇಮ್ರಾಪೂರ ಅವರ 'ಬೆಂಕಿ'ಯ ಬಹುಪಾಲು ಕವನಗಳು ಜನಪದ ಲಯದಲ್ಲಿ ನಡೆದುಕೊಂಡು, ಜನಪದ ಭಾಷೆಯನ್ನು ಸತ್ವಗೆಡದಂತೆ ಬಳಸಿಕೊಂಡು ಸಮಗ್ರ ಕಾವ್ಯಶಿಲ್ಪಿಗಳಾಗಿವೆ. ಕಲ್ಪನೆಗೆ ನಿಲುಕಲಾರದ ಅಲಂಕಾರಗಳನ್ನಾಗಲಿ, ನಾಲಗೆಗಸಾಧ್ಯವಾದ ಶಬ್ದಗಳನ್ನಾಗಲಿ ಬಳಸದೆ ಸರಳ ಸುಂದರ ಭಾಷೆಯಲ್ಲಿ ಹಸಿ ಗೋಡೆಗೆ ಹರಳು ಒಗೆದಂತೆ ಭಾವನೆಗಳನ್ನು ಅಭಿವ್ಯಕ್ತಿಸುವ ಇವರ ಕವನಗಳು ನಿರಾ-ಭರಣ ಸುಂದರಿಯರಂತೆ ಆಕರ್ಷಕವಾಗಿವೆ. ಬಹುಪಾಲು ಕವನಗಳು ಮೊನಚಾದ ಭಾಷೆಯಿಂದ ಇರಿದು ಓದುಗರ ಅರಿವನ್ನು ಎಚ್ಚರಿಸುತ್ತವೆಯಲ್ಲದೇ ಕೆಲವು ಕವನಗ-ಳಾದರೂ ಕೋಮಲವಾದ ಭಾಷೆಯಿಂದ ಹೃದಯವನ್ನು ತಣಿಸುತ್ತವೆ ಎಂಬ ಸತ್ಯ-ವನ್ನು ಮುಚ್ಚಿಡಲಾಗದು. ಅಂತು, ಎಂತ ಅನುಭವಗಳನ್ನಾದರೂ ಅಭಿವ್ಯಕ್ತಿಸುವಲ್ಲಿ ಜನಪದ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳಬಹುದಾದ ಕವಿ ಡಾ. ಸೋಮಶೇಖರ ಇಮ್ರಾಪೂರ ಎಂಬುದರಲ್ಲಿ ಯಾವ ಅತಿಶಯೋಕ್ತಿಯೂ ಇರಲಾರದು.

●

ಈ ಸಂಚಿಕೆಯ ಲೇಖಕರು

- **ಡಾ. ಎಚ್. ಎಸ್. ಅನಂತನಾರಾಯಣ**
  ಭಾಷಾ ವಿಜ್ಞಾನ ಪ್ರಾಧ್ಯಾಪಕರು
  ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ.

- **ಡಾ. ಬಿ. ಆರ್. ಹಿರೇಮಠ**
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- **ಶ್ರೀ ತೇಜಸ್ವಿ ಕಟ್ಟೀಮನಿ**
  ಜಮಾದಾರ ಚಾಳ, ಕೊನೆಯ ಕ್ರಾಸ್
  ಸಪ್ತಾಪೂರ, ಧಾರವಾಡ.

- **ಶ್ರೀಮತಿ ವೈ. ಜೆ. ಶೋಭಾದೇವಿ**
  ಅಧ್ಯಾಪಕಿ, ಸಮಾಜಕಾರ್ಯ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- **ಡಾ. ವಿಲ್ಯಂ ಮಾಡ್ತಾ**
  ಭಾಷಾ ವಿಜ್ಞಾನ ಪ್ರವಾಚಕರು
  ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- **ಡಾ. ಬಸವರಾಜ ಸಬರದ**
  ಅಧ್ಯಾಪಕರು, ಕನ್ನಡ ವಿಭಾಗ
  ಕರ್ನಾಟಕ ಮಹಾವಿದ್ಯಾಲಯ, ಬೀದರ.

- **ರೆವರೆಂಡ ಫಾದರ, ಕಿರಣ ಕಮಲಾಪ್ರಸಾದ್, ಜೆ. ಸ.**
  ಜ್ಯೋತಿ ನಿಲಯ, ಆನೆಕಲ್, ಬೆಂಗಳೂರು.

- **ಡಾ. ಬಿ. ವ್ಹಿ. ಶಿರೂರ**
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- **ಶ್ರೀ ಎಸ್. ಶಿವಣ್ಣ (ಸಂ)**
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

- **ಡಾ. ಪ್ರ. ವಿ. ಕುಲಕರ್ಣಿ**
  ಕನ್ನಡ ವಿಭಾಗ
  ಕಾಮರಾಜ ವಿಶ್ವವಿದ್ಯಾಲಯ, ಮಧುರೆ.

- **ಡಾ. ವಿ. ಮುರಿಗೆಪ್ಪ**
  ಭಾಷಾವಿಜ್ಞಾನ ಪ್ರವಾಚಕರು
  ಕನ್ನಡ ಅಧ್ಯಯನಪೀಠ,
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- **ಡಾ. ಎನ್. ಎ. ಪಾಟೀಲ**
  ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

- **ಶ್ರೀ ಸಿ. ಎಂ. ವೀರಭದ್ರಯ್ಯ**
  ಅಧ್ಯಾಪಕರು. ಕನ್ನಡ ವಿಭಾಗ
  ಸರಕಾರೀ ಜ್ಯೂನಿಯರ್ ಕಾಲೇಜು
  ಮರಿಯಮ್ಮನಹಳ್ಳಿ, ಬಳ್ಳಾರಿ.

- **ಶ್ರೀ ಸದಾನಂದ ಪಾಟೀಲ**
  ಅಧ್ಯಾಪಕರು, ಕನ್ನಡ ವಿಭಾಗ
  ಶ್ರೀ ಗವಿಶಿದ್ಧೇಶ್ವರ ಕಾಲೇಜು. ಕೊಪ್ಪಳ

- **ಶ್ರೀ ಚಂದ್ರಕಾಂತ ಪಡೇಸೂರ**
  ಗೌರವ ಕಾರ್ಯದರ್ಶಿ
  ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂ. ಗಳು) ಕಳಿಸಿ ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ: ರೂ. ೪-೦೦

[illegible]ವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರ ವಿಳಾಸಕ್ಕೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.